ಯಕ್ಷಗಾನ ಮಹಾಕಾವ್ಯ

ಶ್ರೀರಾಮಲೀಲಾದರ್ಶನಂ

(ಕುವೆಂಪು ಅವರ 'ಶ್ರೀರಾಮಾಯಣದರ್ಶನಂ' ಆಧರಿತ)

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ



ಪ್ರಸಾರಾಂಗ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

ಯಕ್ಷಗಾನ ಮಹಾಕಾವ್ಯ

ಶ್ರೀರಾಮಲೀಲಾದರ್ಶನಂ

(ಕುವೆಂಪು ಅವರ 'ಶ್ರೀರಾಮಾಯಣದರ್ಶನಂ' ಆಧರಿತ)

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಪ್ರಸಾರಾಂಗ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು– 570 004

YAKSHAGANA MAHAKAVYA
'SHRI RAMALEELADARSHANAM'

A Kannada Yakshagana Epic
(based on Kuvempu's Sri Ramayana Darshanam)

by Dr. Kabbinale Vasantha Bharadwaj, Mysore
(Mobile : 99450 55534)

Published by
PRASARANGA
Karnataka State Dr. Gangubai Hangal
Music and Performing Arts University
JLB Road, Lakshmipuram, Mysore- 570 004
Phone: 0821-2402141, 2419443

Year of Publication : 2015

Cover Page Design : Monappa

Paper Used :70 GSM Maplitho

Price: Rs. :Rs. 200.00

Pages :(x +290) 300

Printed at: Kamal Impressions
Beereshwara Trust Complex, T K Layout, Mysuru - 570023
Ph: 9886789747

ಕುಲಪತಿಗಳ ಮಾತು

ಸಾಂಸ್ಕೃತಿಕ ಲೋಕವನ್ನು ಬೆಳಗಿಸುವ ಕಲಾಕುಸುಮಗಳು

ಭರತಭೂಮಿಯು ಅನಾದಿಕಾಲದಿಂದ ಕಲೆ ಮತ್ತು ಸಂಸ್ಕೃತಿಗಳ ತಾಣವಾಗಿ ಹಂತಹಂತವಾಗಿ ತನ್ನ ಬೆಳವಣಿಗೆಯ ದೃಷ್ಟಿಕೋನವನ್ನು ಹೊಸನಿಟ್ಟಿನಲ್ಲಿ ಚಿಂತಿಸುತ್ತ, **'ಹೊಸ ಚಿಗುರು – ಹಳೆಬೇರು'** ಎಂಬ ಮಾತಿನಂತೆ ಸೃಜಿಸುತ್ತಾ ಬಂದಿದೆ. ಈ ನಿಟ್ಟಿನಲ್ಲಿ ಅನೇಕ ಮಹಾನ್ ಚಿಂತಕರು, ಸಾಹಿತಿಗಳು, ಕಲಾವಿದರು ತಮ್ಮದೇ ಆದ ಛಾಪನ್ನು ಮೂಡಿಸಿ ಭಾರತದ ಪ್ರಗತಿಯ ಮುನ್ನಡೆಗೆ ಕಾರಣವಾಗಿದ್ದಾರೆ.

ಅಂತೆಯೇ ಕರ್ನಾಟಕ ರಾಜ್ಯವು ಶತಶತಮಾನಗಳಿಂದ ಕಲೆಯ ಆಗರ ಸ್ಥಾನವಾಗಿ ಮಹಾನ್ ಲಾಕ್ಷಣಿಕರ, ವಚನಕಾರರ, ಶಿವಶರಣರ, ಹರಿದಾಸರ ಅನೇಕ ವಾಗ್ಗೇಯಕಾರರ ಕ್ರಿಯಾಶಕ್ತಿಯ ಕಾರಣದಿಂದಾಗಿ ಹಾಗೂ ಇತಿಹಾಸದ ಕಾಲಘಟ್ಟದಲ್ಲಿ ನಡೆದು ಬಂದ ರಾಜ ಮಹಾರಾಜರುಗಳ ಕಲಾಭಿಮಾನ, ಕಲಾರಸಿಕತೆ, ಕಲಾಪ್ರಗತಿ, ಪ್ರೋತ್ಸಾಹಗಳ ಕಾರಣಗಳಿಂದಾಗಿ ಇಂದಿಗೂ ಕಲಾಪ್ರಪಂಚದ ಪ್ರಮುಖ ನಾಡೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮುಂದುವರೆದ ಭಾಗವಾಗಿ ಇಂತಹ ಪ್ರಬುದ್ಧ ಕಲೆಯ ಪ್ರಗತಿ ಏಳಿಗೆಗಾಗಿ ಮತ್ತು ಬೆಳವಣಿಗೆಗಾಗಿ ಕರ್ನಾಟಕ ಘನ ಸರ್ಕಾರ ಮೈಸೂರನ್ನು ಕೇಂದ್ರವಾಗಿರಿಸಿಕೊಂಡು 2009 ರಲ್ಲಿ ಪ್ರಖ್ಯಾತ ಹಿಂದೂಸ್ತಾನಿ ಗಾಯಕಿ ಪದ್ಮಭೂಷಣ ಡಾ. ಗಂಗೂಬಾಯಿ ಹಾನಗಲ್ ಅವರ ಹೆಸರಿನಲ್ಲಿ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ಭಾರತೀಯ ಸಂಗೀತ ಪರಂಪರೆಯ ಎರಡು ಕಣ್ಣುಗಳಂತಿರುವ ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತ, ಈ ನಿಟ್ಟಿನ ಎಲ್ಲಾ ವಾದ್ಯಪ್ರಕಾರಗಳು ಹಾಗೂ ಎಲ್ಲಾ ನೃತ್ಯ ಪ್ರಕಾರಗಳು, ಗಮಕ, ಯಕ್ಷಗಾನ, ನಾಟಕ, ಜನಪದ ಸಂಗೀತ, ಕಥಾಕೀರ್ತನೆ ಈ ಎಲ್ಲಾ ಆಯಾಮಗಳನ್ನು ಸರ್ವಾಂಗೀಣ ಸುಂದರವಾಗಿಸುವ ಅಂತೆಯೇ ಈ ಕಲೆಗಳ ಉಳಿವು, ಬೆಳವಣಿಗೆ ಮತ್ತು ಪ್ರಗತಿಗೆ ತನ್ನನ್ನು ಒಡ್ಡಿಕೊಂಡು ಕಾರ್ಯೋನ್ಮುಖವಾಗಿ ಉತ್ತಮ ಫಲಿತಾಂಶ ನೀಡುವ ಸದುದ್ದೇಶದಿಂದ ಸ್ಥಾಪಿತಗೊಂಡು ಮುನ್ನಡೆದಿದೆ.

ಈ ಎಲ್ಲಾ ವಿಚಾರವನ್ನು ಮನಗಂಡು, ಅಂತೆಯೇ ವಿಶ್ವದ ಜಾಗತೀಕರಣದ ಸಂದರ್ಭದಲ್ಲಿ ಪಾಶ್ಚಾತ್ಯ ಅನುಕರಣೆಗಳೇ ಹಿರಿದಾಗುತ್ತಿರುವಂತಹ ಸಂಕೀರ್ಣ ಸಂದರ್ಭದಲ್ಲಿ ಪ್ರಸ್ತುತ ವಿಶ್ವವಿದ್ಯಾಲಯವು ತನ್ನ ಬಾಲ್ಯಾವಸ್ಥೆಯ ಸಂದರ್ಭದಲ್ಲಿಯೂ ಒಂದು ಹೊಸ ದೃಷ್ಟಿಕೋನವನ್ನು ಹರಿಸಿ ನಾಡಿನ ಶ್ರೇಷ್ಠ ಕಲಾಪ್ರಕಾರಗಳ (ಎಲ್ಲಾ ಪ್ರದರ್ಶಕ ಕಲೆಗಳ) ಪ್ರಗತಿಯ ಮುನ್ನಡೆಗೆ ಅಂತೆಯೇ ಕಲಾಸಕ್ತ ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ಪ್ರಸ್ತುತ ಮತ್ತು ಪಾರಂಪರಿಕ ಕಲಾಜಗತ್ತಿನ ಜ್ಞಾನಭಂಡಾರದ ಜ್ಞಾನದೀಕ್ಷೆಯನ್ನು ನೀಡುವ ನಿಟ್ಟಿನಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಅಲ್ಲದೆ ಪ್ರಸಿದ್ಧ ವಿದ್ವಾಂಸರು– ಅವರು ಸಾಧಿಸಿದ ಸಾಧನೆ ಮತ್ತು ಪ್ರಗತಿಗಳ ಬಗೆಗೆ ವಿಸ್ತೃತವಾದ

ಸಂಪುಟ – ಸಂಚಿಕೆ

ನಿವೇದನೆ

ರಾಮಾಯಣದ ಆಧುನಿಕ ಅವತರಣಿಕೆಗಳಲ್ಲಿ ರಸಋಷಿ ಕುವೆಂಪು ವಿರಚಿತ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯಕ್ಕೆ ವಿಶೇಷವಾದ ಸ್ಥಾನವಿದೆ. ಕಥೆಗಿಂತಲೂ ಮುಖ್ಯವಾಗಿ ಅದು ಪ್ರತಿಪಾದಿಸುವ 'ದರ್ಶನ' ಚೇತೋಹಾರಿಯಾದುದು. "ಪಾಪಿಗುದ್ಧಾರಮಿಹುದೌ" ಎಂಬ ತಾತ್ವಿಕ ನೆಲೆಗಟ್ಟಿನಿಂದ ರಾವಣತ್ವವು ರಾಮತ್ವವನ್ನು ಪಡೆಯುವಂತಾಗುವುದು ನಮ್ಮ ರಾಮಾಯಣ ಪರಂಪರೆಯಲ್ಲೇ ಒಂದು ಅನುಪಮ ಸಿದ್ಧಿ. ಊರ್ಮಿಳೆಯ ತಪಃಶಕ್ತಿಯಿಂದ ಲಕ್ಷ್ಮಣನ ಸಂಕಟ ನಿವಾರಣೆಯಾಗುವುದು, ಮಂಥರೆಯು ಕಾರಣಳಲ್ಲ; ಕರಣವಾಗುವುದು, ಚಂದ್ರನಖಿಯು ಅಪರಾಧಪ್ರಜ್ಞೆಯಿಂದ ಪಶ್ಚಾತ್ತಾಪಪಡುವುದು, ಆಂಜನೇಯನು ಯೋಗಬಲದಿಂದ ಸಮುದ್ರವನ್ನು ಲಂಘಿಸುವುದು, ರಾವಣನು ಸೀತೆಯ ಪತಿವ್ರತಾಶಕ್ತಿಗೆ ಸೋತು, ರಾಮನನ್ನು ಯುದ್ಧದಲ್ಲಿ ಗೆದ್ದು ಕಾಣಿಕೆಯಾಗಿ ಅವಳಿಗೆ ಕೊಡಲು ಹಂಬಲಿಸುವುದು, ಸಮಸ್ತ ವಾನರಸೇನೆಯೇ ರಾಮರೂಪದಿಂದ ಅದ್ವೈತವಾಗುವುದು ಒಂದೇ ಎರಡೇ . . . ಪ್ರತಿಯೊಂದು ಸಂಗತಿಯೂ ಸಹೃದಯ ಚೇತನಕ್ಕೆ ಅಧ್ಯಾತ್ಮದ ವಿಶಿಷ್ಟ ಅನುಭೂತಿಯೇ ಸರಿ.

ಯಕ್ಷಗಾನ ಕಾವ್ಯಪ್ರಪಂಚದಲ್ಲಿ ರಾಮಾಯಣದ ವಸ್ತುವನ್ನು ಆಧರಿಸಿದ ನೂರಾರು ಪ್ರಸಂಗಗಳು ರಚನೆಯಾಗಿವೆ. ಪಾರ್ತಿಸುಬ್ಬನಂತಹ ಮಹಾಕವಿಗಳು ಸಾಂಪ್ರದಾಯಿಕ ರಾಮಾಯಣವನ್ನು ರಚಿಸಿದ್ದರೆ, ಅನಂತರದ ಅನೇಕ ಕವಿಗಳು ಹೊಸಚಿಂತನೆಗಳನ್ನು ಧಾರೆಯೆರೆದಿದ್ದಾರೆ. ಚಿತ್ರಪಟ ರಾಮಾಯಣದಂತಹ ಜನಪದಕಥೆಗಳೂ ಪ್ರಸಂಗರೂಪ ಪಡೆದಿವೆ. ತಾಳಮದ್ದಳೆಯ ಅರ್ಥಧಾರಿಗಳಂತೂ ಆಶುಸಂವಾದದ ಮೂಲಕ ಹೊಸದೊಂದು ರಾಮಾಯಣವನ್ನೇ ರಚಿಸಿದ ಮಹಾಕವಿಗಳು. ಯಕ್ಷಗಾನ ರಾಮಾಯಣದ ಪಾತ್ರಪ್ರಪಂಚದೊಳಗೆ ಈ ಎಲ್ಲರ ಕಾಣ್ಕೆಯೂ ಅವತರಿಸಿದೆ!

ಶ್ರೀರಾಮಾಯಣದರ್ಶನವೇ ಹೇಳುವಂತೆ "ರಾಮಾವತಾರಕಿಂ ಗುರುತರಂ ತಾನ್ಶೆಸೆ ರಾಮಾಯಣಾವತಾರಂ!" ಯುಗಯುಗಗಳಲ್ಲಿ ಸಂಭವಿಸುತ್ತೇನೆಂದು ಹೇಳಿದ ಭಗವದ್ವಚನ ಮನುಷ್ಯರೂಪಕ್ಕೆ ಮಾತ್ರ ಮುಡಿಪಾದುದಲ್ಲ. ಭಗವದಾವಿರ್ಭಾವದ ಬಹುರೂಪಸೂತ್ರತೆಯು ಕೃತಿರೂಪದಲ್ಲಿಯೂ ಮೂಡಿಬರಬಹುದೆಂಬುದು ಆ ಮಹಾಕವಿಯ ಉದ್ಗಾರ! ಆ ಮಾತಿನಂತೆ ಈಗ ಈ ಯಕ್ಷಗಾನಕಾವ್ಯರೂಪದಲ್ಲಿ ಅದು ಮತ್ತೆ ಆವಿರ್ಭವಿಸಿದೆ ಎಂದು ನಾನು ವಿನೀತನಾಗಿ ಭಾವಿಸುತ್ತೇನೆ.

ಯಕ್ಷಗಾನಕೃತಿಗಳನ್ನು ರಚಿಸಿದವರನ್ನು ಶತಮಾನಗಳ ಕಾಲ 'ಪ್ರಸಂಗಕರ್ತ'ರೆಂದೇ ಕರೆಯಲಾಗುತ್ತಿತ್ತು. "ಅರಿಯೆ ಪ್ರಾಸೀರೆಂಟು ಭೇದವ, ಕೃತಿಯೊಳಗೆ ತಪ್ಪಿರಲು ತಿದ್ದಿಮೆರೆಸುವುದು" ಮುಂತಾದ ವಿನಯೋಕ್ತಿಗಳಿಂದಾಗಿ ಅವರಿಗೆ 'ಕವಿ'ಗಳೆಂಬ ಮನ್ನಣೆ ದೊರಕಲೇ ಇಲ್ಲ. ಹಾಗಿರುವಾಗ ಅವರು ರಚಿಸಿದ ಪ್ರಸಂಗಗಳಿಗೆ 'ಕಾವ್ಯ'ವೆಂಬ

ಕುಲಪತಿಗಳ ಮಾತು

ಸಾಂಸ್ಕೃತಿಕ ಲೋಕವನ್ನು ಬೆಳಗಿಸುವ ಕಲಾಕುಸುಮಗಳು

ಭರತಭೂಮಿಯು ಅನಾದಿಕಾಲದಿಂದ ಕಲೆ ಮತ್ತು ಸಂಸ್ಕೃತಿಗಳ ತಾಣವಾಗಿ ಹಂತಹಂತವಾಗಿ ತನ್ನ ಬೆಳವಣಿಗೆಯ ದೃಷ್ಟಿಕೋನವನ್ನು ಹೊಸನಿಟ್ಟಿನಲ್ಲಿ ಚಿಂತಿಸುತ್ತ, **'ಹೊಸ ಚಿಗುರು – ಹಳೆಬೇರು'** ಎಂಬ ಮಾತಿನಂತೆ ಸೃಜಿಸುತ್ತಾ ಬಂದಿದೆ. ಈ ನಿಟ್ಟಿನಲ್ಲಿ ಅನೇಕ ಮಹಾನ್ ಚಿಂತಕರು, ಸಾಹಿತಿಗಳು, ಕಲಾವಿದರು ತಮ್ಮದೇ ಆದ ಛಾಪನ್ನು ಮೂಡಿಸಿ ಭಾರತದ ಪ್ರಗತಿಯ ಮುನ್ನಡೆಗೆ ಕಾರಣವಾಗಿದ್ದಾರೆ.

ಅಂತೆಯೇ ಕರ್ನಾಟಕ ರಾಜ್ಯವು ಶತಶತಮಾನಗಳಿಂದ ಕಲೆಯ ಆಗರ ಸ್ಥಾನವಾಗಿ ಮಹಾನ್ ಲಾಕ್ಷಣಿಕರ, ವಚನಕಾರರ, ಶಿವಶರಣರ, ಹರಿದಾಸರ ಅನೇಕ ವಾಗ್ಗೇಯಕಾರರ ಕ್ರಿಯಾಶಕ್ತಿಯ ಕಾರಣದಿಂದಾಗಿ ಹಾಗೂ ಇತಿಹಾಸದ ಕಾಲಘಟ್ಟದಲ್ಲಿ ನಡೆದು ಬಂದ ರಾಜ ಮಹಾರಾಜರುಗಳ ಕಲಾಭಿಮಾನ, ಕಲಾರಸಿಕತೆ, ಕಲಾಪ್ರಗತಿ, ಪ್ರೋತ್ಸಾಹಗಳ ಕಾರಣಗಳಿಂದಾಗಿ ಇಂದಿಗೂ ಕಲಾಪ್ರಪಂಚದ ಪ್ರಮುಖ ನಾಡೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮುಂದುವರೆದ ಭಾಗವಾಗಿ ಇಂತಹ ಪ್ರಬುದ್ಧ ಕಲೆಯ ಪ್ರಗತಿ ಏಳಿಗೆಗಾಗಿ ಮತ್ತು ಬೆಳವಣಿಗೆಗಾಗಿ ಕರ್ನಾಟಕ ಘನ ಸರ್ಕಾರ ಮೈಸೂರನ್ನು ಕೇಂದ್ರವಾಗಿರಿಸಿಕೊಂಡು 2009 ರಲ್ಲಿ ಪ್ರಖ್ಯಾತ ಹಿಂದೂಸ್ತಾನಿ ಗಾಯಕಿ ಪದ್ಮಭೂಷಣ ಡಾ. ಗಂಗೂಬಾಯಿ ಹಾನಗಲ್ ಅವರ ಹೆಸರಿನಲ್ಲಿ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ಭಾರತೀಯ ಸಂಗೀತ ಪರಂಪರೆಯ ಎರಡು ಕಣ್ಣುಗಳಂತಿರುವ ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತ, ಈ ನಿಟ್ಟಿನ ಎಲ್ಲಾ ವಾದ್ಯಪ್ರಕಾರಗಳು ಹಾಗೂ ಎಲ್ಲಾ ನೃತ್ಯ ಪ್ರಕಾರಗಳು, ಗಮಕ, ಯಕ್ಷಗಾನ, ನಾಟಕ, ಜನಪದ ಸಂಗೀತ, ಕಥಾಕೀರ್ತನೆ ಈ ಎಲ್ಲಾ ಆಯಾಮಗಳನ್ನು ಸರ್ವಾಂಗೀಣ ಸುಂದರವಾಗಿಸುವ ಅಂತೆಯೇ ಈ ಕಲೆಗಳ ಉಳಿವು, ಬೆಳವಣಿಗೆ ಮತ್ತು ಪ್ರಗತಿಗೆ ತನ್ನನ್ನು ಒಡ್ಡಿಕೊಂಡು ಕಾರ್ಯೋನ್ಮುಖವಾಗಿ ಉತ್ತಮ ಫಲಿತಾಂಶ ನೀಡುವ ಸದುದ್ದೇಶದಿಂದ ಸ್ಥಾಪಿತಗೊಂಡು ಮುನ್ನಡೆದಿದೆ.

ಈ ಎಲ್ಲಾ ವಿಚಾರವನ್ನು ಮನಗಂಡು, ಅಂತೆಯೇ ವಿಶ್ವದ ಜಾಗತೀಕರಣದ ಸಂದರ್ಭದಲ್ಲಿ ಪಾಶ್ಚಾತ್ಯ ಅನುಕರಣೆಗಳೇ ಹಿರಿದಾಗುತ್ತಿರುವಂತಹ ಸಂಕೀರ್ಣ ಸಂದರ್ಭದಲ್ಲಿ ಪ್ರಸ್ತುತ ವಿಶ್ವವಿದ್ಯಾಲಯವು ತನ್ನ ಬಾಲ್ಯಾವಸ್ಥೆಯ ಸಂದರ್ಭದಲ್ಲಿಯೂ ಒಂದು ಹೊಸ ದೃಷ್ಟಿಕೋನವನ್ನು ಹರಿಸಿ ನಾಡಿನ ಶ್ರೇಷ್ಠ ಕಲಾಪ್ರಕಾರಗಳ (ಎಲ್ಲಾ ಪ್ರದರ್ಶಕ ಕಲೆಗಳ) ಪ್ರಗತಿಯ ಮುನ್ನಡೆಗೆ ಅಂತೆಯೇ ಕಲಾಸಕ್ತ ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ಪ್ರಸ್ತುತ ಮತ್ತು ಪಾರಂಪರಿಕ ಕಲಾಜಗತ್ತಿನ ಜ್ಞಾನಭಂಡಾರದ ಜ್ಞಾನದೀಕ್ಷೆಯನ್ನು ನೀಡುವ ನಿಟ್ಟಿನಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಅಲ್ಲದೆ ಪ್ರಸಿದ್ಧ ವಿದ್ವಾಂಸರು– ಅವರು ಸಾಧಿಸಿದ ಸಾಧನೆ ಮತ್ತು ಪ್ರಗತಿಗಳ ಬಗೆಗೆ ವಿಸ್ತೃತವಾದ

ಸಂಪುಟ – ಸಂಚಿಕೆ

ನಿವೇದನೆ

ರಾಮಾಯಣದ ಆಧುನಿಕ ಅವತರಣಿಕೆಗಳಲ್ಲಿ ರಸಋಷಿ ಕುವೆಂಪು ವಿರಚಿತ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯಕ್ಕೆ ವಿಶೇಷವಾದ ಸ್ಥಾನವಿದೆ. ಕಥೆಗಿಂತಲೂ ಮುಖ್ಯವಾಗಿ ಅದು ಪ್ರತಿಪಾದಿಸುವ 'ದರ್ಶನ' ಚೇತೋಹಾರಿಯಾದುದು. "ಪಾಪಿಗುದ್ಧಾರಮಿಹುದೌ" ಎಂಬ ತಾತ್ವಿಕ ನೆಲೆಗಟ್ಟಿನಿಂದ ರಾವಣತ್ವವು ರಾಮತ್ವವನ್ನು ಪಡೆಯುವಂತಾಗುವುದು ನಮ್ಮ ರಾಮಾಯಣ ಪರಂಪರೆಯಲ್ಲೇ ಒಂದು ಅನುಪಮ ಸಿದ್ಧಿ. ಊರ್ಮಿಳೆಯ ತಪಃಶಕ್ತಿಯಿಂದ ಲಕ್ಷ್ಮಣನ ಸಂಕಟ ನಿವಾರಣೆಯಾಗುವುದು, ಮಂಥರೆಯು ಕಾರಣಳಲ್ಲ; ಕರಣವಾಗುವುದು, ಚಂದ್ರನಖಿಯು ಅಪರಾಧಪ್ರಜ್ಞೆಯಿಂದ ಪಶ್ಚಾತ್ತಾಪಪಡುವುದು, ಆಂಜನೇಯನು ಯೋಗಬಲದಿಂದ ಸಮುದ್ರವನ್ನು ಲಂಘಿಸುವುದು, ರಾವಣನು ಸೀತೆಯ ಪತಿವ್ರತಾಶಕ್ತಿಗೆ ಸೋತು, ರಾಮನನ್ನು ಯುದ್ಧದಲ್ಲಿ ಗೆದ್ದು ಕಾಣಿಕೆಯಾಗಿ ಅವಳಿಗೆ ಕೊಡಲು ಹಂಬಲಿಸುವುದು, ಸಮಸ್ತ ವಾನರಸೇನೆಯೇ ರಾಮರೂಪದಿಂದ ಅದ್ವೈತವಾಗುವುದು ಒಂದೇ ಎರಡೇ . . . ಪ್ರತಿಯೊಂದು ಸಂಗತಿಯೂ ಸಹೃದಯ ಚೇತನಕ್ಕೆ ಅಧ್ಯಾತ್ಮದ ವಿಶಿಷ್ಟ ಅನುಭೂತಿಯೇ ಸರಿ.

ಯಕ್ಷಗಾನ ಕಾವ್ಯಪ್ರಪಂಚದಲ್ಲಿ ರಾಮಾಯಣದ ವಸ್ತುವನ್ನು ಆಧರಿಸಿದ ನೂರಾರು ಪ್ರಸಂಗಗಳು ರಚನೆಯಾಗಿವೆ. ಪಾರ್ತಿಸುಬ್ಬನಂತಹ ಮಹಾಕವಿಗಳು ಸಾಂಪ್ರದಾಯಿಕ ರಾಮಾಯಣವನ್ನು ರಚಿಸಿದ್ದರೆ, ಅನಂತರದ ಅನೇಕ ಕವಿಗಳು ಹೊಸಚಿಂತನೆಗಳನ್ನು ಧಾರೆಯೆರೆದಿದ್ದಾರೆ. ಚಿತ್ರಪಟ ರಾಮಾಯಣದಂತಹ ಜನಪದಕಥೆಗಳೂ ಪ್ರಸಂಗರೂಪ ಪಡೆದಿವೆ. ತಾಳಮದ್ದಳೆಯ ಅರ್ಥಧಾರಿಗಳಂತೂ ಆಶುಸಂವಾದದ ಮೂಲಕ ಹೊಸದೊಂದು ರಾಮಾಯಣವನ್ನೇ ರಚಿಸಿದ ಮಹಾಕವಿಗಳು. ಯಕ್ಷಗಾನ ರಾಮಾಯಣದ ಪಾತ್ರಪ್ರಪಂಚದೊಳಗೆ ಈ ಎಲ್ಲರ ಕಾಣ್ಕೆಯೂ ಅವತರಿಸಿದೆ!

ಶ್ರೀರಾಮಾಯಣದರ್ಶನವೇ ಹೇಳುವಂತೆ "ರಾಮಾವತಾರಕಿಂ ಗುರುತರಂ ತಾನ್ಸೆಸೆ ರಾಮಾಯಣಾವತಾರಂ!" ಯುಗಯುಗಗಳಲ್ಲಿ ಸಂಭವಿಸುತ್ತೇನೆಂದು ಹೇಳಿದ ಭಗವದ್ವಚನ ಮನುಷ್ಯರೂಪಕ್ಕೆ ಮಾತ್ರ ಮುಡಿಪಾದುದಲ್ಲ. ಭಗವದಾವಿರ್ಭಾವದ ಬಹುರೂಪಸೂತ್ರತೆಯು ಕೃತಿರೂಪದಲ್ಲಿಯೂ ಮೂಡಿಬರಬಹುದೆಂಬುದು ಆ ಮಹಾಕವಿಯ ಉದ್ಗಾರ! ಆ ಮಾತಿನಂತೆ ಈಗ ಈ ಯಕ್ಷಗಾನಕಾವ್ಯರೂಪದಲ್ಲಿ ಅದು ಮತ್ತೆ ಆವಿರ್ಭವಿಸಿದೆ ಎಂದು ನಾನು ವಿನೀತನಾಗಿ ಭಾವಿಸುತ್ತೇನೆ.

ಯಕ್ಷಗಾನಕೃತಿಗಳನ್ನು ರಚಿಸಿದವರನ್ನು ಶತಮಾನಗಳ ಕಾಲ 'ಪ್ರಸಂಗಕರ್ತ'ರೆಂದೇ ಕರೆಯಲಾಗುತ್ತಿತ್ತು. "ಅರಿಯೆ ಪ್ರಾಸೀರೆಂಟು ಭೇದವ, ಕೃತಿಯೊಳಗೆ ತಪ್ಪಿರಲು ತಿದ್ದಿಮೆರೆಸುವುದು" ಮುಂತಾದ ವಿನಯೋಕ್ತಿಗಳಿಂದಾಗಿ ಅವರಿಗೆ 'ಕವಿ'ಗಳೆಂಬ ಮನ್ನಣೆ ದೊರಕಲೇ ಇಲ್ಲ. ಹಾಗಿರುವಾಗ ಅವರು ರಚಿಸಿದ ಪ್ರಸಂಗಗಳಿಗೆ 'ಕಾವ್ಯ'ವೆಂಬ

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಅಯೋಧ್ಯಾಸಂಪುಟಂ

3

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೧

ಕ್ರತುಮೂರ್ತಿದರ್ಶನಂ

ಪಾತ್ರಪಟಲ

ದಶರಥ

ವಸಿಷ್ಠ

ಜಾಬಾಲಿ

ಯಜ್ಞಪುರುಷ

ಕೌಸಲ್ಯೆ

ಕೈಕೇಯಿ

ಸುಮಿತ್ರೆ

ಬಾಲರಾಮ

ಮಂಥರೆ

ಋಷ್ಯಶೃಂಗ

ಕ್ರತುಮೂರ್ತಿದರ್ಶನಂ

॥ **ಮಹಾಛಂದಸ್ಸು** ॥
ಶ್ರೀಜನಕಜಾರಮಣ ಲೋಕಾಭಿರಾಮಗುಣ
ಪೂರ್ಣ ಸಾಕೇತಪತಿ ಕರುಣನಿಧಿ ದಾಶರಥಿ
ಮಾನುಷಾಕೃತಿವೆತ್ತು ಮನುಜಜೀವನಧರ್ಮ
ದಾ ಮೌಲ್ಯನಂಬಿ ನಡೆದು
ಲೋಕಲೀಲಾರಾಮ
ದರ್ಶನದ ರಸಸಿದ್ಧಿಯಿಂದ ಸೀಮಾತೀತ
ನಿತ್ಯರಾಮಾಯಣದ ಸತ್ಯಮಂ ಸ್ಥಾಪಿಸಿದ
ಸಚ್ಚಿದಾನಂದಮಯ ಚಿತ್ಕಲಾಮೂರ್ತಿ ಶರಣು ॥ ೧–೧ ॥

॥ **ಸುರುಟಿ–ಏಕ** ॥
ಅಂಬಾಶಿವಸುತನೆ । ವಿಘ್ನ ಕ । ದಂಬವ ಕಳೆವವನೆ ॥
ನಂಬಿದೆ ನಿನ್ನ ಪ । ದಾಂಬುಜ ಯುಗಳವ ।
ಕಂಬದ ಗಣಪತಿ । ಬೆಂಬಿಡದೇ ಪೊರೆ ॥ ೧–೨ ॥

ಲಂಬೋದರ ಬೆನಕ । ಕೃತಿಯಾ । ರಂಭದಿ ಕೊನೆತನಕ ॥
ಹಂಬಲಿಸುವೆನ್ನೈ । ರಂಭಾಫಲಪ್ರಿಯ ।
ಕುಂಭಾಶಿಯ ಗಜ । ಗಂಭೀರನೆ ಜಯ ॥ ೧–೩ ॥

ಯಕ್ಷಗಾನದಿಂದ । ನಿನ್ನ ಸ । ಮಕ್ಷ ಪಾಡಲಂದ ॥
ಅಕ್ಷರವಿದ್ಯಾ । ಧ್ಯಕ್ಷನೆ ಕರುಣದಿ ।
ರಕ್ಷಿಸು ನಮ್ಮನು । ಇಕ್ಷುಪುರಾಲಯ ॥ ೧–೪ ॥

॥ **ಸಾರಂಗ–ಆಟ** ॥
ಶ್ರೀ ವೀಣಾಪಾಣಿ ವಾಣಿ । ಸಂಗೀತಕ ।
ಲಾವಿನೋದಿನಿ ಕಲ್ಯಾಣಿ ॥
ಕಾವ್ಯಕನ್ನಡದ ವಾ । ಗ್ದೇವಿ ಬ್ರಹ್ಮನ ರಾಣಿ ।
ಪಾವನರಸತೀರ್ಥ । ಭಾವಗಂಗಾವೇಣಿ ॥ ೧–೫ ॥

ಜಡತೆ ಚಿನ್ಮಯದಾಕೃತಿ । ಪೊಂದುವ ತೆರ ।
ನುಡಿಸು ನಿನ್ನಯ ಜೇಂಕೃತಿ ॥
ಕಡುರುಚಿ ನವನೀತ । ಬೆಡಗು ರಂಜಿಸುವಂತೆ ।
ಕಡೆಯೆನ್ನ ಹೃದಯದ । ಕಡಲ ಕಲಾಲಕ್ಷ್ಮಿ ॥ ೧-೬ ॥

ಕಬ್ಬಿಣ ಪಿಡಿಯೆ ನೀನು । ಸೂಸುವುದಲ್ಲಿ ।
ಕಬ್ಬಿನ ಹಾಲು ಜೇನು ॥
ಮಬ್ಬು ಕಳೆದು ಧ್ವನಿ । ಶಬ್ದಾರ್ಥದಲಂಕಾರ ।
ಕಬ್ಬದ ಹೂಬಳ್ಳಿ । ಹಬ್ಬಿಸಿ ಹರಸವ್ವ ॥ ೧-೭ ॥

॥ **ದ್ವಿಪದಿ** ॥
ಹೋಮರಗೆ ವರ್ಜಿಲಗೆ ಡಾಂಟೆ ಮಿಲ್ಟನಗೆ ॥
ಆ ಮಹಾಕವಿ ಪಂಪ ನಾರಣಪ್ಪನಿಗೆ ॥ ೧-೮ ॥

ವ್ಯಾಸ ವಾಲ್ಮೀಕಿಮುನಿ ಶುಕಶೌನಕರಿಗೆ ।
ಭಾಸ ಭವಭೂತಿ ಮೇಣ್ ಕಾಳಿದಾಸರಿಗೆ ॥ ೧-೯ ॥

ನನ್ನಯ್ಯ ಕಂಬನಿಗೆ ತುಳಸಿದಾಸನಿಗೆ ॥
ಕನ್ನಡದ ಕಾವ್ಯಋಷಿ ಶ್ರೀಕುವೆಂಪುವಿಗೆ ॥ ೧-೧೦ ॥

ಜಗತೀಕಲಾಚಾರ್ಯರೆಲ್ಲರಿಗೆ ನಮಿಸಿ ॥
ಭಗವದ್ವಿಭೂತಿಯಂ ಭಕ್ತಿಯಿಂ ಭಜಿಸಿ ॥ ೧-೧೧ ॥

ವಚನ: ತಮಸಾನದೀತೀರದೊಳ್ ವಾಲ್ಮೀಕಿಮಹರ್ಷಿಯೊರ್ವನೆ ನಡೆತರಲ್ –

॥ **ಮಧುಮಾಧವಿ-ತ್ರಿವುಡೆ** ॥
ದೇವಮುನಿ ನಾರದನು ಪೇಳ್ದ ಕ ।
ಥಾವಿಶೇಷವನಾಲಿಸುತ ಕಣ್ ।
ದಾವರೆಗೆ ರಸವುಣ್ಮೆ ರಾಮಂ ।
ಗೋವಿದನು ವಾಲ್ಮೀಕಿಯು ॥ ೧-೧೨ ॥

ನಡೆದನಾ ತಮಸಾನದಿಯ ತಟ ।
ದೆಡೆಗೆ ಮಜ್ಜನಕಾಗಿ ಮುನಿಪತಿ ।
ಕಡೆಗೆ ಕ್ರೌಂಚದ ಮಿಥುನರತಿಸುಖ ।
ವಡೆವುದನು ತಾ ಕಂಡನು ॥ ೧-೧೩ ॥

ತೂರಿಬಂದಿಹ ಶರವಿಘಾತಕೆ ।
ಹಾರಿ ಬಿಳ್ದುದು ಗಂಡುಕೊಂಚೆಯು ।
ಚೀರಿರಲು ಸತಿ ಕಾಡಿನೆಲ್ಲೆಡೆ ।
ಆ ರವವು ಅನುರಣಿಸಿತು ॥ ೧-೧೪ ॥

ನೋಡಿ ಕ್ರೂರನಿಷಾದಕೃತ್ಯವ ।
ಬಾಡಿದನು ಮುನಿ ಮನಸಿನಾಳದಿ ।
ಕಾಡುತಿಹ ಶೋಕವದು ಮಾಗುತ ।
ಮೂಡಿ ಬಂದಿತು ಕಾವ್ಯದಿ ॥ ೧-೧೫ ॥

ಭೂತಕಾಲಕೆ ಪಿಡಿದ ದರ್ಪಣ ।
ಸಾತಿಶಯ ಭವಿತವ್ಯದರ್ಶನ ।
ಗೀತದಿಂದಲಿ ಲೋಕಲೋಕಾ ।
ತೀತವೆಲ್ಲವು ತಣಿಯಿತು ॥ ೧-೧೬ ॥

॥ **ದ್ವಿಪದಿ** ॥
ಮತ್ತಾ ಪರಬ್ರಹ್ಮಸತ್ತೆ ದೃಷ್ಟಿಯೊಳು ।
ಸತ್ಯಮೆನಿಸದು ಬ್ರಹ್ಮಸತ್ತೆ ಪೂರ್ಣದೊಳು ॥ ೧-೧೭ ॥

ಮಿಥ್ಯೆಯೆನಿಪುದೆ ಕಾವ್ಯಸತ್ತೆ ಲೋಕದೊಳು ।
ಸತ್ಯಸೂರ್ಯೋತ್ತಮನ ಚಿತ್ಪ್ರಕಾಶದೊಳು ॥ ೧- ೧೮ ॥

ಬೊಮ್ಮಕೃತಿಯಂತೆ ಕವಿಕೃತಿ ಚಿದ್ವಿಲಾಸ ।
ರಮ್ಯ ಋತ ಕಲ್ಪನಾತತ್ತ್ವ ಸುವಿಶೇಷ ॥ ೧-೧೯ ॥

ವಾಗ್ದೇವಿಯಮೃತರಸನಾನೌಕೆಯೇರಿ ।
ಶ್ರೀಗುರುಕೃಪಾಬಲದಿ ರಸವಾರ್ಧಿ ಸೇರಿ ॥ ೧-೨೦

ರಾಮಕಥೆಯೆಂಬ ಪಥಪಿಡಿದು ಸಾಗುವೆನು ।
ಈ ಮಹಾಕೃತಿ ಯಕ್ಷಗಾನ ರಚಿಸುವೆನು ॥ ೧-೨೧ ॥

ವಚನ: ಕೋಸಲದೊಳ್ ದಶರಥನೃಪಂ
ಮೆರೆದನೊಡ್ಡೋಲಗದೊಳ್ -

॥ ಕಾಂಭೋದಿ-ಝಂಪೆ ॥
ಸಗ್ಗದೂರನೆ ಸೂರೆಗೊಂಡಂಥ ಕೋಸಲಕೆ ।
ಮೊಗ್ಗುಮೂಡಿರುವಂತೆ ನೃಪತಿ ದಶರಥನು ॥
ಒಗ್ಗೂಡಿ ಸರ್ವಜನ ಸಮದರ್ಶನವನೊಪ್ಪಿ ।
ಹಿಗ್ಗಿನಿಂದಲಿ ರಾಜ್ಯ ಪಾಲಿಸುತ್ತಿರಲು ॥ ೧-೨೨ ॥

ದೇವಿಕೌಸಲ್ಯೆ ಸಾಧ್ವಿಯು ಸುಮಿತ್ರೆಯು ಕೈಕೆ ।
ಮೂವರೊಂದಿಗೆ ಬೆಸೆದ ದಾಂಪತ್ಯಸುಖವು ॥
ಆವರಿಸಲೊಂದು ನರೆನವಿರು ಬೆಳ್ಳಿಯ ಗೆರೆಯು ।
ಭೂವಧೂರಮಣನಿಗೆ ಮನದಿ ಬೇಸರವು ॥ ೧-೨೩ ॥

ಅರಮನೆಯ ಸಿರಿದೋಟದೊಳಗೆ ಹೂಬಿರಿದಂಥ ।
ವರಲತಾಮಂಟಪವ ಬಳಸಿ ಸಂಚರಿಸಿ ॥
ಮರಿಗೆ ಗುಟುಕನ್ನೀವ ಗುಬ್ಬಚ್ಚಿಯನು ಕಂಡು ।
ಮರುಗಿದ ವಿಹಂಗಮದ ಸೊಗಕೆ ಕಾತರಿಸಿ ॥ ೧-೨೪ ॥

॥ ಬಿಲಹರಿ-ಆದಿ ॥
ಕೊಕ್ಕಿನಿಂದ ಕುಟುಕನೀವ ।
ಪಕ್ಕಿ ಪಡೆದ ಭಾಗ್ಯವು ॥
ಚಕ್ರವರ್ತಿಗಿಹುದೆ ಇಂಥ ।
ಮಕ್ಕಳಾಟ ಪುಣ್ಯವು ॥ ೧-೨೫ ॥

ಕೊನರಿತಾಗ ಪುತ್ರವಾಂಛೆ ।
ಜನಪ ಮನೆಗೆ ನಡೆದನು ॥
ಮುನಿ ವಸಿಷ್ಠರನ್ನು ಕರೆದು ।
ಮನಸಿನಾಸೆ ನುಡಿದನು ॥ ೧-೨೬ ॥

॥ ಕೇದಾರಗೌಳ-ಆಟ ॥
ಗುರುವೆ ಕೇಳೆನ್ನೆದೆಬಿರಿದು ಜೀವಾಮೃತ ।
ಪರಿದುಪೋಗುತ್ತಿಹುದು ॥
ಉರಿಸದೆ ಪೊಸತೊಂದು ಸೊಡರ ನೇಸರವಂಶ ।
ಬರಿದೆ ಕತ್ತಲೆಯಾಯಿತು ॥ ೧-೨೭ ॥

ಕಾಮನಬಿಲ್ಲು ಚಂದ್ರೋದಯ ಚಂದ್ರಿಕೆ ।
ಈ ಮನಸಿಗೆ ನೀರಸ ॥
ಮಾಮರತಳಿರು ಚಿಣ್ಣರ ಚಿತ್ರ ಕಟ್ಟಿದೆ ।
ತಾಮಸ ತಾಮರಸ ॥ ೧-೨೮ ॥

ಸಿರಿರಾಜ್ಯಸಂಪದ ಶವದ ಸಿಂಗರವೈಸೆ ।
ಕುರುಡಗೆ ಕನ್ನಡಿಯೆ ॥
ತರಳರ ಪಡೆವ ದಾರಿಯತೋರಿ ಸುಗ್ಗಿಯ ।
ಬರಿಸುವುದೆಂತು ಪೇಳ ॥ ೧-೨೯ ॥

॥ **ಭಾಮಿನಿ** ॥
ದೊರೆಯ ಮೊರೆಯಾಲಿಸುತಲಾಕ್ಷಣ ।
ಗುರು ವಸಿಷ್ಠನು ಮನದಿ ಚಿಂತಿಸಿ ।
ಪರಮಭಾಗ್ಯಕೆ ಪುತ್ರಕಾಮೇಷ್ಠಿಯನು ಸೂಚಿಸುತ ॥
ಸರಯುವಿನ ನದಿತಟದಿ ಯಜ್ಞವ ।
ನೆರಹುವರೆ ನಿಶ್ಚೈಸಲೊಂದಿನ ।
ಧರಣಿಪತಿಯೋಲಗಕೆ ಬಂದನು ಮುನಿಪ ಜಾಬಾಲಿ ॥ ೧-೩೦ ॥

ವಚನ: ಬಂದಾ ಜಾಬಾಲಿಯಂ ನೃಪತಿ ಬಹುವಿಧಧಿ ಮನ್ನಿಸಿದನು -

॥ **ಸಾಂಗತ್ಯ-ರೂಪಕ** ॥
ಮುನಿಕುಲತಿಲಕನೆ ಮುದವಾಂತೆ ನಿಮ್ಮಯ ।
ವನರುಹಪದಕೆ ಬಾಗುವೆನು ॥
ವಿನಯದಿಂದಲಿ ದರ್ಭಾಸನವನೀವೆನು ಸ್ವಾಮಿ ।
ಅನುಗ್ರಹಿಸುವುದು ತೋಷದಲಿ ॥ ೧-೩೧ ॥

ಪುತ್ರಸಂತತಿಗಾಗಿ ಪೂರ್ವಪದ್ಧತಿಯಿಂದ ।
ಪುತ್ರಕಾಮೇಷ್ಠಿ ಗೈಯುವೆನು ॥
ಮಿತ್ರವಂಶದ ಬಳ್ಳಿ ಮಿಗೆ ಚಿಗುರಲಿಯೆಂದು ।
ಸತ್ರಸಿದ್ಧಿಗೆ ಹಾರೈಸುವುದು ॥ ೧-೩೨ ॥

ವಚನ: ಎನೆ ಜಾಬಾಲಿಮುನಿಪಂ ಇಂತೆಂದನು-

॥ **ಬೇಗಡೆ-ತ್ರಿವುಡೆ** ॥
ವೀರರಘುಕುಲವಾರ್ಧಿಚಂದ್ರಮನೆ । ದಿಟವೈಸೆ ಈ ಸಂ ।
ಸಾರತರುವಿನ ಫಲದ ಸುಖಸ್ಮರಣೆ ॥
ಪೂರ್ವಪದ್ಧತಿವಿಡಿದು ಮಾಡುವ ।
ಘೋರತರ ದಿಗ್ವಿಜಯ ಸಮರದ ।
ಕ್ರೂರಹಿಂಸೆಯ ತ್ಯಜಿಸೆ ಕರುಣೆಯ ।
ತೋರುವುದು ಜಗದಾದಿಚೇತನ ॥ ೧-೩೩ ॥

ಪ್ರೇಮಮಯವಾಗಿರ್ಪುದೀ ನಿಯತಿ । ಸಂತಾನಮುದಿಸಲು ।
ಪ್ರೇಮದಾರಾಧನೆಯೆ ರಾಗರತಿ ॥
ಪ್ರೇಮಸಾಕ್ಷಾತ್ಕಾರಗೊಂಡಿಹ ।
ಆ ಮುನೀಶ್ವರ ಋಷ್ಯಶೃಂಗರ ।
ನೇಮವಂ ಪಡೆಯುತ್ತ ಪೂಜಿಸು ।
ರಾಮಣೀಯಕ ವಿಶ್ವಶಕ್ತಿಯ ॥ ೧–೩೪ ॥

ಪರಪರಿಯ ಜನರನ್ನು ನೀನಿಂದು । ಕರೆಸುತ್ತ ತಣಿಸಲು ।
ದೊರೆ ಕುಟುಂಬಕೆ ಒಳ್ಳಿತಕ್ಕೆಂದು ॥
ಪರಸಿಪೋಗಲು ಪರಮವಚನವೆ ।
ಹರಿಯನುಗ್ರಹವಾಗಿ ಪೊರೆವುದು ।
ತಿರೆಯ ಜನಮನಶಕ್ತಿಸಂಚಯ ।
ವರ ಮಹಾತ್ಮರನಿಳೆಗೆ ಸೆಳೆವುದು ॥ ೧–೩೫ ॥

॥ **ದ್ವಿಪದಿ** ॥
ಋಷಿಯ ವಚನಾಮೃತವನಾಲಿಸುತ ಮನದಿ ॥
ದಶರಥನು ತಪಸಿಯಂ ಬೀಳ್ಕೊಂಡ ಮುದದಿ ॥ ೧–೩೬ ॥

ಕ್ರತುಮಂಟಪಕೆ ಬಂದು ನೃಪರೆಲ್ಲ ನೆರೆಯೆ ॥
ಕ್ಷಿತಿಯೊಳಗೆ ಸಾಕೇತ ಸಂಭ್ರಮಿಸಿ ಮೆರೆಯೆ ॥ ೧–೩೭ ॥

ವಚನ: ಋಷ್ಯಶೃಂಗ ಮಹಾಮುನಿಪನಂ ಕರೆಸಿ ಪುತ್ರಕಾಮೇಷ್ಟಿಯಂ ತೊಡರ್ಚಿದಂ –

ಋಷ್ಯಶೃಂಗರ ತಪೋಜ್ವಲ ಸನ್ನಿಧಾನ ॥
ಪುಷ್ಯರಾಗಾದಿ ನವರತ್ನಗಳ ದಾನ ॥ ೧–೩೮ ॥

ಭಾವಮಹಿಮಾಜ್ಯೋತಿ ದಿವ್ಯಸಂಚಾರ ॥
ದೇವ ಪುರುಷೋತ್ತಮನ ಕರೆವ ಓಂಕಾರ ॥ ೧–೩೯ ॥

॥ **ಸೌರಾಷ್ಟ್ರ–ತ್ರಿವುಡೆ** ॥
ಯಜ್ಞಕುಂಡದ ಮಧ್ಯೆ ರವಿಯೊಲು ।
ಪ್ರಜ್ವಲಿಪ ಕ್ರತುಮೂರ್ತಿದರ್ಶನ ।
ಕಜ್ಜಸಾರ್ಥಕವೆಂದು ವಚನವ ।
ನುಜ್ಜುಗಿಸಲು ॥ ೧–೪೦ ॥

ಋತದ ಚಿನ್ಮಯಲೀಲೆಗಾ ಕವಿ ।
ಕ್ರತುವು ನಾನಿಹೆ ಸೃಷ್ಟಿದಿವ್ಯಾ ।
ಮೃತದ ಪಾಯಸಕುಂಭವೀವೆನು ।
ವ್ರತಕೆ ಮೆಚ್ಚಿ ॥ ೧–೪೧ ॥

ಕೊಡುವುದೀ ಪಾಯಸವ ಮೂವರು ।
ಮಡದಿರನ್ನೆಯರಿಂಗೆ ಮುಂದಕೆ ।
ಪಡೆವೆ ಮಕ್ಕಳನೆಂದು ಪೇಳುತ ।
ಲಡಗಿತಾಗ ॥ ೧–೪೨ ॥

॥ **ಕಂದ** ॥
ಧರಣಿಪನಾ ಹೋಮಾಗ್ನಿಗೆ ।
ಶಿರಬಾಗುತ ಬೊಗಸೆಯಲ್ಲಿ ಕಲಶವ ಪಡೆದುಂ ॥
ಚಿರಋಣಿ ತಾನೆಂದೆನುತಂ ।
ಮರಳಿದ ಕೌಸಲ್ಯೆಯಿರ್ಪ ಮನೆಯೆಡೆಗಾಗಳ್ ॥ ೧–೪೩ ॥

॥ **ಕೇದಾರಗೌಳ–ಆಟ** ॥
ಮಾವಿನ ಮರಕೀಗ ಹೂವಿನ ಸುಖವಾಯ್ತು ।
ದೇವಿಕೌಸಲ್ಯೆ ಕೇಳು ॥
ದೇವರು ವರವಿತ್ತ ಜೀವನಸಾರ್ಥಕ ।
ಭಾವಸಂತೃಪ್ತಿ ತಾಳು ॥ ೧–೪೪ ॥

ಮಿಸುನಿಯ ಕೊಡದಿ ಪಾಯಸಪೂರ್ಣ ತುಂಬಿದೆ ।
ಬಿಸಜಾಕ್ಷಿ ಇದಕೊ ಕೊಳ್ಳೆ ॥
ಬಸಿರಾಗಲದನು ಸೇವಿಸುತ ತಂಗಿಯರಿಗೆ ।
ಹಸನಾಗಿ ಹಂಚಿಕೊಳ್ಳೆ ॥ ೧–೪೫ ॥

ವಚನ: ದಿವ್ಯಪಾಯಸದ ಭುಕ್ತಿಯಿಂ ಮೂವರುಂ ರಾಣಿಯರ್
ಗರ್ಭವನಾಂತರ್ –

॥ **ವಾರ್ಧಕ** ॥
ನವಮಾಸತುಂಬಿ ಚೈತ್ರದನವಮಿ ಶುಭದಿನದಿ ।
ಭುವನಾಭಿರಾಮನಂ ಕೌಸಲ್ಯೆ ಪ್ರಸವಿಸಲು ।
ದಿವಸವೊಂದರ ಬಳಿಕ ಕೈಕೆಗಾಯಿತು ಪುಷ್ಯತಾರೆಯೊಳು ಪುತ್ರೋತ್ಸವಂ ॥
ಅವಳಿಮಕ್ಕಳು ಸುಮಿತ್ರಾದೇವಿಗುದಿಸಿರಲು ।
ದಿವಿಗೆ ಗಂಧರ್ವಗಾಯನವೆಲ್ಲ ಪಸರಿಸಲು ।
ನವಜಾತರಿಗೆ ರಾಮ ಭರತ ಲಕ್ಷ್ಮಣ ಶತ್ರುಹರರೆಂಬ ಪೆಸರಿಟ್ಟರು ॥ ೧–೪೬ ॥

ವಚನ: ಮತ್ತಾ ಶ್ರೀರಾಮಾದಿಗಳ್ ಬಾಲಲೀಲೆಯಿಂ ಮೆರೆದರ್ –

॥ **ಸಾಂಗತ್ಯ–ರೂಪಕ** ॥
ಮಗನ ಸೌಂದರ್ಯದ ಸುಧೆಯಲ್ಲಿ ಮುಳುಗುತ್ತ ।
ಜಗವನ್ನೆ ಮರೆತು ಕೌಸಲ್ಯೆ ॥
ರಘುರಾಮನಾಡುವ ತೊದಲುನುಡಿಯ ಕೇಳಿ ।
ಮುಗುದಗೆ ಮುತ್ತನೀಡಿದಳು ॥ ೧–೪೭ ॥

ಚೆಲ್ಲುವರಿವ ಹಾಲುಹಲ್ಲು ದಾಳಿಂಬೆಯು ।
ಜೊಲ್ಲುಸುರಿವ ತೊಂಡೆ ತುಟಿಯು ॥
ಬೆಲ್ಲದಚ್ಚಿನ ಗಲ್ಲ ಮೆಲ್ಲನಾಡುವ ಸೊಲ್ಲ ।
ಸಲ್ಲೀಲೆಯಲಿ ತೇಲಾಡಿದಳು ॥ ೧–೪೮ ॥

ಒಂದು ಹುಣ್ಣಿಮೆ ರಾತ್ರಿ ಓಡಾಡುತಿರೆ ಬಾನ ।
ಹೊಂದಳಿಗೆಯ ಕಂಡು ರಾಮ ॥
ಚಂದಿರಮಾಮನ ಚಕ್ಕುಲಿಸೋಮನ ।
ತಂದುಕೊಡೆಂದು ಕೇಳಿದನು ॥ ೧–೪೯ ॥

॥ **ಭಾಮಿನಿ** ॥
ತರುವುದೆಂತೈ ಮಗುವೆ ತಿಂಗಳು ।
ಬರುವುದೆಂತೈ ಮನೆಗೆ ತಂದರೆ ।
ಹೊರುವುದೆಂತೈ ನೆತ್ತಿಮೇಲಕೆ ಭಾರ ಮಣಭಾರ ॥
ಕರೆವುದೆಂತೈ ಕೆಳಗೆ ಕುಳಿತಿರ ।
ಒರೆವುದೆಂತೈ ತಾರೆಯರ ಕೆಳೆ ।
ಮರೆವುದೆಂತೈ ಮಾಮ ನೆಲದೆಡೆ ಬಾರ ಸುಕುಮಾರ ॥ ೧–೫೦ ॥

॥ ಹಿಂದೋಳ–ಆಟ ॥
ಬೇಕೇ ಬೇಕಾ ಚಂದಿರ । ಮನೋಮಂದಿರ ।
ಆಕಾಶ ಸುರಸುಂದರ ॥
ನೂಕುಬಂಡಿಗೆ ಗಾಲಿ । ಹಾಕಬೇಕಿದೆ ಕೇಳಿ ।
ನಾಕುಮಕ್ಕಳು ಕೂಡಿ । ಜೀಕುವಾಟವ ನೋಡಿ ॥ ೧–೫೧ ॥

ಬೆಳ್ಳಿಯ ರಥವನೇರು । ಸಾಹಸದಿಂದ ।
ಬಿಲ್ಲುಬಾಣದೊಳು ಹೋರು ॥
ಒಳ್ಳಿತಾಟಿಗೆಗಳ । ಕೊಳ್ಳುತ ನಲಿವುದು ।
ಕಳ್ಳಚಂದಿರನನ್ನು । ಇಲ್ಲಿ ಕರೆಯದಿರು ॥ ೧–೫೨ ॥

॥ ದ್ವಿಪದಿ ॥
ಚಿನ್ನದುಡುಗೆಗಳನ್ನು ತಂದುತೋರಿದರು ॥
ಹಣ್ಣುಹಂಪಲುಗಳನು ತಿನ್ನಹೇಳಿದರು ॥ ೧–೫೩ ॥

ದಮ್ಮಯ್ಯ ಅಳಬೇಡ ಎಂದು ಬೇಡಿದರು ॥
ಸುಮ್ಮನಿರು ಕಂದ ಮಲಗೆಂದು ಹಾಡಿದರು ॥ ೧–೫೪ ॥

ಕೈಕಾಸುಮಿತ್ರೆಯರು ಎತ್ತಿ ತಿರುಗಿದರು ॥
ಮೈಕೈಗೆ ಕಚಗುಳಿಯನಿಟ್ಟು ಮರುಗಿದರು ॥ ೧–೫೫ ॥

ದಶರಥಾದಿಗಳೆಲ್ಲ ಓಡೋಡಿಬರಲು ॥
ಶಶಿಯು ಬೇಕೆಂಬಳಲು ಶಿಶು ನಿಲಿಸದಿರಲು ॥ ೧–೫೬ ॥

ವಚನ: ಅಲ್ಲಿಗಾ ಕೈಕೇಯಿದಾಸಿ ಮಂಥರೆ ಬಂದಳೇನೆಂಬೆನು –

॥ ಮಧುಮಾಧವಿ–ತ್ರಿವುಡೆ ॥
ಗೂಡುಗಣ್ಣಿನ ಗೂನುಬೆನ್ನಿನ ।
ಚಾಡಿ ಮೈಮನ ಮಂಥರೆ ॥
ಕೇಡುಮೋರೆಯ ಮುರುಟಿ ಮುದುಕಿಯ ।
ನೋಡಲಾಗದು ನಿಂತರೆ ॥
ಬಂದಳಲ್ಲಿ । ನಿಂತು । ಕೊಂಡಳಲ್ಲಿ ॥ ೧–೫೭ ॥

ಒಡತಿ ಕೈಕೆಯ ಕಿವಿಯಲೇನನೊ ।
ನುಡಿದು ಕೊಟ್ಟಳು ಕನ್ನಡಿ ॥
ಪಿಡಿದಳಾಕ್ಷಣ ರಾಮನೆದುರಿಗೆ ।
ಬೆಡಗು ಕಾವ್ಯಕೆ ಮುನ್ನುಡಿ ॥
ಅಳುವುದೆಲ್ಲ । ನಿಂತು । ಪೋಯಿತಲ್ಲ ॥ ೧-೫೮ ॥

॥ **ಕೇದಾರಗೌಳ-ಆಟ** ॥
ರನ್ನಗನ್ನಡಿಯಲ್ಲಿ ತಣ್ಣನೆ ಶಶಿಬಿಂಬ ।
ವನ್ನು ಕಾಣುತ ರಾಮನು ॥
ತನ್ನಳುವನು ಬಿಟ್ಟು ತನ್ಮಯನಾಗಿರೆ ।
ಬಣ್ಣಿಸಲೆಂತು ಲೀಲೆ ॥ ೧-೫೯ ॥

ರಾಮಕಂದಗೆ ಚಂದ್ರನಾಮ ಸೇರಿತು ಎಂದು ।
ಆ ಮಂಥರೆಯು ಮುದ್ದಿಸೆ ॥
ರಾಮನ ನಗುಕಂಡು ಕ್ಷೇಮವಾಯಿತು ಎಂದು ।
ಭೂಮಿಪಾಲಕ ಗಮಿಸೆ ॥ ೧-೬೦ ॥

ಕೆಟ್ಟಗೂನಿಯೆ ನಿನ್ನ ಸೊಟ್ಟಕರಗಳಿಂದ ।
ಪುಟ್ಟಬಾಲಕನನಿಂತು ॥
ಮುಟ್ಟಬಾರದು ಜೋಕೆ ಹುಟ್ಟಡಗಿಪೆನೆಂದು ।
ಪಟ್ಟದ ರಾಣಿ ಪೇಳೆ ॥ ೧-೬೧ ॥

ಮಗುವನಾಡಿಸುವರೆ ಬಗೆಯ ಭೇದಗಳೇಕೆ ।
ನಗೆಗೇಡಿದೆಂದು ದಾಸಿ ॥
ಬಿಗಿಯಪ್ಪಿ ಭರತನ ಮುದ್ದಿಸಿ ಪೊರಟಳು ।
ಹಗೆಯ ಹಾವಿನ ತೆರದಿ ॥ ೧-೬೨ ॥

॥ **ಕಂದ** ॥
ಕ್ರತುಮೂರ್ತಿ ಮಹಾದರ್ಶನ ।
ಮತುಳಂ ಶ್ರೀರಾಮಜನ್ಮಕಥನವಿಶೇಷಂ ॥
ಸತತಾನಂದಂ ದಶರಥ ।
ಸುತದರ್ಶನ ಯಕ್ಷಗಾನದ ಮಹಾಕಾವ್ಯಂ ॥ ೧-೬೩ ॥

***

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೨
ಸೀತಾಸ್ವಯಂವರಂ

ಪಾತ್ರಪಟಲ

ದಶರಥ

ವಿಶ್ವಾಮಿತ್ರ

ವಸಿಷ್ಠ

ಶ್ರೀರಾಮ

ಲಕ್ಷ್ಮಣ

ತಾಟಕಿ

ಸುಬಾಹು

ಮಾರೀಚ

ಅಹಲ್ಯೆ

ಗೌತಮ

ಜನಕರಾಜ

ಸೀತಾದೇವಿ

ಊರ್ಮಿಳೆ

ಮಾಂಡವಿ

ಶ್ರುತಕೀರ್ತಿ

ಪರಶುರಾಮ

ಋಷಿಗಳು

ಸಖಿಯರು

ಸೀತಾಸ್ವಯಂವರಂ

॥ **ಕಾಂಭೋದಿ–ಝಂಪೆ** ॥
ಕಾಲನದಿ ಪ್ರವಹಿಸಲು ದಶರಥನ ಬಾಲರಿಗೆ ।
ಮೇಲೆ ಷೋಡಶವರ್ಷ ತುಂಬಿಕೊಳಲು ॥
ಲೀಲೆಯಿಂದಲಿ ಮದುವೆ ನಡೆಸಬೇಕೆಂದಿರಲು ।
ಓಲಗಕೆ ನಡೆತಂದ ಕೌಶಿಕಮುನಿ ॥ ೨–೧ ॥

ಆಶಾದಿಗಂತದೊಳು ಮಳೆಮುಗಿಲು ನೀರಾಗಿ ।
ಆಶಿಷದ ಮುದ್ರೆಯೇ ಮೂರ್ತಿವೆತ್ತು ॥
ಕೋಸಲಕೆ ನಡೆತಂದುದೆಂಬ ಸಂತಸದಿಂದ ।
ಆಸನವನಿತ್ತು ಸತ್ಕರಿಸಲೆಂದ ॥ ೨–೨ ॥

ಪುಣ್ಯಪುರುಷನೆ ಕೇಳು ಲೋಕಕಲ್ಯಾಣಾರ್ಥ ।
ಜನ್ನಮಂ ನಡೆಸೆ ಸಂಕಲ್ಪಿಸಿಹೆನು ॥
ಬನ್ನವೀಯುವ ದೈತ್ಯರನ್ನು ಸಂಹರಿಸಲ್ಕೆ ।
ನಿನ್ನ ಸುತ ರಾಮನಂ ಕಳುಹಬೇಕು ॥ ೨–೩ ॥

ಅಗ್ಗಳದ ಮುನಿವರನೆ ಅಧಮ ದನುಜರ ಮಥಿಸೆ ।
ನುಗ್ಗಿ ನಾನೇ ಬಹೆನು ಚಿಂತೆಯೇಕೈ ॥
ಮೊಗ್ಗಿನಿಂದಿರಿಯುವರೆ ಕಗ್ಗಲ್ಲ ಬಂಡೆಯಂ ।
ಮಗ್ಗುಲಿನ ಪಸುಳೆಯಂ ಕಳುಹಲೆಂತೈ ॥ ೨–೪ ॥

॥ **ಕೇದಾರಗೌಳ–ಅಟ** ॥
ತಾಟಕಿ ಮಾರೀಚ ಮೊದಲಾದ ರಾಕ್ಷಸ ।
ಕೂಟ ಸಿದ್ಧಾಶ್ರಮದಿ ॥
ಕಾಟವ ಕಳೆಯೆ ರಾಘವನು ಸಮರ್ಥ ವಿ ।
ರಾಟ ಪರಾಕ್ರಮಿಯು ॥ ೨–೫ ॥

ಲಂಕೆಯನಾಳ್ವ ದಶಾನನ ರಾವಣ ।
ತೆಂಕುದಿಕ್ಕಿನೊಳಿಹನು ॥
ಶಂಕರನಿಂದ ವರಂಗಳ ಪಡೆದ ಭ ।
ಯಂಕರ ಬಲಯುತನು ॥ ೨–೬ ॥

ಅಮಮಾ ಈ ಕಥೆಸಾಲ್ಲು ದೇವತೆಗಳ ಬಲ ।
ದಮನಿಪ ಖಳರವರು ॥
ಕ್ಷಮೆಯನೀವುದು ತಪೋಧನನೆ ಬಾಲನ ದೈತ್ಯ ।
ಸಮರಕ್ಕೆ ಕಳುಹಲಾರೆ ॥ ೨-೭ ॥

ವಚನ : ಆಗಳಾ ಮುನಿವಸಿಷ್ಠಂ ಏನೆಂದನು ಎಂದರೆ-

॥ **ಕೇದಾರಗೌಳ-ಝಂಪೆ** ॥
ಇಕ್ಷ್ವಾಕುವಂಶಕೀರ್ತಿ । ಋಷಿಕೃಪಾ ।
ರಕ್ಷೆಯೊಳು ರಾಮಮೂರ್ತಿ ॥
ಅಕ್ಷಯದ ವಿದ್ಯೆಯಿಂದ । ರಾಕ್ಷಸರ ।
ಶಿಕ್ಷಿಪನು ಧೈರ್ಯದಿಂದ ॥ ೨-೮ ॥

ಮುನಿಪತಿಯು ಶಿವಸ್ವರೂಪ । ಗುರುವಹನು ।
ಪ್ರಣವಮಂತ್ರಾಸ್ತ್ರದೀಪ ॥
ತನುಜಾತರಭ್ಯುದಯಕೆ । ಬಂದಿಹನು ।
ಮನದೊಳಗೆ ಬೇಡ ಶಂಕೆ ॥ ೨-೯ ॥

ಭೂಮಿಪತಿ ಧೈರ್ಯವೆರಸಿ । ದೂತರಿಂ ।
ರಾಮಲಕ್ಷ್ಮಣರ ಕರೆಸಿ ॥
ಪ್ರೇಮದಿಂದಾಲಿಂಗಿಸಿ । ಬೀಳ್ಕೊಟ್ಟ ।
ನಾ ಮುದದಿ ಶುಭವ ಹರಸಿ ॥ ೨-೧೦ ॥

॥ **ದ್ವಿಪದಿ** ॥
ಸಾರಿ ಮೂವರು ನಡೆದು ಮುಂಬರಿಯಲಾಗ ॥
ಸೇರಿ ಸರಯೂನದಿಯ ದಕ್ಷಿಣದ ಭಾಗ ॥ ೨-೧೧ ॥

ದಶರಥಾತ್ಮಜರಿಂಗೆ ಮಂತ್ರವಿದ್ಯೆಯನು ॥
ಕುಶಿಕಸಂಭವನಿತ್ತು ಕಳೆದು ರಾತ್ರೆಯನು ॥ ೨-೧೨ ॥

ಶೀತಸುಂದರ ಸುಖದ ಸಲಿಲದೊಳು ಮಿಂದು ॥
ಪ್ರಾತರಾಹ್ನಿಕ ಮುಗಿಸಿ ವನಸಿರಿಯ ಕಂಡು ॥ ೨-೧೩ ॥

ವಚನ: ವಿಶ್ವಾಮಿತ್ರಮುನಿಪನೊಡನಾ ಬಾಲಕರ್ ಅಂತರಂಗವನೊರೆದರ್–

॥ **ಸಾಂಗತ್ಯ–ರೂಪಕ** ॥
ಗುರುದೇವ ನಿಮ್ಮ ಕಾರುಣ್ಯದಿಂ ಲಭಿಸಿತು ।
ತರುಲತೆಗಳ ಹಸಿರುಸಿರು ॥
ಪುರದ ಜೀವನವೆ ದಾರಿದ್ರ್ಯಸಂಕಟ ವನ್ಯ ।
ಸಿರಿಯ ಸಂಸ್ಕೃತಿ ಮುಂದೆಯಲ್ತು ॥ ೨–೧೪ ॥

ವತ್ಸ ಲಾಲಿಸು ದೈವಕೃಪೆಯು ಸಂವೇದ್ಯವು ।
ಚಿತ್ತಕೆ ಸಲ್ಲು ಸಮಾಧಿ ॥
ಚಿತ್ತರದಾಗಸ ಸೃಷ್ಟಿಸೌಂದರ್ಯ ಮ ।
ಹತ್ತರ ರಸಸಿದ್ಧಿಪೂಜೆ ॥ ೨–೧೫ ॥

ಚೀರುವ ಜೀರುಂಡೆ ಕೂಗುವ ಶಕುನಿಗಳ್ ।
ಘೋರಾಂಧಕಾರ ದುಶ್ಶಕುನ ॥
ದಾರಿಗಾಣದ ಗಂಗಾತೀರದ ವಿಪಿನಕೆ ।
ಬೇರೊಂದು ಪೆಸರುಂಟೆಯೆನಲು ॥ ೨–೧೬ ॥

ಇದುವೆ ತಾಟಕವನ ಸುಂದನ ಸತಿಯಾಕೆ ।
ಗೊದಗೆ ಶಾಪವು ಋಷಿಯಿಂದ ॥
ಅದಕೊ ಬಂದಳು ಆರುಭಟೆಯು ಕೇಳಿಸುತಿದೆ ।
ಹೆದೆಗೆ ಬಾಣವ ಪೂಡಿ ನಿಲ್ಲಿ ॥ ೨–೧೭ ॥

ವಚನ: ಆ ಸಮಯದೊಳ್ ತಾಟಕಾಂಗನೆ
ಬಂದಳೇನೆಂಬೆನದ್ಭುತವನು –

॥ **ಭಾಮಿನಿ** ॥
ಗಿರಿಶಿಖರದೌನ್ನತ್ಯದಿಂ ಕೆಳ ।
ಗುರುಳಿ ಕಣಿವೆಗೆ ಬಿದ್ದು ತಪ್ಪಲು ।
ಮರಗಿಡಂಗಳ ನುಚ್ಚುನೂರಾಗಿಸುವ ಬಂಡೆಯೊಲು ॥
ಭರಿತ ರೋಷದಿ ಕೋರೆದಾಡೆಗ ।
ಳುರಿಮುಖದಿ ಮುಡಿಗೆದರಿ ಮುಂಗಾ ।
ರೊರಲಿದಂದದಿ ಬಂದಳಾ ಚೀತ್ಕರಿಸಿ ತಾಟಕೆಯು ॥ ೨–೧೮ ॥

॥ **ಸೌರಾಷ್ಟ್ರ-ತ್ರಿವುಡೆ** ॥
ಗುರುವಿನಾಣತಿಯಂತೆ ಬಾಲರು ।
ಶರವ ಸಿಂಜಿನಿಗೆಳೆದು ನಿಂದರು ।
ದುರುಳೆ ಧೂಳಿಯ ಮುಸುಗೆ ಶರಮಳೆ ।
ಗರೆದರಾಗ ॥ ೨-೧೯ ॥

ಬಾಲರಿರ ಬರಿದೇಕೆ ಈ ಬಿರು ।
ಗಾಳಿಯೊಂದಿಗೆ ಸರಸವೆನ್ನುತ ।
ಆಲಿಕಲ್ಮಳೆ ಸುರಿಸಿ ಮಾಯಾ ।
ಜಾಲವೆರಸೆ ॥ ೨-೨೦ ॥

ತಾಟಕಿಯೆ ತಾಮಸಿಯೆ ನಿನ್ನಯ ।
ಕೂಟಯುದ್ಧವ ನಿಲಿಪೆನೆನ್ನುತ ।
ಮೀಟಿದನು ಮಂತ್ರಾಸ್ತ್ರ ರಾಘವ ।
ಪಾಟವದೊಳು ॥ ೨-೨೧ ॥

ಮಕ್ಕಳಾಟವದೆಂದು ಕಾನನ ।
ಪೊಕ್ಕು ಬಂದಿರೆ ಮುನಿಯ ಮಾತಿಗೆ ।
ಸೊಕ್ಕದೆಷ್ಟಿದೆ ಮುದ್ದೆಮಾಂಸವ ।
ಮುಕ್ಕಿ ತಿಂಬೆ ॥ ೨-೨೨ ॥

ಕಳೆವೆ ನಿನ್ನಸುವೆಂದು ರಘುಕುಲ ।
ತಿಲಕನಾಕ್ಷಣ ಶರವನೊಂದನು ।
ಸೆಳೆದು ಬಿಡೆ ರಕ್ಕಸಿಯು ಧರಣೀ ।
ತಳದೊಳುರುಳೆ ॥ ೨-೨೩ ॥

॥ **ಸಾಂಗತ್ಯ-ರೂಪಕ** ॥
ರಜನಿಯ ಕಳೆದು ಮುಂಬೆಳಗಿನ ಸಮಯಕೆ ।
ಬಿಜಯಂಗೈದರು ಮೂವರಾಗ ॥
ಸುಜನರಾಶ್ರಮ ಸೇರಿ ಸುಖದಿ ಸಂಕಲ್ಪಿಸೆ ।
ಯಜನಸಿದ್ಧತೆಗೆ ಕೌಶಿಕನು ॥ ೨-೨೪ ॥

ಮಂಗಳಾಂಗರನು ತಾಪಸರು ಕೊಂಡಾಡುತ ।
ಶೃಂಗರಿಸಿದರು ವೇದಿಯನು ॥
ಮುಂಗಾಣಿಸುವ ದೈತ್ಯಭಂಗಶಪಥದಿಂದ ।
ತುಂಗವಿಕ್ರಮರು ನಿಂತಿರಲು ॥ ೨-೨೫ ॥

॥ **ಶಂಕರಾಭರಣ-ಮಠ್ಯ** ॥
ಆಗಲಾ ಸುಬಾಹು ಬಂದು ।
ಭಾಗವತರ ಬಡಿದು ನಿಂದು ।
ಯಾಗಕುಂಡದೊಳಗಮೇಧ್ಯ ।
ಬಾಗಿ ಸುರಿದನು ॥ ೨-೨೬ ॥

ಕಂಡನಾ ಸುಮಿತ್ರೆಯಣುಗ ।
ಖಂಡಪರಶುವಂತೆ ಕ್ರೋಧ ।
ಗೊಂಡು ಶರದಿ ಖಳನ ಕೊರಳ ।
ತುಂಡರಿಸಿದನು ॥ ೨-೨೭ ॥

ಮಾರಿಗೌತಣವನು ರುಧಿರ ।
ಧಾರೆಯಿಂದ ಕೊಡುವೆನೆಂದು ।
ದಾರಿಗಡ್ಡವಾಗಿ ನಿಲಲು ।
ಮಾರೀಚಾಖ್ಯನು ॥ ೨-೨೮ ॥

ಮೂಢನಿವನ ಬಡಿವೆನೆಂದು ।
ಗೂಢಶರವನೊಂದ ರಾಮ ।
ಪೂಡಲಾಗ ದುರುಳ ಭಯದಿಂ ।
ದೋಡಿ ಪೋದನು ॥ ೨-೨೯ ॥

॥ **ಭಾಮಿನಿ** ॥
ಮರಣದೊಳು ತನುತ್ಯಜಿಸಿ ಪ್ರಾಣವು ।
ಹೊರಗೆ ಭಯದಿಂದೋಡುವಂದದಿ ।
ದುರುಳನೀ ಮಾರೀಚ ತಪ್ಪಿಸಿಕೊಂಡ ತಾನಲ್ತೆ ॥
ವರಮುನಿಗಳಾಶ್ರಮಕೆ ರಾಕ್ಷಸ ।
ನೆರವಿಯುಪಟಳಮಿಲ್ಲ ಮುಂದಕೆ ।
ವಿರಚಿಪುದು ಮಂಗಳದ ಮಖಮೆಂದೆನಲು ರಾಘವನು ॥ ೨-೩೦ ॥

॥ ಕೇದಾರಗೌಳ–ಆಟ ॥
ಕುಶಿಕಸಂಭವನಿಂದ ಕ್ರತುಪೂರ್ಣಮಾಗಲು ।
ಋಷಿಗಳಾನಂದಗೊಳ್ಳೆ ॥
ದಶರಥಸುತರನಾದರಿಸಿ ವಿನೂತನ ।
ವಿಷಯ ಪೇಳುತ ನಡೆಯೆ ॥ ೨–೩೧ ॥

ಮಿಥಿಲಾಧಿಪಗೆ ದಿವಿಜರ ಕೃಪೆಯೊಳು ಲಭಿ ।
ಸಿತು ಪರಶಿವ ಧನುಸ್ಸು ॥
ಸತತಪೂಜನದಿಂದ ಸರ್ವಸಂಪದಮಾಯ್ತು ।
ಕಥೆಯ ಚಿತ್ತರಿಸುತಿಂತು ॥ ೨–೩೨ ॥

ಅಡವಿಗತ್ತಲೆಯಲ್ಲಿ ಕಡೆಗೆ ದಾರಿಯ ತಪ್ಪಿ ।
ನಡುವೆ ಗೋಚರಿಸಿತೊಂದು ॥
ಕಡುಮೌನಗರ್ಭ ಸಂಚರಿಸದ ಗಾಳಿಯ ।
ಜಡವೆತ್ತ ಮುನಿಯಾಶ್ರಮ ॥ ೨–೩೩ ॥

॥ ಮಧುಮಾಧವಿ–ತ್ರಿವುಡೆ ॥
ಹಾಡದಿಹ ಹಕ್ಕಿಗಳ ಮಿಗೆ ನಲಿ ।
ದಾಡದಿಹ ಮಿಗ ತಂಪಿರದ ಮರ ।
ಗೋಡಿನೊಳು ಹೂಕಂಪುಬೀರದ ।
ಬಾಡಿರುವ ಬನ ಪೊಕ್ಕರು ॥ ೨–೩೪ ॥

ಮರಮರದ ಹೃದಯದೊಳು ಸಂಕಟ ।
ಸ್ವರವು ಕೇಳ್ದುದು ರಾಮನೋರ್ವಗೆ ।
ಕರದ ಧನು ಕಂಪಿಸಲು ಗಿರಿವನ ।
ಧರಣಿಗಾಯಿತು ಚೇತನ ॥ ೨–೩೫ ॥

ಉಲಿದುದಾ ಕಾಜಾಣ ನವಿಲದೊ ।
ನಲಿಯೆ ದುಂಬಿಗಳೆಲ್ಲ ಪಾಡಲು ।
ಚೆಲುವು ಚಿನ್ನದ ಚುಕ್ಕಿ ಚಿಗರೆಯು ।
ಸುಳಿದು ಚೈತ್ರವ ತಂದಿತು ॥ ೨–೩೬ ॥

ಪರಮಕರುಣಾಸಿಂಧು ರಾಘವ ।
ಭರಿತ ಸಂತೋಷದೊಳು ನರ್ತಿಸೆ ।
ಚರಣಚುಂಬನದಿಂದ ಶಿಲೆಯದು ।
ಕರಗಿ ತಾ ಪೆಣ್ಣಾಯಿತು ॥ ೨-೩೭ ॥

॥ **ಭಾಮಿನಿ** ॥
ಪುಣ್ಯನೋಂಪಿಯ ಮೊಗದ ಮಾನಿನಿ ।
ಜೊನ್ನ ಬಿಳಿನಾರುಡೆಯ ತವಸಿನಿ ।
ಬಿನ್ನಹದ ಮೌನದೊಳು ರಾಘವನಡಿಗೆ ಹಣೆಮಣಿಯೆ ॥
ಜನ್ಮದಾತೆಯ ಕಂಡನೆಂಬೊಲು ।
ಧನ್ಯಭಾವದಿ ನಮಿಸೆ ರಾಮನು ।
ತನ್ನ ಕಾವ್ಯಕೆ ತಾಂ ಮಹಾಕವಿ ಮಣಿವವೋಲಾಯ್ತು ॥ ೨-೩೮ ॥

ವಚನ: ಆ ಮಹಾತಪಸ್ವಿನಿ ಶ್ರೀರಾಮನಂ ಸ್ತುತಿಸಿದಳ್ ಇಂತೆಂದು –

॥ **ಪುನ್ನಾಗ –ಆಟ** ॥
ಜಯನಮೋ ರಾಮಚಂದ್ರ । ಸದ್ಗುಣಸಾಂದ್ರ ।
ದಯೆದೋರಿದೆಯೊ ರಾಘವೇಂದ್ರ ॥
ಭಯನಿವಾರಣ ಪಾಪ । ಚಯವಿದಾರಣ ಸೃಷ್ಟಿ ।
ಲಯಕೆ ಕಾರಣ ಲಕ್ಷ್ಮೀ । ಪ್ರಿಯನೆ ನಾರಾಯಣ ॥ ೨-೩೯ ॥

॥ **ಕಾಂಭೋದಿ–ಝಂಪೆ** ॥
ಬಂದು ಗೌತಮಮಹಾಮುನಿಯಾಗ ಶ್ರೀರಾಮ ।
ಚಂದ್ರನನು ಬಿಗಿದಪ್ಪಿ ಭಕ್ತಿಯಿಂದ ॥
ಪೊಂದಿ ಪದತಲಕೆ ಮುಡಿಯಿಟ್ಟ ಸತಿ ಕಣ್ಣೀರ ।
ಬಿಂದುಗಳನೊರಸಿದನು ಮಮತೆಯಿಂದ ॥ ೨-೪೦ ॥

ಉಭಯರೊಂದಾದುದಂ ನೋಡಿ ಸಂತಸವಾಯ್ತು ।
ಪ್ರಭೆಯಗೊಂಡಿತು ಬಾಳು ಕಷ್ಟಕಳೆದು ॥
ಶುಭಕಾಲದೊಳಗೆ ಪಿಂತಾದುದಂ ನೆನೆಯದಿರಿ ।
ಅಭವನಾಶೀರ್ವಾದ ಇರಲಿ ನಿಮಗೆ ॥ ೨-೪೧ ॥

ದಂಪತಿಗಳೊಂದಾದ ದೃಶ್ಯಮಂ ಕಂಡಾಗ ।
ತಂಪಾಯ್ತು ತಿರೆಯೆಲ್ಲ ಚೈತನ್ಯದಿ ॥
ಸೊಂಪಿನಿಂದಲಿ ಸುರರು ಸುಮವೃಷ್ಟಿ ಕರೆದಿರಲು ।
ಕೆಂಪಾಯ್ತು ಪಶ್ಚಿಮಾಂಗನೆಯ ಕೆನ್ನೆ ॥ ೨-೪೨ ॥

॥ **ದ್ವಿಪದಿ** ॥
ಕಳೆದರಾ ರಾತ್ರೆಯಂ ಗೌತಮಾಶ್ರಮದಿ ॥
ಬೆಳಗಾಗೆ ನಡೆದು ಮಿಥಿಲೆಯ ಸೇರೆ ಜವದಿ ॥ -೨-೪೩ ॥

ಅಲಕಾವತಿಗೆ ಮಲೆವ ಸೌಂದರ್ಯನಗರಿ ॥
ಸಲೆ ರತ್ನಕಾಂತಿಯಿಂ ಕಂಗೊಳಿಪ ಬುಗರಿ ॥ ೨-೪೪ ॥

ಪಟ್ಟಣದ ಬೀದಿಯಲಿ ರಾಮಲಕ್ಷ್ಮಣರು ॥
ಒಟ್ಟಾಗಿ ನಡೆತರಲು ಬೆರಗಾಗೆ ಜನರು ॥ ೨-೪೫ ॥

ಮತ್ತೆ ವಿಶ್ವಾಮಿತ್ರ ಬಾಲಕರ ಸಹಿತ ॥
ಪೃಥ್ವಿಪತಿಯಾಸ್ಥಾನ ಪೊಕ್ಕು ಮಂಡಿಸುತ ॥ ೨-೪೬ ॥

ವಚನ: ಮತ್ತಾ ಮಿಥಿಲಾಧಿಪತಿಯಾಸ್ಥಾನದೊಳ್ –

॥ **ಸೌರಾಷ್ಟ್ರ-ತ್ರಿವುಡೆ** ॥
ರಾಜಋಷಿಯೆಂದೆನಿಪ ಜನಕನು ।
ಪೂಜಿಸುತ ಶಿವಧನುವ ಮೋದದಿ ।
ಯಾಜಕರ ಮನ್ನಿಸುತ ಸಭೆಗೆ ವಿ ।
ರಾಜಿಸಿದನು ॥ ೨-೪೭ ॥

ಬಂದ ವಿಶ್ವಾಮಿತ್ರ ಮುನಿವರ ।
ದ್ವಂದ್ವ ಪದಕಭಿವಂದಿಸುತ್ತಲಿ ।
ನಿಂದ ರವಿಶಶಿರೂಪಸಿರಿಗಾ ।
ನಂದಗೊಂಡ ॥ ೨-೪೮ ॥

ವಚನ: ಜನಕದೊರೆಗಾ ಮುನಿಪನಿಂತೆಂದನು –

ನೃವರ ಲಾಲಿಸು ದಶರಥನ ಸುತ ।
ರಿವರ ಪರಶಿವ ಚಾಪದರ್ಶನ ।
ನೆವದಿ ಕರೆತಂದಿಹೆನು ತೋರಿಸು ।
ತವಕದಿಂದ ॥ ೨-೪೯ ॥

॥ ಭಾಮಿನಿ ॥
ಮುನಿವರನ ನುಡಿಗೇಳ್ದು ಮಿಥಿಲಾ ।
ಜನಪತಿಯು ಸುಖರಸದಿ ತೇಲುತ ।
ಮನದ ಹಂಬಲ ತಿಳುಹೆ ತಿಣುಕಾಡಿದನು ಕೆಲವುಕ್ಷಣ ॥
ಜನಕನಿಂಗಿತವರಿತು ಕೌಶಿಕ ।
ತನಯರನ್ನುಪವನಕೆ ಕಳುಹಲು ।
ಸನುಮತದಿ ವಿಸ್ತರಿಸಿ ಪೇಳದನಂತರಂಗವನು ॥ ೨-೫೦ ॥

॥ ಜಂಜೂಟಿ-ಆಟ ॥
ಮಾತ ಲಾಲಿಸು ಮಹಾಮಹಿಮ ॥ ಕಾಣುತ ನಿನ್ನ ।
ಪೂತವಾಯಿತು ಎನ್ನ ಜನುಮ ॥
ಭೀತಾಂಧಕಾರದಿ ಆ ತಂಗದಿರ ಬಂದು ।
ಪ್ರೀತಿಯಿಂದಲಿ ಸೊಡರುವಿಡಿದಾ ।
ರೀತಿಯಾಯಿತು ನಿನ್ನ ದರ್ಶನ ॥ ೨-೫೧ ॥

ಯಾಗಾರ್ಥವೊಮ್ಮೆ ನಾ ನೆಲನ ॥ ಸಂಸ್ಕರಿಸಲು ।
ನೇಗಿಲತುದಿ ಶಿಶುರತುನ ॥
ತಾಗಿ ದೊರೆಯಲನುರಾಗದಿ ಸಲಹಿದೆ ।
ಈಗಳಾ ಜಾನಕಿಯು ಪರಿಣಯ ।
ಯೋಗ್ಯವಧುವಾಗಿಹಳು ವರ್ಧಿಸಿ ॥ ೨-೫೨ ॥

ಶಿವನ ಕಾರ್ಮುಕವೆತ್ತಿದವಗೆ ॥ ಕನ್ನೆಯನಿತ್ತು ।
ಸುವಿವಾಹ ಗೈವಾಸೆ ಎನಗೆ ॥
ಕುವರಿಯಾಸೆಗೆ ಬಂದು ದಿವಸ ನಾಲ್ಕರ ಹಿಂದೆ ।
ಭುವನದಲ್ಲಣ ರಾವಣೇಂದ್ರನು ।
ವಿವಶಗೊಂಡನು ಪೂರ್ವಪುಣ್ಯದಿ ॥ ೨-೫೩ ॥

॥ ದ್ವಿಪದಿ ॥
ತಪದಿ ಬಲ್ಮೆಯಗೊಂಡು ಬಹೆನೆಂಬ ಮಾತ ॥
ಶಪಥದೊಲು ನುಡಿದು ಲಂಕೆಗೆ ಪೋದನಾತ ॥ ೨-೫೪ ॥

ಯೋಗಿವಚನಕೆ ಮುನಿಯು ತಾಳ್ದು ಸಂತಸವ ॥
ರಾಘವಗೆ ತೋರೆಂದ ಹರನ ಕಾರ್ಮುಕವ ॥ ೨-೫೫ ॥

ವಚನ: ತರುಣಿ ಜಾನಕಿದೇವಿ ಸೋದರಿಯರಂವೆರಸಿ ವನವಿಹಾರಕೆ
ಬಂದಳಂದು –

॥ **ಶಂಕರಾಭರಣ–ತ್ರಿವುಡೆ** ॥
ಮಧುಮಹೋತ್ಸವವೆತ್ತ ಹೂಬನ ।
ಕೊದಗಿ ಬಂದಳು ಗುಣಯುತೆ ॥
ಮಧುರ ಮಧುಕರಿಯಂತೆ ಪಾಡುತ ।
ಮದನಮಾತೆ ಮಹೀಸುತೆ ॥ ೨–೫೬ ॥

ಊರುಮಿಳೆ ಶ್ರುತಕೀರ್ತಿ ಮಾಂಡವಿ ।
ಮೂರು ತಂಗಿಯರೊಂದಿಗೆ ॥
ಕೀರವೃಂದವನಣಕಿಸುವರೆ ಕು ।
ಮಾರಿ ಕುಣಿಸಿದಳಂದುಗೆ ॥ ೨–೫೭ ॥

ಮಲ್ಲಿಗೆಯ ಮಾಲೆಯನು ಹೆಣೆಯುತ ।
ಮೆಲ್ಲಮೆಲ್ಲಗೆ ಬಂದಳು ॥
ಕಲ್ಲನೆಸೆಯುತ ಕೊಳಕೆ ನಗುತಿಹ ।
ಚೆಲ್ವಮೂರ್ತಿಯ ಕಂಡಳು ॥ ೨–೫೮ ॥

॥ **ಯಮನ್‌ಕಲ್ಯಾಣಿ – ಆಟ** ॥
ಲೋಕಮೋಹಕರೂಪ ನೋಡಲ್ಲಿ । ತಂಗಿ
ರಾಕೇಂದುವದನ ರಾಜಿಪನಲ್ಲಿ ॥
ಏಕೆಂದು ತಿಳಿಯೆನು ಕನಸಲ್ಲಿ । ನಿತ್ಯ
ಸಾಕಾರಗೊಳ್ವ ಸುಂದರನಿಲ್ಲಿ ॥ ೨–೫೯ ॥

ತೋರುವ ಈ ಮೇಘಶ್ಯಾಮನೆ । ಬಾಲ್ಯ
ದಾರಭ್ಯ ಕೋಮಲ ಮನವನ್ನೆ ॥
ಸೂರೆಗೊಂಡಿಹ ನಾನೇನೆಂಬೆನೆ । ವನ ವಿ
ಹಾರಕೆ ಬಂದನೇತಕೊ ಕಾಣೆ ॥ ೨–೬೦ ॥

ವಚನ: ಆಗಳಾ ಸಖಿಯು ಸಂತೈಸಿದಳು ಎಂತೆಂದರೆ–

॥ **ಭೈರವಿ–ಝಂಪೆ** ॥
ರಾಮನೆಂಬವನಂತೆ ದಶರಥನ ಸುತನಂತೆ
ಸ್ವಾಮಿ ತಾನಹನಂತೆ ಸಾಕೇತವಂತೆ ॥
ಅ ಮಹಾಧನು ನೆಗಹೆ ನಾಳೆದಿನ ಬಹನಂತೆ
ನೇಮವೆಂತುಟೊ ಶಿವನ ಭಜಿಸೆ ನಿಶ್ಚಿಂತೆ ॥ ೨–೩೧ ॥

ಪೋಗುತೀಗಲೆ ಮನೆಗೆ ಪಾರ್ವತಿಯನರ್ಚಿಸುತೆ
ಯೋಗಭಾಗ್ಯವನೀವುದೆಂದು ಬೇಡೋಣ ॥
ಬಾಗುಬಳ್ಳಿಯ ತೆರದಿ ಬಿಲ್ಲಿರಲಿ ತಾನೆಂದು ।
ನಾಗಭೂಷಣನರಸಿ ಪದಕೆ ನಮಿಸೋಣ ॥ ೨–೩೨ ॥

॥ **ಕೇದಾರಗೌಳ–ಆಟ** ॥
ಉನ್ನತಗಿರಿಮೇಲೆ ಉದಯವಾಗಲು ಸೂರ್ಯ ।
ಜನ್ನಶಾಲೆಗೆ ಜನರು ॥
ಮನ್ನಿಸಿ ಬರೆ ಕರೆತಂದ ಲಕ್ಷ್ಮಣ ರಾಮ ।
ರನ್ನು ವಿಶ್ವಾಮಿತ್ರನು ॥ ೨–೩೩ ॥

ನಯನಾಭಿರಾಮನ ಕಂಡು ಜನಕನಾಗ ।
ಜಯಜಯ ಶುಭವೆನ್ನುತ ॥
ಬಯಕೆ ಈಡೇರಲೆಂದೆನುತ ಶಿವನ ಬಿಲ್ಲ ।
ಬಯಲುಮಂಟಪಕಿರಿಸೆ ॥ ೨–೩೪ ॥

ಸತ್ಯಸಾಧನೆಗೈದಾದಿತ್ಯವಂಶೀಯರ ।
ಭಕ್ತಿಯಿಂದಲಿ ನಮಿಸಿ ॥
ಮತ್ತೆ ಬಿಲ್ಲಿಗೆ ಬಾಗಿ ಮದನಾರಿ ಕೃಪೆಯಿಂದ ।
ಎತ್ತಿದನರೆಕ್ಷಣದಿ ॥ ೨–೩೫ ॥

॥ **ಭಾಮಿನಿ** ॥
ತುಡುಕಿರಲು ತೋಳಿಂದ ಹರಧನು ।
ಸಿಡಿಲ ಸದ್ದಿಂದೊದರಿ ಮುರಿಯಿತು ।
ಬಿಡದೆ ಪೂಮಳೆಸುರಿದು ಜಯಜಯವೆನಲು ಜನಶರಧಿ ॥
ಜಡಜಮುಖಿ ಜಾನಕಿಯು ಬಂದಾ ।
ಮೃಡಸಖನ ಕೊರಳಿಂಗೆ ಮಾಲೆಯ ।
ನಿಡಲು ನಾರೀವೃಂದ ಶೋಭಾನೆಗಳ ಪಾಡಿದರು ॥ ೨–೩೬ ॥

॥ ಧವಳಾರ – ಧ್ರುವ ॥
ಚಿತ್ತಜನರ್ಧಾಂಗಿಯ ಪೋಲುವ ।
ಚಿತ್ತಾರದ ಚೆಲುವಿನ ಸತಿಯರು ।
ರತ್ನದ ಹಸೆಯಲಿ ರಾಮನ ಜೊತೆ ।
ಮತ್ತಾ ಸೀತೆಯ ಕುಳ್ಳಿರಿಸುತ ।
ಮುತ್ತಿನಾರತಿಯ ಬೆಳಗಿದರು । ಶೋಭಾನೆ ॥ ೨-೬೭ ॥

ಪಂಕಜಲೋಚನೆಯರು ಪುಷ್ಪಾ ।
ಲಂಕೃತ ಮಂಟಪದೊಳು ಕೊರಳನು ।
ಕೊಂಕಿಸಿ ನಗುತಲಿ ಸೀತೆಗೆ ಶುಭ ।
ಕಂಕಣ ತೊಡಿಸುತ ಧವಳಾರದಿ ।
ಕುಂಕುಮಾರತಿಯ ಬೆಳಗಿದರು । ಶೋಭಾನೆ ॥ ೨-೬೮ ॥

ಭೃಂಗಾಳಕಿಯರು ಬಲು ಸೊಬಗಿನ ।
ಸಿಂಗದ ಕಟಿಯನು ಬಳುಕಿಸುತಿರೆ ।
ಕಂಗೊಳಿಸಿದರಾ ಕರ್ಣಾಟಕ ।
ಸಂಗೀತದ ಸುಸ್ವರ ಪಾಡುತ ।
ಮಂಗಳಾರತಿಯ ಬೆಳಗಿದರು । ಶೋಭಾನೆ ॥ ೨ -೬೯ ॥

॥ ಭೈರವಿ-ಝುಂಪೆ ॥
ಸೀತಾಕುಮಾರಿ ರಘು । ನಾಥನಂ ವರಿಸಿದಳು ।
ಸಾತಿಶಯ ಭಾಗ್ಯ ಸಂ । ಪ್ರೀತನಾದ ದೊರೆ ॥ ೨-೭೦ ॥

ಇನ್ನುಳಿದ ಮೂರುಜನ । ಕನ್ನೆಯರ ಸಂತಸದಿ ।
ಪುಣ್ಯಾ ದಶರಥಕುವರ । ರನ್ನು ಕರೆದೀಯೆ ॥ ೨-೭೧ ॥

ಓಲೆಗಾರರ ಕಳುಹಿ । ಮೇಲೆ ಕೋಸಲದ ಭೂ ।
ಪಾಲನಂ ಕರೆಸಿದನು । ಶೀಲ ಜನಕನೃಪ ॥ ೨-೭೨ ॥

ಮತ್ತೆ ಪರಿಣಯ ತೋಷ । ವೆತ್ತು ನೆರವೇರಿದುದು ।
ಹತ್ತುದಿನ ಕಳೆದು ಪುರ । ದತ್ತ ತೆರಳಿದರು ॥ ೨-೭೩ ॥

ಮಾರ್ಗಮಧ್ಯದಿ ತಡೆದು । ಭಾರ್ಗವ ಮಹಾಮುನಿಯು ।
ಕಾರ್ಗಾಲ ಸಿಡಿಲಂತೆ । ಭೋರ್ಗುಡಿಸಿ ನುಡಿಯೆ ॥ ೭೪ ॥

॥ **ಶಂಕರಾಭರಣ–ಮಠ್ಯ** ॥
ಪೊಡವಿಯಲ್ಲಿ ಕ್ಷತ್ರಿಯರನು ।
ಕೊಡಲಿಯಿಂದ ಕಡಿದು ಬಿಸುಟ ।
ಬೆಡಗ ತಿಳಿಯದಿಂತು ಬರುವ ।
ಹುಡುಗ ನಿಲ್ಲೆಲೊ ॥ ೨೫ ॥

ತಪಸಿ ನಿಮಗೆ ಏತಕಿಂಥ ।
ಕುಪಿತಭಾವ ತಿಳಿಯಲಾರೆ ।
ನೃಪಕುಮಾರನೆನ್ನ ಪರಸಿ ।
ಕೃಪೆಯಗೈವುದು ॥ ೧–೨೬ ॥

ರಘುತನೂಜನನ್ನು ಎತ್ತಿ ।
ಮಗುಳೆ ಪ್ರೀತಿಯಿಂದ ಮೆಚ್ಚಿ ।
ಸೊಗದ ವಿಷ್ಣುಚಾಪವಿತ್ತು ।
ನಗೆಯ ಬೀರಿದ ॥ ೧–೨೭ ॥

ಸಿಡಿಲು ಮಿಂಚು ಮಾಯವಾಗಿ ।
ಪೊಡವಿಮೇಲೆ ಮಳೆಯು ಸುರಿದು ।
ಕೊಡುವ ತಂಪಿನಂತೆ ಪೊರಟ ।
ಕೊಡಲಿಗೊರವನು ॥ ೧–೨೮ ॥

ಋಷಿಪದಾರವಿಂದ ನೆನೆದು ।
ಒಸಗೆದೇರನ್ನೇರಿಕೊಂಡು ।
ಎಸೆವಯೋಧ್ಯಾಪುರವ ಸೇರ್ದ ।
ಬಿಸರುಹಾಕ್ಷನು ॥ ೧–೨೯ ॥

॥ **ಕಂದ** ॥
ಕ್ರತುಸಂರಕ್ಷಣ ಗೌತಮ ।
ಸತಿಶಾಪವಿಮುಕ್ತಿ ಜಾನಕೀಪರಿಣಯ ತಾಂ ॥
ಪ್ರತಿಮಾತ್ಮಕ ಕೌಸಲ್ಯಾ ।
ಸುತದರ್ಶನ ಯಕ್ಷಗಾನದ ಮಹಾಕಾವ್ಯಂ ॥ ೧–೩೦ ॥

***

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೩
ಪಟ್ಟಾಭಿಷೇಕಭಂಗಂ

ಪಾತ್ರಪಟಲ

ದಶರಥ

ವಸಿಷ್ಠ

ಮಂಥರೆ

ಕೈಕೇಯಿ

ಶ್ರೀರಾಮ

ಪಟ್ಟಾಭಿಷೇಕಭಂಗಂ

ವಚನ: ದಶರಥನೃಪಂ ತಾನೊಂದು ದಿನ-

॥ **ಸೌರಾಷ್ಟ್ರ-ತ್ರಿವುಡೆ** ॥
ಕಾಲಪುರುಷನು ಪಿಡಿದ ಪಂಜಿನ ।
ಆಲೆಯಂತಿಹ ಧೂಮಕೇತುವು ।
ನೀಲಗಗನದೊಳಿರಲು ಕಂಡು ನೃ ।
ಪಾಲ ಮರುಗಿ ॥ ೩-೧ ॥

ಮೂಡಿ ಬೆಳಗುವ ಗಗನ ಶಕುನವ ।
ನೋಡಿ ತನ್ನಯ ಬಾಳಿನಾ ಕೊನೆ ।
ಕಾಡುವುದು ದೃಢವೆಂದು ಮುಂದಿನ ।
ಕೇಡು ನೆನೆದು ॥ ೩-೨ ॥

॥ **ಭಾಮಿನಿ** ॥
ತರಣಿಕುಲದೀಪಕನು ಮನದೊಳು ।
ಪರಿಪರಿಯ ಹಂಬಲಿಸಿ ಬಾನಿನ ।
ಬರೆಹಮಿದು ವಿಪರೀತವೆನ್ನುತ ಬಳಲಿ ಬಾಡಿದನು ॥
ಪಿರಿಯಸುತ ರಾಮಂಗೆ ಪಟ್ಟವ ।
ತ್ವರಿತದಿಂ ಕಟ್ಟುವರೆ ಸಚಿವರ ।
ನೆರಹಿ ಗುರುಗಳ ಕರೆದು ಪೇಳಿದ ತನ್ನ ಮನದಿರವ ॥ ೩-೩ ॥

॥ **ಕೇದಾರಗೌಳ-ಆಟ** ॥
ಸದಮಲ ಸಾಕೇತ ಪದುಳಾಕಾಂಕ್ಷಿಗಳೆಲ್ಲ ।
ಮುದದಿ ಲಾಲಿಸುವುದೀಗ ॥
ವಿದಿತಮಾಗಿಹುದಾಗಸದ ಪರದೆಯ ಮೇಲೆ ।
ಬಿದಿ ಬರೆದಂಥ ಲೇಖ ॥ ೩-೪ ॥

ಈ ವಸುಧೆಗೆ ಬೆಳಕೀವ ಪ್ರಕೃತಿಯಂತೆ ।
ದೇವಕಾರಣಮಿರ್ಪುದು ॥
ಈವರೆಗಾಳ್ದ ಸಾಮ್ರಾಜ್ಯಭಾರವ ರಾಮ ।
ಗೀವ ನಿಶ್ಚಯಗೈದಿಹೆ ॥ ೩-೫ ॥

ಧೀರ ಮತ್ಸರದೂರ ಜ್ಞಾನಿ ಸಜ್ಜನಪ್ರೇಮಿ ।
ಕಾರ್ಯಕೋವಿದ ಪಂಡಿತ ॥
ಪಾರಮಾರ್ಥದ ಸುವಿಚಾರಿ ಸಂಯಮಮೂರ್ತಿ ।
ಶ್ರೀರಾಮನತಿಸಮರ್ಥ ॥ ೩–೬ ॥

ರಾಮಚಂದ್ರನ ಬಿಟ್ಟು ರಾಜ್ಯವಾಳಲು ಬೇರೆ ।
ಸಾಮರ್ಥ್ಯವಂತರಿಲ್ಲ ॥
ಧೀಮಂತ ಜನರೆ ಮಹಾಮಹಿಮರೆ ನಿಮ್ಮ ।
ನೇಮವ ಪೇಳರಲ್ಲ ॥ ೩–೭ ॥

॥ **ಸಾಂಗತ್ಯ–ರೂಪಕ** ॥
ಕರಪುಟಾಂಜಲಿಯೆತ್ತಿ ಜನರು ಸಮ್ಮತಿಗೈಯೆ ।
ಗುರು ವಸಿಷ್ಠನು ಸಂತಸದಲಿ ॥
ತರಳ ರಾಮನಿಗೆ ಪಟ್ಟಾಭಿಷೇಚನಕಾಗಿ ।
ದೊರೆಯಾಜ್ಞೆಯಂತೆ ಮುಂಬರಿಯೆ ॥ ೩–೮ ॥

ಧನಧಾನ್ಯ ಮುತ್ತುರತ್ನದ ರಾಶಿ ಬೆಳ್ಗೊಡೆ ।
ಕನಕಕುಂಭದಿ ಗಂಗಾಸಲಿಲ ॥
ಮನೆಮನೆಗಳಗೆ ತೋರಣಪುಷ್ಪ ರಂಗೋಲಿ ।
ಜನರ ಮಾನಸದೊಳುತ್ಸಾಹ ॥ ೩–೯ ॥

ರಾಜಬೀದಿಯಲಿ ಪೊಂಬಾವುಟ ಸಾಲ್ಗೊಂಡ ।
ವಾಜಿ ತೇರಾನೆ ಸೌಂದರ್ಯ ॥
ರಾಜಿಸುತಿಹ ಕರ್ಪೂರದ ಸಾರಣೆಯ ಕಂಪು ।
ಸೋಜಿಗಗೊಂಡು ಮಂಥರೆಯು ॥ ೩–೧೦ ॥

ಆ ಮನೆಗಳ ಗೋಡೆಗಾನಿಸಿ ಕಿವಿಯನ್ನು ।
ರಾಮಪಟ್ಟದ ವಾರ್ತೆ ತಿಳಿದು ॥
ಕ್ಷೇಮತಪ್ಪಿತು ಕಂದ ಭರತನಿಗೆಂದು ಕೈ ।
ಕಾಮಾತೆ ಮನೆಗೆ ಓಡಿದಳು ॥ ೩–೧೧ ॥

॥ **ಭಾಮಿನಿ** ॥
ಜಗವ ನೆಯ್ದಾಳುವ ವಿರಾಣ್ಮನ ।
ಬಿಗಿದು ಕಟ್ಟದೆ ಸೂಕ್ಷ್ಮತಂತ್ರದಿ ।
ಮಗುಳೆ ಜೀವಿಗಳಂಗೆ ನೀಡಿಹುದಿಚ್ಛೆಸ್ವಾತಂತ್ರ್ಯ ॥
ಮುಗುದೆ ಮಂಥರೆ ಸೀತೆ ರಾವಣ ।
ರಘುವರಾದಿಗಳೆಲ್ಲ ಸೂತ್ರದ ।
ತೊಗಲುಗೊಂಬೆಗಳಲ್ತೆ ಕಾಣದ ವಿಧಿಯ ಹಸ್ತದೊಳು ॥ ೩-೧೨ ॥

॥ **ಕುರಂಜಿ-ಆಟ** ॥
ಬಂದಳು । ದಾಸಿ । ನಿಂದಳು ॥
ಮಾನಸದೊಳು । ನೊಂದಳು ॥
ಮಾತೆಯ ಕರೆ । ದೆಂದಳು ॥ ಪ ॥

ಪುಡಿಯಾಯ್ತು ನಮ್ಮ ಹೊಂಗನಸು ॥ ಚಿತ್ತು
ಗುಡಿಯಗೋಪುರಚಿನ್ನ ಕಳಸದ ಗೊಣಸು ॥
ಒಡೆದುಹೋಯಿತು ಹಾಲುಮನಸು ॥ ಮುದ್ದು
ಮಡದಿಮಗನ ಮೇಲೆ ಇಂತಾಯ್ತೆ ಮುನಿಸು ॥ ೩-೧೩ ॥

ಪೇಳವ್ವಾ ನಡೆದುದೇನೆಂದು ॥ ನಮ್ಮ
ಬಾಲಕ ಭರತಗೇನಾಯ್ತು ಪೇಳಂದು ॥
ತಾಳಲಾರೆನು ಶಂಕೆಯೆಂದು ॥ ಕೈಕೆ
ಮೇಳದ ಮಂಥರೆಯನು ಕೇಳ್ದಳಂದು ॥ ೩-೧೪ ॥

॥ **ಭಾಮಿನಿ** ॥
ಭಾಸುರಾಂಗದ ನಿನ್ನ ಮೈಸಿರಿ ।
ಬೇಸಗೆಯ ಹೊಳೆಯಾಯ್ತು ಕೇಳೌ ।
ಪೂಸವಿಯನೀಂಟಿರುವ ಭ್ರಮರಕೆ ಸುಮದ ಹಂಗೇಕೆ ॥
ಈಸು ದಿನ ಪ್ರೀತಿಸಿದ ದಶರಥ ।
ಘಾಸಿಗೈದನು ನಿನಗೆ ಕ್ರೌರ್ಯದ ।
ಬೀಸಿನೊಳು ರಾಕ್ಷಸರ ಮೀರ್ದುದು ಕ್ಷತ್ರಿಕುಲಸಂಚು ॥ ೩-೧೫ ॥

॥ **ಕೇದಾರಗೌಳ-ಝಂಪೆ** ॥
ಕೇಳಮ್ಮ ಒಂದು ಗುಟ್ಟ । ಪೇಳುವೆನು ।
ನಾಳೆ ರಾಮಂಗೆ ಪಟ್ಟ ॥
ಹಾಲನ್ನ ವಿಷವಾಯಿತು । ಭರತನಾ ।
ಬಾಳ್ವೆಗೀ ವಿಧಿಯಾಯಿತು ॥ ೩-೧೬ ॥

ನಿನಗಿದೋ ಕಂಠಿಹಾರ । ತಂದುದಕೆ ।
ಸನುಮತದ ಶುಭವಿಚಾರ ॥
ಗುಣಶೀಲ ರಾಮಭರತ । ಈರುವರು ।
ತನುಜಾತರಲ್ತೆ ನಿರತ ॥ ೩-೧೭ ॥

ಸಾಕು ನಿಲ್ಲಿಸು ಮಾತನು । ನಿಜವೈರಿ ।
ಲೋಕದೊಳು ಸವತಿಸುತನು ॥
ಕಾಕುತನ ತಿಳಿದು ನೀನು । ರಾಮಾಭಿ ।
ಷೇಕದೊಳು ನಲಿವೆಯೇನು ॥ ೩-೧೮ ॥

॥ **ಭಾಮಿನಿ** ॥
ಮುದುಕಿಯೆಂದುದ ಕೇಳ್ದು ಕೈಕೆಗೆ ।
ಹೃದಯ ಮುರಿದಂತಾಯ್ತು ಸ್ವರ ಗ ।
ದ್ಗದಿತ ಕಂಪನದಿಂದ ಮುಮ್ಮಡಿಸಿದುದು ದುಮ್ಮಾನ ॥
ಸುದತಿ ಕಂಬನಿದುಂಬಿ ಕಣ್ ಮು ।
ಚ್ಚದೆಯೆ ತನುಜನ ನೆನೆದು ತಾ ಮೌ ।
ನದೊಳು ಮುಳುಗಿರೆ ಸಂತವಿಸಿದಳು ಕುಬ್ಜೆ ಕೂರ್ಮೆಯೊಳು ॥ ೩-೧೯ ॥

॥ **ಶಹನ –ಆಟ** ॥
ಬಲ್ಲೆ ನಾಲ್ವರು ಪುತ್ರರಲ್ಲಿ ಭರತ ಜ್ಯೇಷ್ಠ ।
ಸಲ್ಲಬೇಕವಗೆ ರಾಜ್ಯ ॥
ಸುಳ್ಳುಹೆಣೆದು ದೊರೆ ಮಂತ್ರಿ ಪುರೋಹಿತ ।
ರೆಲ್ಲರನ್ನೆಯ ಗೈದರು ॥ ೩-೨೦ ॥

ಭರತಕುಮಾರನ ಕೇಕಯಪುರಕಟ್ಟಿ ।
ದೊರೆಗೈದ ಕುಟಿಲವಿದು ॥
ಮರಕೆ ಮುಳ್ಳಿನಬಳ್ಳಿ ಹೆಣೆದಂತೆ ಲಕ್ಷ್ಮಣ ।
ನಿರುವ ರಾಮನ ಜೊತೆಗೆ ॥ ೩-೨೧ ॥

ತೊತ್ತುಗೈಯದೆ ನಿನ್ನ ಪುತ್ರನ ಕಾಪಾಡು ।
ಪತ್ತನ ತೊರೆದವನು ॥
ಎತ್ತಪೋದರು ನಾನು ನಿತ್ಯ ಶುಶ್ರೂಷೆ ಗೈ ।
ಯುತ್ತಲಿ ಜೊತೆಗಿರ್ಪೆನು ॥ ೩-೨೨ ॥

ವಚನ: ಆಗಳಾ ಕೈಕಾದೇವಿ ನುಡಿದಳಿಂತೆಂದು –

॥ **ಕಾಂಭೋದಿ–ಝಂಪೆ** ॥
ಕೊಂಬು ಚಂದನವೊಂದು ಮುರುಟಿರ್ದರೇನಾಯ್ತೆ ।
ಕೊಂಬರೆಲ್ಲರು ಗಂಧಸವಿಗೆ ॥
ಕಂಬನಿಯ ಕಳೆದ ಸಖಿ ನಂಬಿದೆನು ನಾ ನಿನ್ನ ।
ಮುಂಬಟ್ಟೆಯೇನೆಂದು ಪೇಳು ॥ ೩–೨೩ ॥

ಬರಿದೆ ಯೋಚಿಸ ಬೇಡ ಕಾರ್ಯಸಾಹಸಿಯಾಗು ।
ಮರೆತ ಮಾತನು ನೆನೆದುಕೊಳ್ಳು ॥
ವರ ವಿವಾಹಕೆ ಮುನ್ನ ಧರಣಿಪಾಲಕನು ನಿನ ।
ಗೊರೆದ ಭಾಷೆಯ ಕೇಳಿಕೊಳ್ಳು ॥ ೩–೨೪ ॥

ಸುಲಿದು ವಲ್ಲಭನಿಂದ ಭರತಂಗೆ ನೀಡುವುದು ।
ನೆಲದ ಚಕ್ರಾಧಿಪತ್ಯವನು ॥
ಬಳಿಕ ರಾಮನನು ಪದಿನಾಲ್ಕು ವತ್ಸರಕಾಲ ।
ಕಳುಹು ಕಾನನಯಾತ್ರೆಗಾಗಿ ॥ ೩–೨೫ ॥

॥ **ಭಾಮಿನಿ** ॥
ರೂಪಸಿರಿಯಿಂದಂಗಜನು ಸ ।
ರ್ವಾಪಹಾರವ ಗೈವ ಲೋಕದೊ ।
ಳಾ ಪ್ರವಾಹವದಿಳಿಯೆ ಸೇತುವನಿಕ್ಕಿ ಫಲವೇನು ॥
ಕೋಪಗೃಹಮಂ ಸೇರ್ದು ಮನದನು ।
ತಾಪವನು ಪೊರಗೆಡಹಿ ವಾಂಛಿತ ।
ದಾ ಫಲವು ನೆರವೇರುವನ್ನೆಗ ಬಾರದಿರು ಪೊರಗೆ ॥ ೩–೨೬ ॥

॥ **ದ್ವಿಪದಿ** ॥
ಉಯ್ಯಲೆಯ ತೂಗಿ ಮಂಥರೆ ಪೋಗಲಿತ್ತ ॥
ಮೆಯ್ಯೊಡವೆಗಳನಿಳುಹಿ ಮುಡಿಯ ಕೆದರುತ್ತ ॥ ೩–೨೭ ॥

ಬಂದು ಕೋಪದ ಗೃಹಕೆ ದಿಂಡುರುಳಲವಳು ॥
ಸುಂದರಿಯನರಸುತ್ತ ದಶರಥಂ ಬರಲು ॥ ೩–೨೮ ॥

ಕತ್ತಲೆಯ ಮೊತ್ತದಲಿ ಬಿದ್ದವಳ ನೋಡಿ ॥
ಮತ್ತೆ ಮುಂಡಾಡಿ ಮುದ್ದಿಸುತ ಮಾತಾಡಿ ॥ ೩-೧೯ ॥

॥ **ತುಜಾವಂತು-ಝಂಪೆ** ॥
ಕಲ್ಯಾಣಚೇತಸಿಯೆ ಜೀವಿತೇಶ್ವರಿಯೆ ।
ಪಲ್ಲವಾಧರೆಯೆ ಮುನಿಸೇಕೆ ನಾನರಿಯೆ ॥
ಮಲ್ಲಿಕಾಸ್ಮಿತೆ ನಿನಗೆ ಮೆಲ್ಲನಡಸಿತೆ ರುಜೆಯು ।
ಪೊಲ್ಲಮೆಯ ಕಳೆಯೆ ನೆಲದಲ್ಲಿ ಪೊರಳುವೆಯೆ ॥ ೩-೨೦ ॥

ನಿನ್ನಭೀಷ್ಟವನೀವೆ ದೇವಿ ಪೇಳೆಲೆಗೆ ।
ಬನ್ನವೇನಾದೊಡಂ ಬಗೆಯನುಸಿರೆನಗೆ ॥
ಇನ್ನು ನ್ಯಾಯಾನ್ಯಾಯವನ್ನು ಪರಿಗಣಿಸದೆಯೆ ।
ಎನ್ನ ಪ್ರಾಣಾರ್ಪಣೆಯ ಪಣವೀವೆ ಕೊನೆಗೆ ॥ ೩-೨೧ ॥

॥ **ಪಂತುವರಾಳಿ-ಆಟ** ॥
ಲಾಲಿಸಬೇಕು ಕಾಂತ । ಸದ್ಗುಣವಂತ ।
ಪಾಲಿಸೆನ್ನನು ಪ್ರಶಾಂತ ॥ ಪ ॥

ನಾಲಗೆ ಜಾಣ್ಮೆಗೆನ್ನಾಸೆ ತೀರದು ನಾನು ।
ಕೇಳದುದ ನೀಡುವರೆ ಭಾಷೆಯ ।
ಮೇಲಕಿತ್ತರೆ ಪೇಳ್ವೆನಿಂಗಿತ ॥ ಅ. ಪ ॥

ಸುಗುಣೆ ಪೀಡಿಪೆ ಏತಕೆ । ಮೂಜಗದಲ್ಲಿ ।
ಮಿಗಿಲುಂಟೆ ಸಂಪ್ರೇಮಕೆ ॥
ಮಗನಾದ ರಘುರಾಮನಾಣೆ ನಿನ್ನಾಸೆಯ ।
ಸೊಗದಿ ಪೂರೈಸುವೆನು ಕೋಮಲೆ ।
ಬಗೆಯದಿರು ಸಂದೇಹ ಮನದೊಳು ॥ ೩-೨೨ ॥

ಭರತಂಗೆ ಪಟ್ಟಗಟ್ಟು । ಆ ರಾಮಚಂ ।
ದಿರನನ್ನು ಕಾಡಿಗಟ್ಟು ॥
ವರುಷ ಚತುರ್ದಶವಿರಲಿ ಕಾನನದಲ್ಲಿ ।
ವರಜಟಾಬಂಧನದಿ ನಾರುಡೆ ।
ಧರಿಸಿ ಚರಿಸುವ ವರವ ನೀಡೈ ॥ ೩-೨೩ ॥

॥ **ವಾರ್ಧಕ** ॥
ಎಂದ ಮಾತಂ ಕೇಳ್ದು ವಸುಧಾಧಿಪತಿಗಾಗ ।
ಮಂದೈಸಿದುದು ದೃಷ್ಟಿ ಕದಡಿಪೋಯಿತು ಮನಸು ।
ಮುಂದೆ ಮತಿಪಲ್ಲಟಿಸಿ ಧರೆಗುರುಳೆ ಮೂರ್ಛೆಯಂ ಪೊಂದಿರಲು
ಕೈಕಾಂಗನೆ ॥
ಬಂದು ಮಡಿಲೊಳಗಿರಿಸಿ ಶೈತ್ಯೋಪಚಾರಂಗ ।
ಳಿಂದ ಸೇವಿಸಲಾಗ ಚೇತರಿಸಿ ದುಃಸ್ವಪ್ನ ।
ದಿಂದ ಮೇಲೇಳ್ವಂತೆ ತತ್ತರಿಸಿ ಮಾನಿನಿಯನಂದು ನೂಂಕುತ
ಜರೆದನು ॥ ೩–೩೪ ॥

॥ **ಸೌರಾಷ್ಟ್ರ–ತ್ರಿವುಡೆ** ॥
ಕುಲವಿಘಾತಿನಿ ಕುಟಿಲರೂಪಿಣಿ ।
ಚೆಲುವು ಸೂಸುತ ಬಂದು ಹಾಲಾ ।
ಹಲವ ಚೆಲ್ಲಿದ ಘೋರಸರ್ಪಿಣಿ ।
ತೊಲಗು ದೂರ ॥ ೩–೩೫ ॥

ಭರತ ರಾಮರ ನಡುವೆ ಭೇದವ ।
ನರಿಯ ಬೇಡೌ ಬೇಡ ಸಾರಿದೆ ।
ವರಗಳಲ್ಲಾ ಕೇಳಿದುದು ಪತಿ ।
ಮರಣದೊಸಗೆ ॥ ೩–೩೬ ॥

ವಚನ: ಆಗ ಕೈಕಾಸುದತಿ ತಾನಿಂತೆಂದಳು –

॥ **ಸಾಂಗತ್ಯ–ರೂಪಕ** ॥
ಬೇಡಬೇಡೈ ನಿನ್ನ ವಾಗ್ದಾನಮೆನಗಿಂತು ।
ಕೇಡನಾಶಿಸುವೆನೆ ನಾನು ॥
ರೂಢಿಪಾಲನೆ ರಾಮನಾಣೆಗೈದುದರಿಂದ ।
ಬೇಡಿದೆ ವರವಲ್ಲದಿಲ್ಲ ॥ ೩–೩೭ ॥

ಬೇಡಿದ ವರವನ್ನು ಬೇಡವೆನ್ನುತಲೆನ್ನ ।
ಮಾಡಿ ವಚನಭ್ರಷ್ಟನೆಂದು ॥
ಮೋಡಿಯ ಮಡದಿಗೆ ಮರುಳಾದನಿವನೆಂಬ ।
ನಾಡಗಾದೆಗೆ ಬಲಿಗೊಂಡೆ ॥ ೩–೩೮ ॥

ವಚನ: ವಿಧಿವಿರಚಿತ ವಿದ್ಯಾವಿನ್ಯಾಸದಿಂ ಕೈಕೆ ಮತ್ತಿಂತೆಂದಳು –

॥ **ಕೇದಾರಗೌಳ–ಝಂಪೆ** ॥
ಕುಹಕವಿದ್ಯಾಪ್ರವೀಣ । ರವಿಕುಲದಿ ।
ಸ್ವಹಿತಸಾಧಕನೆ ಜಾಣ ॥
ತಹತಹಿಪ ರಾಮಧ್ಯಾನ । ಭರತನೆಂ ।
ತಹನು ಸಾಮ್ರಾಜ್ಯಹೀನ ॥ ೩–೩೯ ॥

ನೀನಾಗಿ ವರವ ಕೊಟ್ಟೆ । ಕೇಳದರೆ ।
ನಾನೆಂತು ಪಾಪಿ ದುಷ್ಟೆ ॥
ಕ್ಷೋಣಿಯೊಳು ವಚನಕೆಟ್ಟೆ । ಎನ್ನ ಸಂ ।
ತಾನವನು ದೂರವಿಟ್ಟೆ ॥ ೩–೪೦ ॥

ವಚನ: ಎನಲಾ ದಶರಥಂ ಕೈಕೆಯಂತಃಪುರದಿಂ ಪೊರಡುವನಿತರೊಳ್-

॥ **ಮಧುಮಾಧವಿ–ತ್ರಿವುಡೆ** ॥
ದಾಸಿ ಮಂಥರೆಯಿಂದ ವಾರ್ತೆಯ ।
ದಾಶರಥಿ ಕೇಳುತ್ತ ವಹಿಲದಿ ।
ಘಾಸಿಗೊಂಡಾ ಪಿತನ ಕಾಣುತ ।
ಬೀಸಿದನು ಬಿಜ್ಜಣಿಗೆಯ ॥ ೩–೪೧ ॥

ಆದುದೇನೆಂದೆನುತ ರಾಘವ ।
ಮೇದಿನಿಪನನು ಸಂತವಿಸುತಿರೆ ।
ಕೋದ ಮೌನದಿ ಕೈಕೆಯಿರಲು ನಿ ।
ವೇದಿಸಿದಳಾ ಮಂಥರೆ ॥ ೩–೪೨ ॥

॥ **ಬಿಲಹರಿ–ಆದಿ** ॥
ರಾಮಚಂದಿರ ಕೋಮಲಾಂಗ ಕೃಪಾಳು ।
ತಾಮಸ ತಾಳದೆ ತಾಯ ಹಂಬಲ ಕೇಳು ॥ ಪ ॥

ಅಂದು ಕೈಕೆಗೆ ನಿನ್ನ ತಂದೆ ನೀಡಿದ ಮಾತ ।
ಇಂದು ಕೇಳದರೆ ತಾ ನೊಂದುಕೊಂಡಿಹನು ॥ ೩–೪೩ ॥

ಧಾರುಣಿಪಟ್ಟ ಕುಮಾರಭರತನಿಗೆ ।
ಈರೇಳು ವರುಷ ಕಾಂತಾರ ರಾಮನಿಗೆ ॥ ೩–೪೪ ॥

ಪೊಡವಿಯು ಭರತಗೆ ಅಡವಿ ರಾಮನಿಗೆಂಬ ।
ಕಡುನುಡಿ ಸಹಿಸದೆ ಕೆಡೆದನೀ ತೆರದೆ ॥ ೩–೪೫ ॥

ವಚನ: ನಡೆದುದಂ ತಿಳಿದಾ ರಾಘವಂ ಸಂತಸದೊಳಂತೆಂದನು –

॥ **ಸುರುಟಿ–ಏಕ** ॥
ಸಾತಿಶಯದ ಕಾರ್ಯ । ತಂದೆಯ ।
ಮಾತು ಶಿರೋಧಾರ್ಯ ॥
ಏತಕಿಂತು ವಿಪ । ರೀತದ ವ್ಯಾಕುಲ ।
ಮಾತೆಯೆ ಕರುಣಿಸು । ದೀ ತರಳಗೆ ಶುಭ ॥ ೩–೪೬ ॥

ಕಾಡನಲೆಯುವಾಸೆ । ಮನಸಿಗೆ ।
ಕೂಡಿ ಬಂತು ಭಾಷೆ ॥
ನಾಡಕಿರೀಟಕೆ । ಜೋಡದಲ್ತೆ ಜಟೆ ।
ನೋಡುತ ಗಿರಿವನ । ಹಾಡುತ ಕುಣಿವೇ ॥ ೩–೪೭ ॥

ಆಳಲಿ ಪ್ರಿಯಬಾಲ । ಭರತನು ।
ಬಾಳಲಿ ಬಹುಕಾಲ ॥
ಬೀಳುಗೊಂಡೆ ರಾ । ಜಾಲಯದಿಂ ಪಿತ ।
ಪೇಳಿದ ವಚನವ । ಪಾಲಿಸಲೋಸುಗ ॥ ೩–೪೮ ॥

॥ **ಕಾಂಭೋದಿ–ಝಂಪೆ** ॥
ಪುಟ್ಟಿದ ಕುಮಾರನಿಗೆ ಪೆತ್ತಾತನೀಯುವನೆ ।
ಪಟ್ಟಬಿಟ್ಟಡವಿಗೈದುವ ನಿರೂಪ ॥
ಕಟ್ಟಳೆಯನರಿತು ಕಾಡಿಗೆ ನಡೆವ ಪಥಮೆಂದು ।
ದಿಟ್ಟೆ ಮಂಥರೆ ನುಡಿಯೆ ರಾಮನೆಂದ ॥ ೩–೪೯ ॥

ತಾಯಿ ಕೈಕೆಯೆ ಕೇಳು ತೀರ್ಥರೂಪನು ನನಗೆ ।
ಬಾಯ್ಬಿಟ್ಟು ಬನಕೆ ಪೋಗೆನ್ನದಿರಲು ॥
ರಾಯನಿಂಗಿತವನ್ನು ಪಾಲಿಸುತ ಮರಳಿಬಹೆ ।
ಜೀಯನಡಿದಾವರೆಯ ಸೇವೆಗೊಳಲು ॥ ೩–೫೦ ॥

ನನ್ನಯ್ಯನೊಲ್ಮೆಕೊಡೆಯಡಿಯ ನೆಳಲಲ್ಲಿರಲು ।
ತಣ್ಣನೆಯ ತಾಯ್ಮಡಿಲ ಸುಖವದಹುದು ॥
ಇನ್ನೆಲ್ಲ ನಡೆಯುವುದು ಸರ್ವಶಕ್ತಿಯ ಬಲದಿ ।
ಮುನ್ನಡೆಸುವುದು ಜಗದ ರಥವ ಪಿಡಿದು ॥ ೩-೫೧ ॥

॥ **ಭಾಮಿನಿ** ॥
ತಂದೆಯನು ಬಲವಂದು ಮತ್ತಭಿ ।
ವಂದಿಸುತ ಕೈಕೇಯಿ ಚರಣಕೆ ।
ಕಂದ ರಾಘವ ಪೊರಟ ಮಂಗಳಮನೆಯ ತೊರೆವಂತೆ ॥
ಬಿಂದುಜಲ ನಾವೆಯನು ಮುಳುಗಿಸು ।
ವಂದದೊಳು ಬಿಕ್ಕಳಿಸಿ ದಶರಥ ।
ನೊಂದು ಸೇರಿದನಂದು ಮೂರ್ಛಾನದಿ ತಳಾತಳಕೆ ॥ ೩-೫೨ ॥

॥ **ಕಂದ** ॥
ಕ್ಷಿತಿಸಿಂಹಾಸನ ತನ್ನಯ ।
ಸುತನಿಂಗಿರಲೆಂದ ಕಿರಿಯ ಜನನಿ ಹಿತಾರ್ಥಂ ॥
ನತಶಿರನೆನಿಸಿದ ಮಹಿಮಾ ।
ನ್ವಿತದರ್ಶನ ಯಕ್ಷಗಾನದ ಮಹಾಕಾವ್ಯಂ ॥ ೩-೫೩ ॥

***

ಯಕ್ಷಗಾನ ಮಹಾಕಾವ್ಯ

ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೪

ಶ್ರೀರಾಮ ವನಗಮನಂ

ಪಾತ್ರಪಟಲ

ದಶರಥ

ಶ್ರೀರಾಮ

ಕೌಸಲ್ಯೆ

ಲಕ್ಷ್ಮಣ

ಸೀತಾದೇವಿ

ಮಂಥರೆ

ಕೈಕೇಯಿ

ಗುಹ

ಊರ್ಮಿಳೆ

ಶ್ರೀರಾಮ ವನಗಮನಂ

॥ ಸೌರಾಷ್ಟ್ರ-ತ್ರಿವುಡೆ ॥
ವಿಲಯವೇಳಾಜಲಧಿ ಮೀರುತ।
ನೆಲವನವ್ವಳಿಪಂತೆ ವಾರತೆ।
ಸುಳಿಯೆ ಕಂಬನಿಗರೆದು ಜನಮನ।
ಕಳವಳಿಸಲು ॥ ೪-೧ ॥

ಕೇಳುತಿರೆ ಕೌಸಲ್ಯೆ ತನ್ನಯ।
ಮೇಳಸಖಿಯರ ರೋದನಂಗಳ।
ನೀಲಮೇಘಶ್ಯಾಮ ಬಂದನು।
ಆಲಯದೆಡೆ ॥ ೪-೨ ॥

ಬರಸೆಳೆದು ಬಿಗಿಯಪ್ಪಿ ಕಂದನ।
ಕರೆದು ಕುಳ್ಳಿರಿಸುತ್ತ ನುಡಿಸಲು।
ಕರುಣವಾರಿಧಿ ನಡೆದುದೆಲ್ಲವ।
ನೊರೆದನಿಂತು ॥ ೪-೩ ॥

॥ ಭೈರವಿ_ಝಂಪೆ ॥
ಮಾತೆ ಲಾಲಿಪುದೆನ್ನ ಮಾತೊಂದ ಮತಿವಂತೆ।
ಖಾತಿಗೊಳಬೇಡ ಸಂಪ್ರೀತಿಯಲಿ ಪಿಂತೆ ॥
ಮಾತೆ ಕೈಕೆಗೆ ತಂದೆ ಮಾತುಕೊಟ್ಟಿಹನಂತೆ।
ನೀತಿಯಿಂದದ ಕೇಳಲೇತಕೀ ಚಿಂತೆ ॥ ೪-೪ ॥

ಒಂದನೆಯ ವಚನದೊಳಗಿಂದು ಭರತಕುಮಾರ।
ಸಿಂಧುವಸನಾಧೀಶನೆಂದಾದನಮ್ಮ॥
ಮುಂದೆ ಪದಿನಾಲ್ಕಬುದ ಪೊಂದುವುದು ವನವಾಸ।
ವೆಂದೆನಗೆ ವ್ರತವಾಗಲಂದವಾಯ್ತಮ್ಮ ॥ ೪-೫ ॥

ವಚನ: ಕಂದ ರಾಮಚಂದ್ರನಂ ಆಲಿಂಗಿಸುತ ಕೌಸಲ್ಯಾದೇವಿ ರೋದಿಸಿದಳ್ ಇಂತು –

॥ **ಸಾಂಗತ್ಯ–ರೂಪಕ** ॥
ಕೆಟ್ಟೆನೈ ಶಿವನೆ ಕೇಡೊದಗಿತೆ ಕುವರನೆ ।
ಪಟ್ಟಾಭಿಷೇಕಭಂಗಿತನೆ ॥
ಕೊಟ್ಟನೆ ಕೈಕೆಯ ಸುತಗೆ ಸಂಪದವನ್ನೆ ।
ಬಿಟ್ಟನೆ ಕೈಯ ಭೂಪತಿಯು ॥ ೪–೭ ॥

ಸರಿದ ಜನ್ಮದೊಳಾರ್ಗೆ ಮರುಕವಿತ್ತೆನೊ ನಾನು ।
ಕರುಳಿಲ್ಲವಾಯ್ತೆ ದುರ್ವಿಧಿಯೆ ॥
ತರಳನ ಪಡೆದಳುವುದಕಿಂತ ಬಂಜೆಯೆಂ ।
ದಿರುವುದೆ ಲೇಸು ತೋರುವುದು ॥ ೪–೭ ॥

ಅಡವಿಗುಸಿರನಟ್ಟಿ ಒಡಲೆಂತಿಹುದೊ ಕಾಣೆ ।
ತೊಡೆಯ ತೊಟ್ಟಿಲೊಳಟ್ಟ ಮಗುವ ॥
ಕಡೆಗೆ ಕಾಂತಾರ ರಕ್ಕಸಿಗೆಂತು ಕಯ್ಯಾರೆ ।
ಕೊಡುವೆನು ತುತ್ತುಗೂಳಾಗಿ ॥ ೪–೮ ॥

ಬದ್ಧವಾಕ್ಯದಿ ಚಿಂತಾಚಿತೆಗೆ ತಳ್ಳದಿರೆನ್ನ ।
ಬುದ್ಧಿಯಿಂದಲೆ ತರ್ಕಿಸುವುದು ॥
ಮುದ್ದುಸತಿಯ ಮೋಹ ಹೊದ್ದ ತಂದೆಯ ನೀನು ।
ತಿದ್ದಿ ಕಾಪಿಡೆ ವಂಶಕೀರ್ತಿ ॥ ೪–೯ ॥

ವಚನ: ವಾರ್ತೆಯಂ ತಿಳಿದು ಲಕ್ಷ್ಮಣಂ ಬುಸುಗುಡುತ ಬಂದನೇವೇಳ್ವೆನು–

॥ **ಮಾರವಿ_ಏಕ** ॥
ಆಗಳೆ ಲಕ್ಷ್ಮಣನಾಗಮಿಸಿದ ಪು ।
ನ್ನಾಗನ ತೆರದಿಂದ ॥
ರಾಘವಪ್ರೀತಿಪರಾಗನ ವನದೆಡೆ ।
ಪೋಗಗೊಡೆನು ಎಂದ ॥ ೪–೧೦ ॥

ಮುಪ್ಪಿನ ದೊರೆ ಸತಿಯಪ್ಪುಗೆಯಾಸೆಗೆ ।
ತಪ್ಪಿ ನಡೆದರಿಂತು ॥
ಕ್ಷಿಪ್ರದಿ ಶಿಕ್ಷೆಗೆ ಒಪ್ಪಿಸುವುದು ಎನ ।
ಗಪ್ಪಣೆ ಕೊಡಿರೆಂದ ॥ ೪–೧೧ ॥

ಬಿಲ್ಲು ಪಿಡಿದು ನಾ ನಿಲ್ಲುವೆನೀಕ್ಷಣ ।
ಕೊಲ್ವೆ ವಿರೋಧಿಗಳ ॥
ಎಲ್ಲಿಹರಥಮರು ಸೊಲ್ಲಡಗಿಪೆನೆನೆ ।
ಬಲ್ಲಿದ ತಡೆದೆಂದ ॥ ೪-೧೨ ॥

ವಚನ: ಕೋಪೋದ್ರಿಕ್ತನಾದಾ ಲಕ್ಷ್ಮಣನಂ ರಾಘವಂ ಸಂತೈಸಿದನಿಂತು–

॥ **ಕೇದಾರಗೌಳ–ಆಟ** ॥
ಸಹಜ ಸೌಮಿತ್ರಿ ಬಿಲ್ವಿದ್ಯೆಯಿಂ ದುಸ್ಸಾಧ್ಯ ।
ಮಿಹುದೆ ಪೇಳೀ ಲೋಕದಿ ॥
ಮಹಿಮ ನೀನೆಂದು ಬಲ್ಲೆನು ಬಯ್ಯದಿರು ತಂದೆ ।
ಗಹಿತವ ನುಡಿಯದಿರು ॥ ೪-೧೩ ॥

ಇಂದಿನಿಷ್ಟದ ಕಾರ್ಯ ಮುಂದನಿಷ್ಟಕೆ ಹೇತು ।
ಮುಂದಣಭ್ಯುದಯ ಶಿಶು ॥
ಇಂದೆ ತೊಟ್ಟಿಲೊಳಹುದೆಂದು ವಿಧಿಯ ಪಥ ।
ದಂದದೊಳೀ ಪಯಣ ॥ ೪-೧೪ ॥

ಒರೆವೆನಾಲಿಪುದೊಂದು ಕನಸ ಕಂಡೆನು ಏನೆಂ ।
ದರಿಯೆ ವಾನರಭವ್ಯನು ॥
ಗಿರಿಯೆತ್ತರಕೆ ನಿಂತು ಕರೆವ ದಕ್ಷಿಣದೆಡೆ ।
ಬರಿದಚ್ಚರಿಯ ಬಾಳುವೆ ॥ ೪-೧೫ ॥

ವಚನ: ಲಕ್ಷ್ಮಣಂ ಮತ್ತೆ ವಾದಿಸಿದಂ ಅಗ್ರಜನೊಳ್ –

॥ **ಕೇದಾರಗೌಳ–ಝಂಪೆ** ॥
ಕಾಡುತಿಹ ಕನಸು ಸುಳ್ಳು । ನಂಬದಿರು ।
ಹೇಡಿಗಳಗುಚಿತ ಸೊಲ್ಲು ॥
ನೀಡಾಜ್ಞೆ ಬೇಗ ನನಗೆ । ದುರ್ವಿಧಿಯ ।
ದೂಡುವೆನು ನರಕದೊಳಗೆ ॥ ೪-೧೬ ॥

ದಿಟ್ಟತನ ಪುರುಷಕಾರ । ಯಶಕಾಗಿ ।
ಕಟ್ಟಳೆಯ ಬಿಟ್ಟು ಬಾರ ॥
ಕೆಟ್ಟವರ ಕೆಡಹಿ ತರ್ಪೆ । ದೈವಮಂ ।
ಜುಟ್ಟುವಿಡಿದೆಳೆದು ಬರ್ಪೆ ॥ ೪-೧೭ ॥

ವಚನ: ಮತ್ತಾ ಸೌಮಿತ್ರಿಯಂ ಮೃದುವಚನದಿಂ ಸಮಾಧಾನಿಸಿದನು–

॥ **ಭಾಮಿನಿ** ॥
ಕುದಿಯದಿರು ಕೋಪದೊಳು ತಮ್ಮನೆ ।
ವಿಧಿಯೊಡನೆ ನಡೆವನ್ನೆಗಂ ಕಲಿ ।
ವಿಧಿಗಿದಿರು ಮಲೆತಾಗ ನರಬಲಿ ಮರ್ತ್ಯನಿಯಮವಿದು ॥
ಮುದದೊಳೀ ನೆಲದೊಳ್ಪಿಗೋಸುಗ ।
ಸದೆದು ಸ್ವಾರ್ಥವ ಬಲಿಗೊಡುವೆ ನೀ ।
ನಿದಕೆನಗೆ ನೆರವಾಗು ರಭಸವ ತೊರೆಯಬೇಕೆಂದ ॥ ೪–೧೮ ॥

ವಚನ: ಬಳಿಕಾ ಮಾತೆ ಕೌಸಲ್ಯೆಯೊಡನೆ –

॥ **ಮಧ್ಯಮಾವತಿ–ತ್ರಿವುಡೆ** ॥
ಪೋಗಿ ಬರುವೆನು ತಾಯೆ ದುಃಖವ ।
ನೀಗುವುದು ಕೋಸಲದ ಕ್ಷೇಮಕೆ ।
ಬೇಗ ವನವಾಸವನು ಮುಗಿಸುತ ।
ಆಗಮಿಪೆ ನಿನ್ನಲ್ಲಿಗೆ ॥ ೪–೧೯ ॥

ನೋಡುತಿರು ಮುಪ್ಪಡಸಿದಯ್ಯನ ।
ಕಾಡದಿರು ಬಾಲರ್ಷಿ ಭರತನ ।
ಬೇಡುವೆನು ಕೈಮುಗಿದು ಪರಕೆಯ ।
ಹಾಡು ಆತ್ಮೋದ್ಧಾರಕೆ ॥ ೪–೨೦ ॥

ಎಂದ ಮಾತನು ಕೇಳ್ದು ಜನನಿಯು ।
ಕಂದನನು ತೋಳಿಂದ ತಬ್ಬುತ ।
ಮಿಂದು ಕಂಬನಿಧಾರೆಯೊಳು ಶುಭ ।
ವೆಂದು ಸೇಸೆಯ ತಳಿದಳು ॥ ೪–೨೧ ॥

॥ **ವಾರ್ಧಕ** ॥
ಜಗದೀಶ ಕೃಪೆಯಿಂದ ಜಯವಿತ್ತು ಕಾಪಾಡು ।
ಮಗನೀತನೆನ್ನವಂ ಮಮತೆಯಿಂದಲಿ ನೋಡು ।
ಯುಗಧರ್ಮದೇವತೆಯೆ ನಿನ್ನ ಮಡಿಲೊಳಗಿಟ್ಟು ಕಳುಹುವೆನು
ಕರುಣೆಯೊಡು ॥
ಪಗಲಿರುಳು ಬೈಗು ಬೆಳಗುಗಳು ಶಶಿ ತಾರೆಗಳು ।
ಮೃಗಪಕ್ಷಿ ಕೀಟಗಳು ನಗಶಿಖರ ನದಿಕಣಿವೆ ।
ಪಗೆಪೊತ್ತರೀ ತಾಯ ಹೃದಯಾಭಿಶಾಪದೊಳು ಭವಿಸಿ
ಭುಂಜಿಸಿಸಲಿ ಕೇಡು ॥ ೪–೨೨ ॥

ವಚನ: ತಾಯ ಪರಕೆಯಗೊಂಡು ರಾಘವಂ –

॥ **ದ್ವಿಪದಿ** ॥
ಉಕ್ಕಿಬಹ ದುಃಖಮಂ ಸಂಯಮದಿ ಮರೆಸಿ ॥
ಅಕ್ಕರೆಯ ನಗೆಬೀರಿ ಪದಕೆ ಪಣೆಯಿರಿಸಿ ॥ ೪–೨೩ ॥

ರಾಣಿಯಂತಃಪುರಕೆ ರಘುರಾಮ ಬರಲು ॥
ಪ್ರಾಣೇಶನಂ ಕಂಡು ಸೀತೆ ನುಡಿಸಿದಳು ॥ ೪–೨೪ ॥

॥ **ಶಂಕರಾಭರಣ_ಏಕ** ॥
ರಾಮ ರಘುಕುಲಾಬ್ಧಿಸೋಮ । ಶ್ಯಾಮಸುಂದರ ॥
ಕಾಮಿತಾರ್ಥ ಕಲ್ಪವೃಕ್ಷ । ಧಾಮಬಂಧುರ ॥ ೪–೨೫ ॥

ಸಾಕು ಮೌನ ಮಾತನಾಡು । ಸರಸಿಜೇಕ್ಷಣ ॥
ಏಕೆ ಮನವು ಖಿನ್ನವಾಯ್ತು । ತಿಳುಹು ಕಾರಣ ॥ ೪–೨೬ ॥

ವಚನ: ಆಗಳಾ ಸೀತೆಯಂ ಸಂತೈಸುತೆ –

॥ **ಬೇಗಡೆ–ಏಕ** ॥
ಲಾಲಿಸೆಲೆ ರಾಜರ್ಷಿಸುತೆ ಸೀತೆ ॥ ರಘುರಾಮ ಪ್ರೀತೆ ।
ಶೀಲೆ ಸುಗುಣೆ ವಿದೇಹಕುಲಜಾತೆ ॥
ಪೇಳುವೆನು ನಿನಗೊಂದು ವಾರ್ತೆಯ ।
ತಾಳುವುದು ಧೈರ್ಯವನು ಮನದೊಳು ।
ಬಾಳುವೆನು ಪದಿನಾಲ್ಕು ವರುಷ ಕ ।
ರಾಳ ಕಾನನದೊಳಗೆ ವ್ರತಮಿದು ॥ ೪–೨೭ ॥

ವಚನ: ಸೀತಾದೇವಿ ದೃಢಮನದೊಳಗಿಂತೆಂದಳ್ –

ನಿನ್ನನಲ್ಲದೆ ಬೇರೆ ವರಿಸಿಲ್ಲ ॥ ಓ ನನ್ನ ನಲ್ಲ ।
ಇನ್ನು ಕೋಸಲಧರಣಿಗೊಲಿದಿಲ್ಲ ॥
ಬನ್ನಗೊಂಡರು ಕಾಡೆ ಲೇಸೈ ।
ನಿನ್ನ ನೋವಿಂಗಳಲುವುದೆ ಸುಖ ।
ಹೃನ್ಮನದಿ ಪ್ರೇಮಿಸಿದ ರಮಣನ ।
ಸನ್ನಿಧಿಯ ನಾನಗಲಲಾರೆನು ॥ ೪–೨೮ ॥

ವಚನ: ಮತ್ತೆ ಸತಿಪತಿಯರೊಳ್ ಸಂವಾದ ಸಾಗಿತೇನೆಂಬೆನು –

॥ **ಕೇದಾರಗೌಳ–ಆಟ** ॥
ವನವಾಸ ವ್ರತದೀಕ್ಷೆ ರಾಮಚಂದ್ರಗೆ ಮಾತ್ರ ।
ನಿನಗಿಲ್ಲ ಸೀತೆ ಕೇಳು ॥
ವಿನಯದಿಂದತ್ತೆ ಮಾವಂದಿರ ಸೇವಿಸಿ ।
ಘನಧರ್ಮ ಚರಿಸಿ ಬಾಳು ॥ ೪–೨೯ ॥

ಸತಿಶಿರೋಮಣಿಗೆ ಸಮ್ಮತವು ಸಂಸಾರದಿ ।
ಪತಿಸುಖ ದುಃಖದರ್ಧ ॥
ಪತಿಸೇವೆ ಮಿಗಿಲೆಂದು ಪಿತನೆ ಪೇಳಿರುವಂಥ ।
ಹಿತಬೋಧೆ ನನಗೆ ಮಾನ್ಯ ॥ ೪–೩೦ ॥

ಅಟವಿಜೀವನ ಬಹುಕಠಿನವಾಗಿಹುದೆಂಬ ।
ದಿಟವ ನೀನರಿಯೆ ಬಾಲೆ ॥
ಕುಟಿಲಕಾನನ ಕಾವ್ಯಪುಟದ ವರ್ಣನೆಯಲ್ತು ।
ಹಟವ ಕೈಗೊಳಬೇಡವೆ ॥ ೪–೩೧ ॥

ಕಂದಮೂಲಂಗಳ ತಿಂದು ಕುಡಿದು ನೀರು ।
ಪೊಂದಿ ಬಾಳುವೆನು ನಾನು ॥
ಇಂದ್ರಿಯಂಗಳ ಬಿಗಿದೊಂದೆ ಮನದಿ ನಿನ್ನ ।
ಹಿಂದೆ ಬಂದಪೆನು ರಾಮ ॥ ೪–೩೨ ॥

॥ **ಮಧುಮಾಧವಿ – ತ್ರಿವುಡೆ** ॥
ಮೇಘಚುಂಬಿತ ವನವನಾಂತರ ।
ವ್ಯಾಘ್ರ ಶಾರ್ದೂಲಾದಿ ಸೂಕರ ।
ನಾಗಕಾಳೋರಗ ಭಯಂಕರ ।
ಹೇಗೆ ಸಹಿಸುವೆ ಕೋಮಲೆ ॥ ೪–೩೩ ॥

ಮುಂದೆ ಮಾತುಗಳೇಕೆ ವರ್ಣನೆ ।
ಗಿಂದು ಕಾತರಗೊಂಡಿತೀ ಮನ ।
ತಂದೆ ತಾಯ್ಗಳನೆಲ್ಲ ತೊರೆಯುತ ।
ಬಂದವಳ ಕೈಬಿಡದಿರು ॥ ೪–೩೪ ॥

ನಿನ್ನನುಳಿದೆನಗಾವ ಸುಖವಿದೆ ।
ಧನ್ಯನಾದೆನು ದಯಿತೆ ದುಗುಡಗ ।
ಳನ್ನು ಬಿಡು ವನವಾಸದೀಕ್ಷೆಗೆ ।
ಇನ್ನು ಪೊರಡುವುದೀಗಲೆ ॥ ೪–೩೫ ॥

ವಚನ: ಎಂದು ತಾನೊಡಂಬಡಲ್ ಅನಿತರೊಳ್ –

॥ **ಶಂಕರಾಭರಣ–ಮಠ್ಯ** ॥
ಲಾಲಿಸುತ್ತ ಲಕ್ಷ್ಮಣಾಂಕ ।
ನೀಲಮೇಘಶ್ಯಾಮನೆಡೆಗೆ ।
ಆಲೆಯಿಂದಲೋಡಿ ಬಂದು ।
ಕಾಲಿಗೆರಗಿದ ॥ ೪–೩೬ ॥

ಅಣ್ಣದೇವಾರಣ್ಯದೆಡೆಗೆ ।
ತನ್ನ ಕರೆದುಕೊಳ್ಳು ಎಂದು ।
ಕಣ್ಣನೀರ ತುಂಬಿಕೊಂಡು ।
ಬಿನ್ನವಿಸಿದನು ॥ ೪–೩೭ ॥

ಆಗಬಹುದೆನುತ್ತಲೊಪ್ಪಿ ।
ರಾಘವೇಂದ್ರ ಸಹಜನೊಡನೆ ।
ಪೋಗಿ ಜನಕನಂಘ್ರಿಯುಗಕೆ ।
ಬಾಗಿ ನಿಂತನು ॥ ೪–೩೮ ॥

ವಚನ: ಚಕ್ರವರ್ತಿ ದಶರಥಂ ಕಂಬನಿಯಂ ಸುರಿಸುತ್ತ ತಾನಿಂತೆಂದನು–

॥ **ಸಾಂಗತ್ಯ–ರೂಪಕ** ॥
ಮನದ ಮಾಣಿಕ್ಯ ಲಾಲಿಸು ರಾಮಚಂದ್ರನೆ ।
ನಿನಗಾಗಲತಿ ಶ್ರೇಯಸ್ಸುಗಳು ॥
ಧನವಸ್ತು ಪರಿವಾರ ಚತುರಂಗಸೈನ್ಯವು ।
ವನವಾಸಕಿರಲಿ ನಿನ್ನೊಡನೆ ॥ ೪–೩೯ ॥

ವಚನ: ಶ್ರೀರಾಮಂ ಜನಕನಡಿಗೆರಗುತ್ತ –

ದೃಢದಿ ಸಂಪದವೆಲ್ಲ ಭರತನಿಗಿರಲೆಂದು ।
ನುಡಿದು ರಾಮನು ನಿರಾಕರಿಸಿ ॥

ಅಡವಿಜೀವನಕೆ ಕುದ್ದಾಲ ಬುಟ್ಟಿಯು ನಾರು ।
ಮಡಿಯ ನೀಡಿದರೆ ಸಾಕೆಂದ ॥ ೪–೪೦ ॥

ಅಷ್ಟರೊಳಗೆ ನಾರುಬಟ್ಟೆ ತಂದಳು ಕುಬ್ಜೆ ।
ಉಟ್ಟುಕೊಂಡರು ಮೂವರದನು ॥
ಬಿಟ್ಟುಪೋಗದಿರೆಂದು ಪಟ್ಟಣಜನರೆಲ್ಲ ।
ದಟ್ಟೈಸಿದರು ದಾರಿಬಿಡದೆ ॥ ೪–೪೧ ॥

ತೇರನೇರಿಸಿ ಮಂತ್ರಿ ಸಾರಿಪೋಗಲು ಇತ್ತ ।
ಧಾರುಣಿಪತಿಯು ಕಾತರಿಸಿ ॥
ನಾರಿ ಕೈಕೆಯ ಕಂಡು ಬಳಿಗೆ ಬಾರದಿರೆಂದು ।
ಚೀರಿದನುರಿವ ಕೋಪದೊಳು ॥ ೪–೪೨ ॥

॥ **ಕೇದಾರಗೌಳ–ಝಂಪೆ** ॥
ದೂರ ತೊಲಗೆಲೆ ಪಾತಕಿ । ಕಣ್ಬೊಲಕೆ ।
ಬಾರದಿರು ಜೀವಾಂತಕಿ ॥
ನೀ ರಮಣಿಯಲ್ಲವೆನಗೆ । ತರ್ಪಣದ ।
ನೀರೆಳ್ಳು ಕೊಟ್ಟೆ ನಿನಗೆ ॥ ೪–೪೩ ॥

ಚೆಲುವಿನಾ ಬಲೆಕಟ್ಟಿಹೆ । ರಘುವಂಶ ।
ತಿಲಕನಂ ವನಕಟ್ಟಿದೆ ॥
ನಲುಗಿತ್ತೈ ಕುಲದೇಳಿಗೆ । ಮುಂದಿನ್ನು ।
ಫಲವೇನು ಈ ಬಾಳಿಗೆ ॥ ೪–೪೪ ॥

॥ **ಭಾಮಿನಿ** ॥
ರಾಮ ರಾಮಾಯೆಂದು ನೆನೆನೆನೆ ।
ದಾ ಮಹೀಪತಿ ಮತ್ತೆ ಮೂರ್ಛಿಸೆ ।
ಭಾಮೆಯರು ಬಹುತೆರದೊಳುಪಚರಿಸುತ್ತ ಭಯದೊಳಿರೆ ॥
ರಾಮ ಲಕ್ಷ್ಮಣ ಸೀತೆ ಪ್ರಜೆಗಳ ।
ಸ್ತೋಮಮಂ ನಿಶಿಯಲ್ಲಿ ತ್ಯಜಿಸುತೆ ।
ಗೋಮತೀನದಿ ದಾಂಟಿ ಕಂಡರು ಶೃಂಗವೇರಪುರ ॥ ೪–೪೫ ॥

ವಚನ: ಆಗಳ್ ಅಲ್ಲಿಯ ಬೇಡರರಸಂ ಗುಹಂ ಶ್ರೀರಾಮನಲ್ಲಿಗೆ
ಬಂದು ನಮಸ್ಕರಿಸಿ ಬಿನ್ನವಿಸಿಕೊಂಡನೆಂತೆಂದರೆ–

॥ **ಕುರುಂಜಿ-ಆಟ** ॥
ರಾಮಚಂದಿರ ವಂದನೆ । ಸೀತಾ ।
ರಾಮ ನಿನ್ನನು ಕಂಡೆನೆ ॥ ಪ ॥

ನಾಮಜಪದಿ ನಿನ್ನ ಭಾವಿಸಿಕೊಂಡಿರ್ದೆ ।
ಕೋಮಲಾಂಗನೆ ಕರುಣವಾರಿಧಿ ।
ಪ್ರೇಮಮೂರುತಿ ಪರಮಗುಣನಿಧಿ ॥ ಅ. ಪ ॥

ಬೇರೇನು ನೀಡಲಾನು । ಶೃಂಗಿ ।
ವೇರಪುರದ ಬೇಡನು ॥
ಊರಿಗರಸ ಗುಹನೆಂಬಾಭಿಧಾನನು ।
ಸಾರಫಲಗಳ ಸೇವಿಸುತ ನದಿ ।
ತೀರದೊಳು ವಿಶ್ರಾಂತಿಗೈವುದು ॥ ೪-೪೬ ॥

॥ **ದ್ವಿಪದಿ** ॥
ಗುಹನಿತ್ತ ಪಣ್ಗಳಂ ಪ್ರೀತಿಯಿಂ ಭುಜಿಸಿ ॥
ಮಿಹಿರವಂಶೋದ್ಭವಂ ಮುದದಿ ವಿಶ್ರಮಿಸಿ ॥ ೪-೪೭ ॥

ಮರುದಿನದ ಮುಂಬೆಳಗು ಮಂತ್ರಿಯಂ ಕರೆದು ॥
ಪುರಕೆ ಪಿಂತಿರುಗೆಂದು ಸಂತವಿಸಿ ನುಡಿದು ॥ ೪-೪೮ ॥

ರಥವಾಜಿಗಳಗೆ ಪುಲ್ಮೇವನೇವಯಿಸಿ ॥
ಕೃತಕೃತ್ಯಭಾವದಿಂ ಮೈಯ ಚಪ್ಪರಿಸಿ ॥ ೪-೪೯ ॥

ಬಿಯದರೊಡೆಯನು ತಂದ ನಾವೆಯನ್ನೇರಿ ॥
ಬಯಲುಗಂಗೆಯ ದಾಟಿ ಕಾನನವ ಸೇರಿ ॥ ೪-೫೦ ॥

ವಚನ: ಇತ್ತ ಊರ್ಮಿಳಾದೇವಿ ಜಟಾವಲ್ಕಲಮಂ ಧರಿಸುತ್ತೆ –

॥ **ಮಧ್ಯಮಾವತಿ-ತ್ರಿವುಡೆ** ॥
ಸತಿಶಿರೋಮಣಿ ಸಾಧ್ವಿಯೂರ್ಮಿಳೆ ।
ಪತಿಪದಾಂಬುಜ ಸ್ಮರಿಸುತ ॥
ಸತತ ಸರಯೂ ನದಿಯ ತೀರದಿ ।

ವ್ರತಪರಾಯಣೆಯಾದಳು ॥
ಕೃತವಿಶೇಷ ॥ ೪-೫೧ ॥

ಚಿತ್ತಪೋಮಂಗಳದ ರಕ್ಷೆಗೆ ।
ನುತ್ತ ಮೈಥಿಲಿ ರಾಮಗೆ ॥
ಮತ್ತೆ ಲಕ್ಷ್ಮಣದೇವನಿಗೆ ತಪ ।
ವೆತ್ತು ದೀಕ್ಷೆಯನಾಂತಳು ॥
ಭಕ್ತಿಯಿಂದ ॥ ೪-೫೨ ॥

ಹದಿಬದೆಯ ಸಾಹಸದ ಪೊಸರಸ ।
ಮೊದವಿ ಪೆಣ್ತನ ಪ್ರತಿಮೆಯು ॥
ಇದೆ ಮಹಾಸಂಕಲ್ಪ ಶಕ್ತಿಯು ।
ಹೃದಯ ಮೌನ ನಿರೀಕ್ಷೆಯು ॥
ವಿದಿತಮಹುದು ॥ ೪-೫೩ ॥

॥ **ಕಂದ** ॥
ಪಿತೃವಾಕ್ಯವ ಪರಿಪಾಲಿಪ ।
ವ್ರತದೀಕ್ಷಾಬದ್ಧ ವಿಪಿನಗಮನಸುಹಾಸಂ ॥
ಧೃತಚಾಪಂ ವಲ್ಕಲವಿಲ ।
ಸಿತದರ್ಶನ ಯಕ್ಷಗಾನದ ಮಹಾಕಾವ್ಯಂ ॥ ೪-೫೪ ॥

***

ಯಕ್ಷಗಾನ ಮಹಾಕಾವ್ಯ

ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೫

ಪಾದುಕಾಕಿರೀಟಿ

ಪಾತ್ರಪಟಲ

ಭರತ

ಶತ್ರುಘ್ನ

ಕೈಕೇಯಿ

ಮಂಥರೆ

ಕೌಸಲ್ಯೆ

ವಸಿಷ್ಠ

ಶ್ರೀರಾಮ

ಲಕ್ಷ್ಮಣ

ಸೀತಾದೇವಿ

ಹಾರೀತ

ಭಾರದ್ವಾಜ

ಮುನಿಪತ್ನಿ

ಗುಹ

ಸುಮಂತ್ರ

ಪಾದುಕಾಕಿರೀಟಿ

॥ ಕಾಂಭೋದಿ-ಝಂಪೆ ॥
ಇತ್ತ ಕೇಕಯಪುರದಿ ಭರತ ದುಃಸ್ವಪ್ನಮಂ ।
ಮತ್ತೆ ಕಾಣುತ ಬೆಚ್ಚಿ ಬೆಬ್ಬಳಸೆ ರಾತ್ರಿ ॥
ಕತ್ತಲೊಳು ಬೆಂಕಿಗೆರೆ ಚಿತ್ತಾರ ಮೂಡಿದುದ ।
ಶತ್ರುಘ್ನನಂ ಕರೆದು ಬಿತ್ತರಿಸಲಿಂತು ॥ ೫-೧ ॥

ತಮ್ಮ ಲಾಲಿಸಿ ಕೇಳು ತಿಳಿಯದಾವುದೊ ಕನಸು ।
ನಮ್ಮಯ್ಯ ತಲೆಗೆದರಿ ಕೊಳೆಮೆಯ್ಯೊಳಿರ್ದು ॥
ದುರ್ಮಲದ ಜಲಧಿಯಲಿ ತೇಲಿ ತೈಲವ ಕುಡಿದು ।
ಒಮ್ಮೆಲೆ ತಿಲಾನ್ನಮಂ ಭುಜಿಸುತಿಹನ್ನೆಸೆ ॥ ೫-೨ ॥

ಕಪ್ಪುಬಟ್ಟೆಯನುಟ್ಟು ಕೆಂಪು ತಿಲಕವನಿಟ್ಟು ।
ತಪ್ಪುಗೈದವನಂತೆ ತೆಂಕುಮುಖ ನಡೆದ ॥
ಮುಪ್ಪಡಸಿದಾತನಂ ರಕ್ಕಸಿಯು ಪಿಡಿದೆಳೆವ ।
ಸಪ್ಪಳಕೆ ಭಯಗೊಂಡು ನೆಗೆದೆದ್ದೆ ನಾನು ॥ ೫-೩ ॥

॥ ದ್ವಿಪದಿ ॥
ಶತ್ರುಹರ ಸ್ವಪ್ನವೃತ್ತಾಂತಮಂ ಕೇಳ್ದು ॥
ಚಿತ್ತದೊಳು ಬಹುತೆರದ ಶಂಕೆಯಂ ತಾಳ್ದು ॥ ೫-೪ ॥

ಆದುದೇನೋ ದುರಿತ ತಮ್ಮ ಪಿತಗೆಂದು ॥
ಸೋದರರು ತೇಜಿಯನ್ನೇರಿ ಬರಲಂದು ॥ ೫-೫ ॥

ವೈಜಯಂತಿಯ ದ್ವಾರದಾಟಿ ಮುಂಬರಿದು ॥
ನೈಜ ಸಂದೇಹದೊಳು ವಾಜಿಯಿಂದಿಳಿದು ॥ ೫-೬ ॥

ಮುಂದೆಸೆವ ಪಿತೃದೇವ ಮಂದಿರವ ಪೊಗುತ ॥
ತಂದೆಯಾ ಪ್ರತಿಮೆಯನೆ ಕಂಡು ಧೃತಿಗೆಡುತ ॥ ೫-೭ ॥

॥ **ಸೌರಾಷ್ಟ್ರ–ತ್ರಿವುಡೆ** ॥
ಮಾತುದೋರದೆ ಮೌನಮುದ್ರೆಯ ।
ಭೀತ ಸಂಶಯ ದಗ್ಧ ಹೃದಯದಿ ।
ಮಾತೆಯರ ಮನೆಗೈದಿದರು ಸಂ ।
ಜಾತರಾಗ ॥ ೫–೮ ॥

ಮನದಿ ಶೂನ್ಯವ ನಿಟ್ಟಿಸುತಲಿಹ ।
ಜನನಿ ಕೈಕೆಯ ಕಂಡು ಭರತನು ।
ಮನೆಗೆ ಕೇಡೇನೊದಗಿತೆನ್ನುತ ।
ಮಣಿದು ಕೇಳ್ದ ॥ ೫–೯ ॥

ಹುಯ್ಯಲೇನಿದೆ ತಾಯೆ ಚಿನ್ನದ ।
ಮೆಯ್ಯುಡಿಗೆಗಳು ಕಾಣದಾಗಿವೆ ।
ಅಯ್ಯನೆಲ್ಲಿಹನೆಂದು ಪೇಳೌ ।
ಕಯ್ಯ ಮುಗಿವೆ ॥ ೫–೧೦ ॥

ವಚನ: ಭರತನ ನುಡಿಯಂ ಕೇಳ್ದು ಕೈಕಾದೇವಿ ಇಂತೆಂದಳು –

॥ **ಸಾಂಗತ್ಯ – ರೂಪಕ** ॥
ಮನ್ನಿಸು ಮಗನೆ ಮಹಾಪಾಪಿ ನಾನಾದೆ ।
ನಿನ್ನ ತಂದೆಗೆ ಮೃತ್ಯು ತಂದೆ ॥
ಪುಣ್ಯಪುರುಷ ರಾಮಚಂದ್ರನ ವನಕಟ್ಟಿ ।
ಬನ್ನವನಾಂತೆ ಬಾಳಿನಲಿ ॥ ೫–೧೧ ॥

ದಾದಿಮಾತಿಗೆ ರಾಮಪಟ್ಟಾಭಿಷೇಕದ ।
ಹಾದಿಗೆ ನಾನು ಮುಳ್ಳಾದೆ ॥
ಭೇದಭಾವನೆಯಿಂದ ಕುಲದ ಚಂದನವನ ।
ಸೀದುಸುಡುವ ಬೆಂಕಿಯಾದೆ ॥ ೫–೧೨ ॥

॥ **ಭಾಮಿನಿ** ॥
ಕಾರ್ಮೊದಲ ಬಿರುಗಾಳಿ ಬೀಸಲು ।
ಬೇರದುರಿ ತಲೆದಿರುಗಿ ತೊನೆಯುವ ।
ಭೂರುಹಕೆ ಸಿಡಿಲೊಂದು ಬಡಿಯಲು ನೆಲಕೆ ಬೀಳ್ವಂತೆ ॥
ಕ್ರೂರವಾಕ್ಯವ ಕೇಳ್ದು ಭರತ ಕು ।
ಮಾರ ತಾಯಡಿಗುರುಳೆ ಕಂದನ ।
ಸಾರಿ ನೆಗಹುತ ಸಂತವಿಟ್ಟಳು ಹೃದಯದೊಸಗೆಯೊಳು ॥ ೫–೧೩ ॥

॥ **ಕೇದಾರಗೌಳ–ಆಟ** ॥
ಮಗನಭ್ಯುದಯಕಿಂತ ಮಿಗಿಲಾಸೆ ಬೇರುಂಟೆ ।
ಬಗೆ ಕದಡಿರೆ ಮಂಥರೆ ॥
ಮುಗುದ ನೀಡಿದ ವರಯುಗಳ ಕೇಳಲು ನಾನು ।
ಹಗರಣವಾಯ್ತು ಕಂದ ॥ ೫–೧೪ ॥

ವಿಧವೆಯಾದೆನು ನಾನು ಬದುಕು ದಾರುಣವಾಯ್ತು ।
ಬಿದಿಗೈದ ಹದನವಿದು ॥
ಪದಿನಾಲ್ಕು ವರುಷ ರಾಮನು ಬಾರನೀಕಡೆ ।
ಮೊದಲು ರಾಜ್ಯವ ಪಾಲಿಸು ॥ ೫–೧೫ ॥

ವಚನ: ಭರತನಾ ಮಾತಂ ಅಲ್ಲಗಳೆದು –

ಹಾಲನೂಡಿದ ತಾಯೆ ಹಾಲಾಹಲವನಿತ್ತು ।
ಮೇಲೆನ್ನ ಕೊಲಲುಬೇಡ ॥
ಬಾಲತನದಿ ಕತ್ತುಸೀಳಿ ಕೊಲ್ಲದೆಯೆನ್ನ ।
ಪಾಲಿಸಿರುವುದೇತಕೆ ॥ ೫–೧೬ ॥

ಅಣ್ಣದೇವನ ಬಿಟ್ಟು ಮಣ್ಣನಾಳುವುದೆಂತು ।
ಇನ್ನೀಗ ವನಕೆ ಪೋಗಿ ॥
ಮನ್ನಿಸಬೇಕೆಂದು ಮನೆಗೆ ಕರೆವೆನೆಂದು ।
ತನ್ನಾಸೆ ಪೇಳ್ದನಾಗ ॥ ೫–೧೭ ॥

ವಚನ: ಶತ್ರುಘ್ನಂ ರೋಷಫಣಿಯಾಗಿ –

॥ **ಭೈರವಿ–ಝಂಪೆ** ॥
ಅನಿತರೊಳಗಾ ಗೂನಿ ಮಂಥರೆಯ ಮೂದಲಿಸಿ ।
ತನುವ ಕುಕ್ಕಿದ ನೆಲಕೆ ಶತ್ರುಹರ ಮುನಿದು ॥
ಇನಕುಲದ ಸುಖವ ನುಂಗಿದ ಮೃತ್ಯುರೂಪಿಣಿಯೆ ।
ಎನುತ ತಾನೆಳೆತಂದ ಭರತನಿರ್ದೆಡೆಗೆ ॥ ೫–೧೮ ॥

ಅಳುವ ದಾಸಿಯ ಕಂಡು ಕಳೆದ ಬಾಲ್ಯದ ನೆನಪು ।
ಸುಳಿದು ಕೊರೆಯಿತು ಕರುಣೆ ಭರತನೊಡಲಿನೊಳು ॥

ಬಳಿಕ ಭಾವಿಸಿ ಪ್ರೇಮರಾಹುವೆಂದೆನುತವಳ ।
ಬಳಿ ಸಾರದಿರು ಪಾಪಿ ತೊಲಗೆಂದ ಭರದಿ ॥ ೫-೧೯ ॥

ವಚನ: ಶತ್ರುಹನ ತಡೆದು ಭರತಕುಮಾರಂ –

ಕಣ್ಣಿದು ವಿಕಾರಮಂ ಕಂಡುದಿಲ್ಲೀವರೆಗೆ ।
ತಿನ್ನಲೆಳಸುವ ಪಿಶಾಚಿಯೊಲು ಕಾಣುವಳು ॥
ಪೆಣ್ಗೊಲೆಗೆ ಪೇಸುವವನಣ್ಣನಾದುದರಿಂದ ।
ಇನ್ನಿವಳ ಪೊಯ್ಯದಿರು ಮಮ ಸಹೋದರನೆ ॥ ೫-೨೦ ॥

॥ ಭಾಮಿನಿ ॥
ಎಂದು ತಮ್ಮನ ತಡೆದು ಮೃದುನುಡಿ ।
ಯಿಂದ ಕೋಪವ ತಣಿಸಿ ತಾ ನಡೆ ।
ತಂದನಾ ಕೌಸಲ್ಯೆಯಂತಃಪುರದ ಬಳಿಗಾಗಿ ॥
ನೊಂದು ಬಹುಪರಿಯಿಂದ ದೂರದೆ ।
ನಿಂದ ಕೈಕಾಸುತನ ಕಾಣುತ ।
ಕಂದ ಬಾಬಾರೆಂದು ನುಡಿದಳು ದುಃಖಬಿಕ್ಕಳಿಸಿ ॥ ೫-೨೧ ॥

॥ ಶಂಕರಾಭರಣ-ತ್ರಿವುಡೆ ॥
ಭರತ ನಿನ್ನೊಳೆ ಕಂಡೆನೀಗಲೆ ।
ತರಳ ರಾಮನ ಚೆಲುವಿಕೆ ॥
ಮರುಗಬೇಡೆಲೊ ಮಾತೆಗೋಸುಗ ।
ದುರುಳ ವಿಧಿವಿಪರೀತಕೆ ॥ ೫-೨೨ ॥

ವಚನ: ಭರತಕುಮಾರಂ ಮತ್ತೆ ದೊಡ್ಡವ್ವೆಗೆ ತಾನಿಂತೆಂದಂ –

ಚಾಡಿನುಡಿಯಪರಾಧಕೃತ್ಯಕೆ ।
ನೀಡುವುದು ಕ್ಷಮೆ ತಾಯಿಗೆ ॥
ಬೇಡಿ ಕರೆತಹೆ ರಾಮಚಂದ್ರನ ।
ಕಾಡಿನಿಂದೀ ನಾಡಿಗೆ ॥ ೫-೨೩ ॥

ವಚನ: ಅದಕಾ ಕೌಸಲ್ಯಾದೇವಿ ಮಮತೆಯಿಂದೆ –

ತಪ್ಪು ತಾಯಿಯದಲ್ತು ಕೈತವ ।
ವೊಪ್ಪಗೆಡಿಸಿತು ಕಾರ್ಯವ ॥
ಸುಪ್ರವೀಣನೆ ಶುಭವಿರಲಿಯೆಂ ।
ದಪ್ಪಿದಳು ಸುಕುಮಾರನ ॥ ೫-೨೪ ॥

ವಚನ: ಆಗ ಕುಲಪುರೋಹಿತಂ ಮಹಾಮುನಿ ವಸಿಷ್ಠಂ ಬಂದು
ಭರತಂಗೆ ಸೂಚಿಸಿದಂ ಪೈತೃಕಮಂ-

॥ **ಸೌರಾಷ್ಟ್ರ-ಆಟ** ॥
ಮಾತ ಲಾಲಿಸು ಮನದಾತುರವನು ಬಿಡು । ಬಾಲ ಕೇಳು ॥ ಈಗ
ಭೂತಳಾಧಿಪನಿಗೆ ಪ್ರೇತಕಾರ್ಯವ ಮಾಡು । ಬಾಲ ಕೇಳು ॥ ೫-೨೫ ॥

ಲೋಕದುತ್ತಮಗತಿ ಸಾಕಾರಗೊಳುವಂತೆ । ಬಾಲ ಕೇಳು ॥ ಇಂತು
ಶೋಕಗೈಯದೆ ಶ್ರಾದ್ಧವೇಕೋಭಾವದಿ ಮಾಡು । ಬಾಲ ಕೇಳು ॥ ೫-೨೬ ॥

॥ **ಭಾಮಿನಿ** ॥
ಮುನಿಮತಕೆ ಸಮ್ಮತಿಸೆ ಯಾಜಕ ।
ಜನರು ತೈಲದ ಭಾಂಡದಿಂದಲಿ ।
ತನುವನೆತ್ತುತ ಕನಕಶಿಬಿಕೆಗೆ ನೆಗಹಿ ಪೊತ್ತೊಯ್ಯೆ ॥
ಪ್ರಣವಮಂತ್ರದಿ ಗಂಧಚಿತೆಯೊಳ ।
ಗನಲಸ್ಪರ್ಶನಗೈದು ಭರತನು ।
ಜನಕನಿಗೆ ತರ್ಪಣವನಿತ್ತನು ಸರಯುವಿನ ತಟದಿ ॥ ೫-೨೭ ॥

॥ **ಭೈರವಿ-ಝಂಪೆ** ॥
ಹೃದಯಾಬ್ಜದೊಳು ರಾಮಚಂದ್ರನಂ ಸ್ಮರಿಸುತ್ತ ।
ಮುದುಕಿ ಮಂಥರೆ ಮನೆಯ ಪೊರವಂಟಳಾಗ ॥
ಕದವಿಕ್ಕಿ ಕಲ್ಲುಬೀರಿದರು ಪುರಜನರೆಲ್ಲ ।
ಬೆದರಿ ಚೀರುತಲಡವಿ ಸೇರಿದಳು ಬೇಗ ॥ ೫-೨೮ ॥

ಹಸಿವು ನೀರಡಿಕೆಯಿಂ ದೆಸೆಗೆಟ್ಟು ಕಾನನದಿ ।
ಬಸಿವ ಗಾಯದ ಪಸಿಯ ನೋವಿಂದ ನಲುಗಿ ॥
ಬಿಸಿಲು ನೆರಳೆನ್ನದೆಯೆ ನಿಶಿಹಗಲು ಪುಡುಕುತ್ತ ।
ಉಸುರಿದಳು ರಾಮನಾಮದ ಜಪವ ತಿರುಗಿ ॥ ೫-೨೯ ॥

ಓ ನನ್ನ ಮಗು ಭರತನಣ್ಣಯ್ಯ ರಾಮಯ್ಯ ।
ನೀನೆಲ್ಲಿರುವೆಯಯ್ಯ ಪೇಳು ದಮ್ಮಯ್ಯ ॥
ಆನಂದಸಿರಿಯಕ್ಕೆ ಭರತನಿಗೆ ಶುಭಮಕ್ಕೆ ।
ನೀನೀಗ ಮರಳಿ ಮನೆಸೇರಬೇಕಯ್ಯ ॥ ೫–೩೦ ॥

ಈ ನೆಲಕೆ ತಿಳಿಯದಿರಲೇನು ಪರಿವರ್ತನೆಯು ।
ಬಾನದೇವಿಗೆ ತಿಳಿಗು ಸಕಲಪರಿತಾಪ ॥
ಶೂನ್ಯತೆಯ ನೇಮಿ ತಾನುಯ್ಯಾಲೆ ತೂಗುತಿರೆ ।
ಕಾಣಿಸಿತು ದಾವಾಗ್ನಿಯೊಳು ರಾಮರೂಪ ॥ ೫–೩೧ ॥

॥ **ಭಾಮಿನಿ** ॥
ರಾಮನಲ್ಲಿಹನೆಂದು ಮಂಥರೆ ।
ತಾ ಮನದಿ ಸಂತೋಷಭಾವದಿ ।
ಹೋಮರೂಪಾಗ್ನಿಯನು ಪೊಕ್ಕಳು ಪರಮಪ್ರೀತಿಯೊಳು ॥
ಆ ಮಹಾ ಜಿಹ್ವೆಯೊಳು ಫಣಿಶಿಖಿ ।
ನೇಮಭೋಜನಗೊಳಲು ವಕ್ರತೆ ।
ಪ್ರೇಮಪರಿಮಳವಾಗಿ ತುಂಬಿತು ಲೋಕಲೋಕಗಳ ॥ ೫–೩೨ ॥

ವಚನ: ಇತ್ತಲಾ ಅಯೋಧ್ಯೆಯಿಂ ಪೊರಟಾ ರಾಮಚಂದ್ರಂ –

॥ **ಸೌರಾಷ್ಟ್ರ–ತ್ರಿವುಡೆ** ॥
ನಡುವೆ ಜಾನಕಿ ಹಿಂದೆ ಲಕ್ಷ್ಮಣ ।
ನೊಡನೆ ರಾಘವ ಮುಂದೆ ಹೆಜ್ಜೆಯ ।
ನಿಡುತ ಬರಲಾ ಕತ್ತಲೆಯ ಕಾ ।
ರಡವಿಯಲ್ಲಿ ॥ ೫–೩೩ ॥

ಬಳಿಕ ನಿರ್ಮಲಕೊಳದ ನೀರೊಳು ।
ತೊಳೆದರಾನನ ಕರಪದಂಗಳ ।
ಗಳಿತ ಫಲಗಳ ಭುಜಿಸಿ ಮಲಗಿರೆ ।
ನೆಳಲಿನಲ್ಲಿ ॥ ೫–೩೪ ॥

ಮೊರೆಯುತಿಹ ಜಲಪಾತ ಚೆಲುವಿನ ।
ಕರೆಯುತಿಹ ಕಾಜಾಣದೊಲವಿನ ।

ಗರಿಗೆದರಿ ನರ್ತಿಸುವ ನವಿಲಿನ ।
ಪರಿಯ ಕಂಡು ॥ ೫–೩೫ ॥

ಮುಂದುಮುಂದ್ಯೈತರಲು ಮುನಿಗಳ ।
ಸುಂದರಾಶ್ರಮವೊಂದು ತೋರಲು ।
ಬಂದು ಋಷಿ ಹಾರೀತ ಸ್ವಾಗತ ।
ವೆಂದು ನಮಿಸೆ ॥ ೫–೩೬ ॥

॥ **ಸಾಂಗತ್ಯ–ರೂಪಕ** ॥
ವರಮಹಾಮಹಿಮನೆ ಗುರು ಭಾರದ್ವಾಜಂಗೆ ।
ಪರಮಶಿಷ್ಯನು ನಾನಾಗಿಹೆನು ॥
ಪಿರಿಯತಿಥಿಯು ನಿನ್ನ ಕರೆತರಬೇಕೆಂಬ ।
ನೆರೆ ನಿರೂಪದಿ ಬಂದಿರುವೆನು ॥ ೫–೩೭ ॥

ಪಿರಿಯಾತ ನೀನ್ಯೈಸೆ ಪರಮವಾತ್ಸಲ್ಯದಿ ।
ಕಿರಿಯರಾಗಿಹ ಮೂವರನ್ನು ॥
ಪರಸಿ ಕರುಣೆದೋರಬೇಕೆಂದು ವಿನಯದಿ ।
ಚರಣಕಾನತರಾಗಲವನು ॥ ೫–೩೮ ॥

ಪಿರಿತನವೆಂಬುದು ಹರೆಯದೊಳಹುದೆ ನೀ ।
ನೆರಕಗೊಂಡಿರುವೆ ಕಾಂತಿಯಲಿ ॥
ನಿರತ ನೋಂಪಿಯೊಳ್ ನಿನ್ನ ಗುರು ನಿರೀಕ್ಷಿಸುತಿಹ ।
ಸರಸಿಜನಯನ ಬಾರಯ್ಯ ॥ ೫–೩೯ ॥

॥ **ದ್ವಿಪದಿ** ॥
ಎಂದ ಮಾತನು ಕೇಳಿ ಮುನಿಪನಾಶ್ರಮಕೆ ॥
ಬಂದು ಸಾಷ್ಟಾಂಗದಿಂ ವಂದಿಸಲು ಪದಕೆ ॥ ೫–೪೦ ॥

ಪೂಜೆಮನೆಯೊಳಗೆ ಮನದಿಂಗಿತವ ತಿಳಿಸಿ ॥
ರಾಜೀವನೇತ್ರನಂ ಮುನಿಪನುಪಚರಿಸಿ ॥ ೫–೪೧ ॥

ಮುನಿಪತ್ನಿ ಸೀತೆಯಂ ಮಗಳೆಂದು ಕರೆದು ॥
ತನಿವಣ್ಣಗಳೀಯುತ್ತ ತಣಿಸಿ ಮುಂಬರಿದು ॥ ೫–೪೨ ॥

ಪಣತೆಸೊಡರಂ ಪಿಡಿದು ರೂಪಮಂ ನೋಡಿ ॥
ದಣಿವನಾರಿಸಿ ಮತ್ತೆ ನೊರೆವಾಲನೀಡಿ ॥ ೫–೪೩ ॥

॥ **ಕೇದಾರಗೌಳ–ಆಟ** ॥
ಅಡವಿಯಾಶ್ರಮದಲ್ಲಿ ಆತಿಥ್ಯವನು ನೀಡಿ ।
ಕಡೆಗಾತ್ಮತೃಪ್ತಿಯಿಂದ ॥
ಒಡಗೂಡಿ ಮುನಿಯು ಪ್ರಯಾಗತೀರ್ಥದ ಪುಣ್ಯ ।
ದಡಸೇರಿ ಸ್ನಾನಗೈಯೆ ॥ ೫–೪೪ ॥

ಕಳೆವುದೆಮ್ಮೊಡನೆ ಕಾನನವಾಸ ಕಾಲವ ।
ಸಲಿಲಸಂಗಮತೀರ್ಥದಿ ॥
ಇಳೆಯ ಸುಂದರತಾಣವೆನಲು ರಾಘವನಾಗ ।
ತಿಳುಹಿದ ಮನದಿರವ ॥ ೫–೪೫ ॥

ಮುನಿಪ ಸಾಕೇತಕೆ ಸನಿಹದ ಸ್ಥಳವಿದು ।
ಜನರ ದರ್ಶನ ಸಲ್ಲದು ॥
ಜನಕನಂದನೆಗೆ ಸಂತೋಷವೀಯುವ ಬೇರೆ ।
ವನಸ್ಥಳವರುಹ ಬೇಕು ॥ ೫–೪೬ ॥

ಈರೈದು ಹರಿದಾರಿ ದೂರದೊಳಹುದೊಂದು ।
ಸಾರಸುಂದರ ಬನವು ॥
ಧೀರ ಲಾಲಿಸು ಚಿತ್ರಕೂಟವೆನ್ನುವರದ ।
ಸೇರಿಕೊಂಡರೆ ಶುಭವು ॥ ೫–೪೭ ॥

ವಚನ: ಮುನಿವರಂ ಪೇಳ್ದಂದದೊಳ್ ಮುಂದೆ ನಡೆದರಾ ಮೂವರು–

॥ **ಮತ್ತೇಭವಿಕ್ರೀಡಿತ ವೃತ್ತ** ॥
ಯಮುನಾತೀರದೊಳಂದು ಸೀತೆಯೊಡನಾ ಸೌಮಿತ್ರಿಯಂ ಕೂಡುತಂ ।
ರಮಣೀಯಾಟವಿ ಚಿತ್ರಕೂಟದೆಡೆಗಂ ಸಾಗುತ್ತಲಾ ರಾಘವಂ ।
ಸುಮಸಂದೋಹದಿ ಬಣ್ಣಗೊಂಡ ತರುಮೇಲಾ ಹುಟ್ಟಿಹೆಜ್ಜೇನ್ಗಳಂ ।
ಧುಮುಕುತ್ತೈತಹ ನೀರಬೀಳಸೊಗಮಂ ಕಾಣುತ್ತ ಮುಂದೈದಿದಂ ॥ ೫–೪೮ ॥

॥ **ಕಾಂಭೋದಿ-ಝಂಪೆ** ॥
ಗಿರಿಭುಜಸ್ಥಾನದೊಳು ತರುಲತೆಯನೆಳೆತಂದು ।
ವಿರಚಿಸಿದ ಪರ್ಣಕುಟಿಯೊಂದ ಸೌಮಿತ್ರಿ ॥
ಪರಮಕಾಂತಾರದಧಿದೇವಿಯರ ಮನಸಿನೊಳು ।
ಸ್ಮರಿಸಿ ಮನೆಯಂಬೊಕ್ಕು ವರಮುಹೂರ್ತದಲಿ ॥ ೫-೪೯ ॥

ಪಸಿಸೌದೆಯಿಂದಡುಗೆ ಮನೆಯಲ್ಲಿ ಪೊಗೆತುಂಬೆ ।
ಮಸಿಯಾಯ್ತು ಮೊಗಮೆಲ್ಲ ಮುಗುದೆ ಜಾನಕಿಗೆ ॥
ಹಸಿವಾಗಲುಣಬಂದ ರಾಮಚಂದ್ರನ ಕರೆದು ।
ಮುಸುಕಿರ್ದ ಧೂಮವುಣಿರೆಂದು ಪೇಳಿದಳು ॥ ೫-೫೦ ॥

ಮಸಿವಿಡಿದ ಮೈಥಿಲಿಯ ಮುಸುಡಿಯವತಾರಮಂ ।
ಬಿಸಜಲೋಚನ ಕಂಡು ಲಕ್ಷ್ಮಣನ ಕರೆದು ॥
ಉಸುರಿದನು ಒಳಮನೆಯೊಳತ್ತಿಗೆಗೆ ಬದಲಾಗಿ ।
ಪೊಸತೊಂದು ವಾನರಿಯ ನೋಡುನೋಡೆಂದು ॥ ೫-೫೧ ॥

ಪಸಿಸೌದೆಯನು ತಂದ ಅಪರಾಧ ತನ್ನದೆಂ ।
ದುಸುರುತ್ತಲೊಣಪುಳ್ಳಿ ತಂದು ಸೌಮಿತ್ರಿ ॥
ಬೆಸನದಿಂ ಕ್ಷಮೆಯಾಚಿಸುತ ಬೆಂಕಿಯನ್ನೂದೆ ।
ಪೊಸತು ಕಾಂತಿಯು ಹೊಮ್ಮೆ ಮೈಥಿಲಿಯ ಮೊಗದಿ ॥ ೫-೫೨ ॥

॥ **ಸೌರಾಷ್ಟ್ರ-ತ್ರಿವುಡೆ** ॥
ಇಂತು ಪರಿಪರಿ ನಗುತ ಮೂವರು ।
ನಿಂತಿರಲು ಗಿರಿಶಿಖರ ಮೇಲಕೆ ।
ಮುಂತೆಸೆವ ಕಾಳ್ಗಿಚ್ಚ ಕಾಣುತ ।
ಸಂತಸದೊಳು ॥ ೫-೫೩ ॥

ಉರಿಯ ಊರ್ವಶಿಯೆಂದು ಮಕ್ಕಳ ।
ತೆರದಿ ಕುಣಿಯುತಲೊಂದು ಬಂಡೆಯ ।
ಕರೆದರಾ ಕಲ್ಲವಸಿಯೆನ್ನುತ ।
ಬೆರಗಿನಿಂದ ॥ ೫-೫೪ ॥

ಹಾರಿ ಬಹ ಬೆಳ್ವಕ್ಕಿಪಂಕ್ತಿಯ ।
ಚಾರು ಚೆಲುವಿಗೆ ಸೋತು ರಾಮನು ।
ಪಾರಲೌಕಿಕ ರಸಸಮಾಧಿಯ ।
ನೇರಿ ಸುಖಿಸೆ ॥ ೫–೫೫ ॥

॥ ಭಾಮಿನಿ ॥
ತೊರೆಯ ತಣ್ಣೀರಿನಲಿ ಮುಳುಗುತ ।
ಮರಳ ರಾಶಿಯ ಮೇಲೆ ನಲಿಯುತ ।
ಪರಿಪರಿಯ ಸುಖದಿಂದ ಸೀತಾರಾಮಚಂದ್ರರಿರೆ ॥
ಗಿರಿವನದಿ ಕಲ್ಲುರುಳಿದೊಲು ಮದ ।
ಕರಿಗಳಾಕಡೆ ಬರಲು ಭಯಗೊಂ ।
ಡಿರುವ ಸೀತೆಯ ಸಂತವಿಸುತೆ ಕುಟೀರ ಸೇರಿದರು ॥ ೫–೫೬ ॥

ವಚನ: ಇತ್ತ ಅಯೋಧ್ಯೆಯಿಂ ಪೊರಟ ಭರತಕುಮಾರಂ
ಸಮಸ್ತಪ್ರಜಾಜನಸಹಿತಂ ಕಾನನಮಾರ್ಗಮಂ ಪಿಡಿದು –

॥ ಕಾಪಿ–ಆಟ ॥
ರಾಮನ ಕರೆತಹೆನೆನುತ । ಭ್ರಾತೃ ।
ಪ್ರೇಮಶಿರೋಮಣಿ ಗುಣನಿಧಿ ಭರತ ॥
ನೇಮದಿಂದಡವಿಗೆ ಬರುತ । ತನ್ನ ।
ಸೀಮೆಯ ಜನರೆಲ್ಲರನು ಕೂಡಿಕೊಳುತ ॥ ೫–೫೭ ॥

ಅಣ್ಣನಾಳಲಿ ರಾಜ್ಯವೆಂದು । ಕೈಕಾ ।
ಚಿಣ್ಣ ಕಾಡನು ಸೇರಿ ಪುಡುಕುತ್ತಲಂದು ॥
ಪುಣ್ಯಮೂರುತಿಯೆ ಬಾರೆಂದು । ಕೂಗಿ ।
ಕಣ್ಣೀರುಗರೆಯುತ್ತ ಕಳವಳಗೊಂಡು ॥ ೫–೫೮ ॥

ಚೀರವಲ್ಕಲವುಟ್ಟ ಕೀರ್ತಿ । ಮತ್ತೆ ।
ತಾರುಣ್ಯಕಡಿಯಿಟ್ಟ ಕೌಮಾರಮೂರ್ತಿ ॥
ಶ್ರೀರಾಮಚರಣಸೇವಾರ್ಥಿ । ತಾಯ ।
ಕಾರುಣ್ಯಕಾಂಕ್ಷೆಯರ್ಭಕನಂತಃಸ್ಫೂರ್ತಿ ॥ ೫–೫೯ ॥

॥ **ಕಾಂಭೋದಿ–ಝಂಪೆ** ॥
ನಡುಗೆ ಕಾರಡವಿ ಮೈಕೊಡಹಿ ಗರ್ಜಿಸೆ ಸಿಂಹ ।
ತುಡುಕೆ ಕೋದಂಡವನು ಲಕ್ಷ್ಮಣಾಂಕ ॥
ನಡೆದು ಬಹ ಸೇನೆಯಂ ಕಂಡು ರೋಷವಗೊಂಡು ।
ನುಡಿದನಣ್ಣಗೆ ಮರದ ತುದಿಯಿಂದಲೆ ॥ ೫–೩೦ ॥

ಆರಿಸಗ್ನಿಯನಣ್ಣ ದೇವಿಯಂ ಬೈತಿಟ್ಟು ।
ಬಾರಯ್ಯ ಜವದಿಂದ ಕವಚಧರಿಸಿ ॥
ಸಾರಿಬಂದಿಹ ಭರತ ಸಮರ ಭಾವಗಳಂದ ।
ನಾರಾಚ ಪೂಡುವುದು ತವಕದಿಂದ ॥ ೫–೩೧ ॥

ವಚನ: ಎಂದಾ ಸಹಜನ ನುಡಿಗಂ ರಾಮಚಂದ್ರಂ ತಡೆದು –

॥ **ಕೇದಾರಗೌಳ–ಆಟ** ॥
ತಮ್ಮ ದುಡುಕಬೇಡ ತಾಳು ಸಂಯಮವನ್ನು ।
ನಮ್ಮನುಜನು ಭರತ ॥
ಹಮ್ಮುದೋರುತಲಿಂತು ಹಗೆದೋರುವವನಲ್ಲ ।
ಧರ್ಮಶೀಲಗೆ ನಿಂದೆಯೆ ॥ ೫–೩೨ ॥

ಬಿಡದೋಡಿ ಬಂದು ಭರತನಾಗ ರಘುರಾಮ ।
ನಡಿಗೆ ಬಿದ್ದನು ಬೇಗದಿ ॥
ಪಿಡಿದೆತ್ತಿ ಬಿಗಿದಪ್ಪಿ ಪಣೆಗೆ ಮುತ್ತಿಡುತಾಗ ।
ನುಡಿಸಿದನಾ ತಮ್ಮನ ॥ ೫–೩೩ ॥

ಸುಂದರಾಂಗನೆ ಮೊಗ ಕಂದಿಹುದೇತಕ್ಕೈ ।
ತಂದೆಯೆಂತಿಹನು ಪೇಳು ॥
ಬಂದಿಹುದೇಕೆ ತಾಯಂದಿರು ಕುಶಲವೆ ।
ಪೊಂದಿಹ ಜಟೆಯಿದೇಕೆ ॥ ೫–೩೪ ॥

॥ **ಭಾಮಿನಿ** ॥
ನುಡಿಯನಾಲಿಸುತಾಗ ತಾಯಿಯ ।
ಮಡಿಲಸೇರುವ ಮಗುವಿನಂದದಿ ।
ಕೆಡೆದನಾಗಲೆ ರಾಮಚಂದ್ರನ ತೋಳತೆಕ್ಕೆಯಲಿ ॥

ಒಡನೆ ಶತ್ರುಘ್ನಾದಿಗಳು ಬಂ ।
ದೆಡಬಲದಿ ಶಿಶಿರೋಪಚಾರವ ।
ನಡೆಸುತಿರೆ ಗುಹನಂದು ಬಿತ್ತರಿಸಿದನು ಸಂಗತಿಯ ॥ ೫-೬೫ ॥

॥ **ತುಜಾವಂತು-ಝಂಪೆ** ॥
ಕಂದ ರಾಘವನಿರದೆ ಕಳವಳಿಸಿ ಪಿತನು ।
ಸಂದುಸೇರಿದ ದಿವಿಯ ಪೇಳಲೆಂತದನು ॥
ಮುಂದೆ ಧಾರುಣಿಪಟ್ಟ ಒಲ್ಲೆನೆಂದಿವನು ।
ಇಂದು ನಿನ್ನನು ಕರೆಯಲೆಂದು ಬಂದಿಹನು ॥ ೫-೬೬ ॥

ವಚನ: ಆ ನುಡಿಯಂ ಕೇಳ್ದು ರಾಮಚಂದ್ರಂ ಆಘಾತಗೊಂಡು –

ತಂದೆ ಹೋದನೆ ತಮ್ಮಾ ಸೌಮಿತ್ರಿ ಎಂದು ।
ನೊಂದುಕೊಂಡುರೆ ಶೋಕವಹ್ನಿಯೊಳು ಬೆಂದು ॥
ಅಂದಗೆಟ್ಟಿತಯೋಧ್ಯೆ ಅತಿದುಃಖಗೊಂಡು ।
ಮುಂದೆ ಕಾರ್ಯಗಳೇನು ತಿಳಿಯೆ ನಾನಿಂದು ॥ ೫-೬೭ ॥

ವಚನ: ಎನುತ ದುಃಖದೊಳ್ ಮುಳುಗಿ ಗಂಗಾತಟದೊಳೆ
ಪಿತೃಶ್ರಾದ್ಧಮಂ ಗೈದನು –

॥ **ದ್ವಿಪದಿ** ॥
ಕಂದರಂ ಕೈಪಿಡಿದು ಸಚಿವ ಕರೆತಂದು ॥
ಮಂದಾಕಿನಿಯ ಪುಣ್ಯತೀರ್ಥದೊಳು ಮಿಂದು ॥ ೫-೬೮ ॥

ಬದರಿಫಲ ಬೆರೆಸಿದಿಂಗುಳ ಪಿಂಡದುದಕ ॥
ಮುದದಿ ತರ್ಪಣವಿತ್ತು ಪೈತೃಕದ ಬಳಿಕ ॥ ೫-೬೯ ॥

ಗುರು ವಸಿಷ್ಠಂಗೆರಗಿ ಜನನಿಯರ ಪದಕೆ ॥
ಶಿರಬಾಗಿ ಶ್ರೀರಾಮ ನುಡಿದ ಭರತನಿಗೆ ॥ ೫-೭೦ ॥

॥ **ಸೌರಾಷ್ಟ್ರ-ತ್ರಿವುಡೆ** ॥
ತಂದೆ ದಶರಥ ತೀರ್ದನಾದರು ।
ತಂದೆಯಾಜ್ಞೆಯು ತೀರ್ದುದಿಲ್ಲವು ।

ತಂದೆಗಿಂತಲು ಧರ್ಮವೇ ಪಿರಿ ।
ತಂದೆಯೆಮಗೆ ॥ ೫-೭೧ ॥

ಕಂದ ಕೇಳಾ ನಿಯತಿ ಹಸ್ತದೊ ।
ಳೊಂದು ಕೈದುವು ಮಾತೆ ಕೈಕೆಯು ।
ಪೊಂದಿಸಿದ ಹುಲುನೆವನ ಮಂಥರೆ ।
ಯೆಂದ ವಚನ ॥ ೫-೭೨ ॥

ಆ ಮಹಾಬಲ ವಜ್ರವಿಧಿಯಾ ।
ನೇಮ ನಮ್ಮೆಲ್ಲರಿಗೆ ಪೂಜ್ಯವು ।
ರಾಮನಾಡಿದ ಪೂಣ್ಕೆ ಸುಸ್ಥಿರ ।
ಭೀಮ ಸತ್ಯ ॥ ೫-೭೩ ॥

॥ **ಸಾಂಗತ್ಯ-ರೂಪಕ** ॥
ಭರತ ಕಂಬನಿಧಾರೆ ಸುರಿಸುತ್ತಲಿರಲಾಗ ।
ಗುರು ವಸಿಷ್ಠನು ಸಂತವಿಸುತ ॥
ಬರುವನೆ ರವಿ ಪಶ್ಚಿಮಾದ್ರಿಯಿಂದುದಯಕೆ ।
ಬರಿದಿಂತು ಶೋಕಗೈಯದಿರು ॥ ೫-೭೪ ॥

ದೃಢಭಕ್ತಿಯೊಳು ರಾಮನಡಿದಾವರೆಗೆ ತಾನು ।
ಪೊಡಮಟ್ಟು ಭರತಕುಮಾರ ॥
ಬಿಡದೆ ಪಾದುಕೆಗಳ ಪಡೆದು ಭಾವುಕನಾಗಿ ।
ಮುಡಿಗೇರಿಸುತಲಿಂತು ನುಡಿದ ॥ ೫-೭೫ ॥

ಇದನೊಯ್ದು ಸಿಂಹಪೀಠದೊಳಿಟ್ಟು ಪೂಜಿಪೆ ।
ಪದಿನಾಲ್ಕು ವತ್ಸರಂಗಳಲಿ ॥
ಮುದದಿಂದ ಮರುದಿನ ಒದಗದಿದ್ದರೆ ರಾಮ ।
ಸದಮಲಾಗ್ನಿಯನು ಸೇರುವೆನು ॥ ೫-೭೬ ॥

॥ **ಭಾಮಿನಿ** ॥
ಮಧುರನುಡಿಗಳನಾಡಿ ಮರುದಿನ ।
ದುದಯದೊಳು ಶ್ರೀರಾಮಸಂಗದ ।
ಸೊದೆಯ ಸೋನೆಗೆ ತೊಯ್ದು ಭರತನು ವಿಪಿನದಿಂ ಪೊರಟು ॥

ಮುದದಿ ನಂದಿಗ್ರಾಮ ಸೇರುತ ।
ಹೃದಯದೊಲುಮೆಯ ಪಾದುಕೆಯ ಸ ।
ನ್ನಿಧಿಗೆ ಪಟ್ಟವಗಟ್ಟಿ ಸೇವಕತನದಿ ದಿನಗಳೆದ ॥ ೫-೭೭ ॥

॥ **ಕಂದ** ॥
ಅನುಜಾತನಾಗಿ ಸಿಂಹಾ ।
ಸನವೊಲ್ಲೆನು ರಾಮ ಪಾದುಕೆಗಳೆ ಕಿರೀಟಂ ॥
ಇನಿತೆಂದಾ ಭರತನ ಜೀ ।
ವನದರ್ಶನ ಯಕ್ಷಗಾನದ ಮಹಾಕಾವ್ಯಂ ॥ ೫-೭೮ ॥

***

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೩
ಪಂಚವಟಿ

ಪಾತ್ರಪಟಲ

ಶ್ರೀರಾಮ

ಲಕ್ಷ್ಮಣ

ಸೀತಾದೇವಿ

ಅತ್ರಿಮುನಿ

ಅನಸೂಯೆ

ವಿರಾಧ

ತುಂಬುರ

ಅಗಸ್ತ್ಯ

ಜಟಾಯು

ಮುನಿಗಳು

ಚಂದ್ರನಖಿ

ಪಂಚವಟಿ

॥ **ಚಂಪಕಮಾಲಾವೃತ್ತ** ॥
ವಿಪಿನದೆ ರಾಮಚಂದ್ರಮನು ಜಾನಕಿಲಕ್ಷ್ಮಣರೀರ್ವರೊಂದಿಗಾ
ತಪಸಿಗಳಾಶ್ರಮಂಗಳನೆ ದರ್ಶಿಸಿ ಮೇಣವರಾಶಿಷಂಗಳಂ
ಗುಪಿತದ ಮಂತ್ರವಿದ್ಯೆಗಳನುಂ ಪಡೆದತ್ರಿಮಹಾಮುನೀಂದ್ರ ವಾ
ಸಿಪ ನಿಜಪುಣ್ಯದಾಲಯವ ಪೊಕ್ಕನು ನಿರ್ಮಲಭಕ್ತಿಭಾವದೊಳ್ ॥ ೬–೧॥

॥ **ಸೌರಾಷ್ಟ್ರ–ತ್ರಿವುಡೆ** ॥
ಅತ್ರಿಸತಿಯನಸೂಯೆ ದನಿಗೇ ।
ಳ್ದತ್ತ ಕಡೆ ತಿರುಗುತ್ತ ಬಂದಳು ।
ಎತ್ತಣದಿ ಕಾನನಕೆ ಬಂದಿರೆ ।
ನುತ್ತ ಕೇಳೆ ॥ ೬–೨ ॥

ಮಾತೆ ರಾಮನು ನಾನು ಲಕ್ಷ್ಮಣ ।
ನೀತನೆನ್ನಯ ಸಹಜ ದಶರಥ ।
ಜಾತನಾಗಿಹೆನೆನ್ನ ಭಾರ್ಯೆಯು ।
ಸೀತೆಯಿವಳು ॥ ೬–೩ ॥

ಬಾ ಮಗಳೆ ವೈದೇಹಿ ಬಾ ಬಾ ।
ರಾಮಚಂದ್ರನೆ ಲಕ್ಷ್ಮಣಾಂಕನೆ ।
ಪ್ರೇಮದತಿಥಿಗಳಾಗಿ ಬಂದಿರೆ ।
ಕ್ಷೇಮದಿಂದ ॥ ೬–೪ ॥

॥ **ಕೇದಾರಗೌಳ– ಅಟ** ॥
ಆಗ ಸಂಜೆಯ ಹೊತ್ತು ಆಗಮಿಸಿದನತ್ರಿ ।
ಯೋಗಿವರನು ಕುಟಿಗೆ ॥
ರಾಘವ ಸೌಮಿತ್ರಿ ಸೀತೆಯರಿಗೆ ಶುಭ ।
ವಾಗಲೆನ್ನುತ ಹರಸೆ ॥ ೬–೫ ॥

ದಂಡಕಾರಣ್ಯವು ಭಂಡ ರಕ್ಕಸ ತಾಣ ।
ಪುಂಡರೀಕಾಕ್ಷ ಕೇಳು ॥
ಚಂಡಶಿಲೆಯು ಟಂಕಗೊಂಡಾಗ ಮಾತ್ರವೆ ।
ಕಂಡವರಿಗೆ ಶಿಲ್ಪವು ॥ ೬-೬ ॥

ಕ್ಷಣದಿ ಮೈಥಿಲಿಯು ಕಂಪಿಸಲಾಗ ಕಾಣುತ್ತ ।
ಅನಸೂಯೆ ಧೈರ್ಯ ಪೇಳಿ ॥
ಘನ ಪಾತಿವ್ರತ್ಯಶಕ್ತಿಯನುಪದೇಶಿಸಿ ।
ಮನಪುಷ್ಪ ಮುಡಿಸಿದಳು ॥ ೬-೭ ॥

ವಚನ: ರಾಮಲಕ್ಷ್ಮಣ ಸೀತೆಯರ್ ಬೀಳ್ಗೊಂಡು ಮುಂದಕೆ ನಡೆದರು –

॥ **ವಾರ್ಧಕ** ॥
ಅನಿತರೊಳಗಾ ದಂಡಕಾರಣ್ಯ ಕುಣಿದಂತೆ ।
ಘನಗಜದ ತೊಗಲುಟ್ಟ ಕಾರ್ಗಪ್ಪು ಮೆಯ್ಯಿಂದೆ ।
ತೊನೆದುತೂಗುವ ದೀರ್ಘಕರದಿಂದೆ ಭರದಿಂದೆ ರಾಕ್ಷಸ ವಿರಾಧ ಬಂದು ॥
ಮುನಿಕುಮಾರರನೆಲ್ಲ ಬೆನ್ನಟ್ಟಿ ಬೆದರಿಸುತ ।
ಜನಕಜೆಯನೆತ್ತಿ ಮುಳ್ಮುಡಿಯ ಮೇಲಿರಿಸುತ್ತ ।
ಬನವೆ ಬಾಯ್ಬಿಡುವಂತೆ ಭೀಕರದಿ ಭೋರ್ಗರೆದು ನುಡಿದ
ದಶರಥಸುತರಿಗೆ ॥ ೬-೮ ॥

॥ **ನಾದನಾಮಕ್ರಿಯೆ–ಆಟ** ॥
ಅಮಮ ಜವ್ವನಿಗರೆ ಜಟೆಯೇಕೆ । ಇಂತು
ನಿಮಗೆ ವಲ್ಕಲವೇಷ ಸಟೆಯೇಕೆ ॥
ಸಮೆದ ನಾರುಡೆಯೇಕೆ ಶರವೇಕೆ । ನೀವು
ಪ್ರಮದೆಯೊಂದಿಗೆ ಇಲ್ಲಿ ಬರಲೇಕೆ ॥ ೬-೯ ॥

ತರಳ ಲಕ್ಷ್ಮಣನಾಗ ಬಂದನು । ಎಚ್ಚ
ಗರುಡವೇಗದ ಸರಳೊಂದನು ॥
ದುರುಳನ ಮುಕ್ಕಿಪೆ ಮಣ್ಣನು । ಎಂದು
ಕುರುಡುಗೊಳಿಸಿದನು ಕಣ್ಣನು ॥ ೬-೧೦ ॥

ಮೃತ್ಯುರೂಪದ ಮುಷ್ಟಿಯಿಂದಲಿ । ಖಳ
ನೊತ್ತಿ ಗುದ್ದಿದ ಖತಿಯಿಂದಲಿ ॥
ಮತ್ತೆ ಬಾಲಕರನು ಕೈಯಲಿ । ತಾನು
ಪೊತ್ತುಕೊಂಡೋಡಿದ ವನದಲ್ಲಿ ॥ ೬–೧೧ ॥

ವಚನ: ಆಗ ಸೀತಾಮಾತೆ ದುಃಖಿಸಿದಳೆಂತು ಎಂದರೆ–

॥ **ಆನಂದಭೈರವಿ–ಏಕ** ॥
ಬೇಡಿಕೊಂಬೆ ರಾಕ್ಷಸೇಂದ್ರ ।
ಕಾಡಬೇಡ ಕೈಯ ಮುಗಿವೆ ।
ನಿನ್ನನು । ರಕ್ಷಿ । ಸೆನ್ನನು ॥ ೬–೧೨ ॥

ಕೊಲ್ಲಬೇಡ ಕಾವುದಣ್ಣ ।
ಕಲ್ಲುಮನವ ಬಿಟ್ಟು ಎನ್ನ ।
ಒಯ್ಯದೆ । ಮತ್ತೆ । ಕೊಯ್ಯದೆ ॥ ೬–೧೩ ॥

ವಚನ: ಅನಿತರೊಳಗಾ ವಿರಾಧನಂ ರಾಮಲಕ್ಷ್ಮಣರಿಂತು
ಭಂಗಿಸಿದರ್ –

॥ **ಭೈರವಿ–ಝಂಪೆ** ॥
ಎಡಬಲದ ಕರಗಳಂ । ಕಡಿದು ಬಿಸುಡಲ್ಕಾಗ ।
ಕಡುನೆತ್ತರಿನ ನಡುವೆ । ನುಡಿದ ಗಂಧರ್ವ ॥ ೬–೧೪ ॥

ತುಂಬುರನು ನಾನಿಹೆನು । ರಂಭೆಯಿಂದಲಿ ಶಾಪ ।
ತುಂಬಿರ್ದ ಈ ನನ್ನ । ಡಿಂಬವನು ತರಿದೆ ॥ ೬–೧೫ ॥

ಮಂಗಳಾತ್ಮಕನೆ ಶರ । ಭಂಗಮುನಿಯಾಶ್ರಮವು ।
ಕಂಗೊಳಪುದಿಲ್ಲೆ ಗಿರಿ । ಶೃಂಗ ಸೇರುವುದು ॥ ೬–೧೬ ॥

ವಂದಿಪೆನು ಶ್ರೀರಾಮ । ಚಂದ್ರ ಜಯಜಯ ನಿನಗೆ ।
ಮುಂದಹುದು ಸಕಲಶುಭ । ವೆಂದು ಮರೆಯಾದ ॥ ೬–೧೭ ॥

॥ **ಸಾಂಗತ್ಯ-ರೂಪಕ** ॥
ಗಂಧರ್ವನೆಂದ ಮಾತನು ಕೇಳಿ ರಘುವರ ।
ಬಂದನು ಶರಭಂಗಾಶ್ರಮಕೆ ॥
ಕುಂದಿರ್ಪ ದೇಹಚರ್ಮಾಸ್ಥಿಮಾತ್ರನ ಕಂಡು ।
ವಂದಿಸಿದನು ಭಕ್ತಿಯಿಂದ ॥ ೬-೧೮ ॥

ತಂದೆಯಾಣತಿಯಂತೆ ಬಂದೆನೆಂದರಿಯದೆ ।
ನೊಂದವರನು ಪಾಲಿಸುವರೆ ॥
ಕಂದನೀತನು ದಸ್ಯುವೃಂದವ ತರಿಯಲ್ಕೆ ।
ತಂದನೆಂಬುದನು ಲಾಲಿಪುದು ॥ ೬-೧೯ ॥

॥ **ಭಾಮಿನಿ** ॥
ಇಂತು ಕೆಲದಿನವುರುಳಿ ಪೋಗಲ ।
ನಂತರದಿ ಶರಭಂಗ ಗತಿಸಲು ।
ಮುಂತೆಸಗಿ ಮುನಿಗಪರಕರ್ಮಂಗಳನು ಸಾಂಗದೊಳು ॥
ಅಂತರಂಗದೊಳವನ ನೆನೆದು ವ ।
ನಾಂತರವ ಪೊಗುವಾಸೆಯಿಂದಲಿ ।
ಪಂತಿದೇರನ ಸುತನು ಚರಿಸಿದ ವಿಪುಲಕಾನನವ ॥ ೬-೨೦ ॥

ವಚನ: ಮುಂದೆಮುಂದೈತಂದು ಅಗಸ್ತ್ಯಾಶ್ರಮಮಂ ಪೊಕ್ಕರು –

॥ **ಕೇದಾರಗೌಳ-ಅಟ** ॥
ಇಲ್ವಲ ವಾತಾಪಿಯೆಂಬೀರ್ವರನು ಹಿಂದೆ ।
ಸೊಲ್ಲಡಗಿಸಿದಗಸ್ತ್ಯ ॥
ಬಲ್ಲಿದ ಮುನಿಪನಾಶ್ರಮವನ್ನು ಸೇರುತ್ತ ।
ಸಲ್ಲಿಸಿದರು ನಮನ ॥ ೬-೨೧ ॥

ಧನ್ಯನಾದೆನು ರಾಮ ನಿನ್ನಾಗಮನದಿಂದ ।
ಎನ್ನಾಶ್ರಮವು ಪಾವನ ॥
ಇನ್ನು ತೆಂಕಣನಾಡು ಹೊನ್ನಾಗಿ ಮೆರೆಯುತ್ತ ।
ಬನ್ನವಾಗುವುದು ದೂರ ॥ ೬-೨೨ ॥

ಮುಂದಣ ವನವಾಸ ಕಳೆಯೆ ನೆಮ್ಮದಿತಾಣ ।
ವೊಂದನ್ನು ಬೆಸಸುವುದು ॥
ವಿಂಧ್ಯದಕ್ಷಿಣಭಾಗ ಸುಂದರ ಸುಖಭೂಮಿ ।
ಎಂದನು ರಾಮಚಂದ್ರ ॥ ೬–೨೩ ॥

ಭೀತಿದೋರುವ ದಂಡಕಾರಣ್ಯದೊಳು ಶಾಂತಿ ।
ಮಾತೆಂತು ನಿನಗೆ ಧೀರ ॥
ನಾತಿದೂರದಿ ಪಂಚವಟಿಯೆಂಬ ಸ್ಥಳವಿದೆ ।
ನೀತಿಯ ಸಾರು ಮುಂದೆ ॥ ೬–೨೪ ॥

॥ **ಸೌರಾಷ್ಟ್ರ–ತ್ರಿವುಡೆ** ॥
ಅಕ್ಷಯದ ತೂಣೀರ ಧನುಶರ ।
ರಕ್ಷೆಯಂ ಕರುಣಿಸಿದ ದನುಜರ ।
ಶಿಕ್ಷಿಸುವುದೆಂದೆನುತ ಕಳುಹಿದ ।
ದಕ್ಷಿಣದೆಡೆ ॥ ೬–೨೫ ॥

ಕೊರಳಸೆರೆ ಬಿಗಿದಿರುವ ಮುನಿಪನ ।
ಚರಣಕಾನತರಾಗಿ ಪೊರಟರು ।
ಪೊನಲು ಗೋದಾವರಿಯ ತೀರದ ।
ಬನದ ನಡುವೆ ॥ ೬–೨೬ ॥

ಬಿಸಿಲು ನೆಳಲಿನ ರಂಗವಲ್ಲಿಯ ।
ಪಸುರುವುಲ್ಲಿನ ಪಚ್ಚೆಪಾಸಿನ ॥
ಕುಸುಮಶೋಭಿತ ಪಂಚವಟಿ ರಾ ।
ಜಿಸಿತು ಕಣ್ಗೆ ॥ ೬–೨೭ ॥

ವಟಶಿರಾಗ್ರದಿ ಕುಳಿತುಕೊಂಡಾ ।
ತಟವನೀಕ್ಷಿಸುತಿರುವ ವಿಹಗನ ।
ಕುಟಿಲವೇನೆಂದೆನುತ ತಿಳಿಯಲು ।
ದಿಟದಿ ಕರೆದು ॥ ೬–೨೮ ॥

॥ **ಸಾರಂಗ–ಆಟ** ॥
ಯಾರಯ್ಯ ಪಕ್ಷಿರಾಜ ॥ ಸೌಂದರ್ಯ ವೃ ।
ಕ್ಷಾರೂಢ ದಿವ್ಯತೇಜ ॥
ದೂರದೂರಿಂದ ನೀ । ಹಾರಿಬಂದಿಹೆಯೇನು ।
ಘೋರವನದೊಳಿರ್ಪ । ಕಾರಣ ತಿಳಿಸಯ್ಯ ॥ ಪ ॥

ಮೋದದಿಂ ಕೇಳು ನೀನು ॥ ದಶರಥಸಖ ।
ನಾದ ಜಟಾಯು ನಾನು ॥
ಆ ಧೀರ ಸಂಪಾತಿ । ಸೋದರನಿಹೆ ಮೇಣು ।
ಸಾದರದೊಳು ನಿಮ್ಮ । ಕಾದುಕೊಂಡಿರುವೆನು ॥ ೬–೨೯ ॥

ಖಗರಾಜ ನೀ ನಮಗೆ ॥ ಬಾಂಧವನಾಗಿ ।
ಮುಗಿಲಬಟ್ಟೆಯ ಬೇಹಿಗೆ ॥
ಪಗಲಿರುಳೊಳಗಿದ್ದು । ಬಗೆಗೊಟ್ಟು ಕಾಪಾಡು ।
ಇಗೊ ವಂದಿಸಿದೆವೆಂದು । ಮುಗುದರಾಡಿದರಂದು ॥ ೬–೩೦ ॥

॥ **ದ್ವಿಪದಿ** ॥
ಪುಣ್ಯಗೋದಾವರಿಯ ಪಂಚವಟಿಸ್ಥಳದಿ ॥
ಪರ್ಣಕುಟಿಯಂ ರಚಿಸಿಕೊಂಡರಾ ದಿನದಿ ॥ ೬–೩೧ ॥

ಬನ್ನಿಗಂಬವ ಪೂಡಿ ಬಿದಿರತೋಲೆಮಾಡಿ ॥
ತಣ್ಣೆಲೆಗಳಂ ಪೊದಿಸಿ ತಡಿಕೆಕದಕೂಡಿ ॥ ೬–೩೨ ॥

ಕಂದಮೂಲಾಹಾರಗಳನು ಸೇವಿಸುತ ॥
ಸಂದದಿನಗಳ ಮನದೊಳೆಣಿಸಿ ಮುದಗೊಳುತ ॥ ೬–೩೩ ॥

॥ **ಕಾಂಭೋದಿ–ಝುಂಪೆ** ॥
ಮತ್ತೊಂದು ದಿವಸದೊಳು । ಕಿತ್ತಡಿಗಳಾಗಮಿಸಿ ।
ಪೃಥ್ವಿಪತಿ ರಾಮನೊಳು । ಬಿತ್ತರಿಸಲಿಂತು ॥
ಸುತ್ತಣ ತಪೋವನದಿ । ಧೂರ್ತರಾಕ್ಷಸರಿಹರು ।
ಸತ್ವಸಾಹಸದಿಂದ । ಕತ್ತರಿಸಿ ಬಿಸುಡು ॥ ೬–೩೪ ॥

ಮೊನ್ನೆ ಸಂಜೆಯ ಹೊತ್ತು । ಜನ್ನಸಂಪದಕಾಗಿ ।
ಸಣ್ಣಮಕ್ಕಳು ಬೆಟ್ಟ । ವನ್ನು ಏರಿರಲು ॥
ತಿಣ್ಣಭುಜಬಲರಾಗ । ಬೆನ್ನಟ್ಟಿ ಬಡಿದರೈ ।
ನಿನ್ನನೇ ನಂಬಿಹೆವು । ಇನ್ನು ಕಾಪಾಡು ॥ ೬–೩೫ ॥

॥ **ಭಾಮಿನಿ** ॥
ಸತ್ಯನಿಧಿ ತಾನಭಯವಚನವ ।
ನಿತ್ತು ಕಳುಹಿದ ಮುನಿವರೇಣ್ಯರ ।
ಮತ್ತೆ ಸೌಮಿತ್ರಿಯನು ಹತ್ತಿರ ಕರೆದು ಬೆಸಸಿದನು ॥
ಸುತ್ತಣದ ವಿಪಿನಾಂತರಾಳವ ।
ಸುತ್ತಿ ಬರುವುದು ರಾಕ್ಷಸರ ನಡೆ ।
ಯೆತ್ತಣಿಹುದೆಂದೆನುತ ತಿಳಿವುದೆನುತ್ತ ಪೇಳಿದನು ॥ ೬-೩೬ ॥

ವಚನ: ಆಗಳಾ ಚಂದ್ರನಖಿ ಬಂದಳು –

॥ **ಮಧ್ಯಮಾವತಿ-ತ್ರಿವುಡೆ** ॥
ಮಂಜಿನೊಲು ಪಸರಿಸಿದ ಮುಗಿಲದು ।
ಮಂಜುಳಾಕೃತಿವೆತ್ತು ರಾಗವು ।
ರಂಜಿಸುವ ಬಿನ್ನಾಣದಂದದಿ ।
ಕಂಜಲೋಚನೆ ಬಂದಳು ॥ ೬-೩೭ ॥

ಕೋಸಲೇಶ್ವರ ನಿನಗೆ ಸ್ವಾಗತ ।
ದೇಶ ದಕ್ಷಿಣಕತಿಥಿ ನೀನಹೆ ।
ಭಾಷೆ ಬೇರಿದೆ ಚಂದ್ರನಖಿ ಲಂ ।
ಕೇಶ ಭಗಿನಿಯು ನಾನಿಹೆ ॥ ೬-೩೮ ॥

॥ **ಕೇದಾರಗೌಳ-ಆಟ** ॥
ರಾವಣೇಶನ ತಂಗಿ ತಡವಾಗಿ ಬಂದೆ ನೀ ।
ನೋವಿ ಸ್ವಾಗತಿಸಲೆಮ್ಮ ॥
ಸೇವಿಸಲಾತಿಥ್ಯ ಭಾಗ್ಯವಿಲ್ಲವು ನಾಳೆ ।
ನಾವು ಬೀಳ್ಕೊಂಡೆವಮ್ಮ ॥ ೬-೩೯ ॥

ಕರೆದ ನೆಂಟರ ಮನೆಯೊಳಗೆ ಕೈಸೆರೆ ನಾವು ।
ಬರಿದುಂಡು ಬಹವರೆಗೆ ॥
ಪರಿಪರಿಯೊಳಗುಪಚರಿಸಲಲ್ಲವು ನಿಮ್ಮ ।
ಮರಳಿ ಪೋಗುವಿರಿ ಎಂತು ॥ ೬-೪೦ ॥

ದಾಕ್ಷಿಣ್ಯವಿರದ ಬಲಾತ್ಕಾರ ಸತ್ಕಾರ ।
ದಾಕ್ಷಿಣಾತ್ಯರ ಆತಿಥ್ಯ ॥
ದೀಕ್ಷಾಬದ್ಧರಿಗೇಕೆ ದಿವ್ಯಭೋಜನವಿಂಥ ।
ರಾಕ್ಷಸಪ್ರೀತಿ ಸಾಕು ॥ ೬-೪೧ ॥

ಊಟದೊಳಗೆ ಯುದ್ಧದಾಟದೊಳಗೆ ಬಗೆ ।
ಬೇಟದೊಳಗೆ ಛಲವು ॥
ಮೀಟುಗೊಂಡರೆ ಮೈತ್ರಿಕೂಟ ಸಂಜನಿಪುದು ।
ನೋಟನೋಂಪಿಗೆ ಸಲ್ಲದೆ ॥ ೩–೪೨ ॥

॥ **ಕೇದಾರಗೌಳ–ಝಂಪೆ** ॥
ತರುಣಿಮಣಿ ನೋಂಪಿಮುಡಿಗೆ ॥ ನಿಜಮೈತ್ರಿ ।
ಪರಿಮಳದ ಪುಷ್ಪ ಬೆಡಗೆ ॥
ಪರಮಸಂಪ್ರೀತಿ ಮೇಲು ॥ ಎಂದೆನುತ ।
ದೊರೆತನವ ತೊರೆದೆ ಕೇಳು ॥ ೩–೪೩ ॥

ನಾಥನಿಲ್ಲದ ನನ್ನನು ॥ ವರಿಸಿದರೆ ।
ಸೋತು ರಮಿಸುವೆ ನಿನ್ನನು ॥
ಪಾತಾಳಯುದ್ಧದಲ್ಲಿ ॥ ಪತಿಮಡಿಯೆ ।
ಕಾತರಿಸಿ ಬಂದೆನಿಲ್ಲಿ ॥ ೩–೪೪ ॥

ಅರುಹಬೇಡೆಲೆ ಅನಾರ್ಯೆ ॥ ರಾಕ್ಷಸಿಯೆ ।
ದುರುಳೆ ನೀನನ್ಯಭಾರ್ಯೆ ॥
ಇರುವಳೆನಗಿಲ್ಲಿ ರಮಣಿ । ಚೆಲುವಿಕೆಗೆ ।
ಕೊರತೆಯಿಲ್ಲದ ಅರಗಿಣಿ ॥ ೩–೪೫ ॥

ನಿನ್ನ ಸತಿ ಪೋಲ್ವರಿಲ್ಲ ॥ ಒಪ್ಪಿದೆನು ।
ಎನ್ನಣ್ಣ ಮಡದಿ ಸಲ್ಲ ॥
ಇನ್ನೆಲ್ಲ ಭೇದವೇಕೆ ॥ ದಕ್ಷಿಣದ ।
ಹೆಣ್ಣೊಂದ ಸವಿ ಪರಾಕೆ ॥ ೩–೪೬ ॥

॥ **ಭೈರವಿ – ಏಕ** ॥
ನಿಲು ನಿಲು ನುಡಿಯದಿರಿನ್ನು ॥ ನೀ
ಬಲು ಸಲುಗೆಯ ಬೆಲೆವೆಣ್ಣು ॥
ತೊಲಗಾಕಡೆ ರಾಕ್ಷಸಿಯೆ ॥ ನಿಜ
ದೊಲವಿಗೆ ನೀ ಕೂರಸಿಯೆ ॥ ೩–೪೭ ॥

ತಮ್ಮನೆ ನೋಡೀ ರತಿಯ ॥ ಈ
ಗೆಮ್ಮೊಳು ನುಡಿಯುವಳತಿಯ ॥
ಸುಮ್ಮಗೆ ಕೊಡು ಮರ್ಯಾದೆ ॥ ಕಳೆ
ಯೊಮ್ಮೆಗೆ ಮದುವೆಯ ಬಾಧೆ ॥ ೩–೪೮ ॥

ವಚನ: ಅಣ್ಣನಾಜ್ಞೆಯ ತಿಳಿದು ಲಕ್ಷ್ಮಣಂ ತತ್ಕ್ಷಣದಿ –

ಕತ್ತಿಯ ಬೀಸುತ ತೋರೆ ॥ ಸರಿ
ಕೆತ್ತಿರಲಾಕೆಯ ಮೋರೆ ॥
ಮತ್ತೇರಿರೆ ನಭಧ್ವನಿಯು ॥ ಅಡಿ
ಕಿತ್ತಳು ಮಾಯಾವಿನಿಯು ॥ ೬–೪೯ ॥

॥ **ಕಂದ** ॥
ಪ್ರಣಯಾಭಿಲಾಷೆಯಿಂದಾ ।
ದನುಜಾಂಗನೆ ಚಂದ್ರನಖಿಯು ಬಂದಿರೆ ಹಸಿತಾ ॥
ನನದಿ ನಿರಾಕರಿಸಿದ ರಘು ।
ಜನ ದರ್ಶನ ಯಕ್ಷಗಾನದ ಮಹಾಕಾವ್ಯಂ ॥ ೬–೫೦ ॥

***

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಕಿಷ್ಕಿಂಧಾಸಂಪುಟಂ

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೭
ಮಾಯಾಮೃಗಂ

ಪಾತ್ರಪಟಲ

ರಾವಣ

ಮಂಡೋದರಿ

ಚಂದ್ರನಖಿ

ಮಾರೀಚ

ಶ್ರೀರಾಮ

ಲಕ್ಷ್ಮಣ

ಸೀತಾದೇವಿ

ಮಾಯಾಮೃಗ

ಸನ್ಯಾಸಿರಾವಣ

ಜಟಾಯು

ಮಾಯಾಮೃಗಂ

॥ **ವಾರ್ಧಕ**॥
ಮುರಿದ ಬೇಟಕೆ ಕೆರಳಿದಾ ಚಂದ್ರನಖಿ ರಕ್ತ ।
ಸುರಿವ ಮೂಗನ್ನೊರೆಸಿ ಪಡಿಗೆಯ್ಮೆಗುಜ್ಜುಗಿಸಿ ।
ಖರದೂಷಣತ್ರಿಶಿರರಂ ಕಂಡು ದೂರಿದಳು ತನಗಾದ ಶರವಿಘಾತ ॥
ನೆರಹುತಾಕ್ಷಣ ಸೈನ್ಯ ರಾಮಲಕ್ಷ್ಮಣರೊಡನೆ ।
ಧುರವಗೈಯಲು ಮೃತ್ಯುವಶರಾದರನಿಬರುಂ ।
ಭರದಿ ದಳ್ಳುರಿ ಬಾನ್ಗೆ ನೆಗೆವಂತೆ ಧಾವಿಸಿದಳಗ್ರಜಗೆ ತಿಳುಹಲೆಂದು ॥ ೭-೧ ॥

॥**ಸೌರಾಷ್ಟ್ರ-ತ್ರಿವುಡೆ** ॥
ಇತ್ತ ಲಂಕಾಪುರದಿ ರಾವಣ
ಕೃತ್ತಿವಾಸನ ನೆನೆದು ಸಭೆಯನು
ಮತ್ತೆ ಮುಗಿಸುತ ಮರಳೆ ಸಂಜೆಯ
ಹೊತ್ತಿನಲ್ಲಿ ॥ ೭-೨ ॥

ಕಿರುನಗೆಯವೆರಸುತ್ತ ತಂಬುಲ
ಮೆರೆವಧರ ಕೆಂಪೆಸೆಯೆ ಹೃದಯ
ಸ್ಫುರಿತ ರಾಗದಿ ಮಡದಿ ಮಂಡೋ
ದರಿಯ ಕರೆದ ॥ ೭-೩ ॥

ಲಾಲಿಸೆಲೆ ಕಮಲಾಯತಾಕ್ಷಿಯೆ
ಮೇಲೊದಗಿ ಬಂದಿಹುದು ಕಾರ್ಯವು
ವೇಲವನಕೆ ವಿಮಾನಯಾತ್ರೆಯು
ನಾಳೆಗಿಹುದು ॥ ೭-೪ ॥

॥**ಕೇದಾರಗೌಳ-ಅಟ**॥
ದಾನವಕುಲಶಿರೋಮಣಿ ರಾವಣೇಶ್ವರ ।
ಏನದು ರಾಜಕೀಯ ॥
ಸಾನುರಾಗದ ನಮ್ಮ ಔತಣ ಬಿಟ್ಟು ಪ್ರ ।
ಯಾಣಿಪುದೇಕೆ ಪೇಳು ॥ ೭-೫ ॥

ಇಂದ್ರನುದ್ಧಟತನವೇನು ವಿತ್ತೇಶಗೆ ।
ಬಂದಿತೆ ಅವಿನಯವು ॥
ಪೊಂದಿತೆ ಯಮಗೆ ಗರ್ವಾಂಧತೆ ಭೂಪಾಲ ।
ವೃಂದಕೆ ಅವಿಧೇಯತೆ ॥ ೭-೬ ॥

ಪಿರಿಯರ್ಗೆ ಪಿರಿಯಕೋಟಲೆ ಪಿರಿದಾಪುದೆ ।
ಕಿರಿಯರ ಕಿರುಕುಳಮೆ ॥
ಕರಿಯ ಲೆಕ್ಕಿಪನೇನು ಮೃಗರಾಜ ನುಸಿಗಳ ।
ಕಿರಿಕಿರಿಗುರಿವನಲ್ತೆ ॥ ೭-೭- ॥

ದಶರಥಸುತ ರಾಮನೆಮ್ಮ ಜನಸ್ಥಾನ ।
ದುಸಿರನೆ ಕೊಂಡನಂತೆ ॥
ಹೊಸಕಿಹಾಕಿದ ಖರ ದೂಷಣಾದ್ಯರನೆಂಬ ।
ಪೊಸವಾರ್ತೆ ಬಂತು ಕಾಂತೆ ॥ ೭-೮ ॥

॥ **ಭೈರವಿ-ಝಂಪೆ** ॥
ಬರಿದೆ ಬಿಟ್ಟಪೆನೇನೆ ಭಗಿನಿಯಂ ಭಂಗಿಸಿದ ।
ಪುರುಷರೀರ್ವರ ಕೊಂದುತಿನದೆ ನಾನು ॥
ತರುಣಿ ಸೀತೆಯ ತಂದು ನಿನಗೆ ದಾಸಿಯ ಗೈವೆ ।
ವರಸ್ವಯಂವರದ ಕಥೆ ಸ್ಮರಿಸು ನೀನು ॥ ೭-೯ ॥

ಬಿಲ್ಲನೆತ್ತುವ ಕತದಿ ತಪವ ಚರಿಸುತ ಶಿವನ ।
ಬಲ್ಮೆಯ ವರಂಗಳಂ ಪಡೆದು ಬಂದೆ ॥
ಅಲ್ಲಿ ಪೋಪನಿತರೊಳೆ ರಾಮ ಜಾನಕಿಯ ಕರ ।
ಪಲ್ಲವವ ಪಿಡಿದ ಸೋಜಿಗವು ಮುಂದೆ ॥ ೭-೧೦ ॥

ರಕ್ಕಸರು ನಾವಂತೆ ಅವರಾರ್ಯಕುಲವಂತೆ ।
ಮುಕ್ಕಿ ಮಾಂಸವ ರಕ್ತ ಕುಡಿವೆವಂತೆ ॥
ಲಕ್ಕಣದ ಪೆಣ್ಗಳಿಗೆ ಕೋರೆದಾಡೆಗಳಂತೆ ।
ಹೊಕ್ಕುಬಳಕೆಯ ನಂಟು ಸಲ್ಲದಂತೆ ॥ ೭-೧೧ ॥

ಹತ್ತು ತಲೆ ನನಗೆಂದು ಚಿತ್ರಿಸುವ ಪರಿಯಂತೆ ।
ಹತ್ತುರಥ ಹತ್ತುವನೆ ದಶರಥದೊರೆ ॥
ಮತ್ತೆ ವಾನರಧ್ವಜರು ದಿಟದಿ ಕೋತಿಗಳಂತೆ ।
ಹೊತ್ತುಬಳಿಯವರ ಮೆಯ್ ಕುದಿವುದುಂಟೆ ॥ ೭-೧೨ ॥

॥ **ಭಾಮಿನಿ** ॥
ಸೀತೆಗೋಸುಗಮೀ ಶರೀರದಿ ।
ನಾ ತಪದಿ ಪಡೆದಿರುವ ಶಕ್ತಿಯ ।
ಸೀತೆಗಾಗಿಯೆ ತವಿಸಿ ತೋರುವೆ ಶಿವನ ಪದದಾಣೆ ॥
ಆತಪನ ಕುಲಜರಿಗೆ ನಮ್ಮೀ ।
ಯಾತುಧಾನರ ಕುಲದ ಸಂಸ್ಕೃತಿ ।
ರೀತಿ ರುಚಿಯುಣಬಡಿಸಿ ತೋರುವೆನೆಂದು ಪೊರವಂಟ ॥ ೭-೧೩ ॥

॥ **ದ್ವಿಪದಿ** ॥
ಮಚ್ಚರದ ಕಿಚ್ಚೆದ್ದ ಕೆಚ್ಚುನುಡಿ ಕೇಳಿ ।
ಮುಚ್ಚಿ ಕಂಬನಿಮಿಡಿದು ಶೋಕಮಂ ತಾಳಿ ॥ ೭-೧೪ ॥

ತನ್ನಂತರಂಗವನು ತವಿಸಿಕೊಂಡವಳು ।
ಮುನ್ನಡೆದು ಮನೆಯ ದೇಗುಲವ ಸಾರಿರಲು ॥ ೭-೧೫ ॥

ಚಂದ್ರನಖಿಯಿರ್ಪೆ ಏಕಾಂತಕ್ಕೆ ಬಂದು ।
ಇಂದ್ರಾರಿಜನಕ ಸಂತೈಸಿದನು ನೊಂದು ॥ ೭-೧೬ ॥

॥ **ಕೇದಾರಗೌಳ- ಝಂಪೆ** ॥
ಇತ್ತ ಕೇಳೆಲೆ ಸೋದರಿ । ಹಗೆಗಾರ
ಸತ್ತುಪೋಗುವನೆಂದರಿ ॥
ಮತ್ತೆ ಮೊಗಹುತ್ತವನ್ನು । ಕಿತ್ತವನ
ಚಿತ್ತಫಣಿ ಬಿಡುವುದೇನು ॥ ೭- ೧೭ ॥

ಪೊಸನೋವ ಗಾಳಿಯಿಂದ । ಹಳೆನೋವು
ಪಸರಿಸಿದೆ ಬೆಂಕಿಯಂದ ॥
ಮುಸುಕಿದವಮಾನಕದನೆ । ಸುಲಿವೆ ಮುಯ್
ಎಸಗಿ ತಂದಪೆ ಸತಿಯನೆ ॥ ೭-೧೮ ॥

ಸುಲಭನೆಂದರಿಯ ಬೇಡ । ದಾಶರಥಿ
ಬಲುಹುಳ್ಳ ವೀರ ನೋಡ ॥
ಸಲೆ ಶಂಕೆಯಹುದು ಶಕ್ತಿ । ನೀನಿನ್ನು
ಗೆಲಬಹುದು ಬಳಸಿ ಯುಕ್ತಿ ॥ ೭–೧೯ ॥

ದೂರುನುಡಿ ಬಂದರೇನು । ಕೈತವದಿ
ನಾರಿಯಂ ಬಿಡುವರೇನು ॥
ಬೇರಿರದ ವೃಕ್ಷವಹನು । ಬೆಂಕಿಕಿಡಿ
ತೂರಿದರೆ ಬೂದಿಯಹನು ॥ ೭–೨೦ ॥

॥ **ಸಾಂಗತ್ಯ– ರೂಪಕ** ॥
ತಂಗಿ ನಿನ್ನಯ ಜಾಣ್ಮೆ ಗಂಡಸರೊಳಗಿಲ್ಲ ।
ಸಂಗತವಹುದು ಮಾತೆಂದು ॥
ಶೃಂಗ ಜನಸ್ಥಾನದೆಡೆ ಕಳುಹಿದೆ ನಿನ್ನ ।
ಇಂಗಿತವರಿತು ನಾನಂದು ॥ ೭–೨೧ ॥

ಅಣ್ಣ ಲಾಲಿಸು ಎನ್ನ ಬಿನ್ನಪವಿನ್ನೊಂದು ।
ಮುನ್ನ ಕೈಸೆರೆಯಗೊಂಡವರ ॥
ಇನ್ನು ನೀಡಿದರೆ ಭಿಕ್ಷೆಯ ಹಾಗೆ ಕೃಪೆಯಿಂದ ।
ನನ್ನಿಚ್ಛೆರತಿ ತಣಿಸುವೆನು ॥ ೭–೨೨ ॥

॥ **ವಾರ್ಧಕ** ॥
ಸೋದರಿಯ ನುಡಿಯನಾವೇಶದಿಂ ಲಾಲಿಸುತ ।
ಕಾದ ಕೋಪಕೆ ಕಾಮ ಹದಗೊಂಡು ಝರಿಯಜಲ ।
ಹಾದಿಗೊಂಡಂತೆ ಚಲಿಸಿದುದು ರಾವಣಚಿತ್ತ
ರತಿರೋಮಹರ್ಷಣದೊಳು ॥
ಮೇದು ಭಾವಜಪ್ರಾಣಪಶುಮೃತ್ಯು ಪಾಥೇಯ
ಮೋದದಿಂದಲಿ ಮೋಹಸುರೆಯೀಂಟಿ ಸಾಹಸೋ ।
ನ್ಮಾದ ಮದಿಸುವ ತೆರದಿ ಜಾನಕಿಯ ನೆನೆನೆನೆದು
ಪುಷ್ಪಕವಿಮಾನವೇರ್ದ ॥ ೭–೨೩ ॥

ವಚನ: ಹಾರಿದಂ ಕರ್ಬುರನೃಪಂ ಮಾವ ಮಾರೀಚನಂ ಕಾಂಬ
ತವಕದಿಂ –

॥ ಮಧುಮಾಧವಿ- ತ್ರಿವುಡೆ ॥
ಮೇಘಮಾರ್ಗದಿ ಕಾನನಂಗಳ ।
ಸಾಗಿ ಬರುತಿರೆ ರಾವಣಾಸುರ ।
ಪೂಗ ಕದಳೀಬನದ ಮಧ್ಯದಿ ।
ಸೋಗೆಮನೆಯನು ಕಂಡನು ॥ ೭-೨೪ ॥

ಉಕ್ಕಿ ಬಹ ಭಾವಾತಿರೇಕವ ।
ತಕ್ಕವಿಸಿಕೊಳುತಾ ಮಹಾಬಲ ।
ರಕ್ಕಸೇಂದ್ರನು ಅರುಣತೇಜದಿ ।
ಪೊಕ್ಕ ಪರ್ಣಕುಟೀರವ ॥ ೭-೨೫ ॥

ವಚನ: ಬಂದಿರ್ಪಾ ರಾವಣೇಶನಂ ಮಾರೀಚನುಪಚರಿಸಿದಂ
ಬಗೆಬಗೆಯೊಳು –

॥ ಕಾಪಿ–ಆಟ ॥
ರಕ್ಕಸವಳಿಗೆ ನೀ ಪೆರ್ಮೆ ॥ ಬಂದು
ದಕ್ಕರವಾಯ್ತು ಎನ್ನಾಶ್ರಮಕೊರ್ಮೆ ॥
ಚೊಕ್ಕಟ ತಪಸಿಗೆ ತಕ್ಕ ಸಿದ್ಧಿಯದಾಯ್ತು ।
ಮಿಕ್ಕ ಕಾರಿಯ ಪೇಳಲಕ್ಕುಮೆ ಮಹಿಮ ॥ ೭-೨೬ ॥

ಮುನಿಯಾದ ಮಾರೀಚಮಾವ ॥ ನಿನ್ನ
ಮನದಿ ಮರೆವೆನೇನು ಸ್ನೇಹಸಂಜೀವ ॥
ರಣದಿ ಮೇಣ್ ರಾಜಕಾರಣದಿ ನೀ ನೆರವಾದೆ ।
ಋಣಿಯೈಸೆ ನಿನಗಾನು ಘನಕೃಪಾಶರಧೆ ॥ ೭-೨೭ ॥

ಬಡಗ ರಾಮನು ಇಹತನಕ ॥ ನಮ್ಮ
ಬಿಡದು ತಾಟಕೆಯನ್ನು ಕೊಂದಂಥ ಮರುಕ ॥
ಜಡೆಗೆ ನಾರುಡೆಗೆ ನೀನೊಡಬಡುವುದೆ ಪೇಳು ।
ಬಿಡಬಾರದವನನ್ನು ಬಡಿವೆ ನಾನಿದಕೊಪ್ಪು ॥ ೭-೨೮ ॥

॥ ಭಾಮಿನಿ ॥
ಅಳಿಯನಾಡಿರುವಂಥ ಮರೆನುಡಿ ।
ಗಳನು ಲಾಲಿಸಿ ಮೌನದಿಂ ಬನ ।
ದೊಳಗೆ ಮಣ್ಣಾಗಿರುವ ಮಾತೆಯ ಮನದಿ ಹಂಬಲಿಸಿ ॥
ಗಳಗಳನೆ ತಾನಳುವ ಮಾವನ ।
ಖಳಶಿರೋಮಣಿ ತೆಕ್ಕೆಗೊಳಲಾ ।
ಪುಲಿಗಳೆರಡೊಂದಾಗಿ ಮುಖಮುಂಡಾಡಿದಂತಾಯ್ತು ॥ ೭–೨೯ ॥

ವಚನ: ಮಾವನಂ ಮತ್ತೆ ನುಡಿಸಿದಂ ರಾವಣನಿಂತು –

॥ ಕಲ್ಯಾಣಿ – ರೂಪಕ ॥
ದಿಕ್ಕಿಲ್ಲದವನಂತೆ ಮಾವಯ್ಯ ನೀನಿಂತು ।
ದುಃಖಿಸುವುದು ಏತಕೆ ॥
ರಕ್ಕಸಲಂಕೆಯೆ ನೆರವು ನೀಡಲು ಸಿದ್ಧ ।
ತಕ್ಕುದ ಮಾಡು ನೀನು ॥ ೭–೩೦ ॥

ಒರೆವೆನೆಂತೈ ಚಂದ್ರನಖಿಯ ನಾಸಾಭಂಗ ।
ಖರ ದೂಷಣರ ವಧೆಯ ॥
ಬರಿದೆ ತಪೋಮಗ್ನ ನಿನಗೆ ತಿಳಿವುದೆಂತು ।
ನೆರೆ ಲೌಕಿಕರ ಸಂಕಟ ॥ ೭–೩೧ ॥

ತಿಳಿದು ಸಂಗತಿಯನ್ನು ಮಾರೀಚ ಲೋಚನಂ ।
ಗಳಲಿ ಭೀತಿಯ ಛಾಯೆಯು ॥
ಸುಳಿದು ಸೂಕ್ಷ್ಮವಗೊಂಡು ಕಳವಳಗೊಳುತಾಗ ।
ಬಿಳುಪೇರಿತಾ ಮೊಗವು ॥ ೭–೩೨ ॥

॥ ನಾದನಾಮಕ್ರಿಯೆ –ಆಟ ॥
ಹೇಡಿಯಾಗದಿರಯ್ಯ ಬಲಶಾಲಿ । ಕೊಯ್ಯ
ಬೇಡ ಕರ್ಬುರಕುಲ ಗೋನಾಳಿ ॥
ಬಾಡಿದ ಮುಖವೇಕೆ ಮಾವಯ್ಯ । ಕುಲ
ಗೇಡಿಯೆನ್ನುವ ನಿಂದೆ ಸಾಕಯ್ಯ ॥ ೭–೩೩ ॥

ಮುಟ್ಟದಿರಲು ಕೆಂಡ ರತ್ನವೆ । ರಾಮ
ದಿಟ್ಟನೊಳ್ ಪುರುಷಪ್ರಯತ್ನವೆ ॥
ಕಟ್ಟಕಡೆಗೆ ಶಿಕ್ಷೆ ತಪ್ಪದು । ನಾನು
ಪಟ್ಟಪಾಡನು ಪೇಳಲಪ್ಪದು ॥ ೭–೩೪ ॥

ಬಡಗರ ಮರುಳಿಗೆ ಮಂಕಾದೆ । ದೈವ
ದಡಿಯ ನಂಬಿದ ಮೂರ್ಖನಂತಾದೆ ॥
ಬಿಡಬಾರದವನನೀ ಬಾರಿಗೆ । ನಾವು
ಕಡೆಗೆ ಕೈಯಿಕ್ಕುವ ನಾರಿಗೆ ॥ ೭–೩೫ ॥

ಹದಿಬದೆ ಸತಿಯರ ಹರಣವು । ಅಪ್ಪು
ದದರಿಂದ ಲಂಕೆಯ ಮರಣವು ॥
ಅದುಭುತವಿದೆ ಮಾಯಾಪಾಶವು । ಬೇಡ
ಇದರಿಂದ ಬದುಕು ವಿನಾಶವು ॥ ೭–೩೬ ॥

॥ **ಕಾಂಭೋದಿ– ಝಂಪೆ** ॥
ಅಹಹ ಶಿಶುಮತಿಗಳಿಗೆ ಉಸುರು ಹದಿಬದೆತನವ ।
ಬಹುತೆರದ ಕಟ್ಟುಕಥೆ ಹಿರಿಮೆಯನ್ನು ॥
ಮಹಿಯೊಳಗೆ ಕಾಣೆನಂತಹ ಪೆಣ್ಣನೆಲ್ಲಿಯೂ ।
ದಹಿಸಿದೆ ಪ್ರತಾಪಾಗ್ನಿಯಿಂ ಜಗವನು ॥ ೭–೩೭ ॥

ಪುಟ್ಟುವಾಗಲೆ ನಾನು ಪೆಣ್ಣಮೆಯ್ಯಾಸೆಯಂ ।
ತೊಟ್ಟು ಬಂದಿಹೆನದನು ಜಯಿಸಲೆಂದು ॥
ಕಟ್ಟುಗ್ರತಪದಿಂದ ಬೇಯಿಸಿದೆನಾತ್ಮಮಂ ।
ಬಿಟ್ಟುದಿಲ್ಲಾ ಪೆಣ್ಣು ಬಯಸಿತೆನ್ನ ॥ ೭–೩೮ ॥

ಕೊಚ್ಚಿಹೋದೆನು ನಾನು ಹುಚ್ಚುಹೊಳೆ ಹೊನಲಿನಲಿ ।
ಇಚ್ಚೆಗೊಳ್ಳದ ಪೆಣ್ಣ ಕಂಡೆನಿಲ್ಲ ॥
ಅಚ್ಚರಿಯ ಚಿತೆಯೇರ್ದಳಾ ವೇದವತಿ ಮತ್ತೆ ।
ಮೆಚ್ಚಿದಳು ಧಾನ್ಯಮಾಲಿನಿಯು ಎನ್ನ ॥ ೭–೩೯ ॥

ಧೀರತನ ಮೆಯ್ಸಿರಿಗೆ ಕೀರ್ತಿವೈಭವ ಸಿರಿಗೆ ।
ಮಾರುಹೋಗದ ಪೆಣ್ಣು ಜಗದೊಳಿಲ್ಲ ॥
ಚೂರಾದುದಾ ಕನಸು ಹದಿಬದೆಯ ಗೌರವವು ।
ದೂರವಾಯಿತು ಮನಸಿನಿಂದ ಮಾವ ॥ ೭–೪೦ ॥

॥ **ಸೌರಾಷ್ಟ್ರ– ತ್ರಿವುಡೆ** ॥
ರಾಮನನು ನಿಸ್ತೇಜಗೊಳಿಸಲು ।
ಭಾಮೆಯನು ತರಬೇಕು ನಿಶ್ಚಯ ।
ನೀ ಮುದದಿ ನೆರವಾಗಬೇಕೈ ।
ಪ್ರೇಮದಿಂದ ॥ ೭–೪೧ ॥

ಕನಕಮೃಗರೂಪದೊಳು ನೀನಾ ।
ಜನಕಜೆಯ ಕಣ್ಮುಂದೆ ಸುಳಿವುದು ।
ಮನದೊಳಾಶಿಸಲದನು ತಹೆನೆಂ ।
ದೆನುತ ರಾಮ ॥ ೭–೪೨ ॥

ಬರಲು ದೂರಕೆ ಸೆಳೆದು ಬನದೊಳು ।
ಚರಿಸಿ ಲಕ್ಷ್ಮಣನೆಂದು ಕೂಗೈ ।
ತರುಣಿಯನು ಕೊಂಡೊಯ್ವೆ ಲಂಕಾ ।
ಪುರಕೆ ಬೇಗ ॥ ೭–೪೩ ॥

ಬರಿದೆ ವ್ಯರ್ಥವಿದೆಂದು ತಿಳಿಯದೆ ।
ಕೊರಗಬೇಡೆಲೊ ಖರನ ರಾಜ್ಯವ ।
ಸಿರಿತನದ ಪಟ್ಟಾಭಿಷೇಕವ ।
ವಿರಚಿಸುವೆನು ॥ ೭–೪೪ ॥

ವಚನ: ದಶಶಿರನ ಕುತ್ಸಿತವ ಕೇಳಿ ಮಾರೀಚಂ ನೀತಿಯನೊರೆದನು–

॥ **ಕೇದಾರಗೌಳ– ಆಟ** ॥
ಮಂಡೆಯು ಬಲವೆಂದು ಬಂಡೆಹಾಯಲು ಬೇಡ ।
ಪುಂಡರೀಕಾಕ್ಷಿ ಶಾಪ ॥
ಕೊಂಡುಪೋಗುವುದು ಕೋದಂಡಧರನ ಕೋಪ ।
ದಂಡಧಾರಕಗೆ ಸಮ ॥ ೭–೪೫ ॥

ರಕ್ಕಸಕುಲವಿನಾಶಕ್ಕೆ ಮುಂದಡಿಯಿಟ್ಟು ।
ಸಿಕ್ಕೆ ರಾಮನ ಶರಕ್ಕೆ ॥
ಮಿಕ್ಕ ಪಟ್ಟಾಭಿಷೇಕಕ್ಕೆ ಕೈಮುಗಿವೆನು ।
ಚಿಕ್ಕೆಯ ಕೃಪೆಯನೊಲ್ಲೆ ॥ ೭-೪೬ ॥

ವಚನ: ಆ ನುಡಿಗೆ ರಾವಣಂ ಕೋಪಾನಲನೇತ್ರನಾಗಿ ಇಂತೆಂದನು –

॥ ಮಾರವಿ – ಏಕ ॥
ರಾಮಶರದಿ ಬದುಕುಳದರು ರಾವಣ ।
ನೇಮ ತಿರಸ್ಕರಿಸಿ ॥
ಈ ಮಹಿಯೊಳು ನೀನೆಂತಿಹೆನೆಂಬುದ ।
ನಾ ಮರೆಯದೆ ನೋಳ್ಪೆ ॥ ೭-೪೭ ॥

ವಚನ: ಆಗ ಮಾರೀಚಂ ಭಯದೊಳಂತೆಂದನು –

ನಿನ್ನ ಕರಂಗಳ ಕಾಲೆಂದೆನುತಲಿ ।
ಸನ್ನುತಿಸುವೆನಯ್ಯ ॥
ಇನ್ನಾ ರಾಮನ ಬಾಣದಿ ಸಾಯುವೆ ।
ನಿನ್ನಿಂದೇಕೆ ಮೃತಿ ॥ ೭-೪೮ ॥

ನಿನ್ನೀ ಆತ್ಮೋದ್ಧಾರದ ಯಜ್ಞಕೆ ।
ನನ್ನನೆ ಬಲಿಗೊಡುವೆ ॥
ಜನ್ಮದಾತೆ ನೃಪರನ್ನು ಸುಸೇವಿಪ ।
ಧನ್ಯತೆ ಎನಗಿದುವೆ ॥ ೭-೪೯ ॥

॥ ಭಾಮಿನಿ ॥
ಇಂತುಸುರೆ ಮಾರೀಚನನ್ನುರೆ ।
ಸಂತಸದಿ ತಾನಪ್ಪಿಕೊಳ್ಳುತೆ ।
ನಿಂತ ಬಾನಿನ ಬಂಡಿಯೇರುತ ಪೊರಟ ದಶಕಂಠ ॥
ಮುಂತೊದಗಿ ಬಹ ಮೃತ್ಯುರಥಕೊ ।
ಯ್ವಂತೆ ಪ್ರಾಣದ ಪಕ್ಷಿ ನಭಕೇ ।
ರ್ವಂತೆ ಪುಷ್ಪಕ ಹಾರಿಹೋಯಿತು ರಾಮನಾಶ್ರಮಕೆ ॥ ೭-೫೦ ॥

ವಚನ: ಇತ್ತ ಪಂಚವಟಿಯ ಕಾನನದೊಳ್ ಚೈತ್ರಋತು ಚೆಲುವೇರಿತು –

॥ **ಮಧುಮಾಧವಿ– ತ್ರಿವುಡೆ** ॥
ಟುವ್ವಿ ಬಾನಿಗೆ ಟುವ್ವಿ ಕಾನಿಗೆ ।
ಟುವ್ವಿ ಮಾಗಿಗೆ ಟುವ್ವಿಯು ॥
ಸುವ್ವಿ ಬಾಳಿಗೆ ಸುವ್ವಿ ಗಾಳಿಗೆ ।
ಸುವ್ವಿ ಸುಗ್ಗಿಗೆ ಸುವ್ವಿಯು ॥ ೭–೫೧ ॥

ಚುಕ್ಕಿಹೂವಿಗೆ ಹಕ್ಕಿಹಾಡಿಗೆ ।
ಚಿಕ್ಕಕೋಗಿಲೆ ಟುವ್ವಿಯು ॥
ಪುಕ್ಕ ಕುಣಿಸುವ ಸಿಳ್ಳೆಸಿಪಿಲೆಗೆ ।
ಉಕ್ಕಿದಾ ಸುಖ ಸುವ್ವಿಯು ॥ ೭–೫೨ ॥

ಚಿಗುರಿ ಚೈತ್ರ ವಸಂತಸಂಭ್ರಮ ।
ಗಗನ ನೀಲ ಮಹೋಪಮ ॥
ಮುಗಿಲು ನೀರ್ವೊರೆಗಳೆದು ಮೆಲ್ಲಗೆ ।
ಜಗುಲಿಗಿಳಿಯೆ ಮನೋರಮ ॥ ೭–೫೩ ॥

॥ **ಕಾಂಭೋದಿ–ಝಂಪೆ** ॥
ವನವಾಸದಂತಿಮದ ದಿನ ಸಮೀಪಿಸುತಿರಲು ।
ಮನೆಗೆ ಮರಳುವುದೆಂದು ರಾಮಲಕ್ಷ್ಮಣರು ॥
ಮೊನೆಯ ಹಂದಿಯ ಮುಳ್ಳು ಹುಲಿಯುಗುರು ಕರಿದಂತ ।
ಬನವಿಶೇಷಂಗಳನು ಗಂಟುಕಟ್ಟಿದರು ॥ ೭–೫೪ ॥

ನಾರಿ ಸೀತಾದೇವಿ ಮಿಂದು ಮುಡಿಯನು ಕಟ್ಟಿ ।
ಚಾರು ಕುಸುಮವನರಸಿ ಬೇಲಿಮೇಲಿರುವ ॥
ನೀರಹನಿಯೊಣಗದಿಹ ನಾರುಡೆಯ ನೋಡುತ್ತ ।
ಆರದೆಂದೆನುತ ಲಕ್ಷ್ಮಣನ ಕೇಳಿದಳು ॥ ೭–೫೫ ॥

ಅತ್ತಿಗೆಯೆ ಲಾಲಿಪುದು ಮುನಿಪನುಡುಗೊರೆಯಾಗಿ ।
ಇತ್ತುದಂ ಮರೆಯುವೆನೆ ಛಿದ್ರಮಾದೊಡದು ॥
ಮತ್ತೆ ರಕ್ಕಸಿಯಿಂದ ಪೊರೆದ ಬಾಳ್ಕೆಯ ಶುಚಿಯ ।
ಎತ್ತಿ ಕಾಣ್ಕೆಯನೀವೆ ಮಮ ತಪಸ್ವಿನಿಗೆ ॥ ೭–೫೬ ॥

॥ ಸುರುಟಿ- ಏಕ ॥

ಜಾಣನಯ್ಯ ನೀನು ॥ ನೆಳಲಿದು ।
ಕಾಣದೆ ನಿನಗೇನು ॥
ಕಾನನ ಸೊಬಗಿನ । ಧ್ಯಾನದಿ ಮುಳುಗಿರೆ ।
ಮಾಣುವುದೇ ಹನಿ । ನೀನಾಲೋಚಿಸು ॥ ೭-೫೭ ॥

ಉರಿಯುತಿತ್ತು ಬಿಸಿಲು ॥ ಇಲ್ಲಿಗೆ
ಸರಿಯಿತೇಕೊ ನೆಳಲು ॥
ಹರಿದು ಮುಗಿಲು ನೇ । ಸರನನು ಮುಚ್ಚಿದೆ ।
ಸರಿ ಮಧ್ಯಾಹ್ನದ । ಬೆರಗನು ತಿಳಿಯೆ ॥ ೭-೫೮ ॥

ವಚನ: ಅನಿತರೊಳ್ ಕಾಂಚನಮೃಗಂ ಸಂಚರಿಸಿತಾ ಬನದೊಳು –

॥ ವಾರ್ಧಕ ॥

ಹೇಮರತ್ನಪ್ರಭೆಯ ಚಾರುಶೃಂಗದ್ವಯದಿ ।
ರಾಮಣೀಯಕ ಕೊರಳ ಕೊಂಕಿಸುತ ಮಿಂಚಿಸುತ ।
ತಾ ಮೊಗವ ಚಾಚುತ್ತ ಪೊಸತಳಿರ ಮೇಯುತ್ತ ನರ್ತಿಸಿತು ಮಾಯಾಮೃಗ ॥
ಆ ಮನೋಹರದೆಸಕಮಂ ಕಂಡು ಮರುಳಾಗಿ ।
ಸಾಮಾನ್ಯರಂದದಲಿ ಮೋಹದೋಕುಳಿಯಲ್ಲಿ ।
ರಾಮಸತಿ ಮುಳುಗುತ್ತ ಕರೆದು ಮೈದುನನನ್ನು ತೋರಿದಳು
ಹರಿಣದಿರವ ॥ ೭-೫೯ ॥

॥ ಶಂಕರಾಭರಣ – ಮಠ್ಯ ॥

ಬಾರೊ ಲಕ್ಷ್ಮಣ । ಬಿಲ್ಲ । ತಾರೊ ತತ್‌ಕ್ಷಣ ॥ ಪ ॥
ಚಾರುತರದ ಚೆಲುವನೆಲ್ಲ ।
ತೋರುತಿರ್ಪ ಹರಿಣವನ್ನು ।
ಧೀರ ನೀನು ಪೋಗಿ ಕೊಂಡು ।
ಬಾರ ನಮ್ಮ ಮನೆಗೆ ಮುದದಿ ॥ ೭-೬೦ ॥

ಒಮ್ಮೆ ಸನಿಹ ಬಂದು ಮತ್ತೆ ।
ಚಿಮ್ಮಿ ದೂರ ಓಡುತಿಹುದು ।
ನಮ್ಮ ನೋಡಿ ಕುಣಿಯುವಂಥ ।
ಪೊಮ್ಮಿಗವನು ಕೊಂಡುಬಹುದು ॥ ೭-೬೧ ॥

ವಚನ: ಆ ನುಡಿಯಂ ಕೇಳ್ದು ಸೌಮಿತ್ರಿ ತಾನಿಂತೆಂದನು –

॥ **ಕೇದಾರಗೌಳ–ಅಟ** ॥
ಕೋಳುಗೊಂಬುದೆ ನೀವು ತಾಳಿ ಸಂಯಮವನ್ನು ।
ಪೇಳುವೆನೊಂದು ಮಾತು ॥
ಕಾಳ್ಮಗವಿದು ಕೈತವತೆಯ ಕಾಂಚನಮಲ್ತೆ ।
ಖೂಳ ರಕ್ಕಸರ ಮಾಯೆ ॥ ೭–೩೨ ॥

ಅಟವಿಯೊಳಾಡುವ ದಿಟದ ಜಿಂಕೆಗಳೆಲ್ಲ ।
ಕುಟಿಲತೆಯನು ತಿಳಿದು ॥
ತಟದಿ ಹಿಂಜರಿದು ಸಂಕಟದಿ ನಿಂತಿಹವಲ್ಲಿ ।
ಸಟೆಯ ಸೌಂದರ್ಯವಿದು ॥ ೭–೩೩ ॥

॥ **ದ್ವಿಪದಿ** ॥
ಅನ್ನೆಗಂ ಜಾನಕಿಯು ರಘುವರನ ಕರೆದು ।
ತನ್ನ ವಾಂಛೆಯ ತಿಳುಹಿ ಕಂಬನಿಯ ಸುರಿದು ॥ ೭–೩೪ ॥

ಕಾಡುತಿರೆ ಬೇಡುತಿರೆ ಮನದಿ ತಾ ನೊಂದು ।
ನೋಡಿ ಸಹಜಾತನಿಗೆ ನುಡಿದನಿಂತೆಂದು ॥ ೭–೩೫ ॥

॥ **ಸಾಂಗತ್ಯ– ರೂಪಕ** ॥
ಲಾಲಿಸು ಸೌಮಿತ್ರಿ ವನವಾಸದಂತ್ಯದಿ ।
ಬಾಲೆಯಾಸೆಗೆ ಭಂಗವೇಕೆ ॥
ನಾಳೆ ನಗರದಲ್ಲಿ ನಲಿವ ಜಿಂಕೆಯ ಕೂಡೆ ।
ಕಾಲಕಳೆಯೆ ವಿಘ್ನವೇಕೆ ॥ ೭–೩೬ ॥

ಕಂದ ನೀನೆಂದಂತೆ ಕಪಟಕೃತ್ಯವು ಕಂಡು ।
ಬಂದರೆ ಬಿಡುವೆನೆ ನಾನು ॥
ಕೊಂದು ರಕ್ಕಸನನ್ನು ಕೊನೆಗೆ ಚಿನ್ನದ ಚರ್ಮ ।
ತಂದೀವೆ ಎನ್ನ ಜಾನಕಿಗೆ ॥ ೭–೩೭ ॥

ನಿಶಿತನಾರಾಚ ತೂಣೀರವ ಧರಿಸುತ್ತ ।
ದಶರಥಸುತ ಪೊಕ್ಕ ಹಳುವ ॥
ಕುಶಲದಿಂದಲಿ ಗೋದಾವರಿಯ ಪೊನಲ ದಾಟಿ ।
ಮಿಸುನಿಯ ಮಿಗವ ಬೆನ್ನಟ್ಟಿ ॥ ೭-೬೮ ॥

॥ **ಸೌರಾಷ್ಟ್ರ- ತ್ರಿವುಡೆ** ॥
ಕಾಡು ಕಣಿವೆಗಳಲ್ಲಿ ಭಯದಿಂ ।
ದೋಡಿದನು ಮಾರೀಚನಾಕ್ಷಣ ।
ಗೂಢತೆಯನರಿತಾಗ ರಾಮನು ।
ಹೂಡೆ ಶರವ ॥ ೭-೬೯ ॥

ಛಿದ್ರಗೊಂಡಿತು ಹರಿಣರೂಪದ ।
ಕ್ಷುದ್ರಮಾಯೆಯು ಬಳಿಕ ದೈತ್ಯ ಸ ।
ಮುದ್ರಘೋಷದಿ ಕೂಗುತಲಿ ಚಿರ ।
ನಿದ್ರೆಗೊರಗೆ ॥ ೭-೭೦ ॥

ರೋದಿಸಿದ 'ಓ ಲಕ್ಷ್ಮಣಾ' ಎಂ ।
ಬಾ ದನಿಯು ಮಾರ್ದನಿಸಿ ಗಿರಿವನ ।
ಭೇದಿಸಿತು ಕುಟಿ ಪಂಚವಟಿಯಾ ।
ಹಾದಿಯಲ್ಲಿ ॥ ೭-೭೧ ॥

॥ **ವಾರ್ಧಕ** ॥
ಓ ಲಕ್ಷ್ಮಣಾ ಎಂಬ ಧ್ವನಿಯ ಲಾಲಿಸಿ ಸೀತೆ ।
ನೀಲಮೇಘಶ್ಯಾಮ ಕರೆದನೆಂದೇ ತಿಳಿದು ।
ನಾಲಗೆಯ ನೀರಿಂದೆ ತುಟಿಯೊಣಗ ಸವರುತ್ತಲಿರಲು ಸೌಮಿತ್ರಿ ಕಂಡು ॥
ಲೀಲಾವಿನೋದ ಹರಿಣವ ಕೊಂಡು ತಂದಪನು ।
ಮೇಲಕೇತಕೆ ಚಿಂತೆಯೆಂದು ಸಂತೈಸುತಿರೆ ।
ಕಾಲಮಿದು ಕೇಡಾಯ್ತು ಕೆಟ್ಟೆನೆಂದಳಳಲಿದಳು ಕಮಲಾಕ್ಷಿ ಕಾನನದೊಳು
॥ ೭-೭೨ ॥

॥ **ಸಾರಂಗ –ಆಟ** ॥
ಆಲಿಸಿಕೊಂಡೆಯೇನು । ರಾಮನ ಧ್ವನಿ
ಪಾಲಿಸಬೇಕು ನೀನು ॥

ಪಾಳು ಹಳುವದಲ್ಲಿ । ಕೋಳುಗೊಂಡನೊ ತಾನು ।
ತಾಳಲಾರೆನು ಭಯ । ಪೇಳಲೆಂತಾನು ॥ ೭-೭೩ ॥

ರಕ್ಕಸನುಸಿರ ಮಾಯೆ । ಕೂಗಿದೆ ಇಂತು
ದುಃಖಿಸಬೇಡ ತಾಯೆ ॥
ಪೊಕ್ಕು ಕಾನನ ದೈತ್ಯ । ಸಿಕ್ಕು ಕಳೆವ ದೈವ ।
ದಿಕ್ಕು ತಪ್ಪುವುದುಂಟೆ । ಮಿಕ್ಕ ಮಾತೇಕೆ ॥ ೭-೭೪ ॥

ಕೆಟ್ಟುದೆ ಕಿವಿ ನಿನಗೆ । ನಿನ್ನಯ ಪೆಸ
ರಿಟ್ಟು ಕೂಗಿದ ಕೊನೆಗೆ ॥
ದಟ್ಟಡವಿಯೊಳು ಕೈ । ಕಟ್ಟಿ ಕುಳ್ಳಿರುವುದೆ ।
ನೆಟ್ಟನೆ ನೀ ಪೋಗು । ಬಿಟ್ಟೆನ್ನನಿಲ್ಲೆ ॥ ೭-೭೫ ॥

॥ **ಭೈರವಿ-ಝುಂಪೆ** ॥
ಅಣ್ಣನಿರಿಸಿದನೆನ್ನ । ತನ್ನರಸಿ ರಕ್ಷಣೆಗೆ ।
ಇನ್ನಿದನು ಮೀರಿ ನಡೆ । ಯೆನ್ನದಿರು ತಾಯೆ ॥ ೭-೭೬ ॥

ತಮ್ಮ ನೀನೆಂದೆನುತ । ನೆಮ್ಮಿದನು ನಿನ್ನಣ್ಣ ।
ಸುಮ್ಮಗೇ ನಡೆ ಬೇಗ । ದಮ್ಮಯ್ಯ ನಿನಗೆ ॥ ೭-೭೭ ॥

ರಾಮನಪ್ರಾಕೃತಂ । ಭೀಮನಕ್ಷಯ ಮಹಿಮ ।
ಹೋಮನದ ಸಂದೇಹ । ನೀ ಮರೆವುದವ್ವ ॥ ೭-೭೮ ॥

ಮಾತಾಡದಿರು ಭ್ರಾತೃ । ಘಾತಕಿಯೆ ನಡೆ ತೊಲಗು ।
ಈ ತೆರದಿ ನೋಯಿಪುದು । ಪಾತಕವು ನಿನಗೆ ॥ ೭-೭೯ ॥

॥ **ಭಾಮಿನಿ** ॥
ಎಳೆಯ ಮುಳ್ಳೊನೆ ಚುಚ್ಚೆ ಮೆಚ್ಚುಗೆ ।
ಬೆಳೆದರದು ನೋವಲ್ತೆ ತನುವಿಗೆ ।
ಎಳೆಗರುವು ಬೆಳೆದದರ ತಾಯನೆ ಬೆದೆಗೆ ಬಯಸುವುದು ॥
ಕೊಳಿಸಿದೆನೆ ಮನದನ್ನ ನಿನ್ನನು ।
ಕಳುಹಿ ಕಾಂಚನಮೃಗದ ವಾಂಛೆಗೆ ।
ಸಲೆ ಸುಮಂಗಲಿತನದ ತಾಳಿಯ ಬಿಸುಡುವಂತಾಯ್ತೆ ॥ ೭-೮೦ ॥

ವಚನ: ಕೇಳಿ ಕಳವಳಗೊಂಡು ಸೌಮಿತ್ರಿ ಇಂತೆಂದನು –

॥ **ಸಾಂಗತ್ಯ– ರೂಪಕ** ॥
ಮನ್ನಿಸೆನ್ನಯ ಮಾತ ಮರುಗಬಾರದು ಮಾತೆ ।
ಅಣ್ಣನಾಣೆಯ ಮೀರದಾದೆ ॥
ಮುನ್ನ ಪೇಳಿದೆನಿಂತು ಪೋಗಿಬರ್ಪೆನು ಬೇಗ ।
ಇನ್ನಿರ್ಪುದೆಲೆಮನೆಯೊಳಗೆ ॥ ೭–೮೧ ॥

ಮುಳ್ಳುಬೇಲಿಯ ನೆಮ್ಮಿ ನಿಂತುಕೊಂಡಳು ಸೀತೆ ।
ಹಳ್ಳಬಟ್ಟೆಯ ಬಾಳ ನೆನೆದು ॥
ಅಲ್ಲಿ ಸುಂಟರಗಾಳಿ ಸುಳಿಯೆ ಮೆಲ್ಲಗೆ ಬಂದ ।
ಕಳ್ಳ ಸಂನ್ಯಾಸಿ ರಾವಣನು ॥ ೭–೮೨ ॥

ಸ್ವಸ್ತಿವಾಚನಗೈದು ಓಂಕಾರ ಜಪಿಸುತ್ತ ।
ಹೊಸ್ತಿಲು ದಾಟಿ ಮುಂಬರಿಯೆ ॥
ಹಸ್ತಕಮಂಡಲು ನಿಲುವು ನೋಡುತ ಭಯ ।
ಗ್ರಸ್ತಳಾದಳು ರಾಮದಯಿತೆ ॥ ೭–೮೩ ॥

॥ **ಕಂದ** ॥
ಚೆಲುವೆಯ ರೂಪವ ನೋಡು ।
ತ್ತಲೆ ಬೇಟವ ಸಾರ್ವ ಪೀರ್ವ ರಸಿಕತೆಯಿಂದಂ ॥
ಬಲಯುತ ಸಂಶಯಭೀತೆಯ ।
ನಳಿನಾಕ್ಷಿಯ ಕರೆದು ಮಾತನಾಡಿಸಲಾಗಳ್ ॥ ೭–೮೪ ॥

॥ **ಮಧ್ಯಮಾವತಿ – ಏಕ** ॥
ಬೆದರಿದೋಲಿದೆ ಭದ್ರೆ ನಿನ್ನಂಗಮುದ್ರೆ ।
ಮುದವ ತಾಳುವುದೀಗ ಕರುಣಾಸಮುದ್ರೆ ॥
ಮಧುರಮೋಹನ ನಿತಂಬಿನಿಯಿಂತು ನೀನು ।
ಒದವಿ ಕಾಡೊಳಗಿರ್ಪ ಹದನವಿದೇನು ॥ ೭–೮೫ ॥

ಜನಕರಾಯಗೆ ಸುತೆ ಸೊಸೆ ದಶರಥಗೆ ।
ವನವಾಸವ್ರತವಾಂತು ಬಂದೆವೀ ಕಡೆಗೆ ॥

ಮನೆಯೊಳಗಾರಿಲ್ಲ ಬಹರಿನ್ನು ಮುಂದೆ ।
ಅನಕ ಸಂಕಟಕೆ ಬಾಂಧವನಂತೆ ಬಂದೆ ॥ ೭-೮೩ ॥

ಕಾಮಿನೀಮಣಿಯೆ ಲಂಕೇಶ ನೋಡೆನ್ನ ।
ರಾಮಗಿಂತಲು ಮುನ್ನ ಮೆಚ್ಚಿರ್ಪೆ ನಿನ್ನ ॥
ವಾಮದಿಂದೆನ್ನಾಕೆಯನ್ನೊಯ್ದನವನು ।
ಪ್ರೇಮಭಿಕ್ಷೆಯ ನೀಡು ಲಂಕೆಗೊಯ್ಯುವೆನು ॥ ೭-೮೭ ॥

॥ **ವಾರ್ಧಕ** ॥
ಮಾಣು ಮಾಣೆಲೊ ನೀಚನಾಡದಿರಸಹ್ಯಮಂ ।
ಶ್ವಾನಮೈರಾವತಕೆ ಮಲೆವಂತೆ ರಾಘವಗೆ ।
ನೀನು ಕರುಬುತೆ ಜೇನಿನಾಸೆಗಸಿಧಾರೆಯಂ ನೆಕ್ಕಲೆಳಸಿದ ರಕ್ಕಸ ॥
ಆ ನವಿಲಸಂಗಸುಖ ಹದ್ದು ಹಂಬಲಿಸುತಿದೆ ।
ಕಾನನದ ನರಿ ಕೇಸರಿಯ ಪೆಣ್ಣ ಬಯಸುತಿದೆ ।
ನೀನು ಕಬ್ಬಿಣಮಿರಲು ಪೊನ್ನೆನ್ನ ಮನದನ್ನ ಶ್ರೀಗಂಧ
ಪೊಲಸಿಗೆಣೆಯೆ ॥ ೭-೮೮ ॥

॥ **ಸೌರಾಷ್ಟ್ರ– ತ್ರಿವುಡೆ** ॥
ಒಲ್ಲೆನೆನುವುದು ನಲ್ಲೆಯೊಪ್ಪಿಗೆ ।
ಬಲ್ಲೆ ಹೆಣ್ಣಿನ ಶೌರ್ಯ ಬೈಗುಳ ।
ದಲ್ಲಿರುವ ನಿಜವೆಂದು ರಾವಣ ।
ಸೊಲ್ಲನರುಹಿ ॥ ೭-೮೯॥

ಬಳ್ಳಿಯನು ಮದ್ದಾನೆ ಸೊಂಡಿಲಿ ।
ನಲ್ಲಿ ಪಿಡಿದೆಳೆವಂತೆ ಸೀತೆಯ ।
ನುಲ್ಲಸದಿ ನಭಕೆತ್ತಿ ನೆಗೆಯಲು ।
ಗುಲ್ಲು ವನದಿ ॥ ೭-೯೦ ॥

ರಾಘವಾಂಕನೆ ಲಕ್ಷ್ಮಣನೆ ಎಂ ।
ದಾಗ ಕರೆದಳು ಜನಕನಂದನೆ ।
ಕೂಗು ಮಾರ್ದನಿಗೊಳಲು ಗಿರಿತುದಿ ।
ಯಾಗಸದೊಳು ॥ ೭-೯೧ ॥

॥ **ಕಾಂಭೋದಿ-ಝಂಪೆ** ॥
ನಿದ್ದೆಯೊಳಗಿದ್ದಾ ಜಟಾಯು ರೋದನ ಕೇಳಿ ।
ಎದ್ದು ಕಂಡನು ನಭೋನೌಕೆಯೊಂದು ॥
ಕದ್ದು ಸೀತೆಯನೊಯ್ವ ಖಳನ ಕಪಟವಿದೆಂದು ।
ಮಧ್ಯಮಾರ್ಗದೊಳದನು ತಡೆದನಂದು ॥ ೭-೯೨ ॥

ಪದಗದಾಘಾತದಿಂದಪ್ಪಳಿಸುತಾಕ್ಷಣದಿ ।
ಮದಮುಖನ ಮೇಲೆ ತಾನೆರಗಿ ಬೇಗ ॥
ಎದೆಗೆ ಕುಟುಕಲು ರಕ್ತ ಸುರಿಯಲಾಗಸದಿಂದ ।
ಸುದತಿ ರಕ್ಷಣೆಗಾಗಿ ಕೂಗಲಾಗ ॥ ೭-೯೩ ॥

ಲಘುವೆಣಿಸಿ ಗುರುವಾಯ್ತಲಾ ಹದ್ದು ಹಗೆಯಾಯ್ತೆ ।
ಗಗನಮಾರ್ಗದೊಳೆನ್ನ ತಡೆವರುಂಟೆ ॥
ಮಿಗುವರಿಯೆ ಬಿಡೆನೆಂದು ರೆಕ್ಕೆಯಂ ಕತ್ತರಿಸೆ ।
ಖಗರಾಜನುರುಳಿದನು ಧರೆಯ ಮೇಲೆ ॥ ೭-೯೪ ॥

॥ **ದ್ವಿಪದಿ** ॥
ಅತ್ತ ತೆಂಕಣದೆಸೆಗೆ ಪುಷ್ಪಕಂ ಪೋಗೆ ।
ಇತ್ತ ಸೌಮಿತ್ರಿ ರಾಮನ ಕರೆದು ಕೂಗೆ ॥ ೭-೯೫ ॥

ದನಿಯನಾಲಿಸಿ ಬಂದು ವನದಿ ರಾಘವನು ।
ಅನುಜನಂ ಕಾಣುತ್ತ ಬರವ ಕೇಳಿದನು ॥ ೭-೯೬ ॥

ದೇವಿಯೋರ್ವಳ ಬಿಟ್ಟು ಬಂದುದೇಕೆಂದು ।
ನೋವಿನಿಂದಲಿ ನುಡಿಯೆ ಸಹಜಾತನಂದು ॥ ೭-೯೭ ॥

'ಓ ಲಕ್ಷ್ಮಣಾ' ಎಂದು ಕರೆದ ಕತದಿಂದ ।
ಶ್ರೀಲತಾಂಗಿಯ ಬಿಟ್ಟು ಬಂದೆ ತಾನೆಂದ ॥ ೭-೯೮ ॥

॥ **ಭಾಮಿನಿ** ॥
ಆ ನಿಶಾಚರಮಾಯೆ ಕಳೆದೆನು ।
ನೀನಿದನು ತಿಳಿಯದೆಯೆ ಬಂದಿಹೆ ।
ಮಾನಿನಿಗೆ ಕೇಡಾಗದಿರಲೆಂದೆನುತ ಹಮ್ಮೈಸಿ ॥

ಮಾನಸದಿ ಕಳವಳಿಸಿ ಮರಳಿರೆ ।
ಕಾಣಿಸಿತು ಸತಿಯಿಲ್ಲದೆಲೆಮನೆ ।
ಜಾನಕಿಯೆ ಬಾರೆಂದು ಕರೆದನು ಗಿರಿಕಣಿವೆಯರಸಿ ॥ ೭-೯೯ ॥

॥ ಕೇದಾರಗೌಳ- ಆಟ ॥
ದಿಟವು ಸೌಮಿತ್ರಿ ಮೈಥಿಲಿ ಭೂಮಿಜಾತೆಯು ।
ಕುಟಿಲಕುಂತಳ ಭ್ರಮರ ॥
ತಟಿಲತಾಂಕಿತ ಪುಷ್ಪರಾಜಿ ಶೋಭಿತೆಯಾಕೆ ।
ಅಟವಿ ತುಂಬಿದೆ ಸುಸ್ವರ ॥ ೭-೧೦೦ ॥

ಎಲ್ಲಿ ಬೈತಿಟ್ಟೆಯೊ ಪೇಳಯ್ಯ ದಮ್ಮಯ್ಯ ।
ಕಲ್ಲಾಯಿತೇ ಮನಸು ॥
ಖುಲ್ಲ ರಕ್ಕಸರೀಗ ಕೊಂದರೊ ತಿಂದರೊ ।
ಎಲ್ಲಿಹಳೆಂದೊರೆಯೊ ॥ ೭-೧೦೧ ॥

ದುರುಳ ವಿಹಂಗಗೆ ಮರುಳಾದಳೇ ಸೀತೆ ।
ಮುರಿದು ಗಂಟಲ ಕೊಯ್ವೆನು ॥
ಪರಿದು ತಿಪ್ಪುಳ ಕಾಲತಿರುಪಿ ಕೊಲ್ಲುವೆನೆಂದು ।
ಭರದಿಂದ ಸಿಡಿದೆದ್ದನು ॥ ೭-೧೦೨ ॥

॥ ಸಾಂಗತ್ಯ-ರೂಪಕ ॥
ಕುದಿವೆದೆಯಿಂದತ್ತು ತೊಳಲಿ ಕಾನನದಲ್ಲಿ ।
ತುದಿವಿಮಾನದ ಮಣಿ ಕಂಡು ॥
ಮೊದಲ ಸಾಕ್ಷಿಯು ದಿಟವೆಂದು ಕಂಡರು ಮತ್ತೆ ।
ಚದುರಿಚೆಲ್ಲಿದ ಗೃಧ್ರಗರಿಯ ॥ ೭-೧೦೩ ॥

ಮಡುಗಟ್ಟಿ ನಿಂದ ಕೆನ್ನೀರಿನ ಕೆಸರೊಳು ।
ಕಡಿದ ರೆಕ್ಕೆಯಲಿ ಜಟಾಯು ॥
ಕೆಡೆದು ಬಿದ್ದಿರಲಾತ ಕಡೆಗೆ ಗದ್ಗದಿಸುತ್ತ ।
ನುಡಿದನಸ್ಪಷ್ಟವಾಗಿಂತು ॥ ೭-೧೦೪ ॥

'ದೇವಿಯ ನೈಋತ್ಯ ವಿತ್ತೇಶನವರಜ' ।
ಈ ವಾಕ್ಯ ಅರ್ಧವಾಗಿರಲು ॥
ನೋವಿಂದ ನರಳಿ ನೆತ್ತರು ಕಾರಿ ಬಿದ್ದನು ।
ಆ ವಿಹಗೇಂದ್ರ ಸಾವಿನೊಳು ॥ ೭–೧೦೫ ॥

॥ **ಭಾಮಿನಿ** ॥
ವಿಹಗರಾಜ ಕಳೇವರವನಾ ।
ದಹನಸಂಸ್ಕಾರದೊಳು ಬೆಳಗಲು ।
ಸಹಿಸಲಾರದೆ ನೆಗೆದಳಸ್ತಾಂಬುಧಿಗೆ ದಿನಲಕ್ಷ್ಮಿ ॥
ಮಹಿಯ ಮಗಳನು ಪುಡುಕುವನ್ನೆಗ ।
ಮಿಹಿರಕುಲಸಂಭವನಿಗೆತ್ತಣ ।
ರಹಿಯ ರಾತ್ರಿಯು ನಿದ್ರೆ ಸತ್ತುದು ಬೆಳಕು ಹರಿವನಕ ॥ ೭–೧೦೬ ॥

॥ **ಕಂದ** ॥
ಚಂದಿರನಚಿ ಮುಖಭಂಗ ನಿ ।
ಬಂಧಂ ಸೀತಾಪಹಾರಮೆಂಬ ಪ್ರಸಂಗಂ ॥
ಪೊಂದಿದ ಜಟಾಯು ಮೋಕ್ಷದ ।
ಬಂಧುರಕೃತಿ ಯಕ್ಷಗಾನದ ಮಹಾಕಾವ್ಯಂ ॥ ೭–೧೦೭ ॥

***

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೮
ಸುಗ್ರೀವಸಖ್ಯಂ

ಪಾತ್ರಪಟಲ

ಶ್ರೀರಾಮ

ಲಕ್ಷ್ಮಣ

ಶಬರಿ

ಮಾಯಾವಿ

ವಾಲಿ

ಸುಗ್ರೀವ

ಹನುಮಂತ

ಜಾಂಬವಂತ

ತಾರಾದೇವಿ

ಅಂಗದ

ಸುಗ್ರೀವಸಖ್ಯಂ

॥ **ಶಂಕರಾಭರಣ–ತ್ರಿವುಡೆ** ॥
ಮತ್ತೆ ಮರುದಿನ ಪಂಚವಟಿಯನು ।
ಸುತ್ತಿ ನಡೆದರು ತೆಂಕಣ ॥
ಎತ್ತ ಪೋಗುವುದೆಂದ ರಾಮಗೆ ।
ಬಿತ್ತರಿಸಿದನು ಲಕ್ಷ್ಮಣ ॥ ೮–೧ ॥

ದೇವಿಯನ್ವೇಷಣೆಗೆ ಪಥಮಿದು ।
ಕೋವಿದನೆ ಬಿಡು ಕಳವಳ ॥
ಕಾವ ಧೈರ್ಯವ ಕಳೆದುಕೊಳ್ಳದೆ ।
ಭಾವಿಸೈ ಮಂತ್ರಂಗಳ ॥ ೮–೨ ॥

ನಿನ್ನ ಮಹಿಮೆಯ ನೆನಹು ತುಂಬಿದೆ ।
ಎನ್ನೊಳಗೆ ದೃಢಚಿತ್ತವ ॥
ಘನ್ನ ಶಿವಧನು ಮುರಿದ ವೀರನೆ ।
ಖಿನ್ನತೆಯ ಕಳೆ ರಾಘವ ॥ ೮–೩ ॥

॥ **ಕಾಂಭೋದಿ – ಝಂಪೆ** ॥
ಪೇಳಲೇನಚ್ಚರಿಯ ವ್ಯಾಳಾಕೃತಿಯ ದೈತ್ಯ ।
ಕಾಲುಮಂಡೆಗಳರದೆ ತೆವಳಕೊಂಡು ॥
ತೋಳೆರಡು ಯೋಜನಾಂತರ ಚಾಚಿಕೊಳುತಲಾ ।
ಭೀಳಕಾನನದಲ್ಲಿ ಬಂದನಂದು ॥ ೮–೪ ॥

ನಡುಗಿದುದು ತನು ತಪನಕುಲಜನಿಗೆ ನಡೆಗೆಟ್ಟು ।
ಕೆಡೆದುರುಳ್ದನು ನೆಲಕೆ ಭೀತಿಯಿಂದ ॥
ಬಿಡದಾಗ ರಾಹು ಛಾಯೋರಗ ಕಬಂಧ ಕಂ ।
ಡೊಡನೆ ಬಂಧಿಸಿದನ್ನೈ ತೋಳ್ಗಳಿಂದ ॥ ೮–೫ ॥

ವಚನ: ರಾಘವಂ ಭಯಂಗೊಂಡು ತಾನಿಂತೆಂದನು –

॥ **ಶಂಕರಾಭರಣ – ರೂಪಕ** ॥
ಮುಗುದ ಲಕ್ಷ್ಮಣಾಂಕ ಕೇಳು ।
ಹಗೆಯ ಬಾಧೆ ಸಹಿಸಲಾರೆ ।
ಬಿಗಿದ ಧನುಶರಂಗಳನ್ನು ।
ತೆಗೆಯಲಾರೆನು ॥ ೮–೩ ॥

ಬಾರದಿರು ಸಮೀಪ ನೀನು ।
ಸೇರಿಕೊಳ್ಳಯೋಧ್ಯೆಯನ್ನು ।
ನೀರೆಯುಳಿದು ಬದುಕಲೆಂತು ।
ಬೇರೆ ಕಾಣೆನು ॥ ೮–೭ ॥

॥ **ಭಾಮಿನಿ** ॥
ಖಡುಗ ತೆಗೆದಾಕ್ಷಣದಿ ಲಕ್ಷ್ಮಣ ।
ಕಡಿಯತೊಡಗಿದನಸುರಬಾಹುವ ।
ನೊಡನೆ ಮೈದೋರುತ್ತ ಬೃಂದಾರಕನು ತಾನೊರ್ವ ॥
ಜಡಜನೇತ್ರಗೆ ನಮಿಸಿ ಶಬರಿಯ ।
ಗುಡಿಸಲಿನ ಕಡೆ ಕೈಯ ತೋರುತ ।
ನಡೆದನಾಗಸದೆಡೆಗೆ ಸಂಕಟದೊಡಲ ಸುಖದಂತೆ ॥ ೮–೮ ॥

ವಚನ: ರಾಮಲಕ್ಷ್ಮಣರ್ ತಮ್ಮೊಳೆ ಮಾತಾಡುತ ಮುಂದೆ ನಡೆದರ್–

॥ **ಕೇದಾರಗೌಳ – ಆಟ** ॥
ನಿನ್ನಿಂದೆ ಬದುಕಿದೆನ್ನೈ ಸಹೋದರ ಸತ್ಯ ।
ನಿನ್ನಿಂದೆ ಸತ್ತ ದೈತ್ಯ ॥
ಇನ್ನಿಲ್ಲವಾಯ್ತು ಹತಾಶೆ ದೌರ್ಬಲ್ಯವು ।
ಎನ್ನ ಸೇರಿತು ಧೈರ್ಯವು ॥ ೮–೯ ॥

ತನ್ನ ಛಾಯೆಗೆ ತಾನು ಭೀತನಹನೆ ಪ್ರಾಜ್ಞ ।
ಬನ್ನವ ಕಳೆದುದಾಯ್ತು ॥
ಮುನ್ನಡೆವುದು ಸೀತೆಯನ್ನು ಹುಡುಕಲೆಂದು ।
ಅಣ್ಣಯ್ಯ ದಾರಿತೋರು ॥ ೮–೧೦ ॥

ವಚನ: ಇತ್ತ ನಡುರಾತ್ರಿ ಎಚ್ಚರಂಗೊಂಡು ಮುಗುಳುನಗುತೆದ್ದು
ಕುಳಿತಳಾ ಶಬರಿ –

॥ **ಪುನ್ನಾಗ – ಏಕ** ॥
ತಿಂಗಳಬೆಳಕಿನ ಸುಂದರ ನಿಶಿಯೊಳು ।
ಅಂಗಳದಲ್ಲಿ ನಿಂತು ॥
ಮಂಗಳಮೂರುತಿ ರಾಮನ ಚಿತ್ರಿಸಿ ।
ಕಂಗಳು ತುಂಬಿಬಂತು ॥ ೮–೧೧ ॥

ಎಂದಿಗೆ ಬಹೆ ರಾಮಚಂದ್ರನೆ ಶಬರಿಯ ।
ಬಂಧವಿಮೋಚನೆಗೆ ॥
ಕಂದಯ್ಯ ಕಾದಿಹೆ ಹಲವು ಸಂವತ್ಸರ ।
ದಿಂದ ಮನೋರಥಕೆ ॥ ೮–೧೨ ॥

ಹಣ್ಣಾಯಿತೀ ದೇಹ ತಾಳದು ಬಾಳದು ।
ಕಣ್ಣಿದು ಮಂಜಾಯಿತು ॥
ಹಣ್ಣುಹಂಪಲು ತಂದು ಕಾದುಕೊಂಡಿಹೆನೆಂದು ।
ಬಣ್ಣಿಸೆ ಬೆಳಗಾಯಿತು ॥ ೮–೧೩ ॥

॥ **ಭಾಮಿನಿ** ॥
ಇರುಳಳಿದು ಬೆಳಗಾಗೆ ತೆಂಗಿನ ।
ಗರಿಯ ಪೊರಕೆಯ ತಂದು ಗೋಮಯ ।
ವೆರೆದು ಜಗುಲಿಯ ಗುಡಿಸಿ ನಿಂತಳು ಸೊಂಟಗೈಯಾಗಿ ॥
ಬಿರಿದ ಬಿಸಿಲಿನ ಜಳಕೆ ಹಣೆಮೇ ।
ಲಿರಿಸಿ ಕರವ ನಿರೀಕ್ಷೆನೋಂಪಿಯೊ ।
ಳಿರುತ ನಿಟ್ಟಿಸಿ ನೋಡುತಿರ್ದಳು ಬಯಲಬಟ್ಟೆಯನು ॥ ೮–೧೪ ॥

ವಚನ: ಬಂದ ಇರ್ವರಂ ಕಂಡು ಕಾತರದಿ –

॥ **ಕಾಂಭೋದಿ –ಝಂಪೆ** ॥
ಮಸುಕಾದ ಮೊಗ ಬೆವರುಪತ್ತಿದುಡೆ ಕೆದರುತಲೆ ।
ಬಸವಳಿದ ರಘುರಾಮ ರೂಕ್ಷರೂಪ ॥

ಬಿಸಿಲಬೇಗೆಗೆ ಬಂದು ನಿಂತಿರಲು ಮನೆಮುಂದೆ ।
ದೆಸೆಗೆಟ್ಟ ಬೇಡರೆಂದೆನುತ ಶಬರಿ ॥ ೮–೧೫ ॥

ಅಡಗೂಳನೀವಜ್ಜಿ ನಾನಲ್ಲ ಬಿಯದರಿಗೆ ।
ಬಿಡದಿ ಮೆಲ್ವಾಸುಗಳನೀವಳಲ್ಲ ॥
ಬಡವಳದ್ದುದನೀವೆ ಒಳಬನ್ನಿ ಗುಡಿಸಲಿಗೆ ।
ಕಡೆಗೆ ನೀವೆಲ್ಲಿಂದ ಬಂದಿರಯ್ಯ ॥ ೮–೧೬ ॥

ವಚನ: ಅಜ್ಜಿಯಂ ಕಂಡು ರಾಘವಂ ಪೇಳ್ದನಿಂತು –

ಮನೆಯಿಲ್ಲ ಮಾರಿಲ್ಲ ಕಾಡೆ ಬೀಡಾದುದೌ ।
ಮನೆಗೆಟ್ಟು ನೆಲೆಗೆಟ್ಟು ಬಂದೆವಿಲ್ಲಿ ॥
ದಣಿದಿಹೆವು ಮತ್ತೆ ಮೀಹಕ್ಕೆ ಕೊಳಮಿನ್ನೆಲ್ಲಿ ।
ಕನಿಕರಿಸಬೇಕೆಂದು ಕೇಳಲಲ್ಲಿ ॥ ೮–೧೭ ॥

ವಚನ: ಅದಕೆ ಶಬರಜ್ಜಿ ಗೊಣಗುತ್ತೆ ಇಂತೆಂದಳು –

ಪೇರಿಳೆಯ ಮರದಡಿಗೆ ಮೀಹಕ್ಕೆ ಕೊಳಮಿಹುದು ।
ಆರಾರೊ ತೊಳಲುವರು ಕೇಡುಗಾಲ ॥
ಬೇರೊಬ್ಬನಾ ಸತಿಗೆ ಮತ್ತೊರ್ವನಳುಪುವನು ।
ಧಾರುಣಿಯೊಳೆನಿಬರೋ ದುಷ್ಟಜಾಲ ॥ ೮–೧೮ ॥

॥ **ದ್ವಿಪದಿ** ॥
ಆರ ಸತಿಗಾರಳುಪಿದವರೆಂದು ಕೇಳೆ ।
ನೀರೊಳಗೆ ಮಿಂದು ಬಾ ಎಲ್ಲ ಕಥೆಪೇಳ್ವೆ ॥ ೮–೧೯ ॥

ಎಂದು ಕಳುಹುತಲವರ ಬಾಳೆಲೆಯ ಪಾಸಿ ।
ಬಂದ ಮೇಲವರ್ಗರಿಗೆ ಬಡಿಸಿಯುಪಚರಿಸಿ ॥ ೮–೨೦ ॥

॥ **ಕೇದಾರಗೌಳ – ಆಟ** ॥
ಆರ ಸಂಪದಮಾರ್ಗೆ ಪೇಳಜ್ಜಿ ಈಯೂಟ ।
ಬೇರಾರ್ಗೆ ಮೀಸಲಿತ್ತು ॥

ಈ ರುಚಿಯಾತಿಥ್ಯ ಪಡೆವ ಸತ್ಪುರುಷಂಗೆ ।
ಪಾರಮ್ಯಪುಣ್ಯಮಿತ್ತು ॥ ೮-೨೧ ॥

ದಶರಥಸುಕುಮಾರ ಲಕ್ಷ್ಮಣಾಗ್ರಜನಾದ ।
ವಸುಧೇಶ ರಾಮನನ್ನು ॥
ಋಷಿ ಮತಂಗನ ಮಾತ ಕೇಳ ಕಾಯುತ್ತಿಹೆ ।
ಪುಸಿಯಾಗಲಾರದೇನು ॥ ೮-೨೨ ॥

ಬಾಲರು ಬಡಗರಂದದಿ ತೋರುತಿರುವಿರಿ ।
ಕೇಳಬಲ್ಲಿರೆ ರಾಮನ ॥
ಬಾಳಯಾನವ ಮುಗಿಸುವ ಮುನ್ನ ಕಾಂಬೆನೆ ।
ನೀಲಮೇಘಶ್ಯಾಮನ ॥ ೮-೨೩ ॥

ವಚನ: ಎನಲಾ ರಾಮನಿಂತೆಂದನು –

॥ **ಸೌರಾಷ್ಟ್ರ – ತ್ರಿವುಡೆ** ॥
ಶಾಂತಮೂರುತಿ ಶಾಂತಿಯಿಲ್ಲದೆ ।
ಭ್ರಾಂತನಾಗಿಯೆ ತೊಳಲುತಿರ್ಪನು ।
ಕಾಂತೆಯಿಲ್ಲದೆ ಕೊರಗುತಿಹನಿಗೆ ।
ಕಾಂತಿಯೇನು ॥ ೮-೨೪ ॥

ಎನುತ ಮಧ್ಯಾಹ್ನದೊಳು ಮಲಗಿರೆ ।
ಕನವರಿಸಿ ಜಾನಕಿಯ ಕರೆಯಲು ।
ಚಿನುಮಯಾತ್ಮಕನೆಂದು ಶಬರಿಯು ।
ಮನದಿ ತಿಳಿದು ॥ ೮-೨೫ ॥

॥ **ಸಾಂಗತ್ಯ – ರೂಪಕ** ॥
ಸಾಕಿನ್ನು ಮರೆಮಾಡಬೇಡಯ್ಯ ದಮ್ಮಯ್ಯ ।
ಸಾಕ್ಷಾತು ಶ್ರೀರಾಮಚಂದ್ರ ॥
ಈ ಕಂಗಳಿಗೆ ಕಾಣದಾಯಿತು ಅಯ್ಯಯ್ಯೋ ।
ರಾಕೇಂದುಮುಖಿಯು ತಾನೆಲ್ಲಿ ॥ ೮-೨೬ ॥

ಸೀತೆಯ ವನದಿ ರಾಕ್ಷಸ ಕದ್ದುಕೊಂಡೊಯ್ಯೆ ।
ಧಾತುಗುಂದಿದೆನಜ್ಜಿ ಬಳಿಕ ॥
ಈ ತೆರ ಪುಡುಕುತ್ತ ಬಳಲಿಬೆಂಡಾದೆನು ।
ಸೋತೆನು ರುಜೆಯು ಬಂದಡಸಿ ॥ ೮–೨೭ ॥

ಅತ್ತಿಗೆಗಂತು ಪಾಡಾಯಿತು ಅಣ್ಣಂಗೆ ।
ಪತ್ತಿತು ವ್ಯಾಧಿವಿಚಿತ್ರ ॥
ಉತ್ತರವೇನೆಂದು ತಿಳಿಯೆನೆಂದಳಲಿ ಸೌ ।
ಮಿತ್ರಿಯು ಕಣ್ಣೀರ ಸುರಿಸೆ ॥ ೮–೨೮ ॥

॥ **ಭಾಮಿನಿ** ॥
ಹೀರಿ ಬಿಸುಡುವೆ ರುಜೆಯನೆಂದು ಪ ।
ದಾರವಿಂದಕೆ ನಮಿಸಿ ಪ್ರಾರ್ಥಿಸ ।
ಲಾ ರಘೂದ್ವಹನಿಂಗೆ ಸವನಿಸಿತಧಿಕ ಸುಕ್ಷೇಮ ॥
ಮಾರನೆಯ ದಿನ ಋಷ್ಯಮೂಕವ ।
ಸೇರಿ ನೀವೆಂದೆನುತ ಸೂಚಿಸಿ ।
ಪಾರಮಾರ್ಥವ ನೆನೆದು ಕೊನೆಯುಸಿರೆಳೆದಳಾ ಶಬರಿ ॥ ೮–೨೯ ॥

॥ **ಭೈರವಿ –ಝಂಪೆ** ॥
ಅತ್ತಲಾ ಕಿಷ್ಕಿಂಧೆಯೊಳು ಸುಪ್ತಜನರಾತ್ರಿ ।
ಮತ್ತೆ ಮಾಯಾವಿ ಗರ್ಜಿಸಲು ॥
ಹೊತ್ತಲ್ಲದಾ ಹೊತ್ತು ತತ್ತರಿಸಲಾ ಜನರು ।
ಎತ್ತಿ ಬಂಡೆಯನು ಕೆಡೆದಿರಲು ॥ ೮–೩೦ ॥

ದುಂದುಭಿಕುಮಾರನಿವನೆಂದು ಭಾವಿಸಿ ಮನದಿ ।
ಇಂದ್ರನಂದನ ವೀರವಾಲಿ ॥
ಬಂದನರಮನೆಯಿಂದ ಹೊರಗೆ ಸುಗ್ರೀವ ಸಹ ।
ಒಂದುಗೂಡುತ ನಡೆದನಾಗ ॥ ೮–೩೧ ॥

ಮಲ್ಲಸಾಹಸಿಯನ್ನು ನಿಲ್ಲಗೊಡದೇ ಬೇಗ ।
ಕೊಲ್ಲಿಸುವೆ ತನ್ನ ನೆಲೆಗೊಯ್ದು ॥
ಬಲ್ಲೆ ನಿನ್ನಯ ಸಹಸವೆಲ್ಲ ನೋಡುವೆನೆಂದು ।
ಕಲ್ಲುಗುಹೆಯೊಂದರೊಳಪೊಕ್ಕ ॥ ೮–೩೨ ॥

ನಿಲ್ಲೆಲೋ ಸುಗ್ರೀವ ದನುಜನನ್ನೊರಸಿ ಬಹೆ ।
ಇಲ್ಲೆ ಬಿಲಬಾಯಿ ಕಾಯುತಿರು ॥
ಖುಲ್ಲನೀತನ ರಕ್ತ ಚೆಲ್ಲುವೆನು ನೋಡೆಂದು ।
ಹಲ್ಲುಗಡಿಯುತ ಪೊಕ್ಕ ಗುಹೆಯ ॥ ೮–೩೩ ॥

॥ **ಭಾಮಿನಿ** ॥
ಶತದಿವಸ ಶತರಾತ್ರಿಯೀತೆರ ।
ಗತಿಸಿರಲು ಬಿಲಮುಖದಿ ನೆತ್ತರು ।
ಸತತ ಹರಿಯುತ್ತಿರಲು ಕಾಣುತ ತಮ್ಮ ಸುಗ್ರೀವ ॥
ಪತಿತನಾದನು ವಾಲಿಯೆನ್ನುತ ।
ಪ್ರತಿಶಿಲೆಯ ಬಾಗಿಲಿಗೆ ಬಂಧಿಸಿ ।
ಜತನದಿಂದಲಿ ಮರಳಿದನು ಕಿಷ್ಕಿಂಧೆಯರಮನೆಗೆ ॥ ೮–೩೪ ॥

॥ **ಸೌರಾಷ್ಟ್ರ – ತ್ರಿವುಡೆ** ॥
ಅತ್ತ ಮಾಯಾವಿಯನು ಮರ್ದಿಸಿ ।
ಮತ್ತಚಿತ್ತೋತ್ಸಾಹದಿಂದಲಿ ।
ಸುತ್ತಮುತ್ತಲು ಮುತ್ತಿರುವ ಕಡು ।
ಗತ್ತಲೆಯೊಳು ॥ ೮–೩೫ ॥

ಬಟ್ಟೆಗಾಣದೆ ಪುಡುಕಿ ತಡಹುತ ।
ಮೆಟ್ಟಿ ಬಂಡೆಯ ಹೊರಗೆ ಬಂದನು ।
ಕಟ್ಟಕಡೆ ಸುಗ್ರೀವನಿಲ್ಲದೆ ।
ಸಿಟ್ಟಿನಿಂದ ॥ ೮–೩೬ ॥

ಪದಗತಿಗೆ ಧರೆ ನಡುಗೆ ಗರ್ಜನೆ ।
ಗದುರಿತಾ ಗಿರಿಶಿಖರವೆಲ್ಲವು ।
ಬೆದರಿದಾ ಸುಗ್ರೀವ ಬಂದುರೆ ।
ತೊದಲಿ ನುಡಿದ ॥ ೮–೩೭ ॥

॥ **ಕೇದಾರಗೌಳ –ಆಟ** ॥
ಬಂದೆಯೇನ್ನೈ ಅಣ್ಣ । ನೊಂದೆಯೇನ್ನೈ ನೀನು ।
ಕೊಂದೆಯಾ ದೈತ್ಯನನ್ನು ॥
ಇಂದೆಮ್ಮ ಬಲುಪುಣ್ಯ । ದಿಂದ ಕಾದುತ ಜಯ ।
ತಂದುದು ಚೆಂದವಾಯ್ತು ॥ ೮–೩೮ ॥

ಕಪಟಿ ಸೋದರದ್ರೋಹಿ । ವಿಪರೀತಮತಿ ಪಾಪಿ ।
ಅಪರಾಧಿಗೆಲ್ಲಿ ಕ್ಷಮೆ ॥
ಅಪಕೃತ್ಯಕಾಗಿ ದೇಶಾಂತರ ಶಿಕ್ಷೆಯ ।
ನುಪಭೋಗಿಸೆಲೊ ಪಾತಕಿ ॥ ೮–೩೯ ॥

ಸಾಧಿಸುವರೆ ಧರ್ಮ । ಸಾಧುವಲ್ಲವು ವೈರ ।
ಸೋದರ ವಚನಸತ್ಯ ॥
ಭೇದಭಾವಗಳಿಲ್ಲವೆನುತಾಂಜನೇಯನು ।
ಕ್ರೋಧವ ತ್ಯಜಿಸೆಂದನು ॥ ೮–೪೦ ॥

ನಾಡಿನಾಚೆಗೆ ನೂಂಕಿ । ಕೇಡಿಗನನು ಕೂಡು ।
ತಾಡುವ ಕೆಳೆಯರನು ॥
ನೋಡದೆ ರುಮೆಯನ್ನು । ಬಾಡಿಪೋಗಲಿಯೆಂದು ।
ಕೋಡಗ ಸೆರೆಗಿಟ್ಟನು ॥ ೮–೪೧ ॥

॥ **ದ್ವಿಪದಿ** ॥
ಮುನಿ ಮತಂಗನ ಶಾಪವಿಹ ಕಾರಣದಲಿ ।
ದಿನಪನಂದನ ಋಷ್ಯಮೂಕವೇರುತಲಿ ॥ ೮–೪೨ ॥

ಹನುಮಾದಿ ಕಪಿವೀರರೊಡನೆ ಬಾಳುತಲಿ ।
ಮನದಿ ಮಡದಿಯ ನೆನೆದು ಬಲು ದುಃಖಿಸುತಲಿ ॥೮–೪೩॥

ಇರಲಿಂತು ಬಲು ತಪಸ್ಸಿನಲಿ ವಾನರರು ।
ಪರಮಸಿದ್ಧಿಯ ಪಡೆದು ಮಹಿಮರೆನಿಸಿದರು ॥ ೮–೪೪ ॥

॥ **ಮಧುಮಾಧವಿ – ತ್ರಿವುಡೆ** ॥
ಮೆರೆವ ಪಂಪಾಸರಸಿತೀರಕೆ ।
ಬರುತೆ ದಶರಥಕುವರರು ॥
ತರುಲತೆಯ ಸುಮರಾಜಿ ನೀರೊಳು ।
ಬರೆದ ಚಿತ್ರವ ಕಂಡರು ॥ ೮–೪೫ ॥

ಗಾಳಿ ಮಳೆಯೆರಚಿರಲು ಸುಮಗಳ ।
ಬಾಳನುರಿ ನೂರ್ಮಡಿಸಿತು ॥

ಕೇಳ ಕೋಕಿಲವಾಣಿ ಚಿಂತೆಯ ।
ಜ್ವಾಲೆ ಮನವನು ದಹಿಸಿತು ॥ ೮-೪೬ ॥

ಬಂಡೆಮಂಡೆಯ ನೆತ್ತಿ ಮೋಡವ ।
ನಂಡಲೆದು ಮಲೆಯುತ್ತಿದೆ ॥
ಗಂಡುಗಲಿಯೋರುವನನಿಲ್ಲಿಯೆ ।
ಕಂಡಪೆವು ಎನಿಸುತ್ತಿದೆ ॥ ೮-೪೭ ॥

ಶಬರಿ ಪೇಳದ ಋಷ್ಯಮೂಕವು ।
ಸಬಲವೆಂದೆನಿಸುತ್ತಿದೆ ॥
ಶುಭವನೀಯುವ ಸ್ನೇಹಗುಣ ಸ ।
ನ್ನಿಭನ ನೆಲೆಯೆನಿಸುತ್ತಿದೆ ॥ ೮-೪೮ ॥

॥ **ಭೈರವಿ – ಝಂಪೆ** ॥
ಕಂಡೆ ಕಂಡೆನು ಕಂಡೆ । ಬಂಡೆಯಂದದೊಳಂತು ।
ಕಂಡರಣೆಗೊಂಡವನ । ಕಂಡೆ ನಾನಿಂದು ॥ ೮-೪೯ ॥

ಏಳು ಗೆಳೆಯನೆ ಏಳು । ತಾಳು ನಿಜರೂಪವನು ।
ಸೀಳ ಬಂಡೆಯ ತೋರು । ಬಾಳಬುಗ್ಗೆಯನು ॥ ೮-೫೦ ॥

ವಚನ: ಆಗಳಾ ಬೃಹದ್‌ಭವ್ಯ ವಾನರನೊರ್ವಂ ಗೋಚರಿಸಿ
ಧೀರವಾಣಿಯೊಳ್ ಪೇಳ್ದನಿಂತೆಂದು–

॥ **ಕೇದಾರಗೌಳ –ಅಟ** ॥
ಗೆಲಮಕ್ಕೆ ಸೊಗಮಕ್ಕೆ ನಿಮಗೆ ಮಂಗಳಮಕ್ಕೆ ।
ಕೆಳೆಯಕ್ಕೆ ನಿಮಗೆಮಗೆ ॥
ಚೆಲುವಿನ ತವರು ಈ ಮಲೆಗೆ ನಲ್ ಬರಮಕ್ಕೆ ।
ಸಲುಗೆ ವಂದನೆ ನಿಮಗೆ ॥ ೮-೫೧॥

ಮರುತಸಂಭವನಾಂಜನೇಯ ಹನುಮ ನಾನು ।
ದೊರೆ ಸುಗ್ರೀವನ ಸಚಿವ ॥
ಅರಿತುಕೊಂಡಿಹೆ ಶಬರಜ್ಜಿಯ ಮನೆಯಿಂದ ।
ಬರುತಿರ್ಪುದನು ಬೇಹಿಂದ ॥ ೮-೫೨ ॥

ನಿಮ್ಮ ದುಮ್ಮಾನವು ನಮ್ಮ ದುಃಖಗಳೊಂದೇ ।
ಸಮ್ಮತದೊಳು ನೆಂಟರ್‍ರೈ ॥
ನಿಮ್ಮ ಭಾಸ್ಕರಕುಲ ಮೈತ್ರಿಗೆ ರವಿಜಾತ ।
ನಮ್ಮನು ಕಳುಹಿರ್ಪನ್ನೈ ॥ ೮-೫೩ ॥

॥ **ಸೌರಾಷ್ಟ್ರ – ತ್ರಿವುಡೆ** ॥
ಚಿತ್ತರಿಸಿ ಕಪಿಕುಲದ ಚರಿತೆಯ ।
ಮತ್ತೆ ಮಾರುತಿ ಗುಹೆಯ ಮಾರ್ಗದಿ ।
ಹತ್ತಿಳಿದು ಕರೆತಂದನಾ ರವಿ ।
ಪುತ್ರನೆಡೆಗೆ ॥ ೮-೫೪ ॥

ವಚನ: ವಾನರಾಧಿಪ ಸುಗ್ರೀವಂ ಬಿನ್ನೈಸಿದನಿಂತು –

ಧನ್ಯನಾಗಿಹೆ ದಾಶರಥಿ ನಾ ।
ನಿನ್ನ ಕೆಳೆಯನು ಪಡೆದು ಬಾಳಿನ ।
ಬನ್ನ ತೊಲಗಿತು ನನಗೆ ಮರ್ಕಟ ।
ಮನ್ನೆಯರಿಗೆ ॥ ೮-೫೫ ॥

ನೀನೆನಗೆ ನಾ ನಿನಗೆ ದುಷ್ಟ ವಿ ।
ತಾನ ವಧೆಗನಿಬರಲಿ ಮೈತ್ರಿಯು ।
ಪೂರ್ಣವೆನಗ್ನಿಯೆ ಸಾಕ್ಷಿ ರಘುಕುಲ ।
ಸೂನು ಕೇಳು ॥ ೮-೫೬ ॥

ನಿನ್ನರಸಿಯನ್ನರಸಿ ಕದ್ದವ ।
ನನ್ನೊರಸಿ ಸವೆಸುವೆನು ಸರ್ವವ ।
ಇನ್ನು ಬಡವನೊಳೆಲ್ಲಿ ಕಡವರ ।
ಮನ್ನಿಸೆನ್ನ ॥ ೮-೫೭ ॥

ವಚನ: ರವಿಜಾತನಂ ರಾಮಚಂದ್ರಂ ತಕ್ಕೈಸಿ–

ಅಳದಿರ್‍ರೈ ಸುಗ್ರೀವ ವಾನರ ।
ಪೊಳಲು ನಿನ್ನದು ದಿಟದಿ ಪರಸತಿ ।
ಗಳುಪಿದಾತನು ಸತ್ತನೆಂದರಿ ।
ತಳೆದೆ ಶಪಥ ॥ ೮-೫೮॥

॥ **ಭಾಮಿನಿ** ॥
ನೀರದೋಣೆಯಲಿ ಮಿಂದು ಪಣ್ಣಲ ।
ಬೇರು ಬಿಕ್ಕೆಯನುಂಡು ದಣಿವು ನಿ ।
ವಾರಿಸುತ ಸಂಜೆಯಲಿ ಕಂಡರು ಗಿರಿಧರಾವ್ಯೂಹ ॥
ನಾರಿಮಣಿ ರುಮೆಯನ್ನು ವಾಲಿಯು ।
ಬೇರೆ ಸೆರೆಯೊಳಗಿಟ್ಟ ಗಿರಿತುದಿ ।
ತೋರಿಸುತ ಹನುಮಂತ ರವಿಜನ ಶೋಕವನ್ನೊರೆದ ॥ ೮–೫೯ ॥

ವಚನ: ಆಗಳ್ ರಾಘವಂ ತಾನಿಂತೆಂದನು –

॥ **ಸಾಂಗತ್ಯ –ರೂಪಕ** ॥
ಮಾರುತಾತ್ಮಜ ಕೇಳು ನಾರಿಯಿರುವ ಸ್ಥಳ ।
ಸೂರ್ಯಕುಮಾರ ನೋಳ್ಪನಲಾ ॥
ದೂರದಿಂದಲೆ ಕಾಂಬ ಚೂರುಪುಣ್ಯದ ಫಲ ।
ಈ ರಾಮಗಿಲ್ಲವಾಯ್ತಲ್ಲಾ ॥ ೮–೬೦ ॥

ವಚನ : ಅದಕಾ ಜಾಂಬವಂತರು ಇಂತೆಂದರು –

ದೇವ ಚಿಂತಿಪೆ ಏಕೆ ಸಂಪಾತಿಸೋದರ ।
ಸಾವಿನ ಹೊತ್ತು ಪೇಳಿರ್ಪ ॥
ನೋವಿನ ನುಡಿಯರ್ಥ 'ವಿತ್ತೇಶನವರಜ' ।
ರಾವಣನೆಂಬುದೆ ಸತ್ಯ ॥ ೮–೬೧ ॥

ಲಾಲಿಸೊಂದಿನ ಬಾನಬಂಡಿಯಿಂದಲಿ ಕೆಳ ।
ಬೀಳೆ ಪೊನ್ನಿನ ಒಡವೆಗಳು ॥
ಆಲೆಯಿಂದಲಿ ತಂದು ಕಪಿಗಳು ಸುಗ್ರೀವ ।
ಪಾಲಿಸೆಂದೆನುತ ನೀಡಿದರು ॥ ೮–೬೨ ॥

॥ **ಭಾಮಿನಿ** ॥
ದಿನಪಸುತ ತಂದಿಟ್ಟ ಸೀತೆಯ ।
ಕನಕಮಯದಾಭರಣ ನೋಡುತ ।
ತನುವು ತತ್ತರಗೊಂಡು ಹನುಮನ ವಕ್ಷಮೇಲೆರಗಿ ॥
ಕ್ಷಣದೊಳೆಚ್ಚರಗೊಂಡು ರಾಘವ ।
ವನಿತೆಯನು ಕದ್ದವಗೆ ಕಾಲನ ।
ಮನೆಯ ಬಾಗಿಲ ತೆರೆವೆನೆನ್ನುತ ರೋಷಫಣಿಯಾದ ॥ ೮–೬೩ ॥

ವಚನ: ಆಗಳಾ ಸಮದುಃಖಿ ಸುಗ್ರೀವಂ ರಾಮಂಗೆ ಬಿನ್ನೈಸಿದನಿಂತು–

॥ **ಭೈರವಿ – ಝಂಪೆ** ॥
ಕೇಳರಿಂದಮ ನಿನ್ನ ಸಂಕಟದ ಖಡ್ಗಮಂ ।
ತಾಳ್ಮೆಯೊರೆಗಿರುಕು ಬೀಸದಿರು ಬರಿದೆ ॥
ಕೇಳಬಲ್ಲೆವು ಲಂಕೆ ಸುಲಭಮಲ್ತಸುರಪುರಿ ।
ಖೂಳನಂ ಪುಡುಕೆ ಕಳುಹುವೆನು ಚರರ ॥ ೮–೩೪ ॥

ವಾಲಿಯೇ ತಡೆಯೆಮಗೆ ರಾವಣೇಶ್ವರನಲ್ತು ।
ಕಾಳೆಗದಿ ಜಯಿಸೆ ಶತಮಾನವೇಳ್ಕು ॥
ಪೇಳ್ವೆನೇಂ ಶತ್ರುಬಲದೊಳಗರ್ಧಮಂ ಪಡೆವ ।
ತೋಳಬಲ್ವಿಹುದವಗೆ ಶಕ್ರವರದಿ ॥ ೮–೩೫ ॥

ದುಂದುಭಿಯ ಕೋಡೆರಡ ತಿರುಪಿ ತಿರ್ರನೆ ಬಿಸುಟ ।
ಬಿಂದುನೇತ್ತರು ಬೀಳೆ ಮುನಿ ಮತಂಗ ॥
ಅಂದು ಶಪಿಸಿರ್ದನದರಿಂದ ರಕ್ಷೆಯು ನಮಗೆ ।
ಒಂದೆ ಬಾಣದಿ ತಾಲವೇಳ ಕಡಿದ ॥ ೮–೩೬ ॥

ವಚನ: ವಾಲಿಯ ಸಾಮರ್ಥ್ಯಮಂ ತಿಳಿದು ರಾಘವಂ ನುಡಿದನಿಂತು–

॥ **ಶಂಕರಾಭರಣ – ಮಠ್ಯ** ॥
ವಾನರೇಂದ್ರ ತಿಳಿದೆ ನಿನ್ನ ।
ಬೇನೆ ಬೇಸರಂಗಳೆಲ್ಲ ।
ಏನನೆಸಗೆ ಮನದ ಶಂಕೆ । ನ್ಯೂನವಾಪುದು ॥ ೮–೩೭ ॥

ವಚನ: ಅದಕಾ ಸುಗ್ರೀವಂ ಇಂತೆಂದನು –

ಗೆಲ್ಲಲಾರೆ ವಾಲಿಯೊಡನೆ ।
ಬಲ್ಲೆನವನ ಪೌರುಷವನು ।
ಬಿಲ್ಲಜಾಣ್ಮೆ ನಿನ್ನ ಮೆಯ್ಯ । ಬಲ್ಮೆ ತೋರಿಸು ॥ ೮–೩೮ ॥

ಬಟ್ಟೆಯಲ್ಲಿ ಬಿದ್ದ ದೈತ್ಯ ।
ನಟ್ಟೆಯನ್ನು ಲಕ್ಷ್ಮಣಾಂಕ ।
ತೊಟ್ಟ ಬಿಲ್ಲಕೊಪ್ಪಿನಿಂದ । ತಟ್ಟನೆಸೆದನು ॥ ೮–೩೯ ॥

ಸಾಲುಗೊಂಡ ತಾಲವೃಕ್ಷ ।
ವೇಳನೊಂದೆ ಬಾಣದಲ್ಲಿ ।
ನೀಲವರ್ಣ ತರಿಯೆ ರವಿಜ । ಪಾಲಿಸೆಂದನು ॥ ೮-೨೦ ॥

॥ **ವಾರ್ಧಕ** ॥
ಮುಂಬೆಳಗು ಮೂಡುತಿರೆ ಶ್ರೀರಾಮಚಂದ್ರಮನ ।
ಬೆಂಬಲದ ಧೈರ್ಯದಿಂ ಕೆಂಬಣ್ಣಪೂಗಳಂ ।
ಕೆಂಬಕ್ಕಿಗರಿಗಳಂ ಧರಿಸಿ ಕಪಿಕೇತನವ ತೂಗುತ್ತ ಸುಗ್ರೀವನು ॥
ಹಂಬಲಿಸಿ ಮಡದಿಯಂ ಮಲೆತು ಪೌರುಷದಿಂದ ।
ಮುಂಬರಿಯುತೊಂದರೆಯ ಬಲುಬಂಡೆಯನ್ನಡರು ।
ತಂಬರವು ಬಿರಿವಂತೆ ಗರ್ಜಿಸುತ ವಾಲಿಯಂ ಮೂದಲಿಸಿ
ಗುಟುರಿಕ್ಕಲು ॥ ೮-೨೧ ॥

॥ **ಸೌರಾಷ್ಟ್ರ – ತ್ರಿವುಡೆ** ॥
ಬಿಂಕವೇ ಸುಗ್ರೀವಗೆನ್ನುತ ।
ಕೊಂಕುದುಟಿಮೇಲ್ ಮೀಸೆ ಕುಣಿಸುತ ।
ಕಂಕುಳಲಿ ತರುಸಿಲುಕಿ ಬರೆ ಛಲ ।
ದಂಕ ವಾಲಿ ॥ ೮-೨೨ ॥

ನುಗ್ಗಿವನು ಸುಗ್ರೀವನಾಕ್ಷಣ ।
ಜಗ್ಗಿ ಸೆಳೆಯುತ ವಜ್ರಮುಷ್ಟಿಯ ।
ಮಗ್ಗುಲಿಗೆ ಬಡಿದಿರಲು ಕೋಪವು ।
ವೆಗ್ಗಳಿಸಲು ॥ ೮-೨೩ ॥

ತಮ್ಮನೆಂಬೊಲವರಕೆ ತಾರೆಯ ।
ಧರ್ಮವಚನಕೆ ರುಮೆಯ ಹದಿಬದೆ ।
ನಿರ್ಮಲತ್ವಕೆ ಚ್ಯುತಿಯ ತಾರದೆ ।
ಸುಮ್ಮಗಿಹೆನು ॥ ೮-೨೪ ॥

ಸಿಡಿದು ರೋಷದೊಳೊಂದು ಬಂಡೆಯ ।
ಕೆಡೆದು ಬೇರುಗಳುಡಿದು ಮರದಿಂ ।
ಹೊಡೆದು ಬೀಳಿಸಿ ಮೆರೆವ ರವಿಜಗೆ ।
ನುಡಿದನಿಂತು ॥ ೮-೨೫ ॥

॥ **ಭಾಮಿನಿ** ॥
ಬಾಡಿಹುದು ಪಗೆತನವು ನಿನ್ನೊಳು ।
ಮೂಡಿಹುದು ಸೋದರತೆ ಸಹಜನೆ ।
ಕೂಡಿಕೊಂಡಾ ಬಡಗನೋರ್ವನ ಕೆಣಕಿದಪೆಯೇನು ॥
ಬೇಡವೀ ಸಾಹಸವು ರಾವಣ ।
ಮಾಡಿಕೊಂಡಿಹನಲ್ತೆ ಮೈತ್ರಿಯ ।
ಮೂಢ ತೊಲಗೆಂದೆನುತ ವಾಲಿಯು ನಡೆದ ಮನೆಯೆಡೆಗೆ ॥ ೮–೭೬ ॥

ವಚನ: ಪಿಂದಿರುಗಿದಾ ಸುಗ್ರೀವಂ ರಾಮನಂ ಕರೆದು ಇಂತೆಂದನು –

॥ **ಸಾಂಗತ್ಯ – ರೂಪಕ** ॥
ನಂಬಿಸಿ ಕೊಂದೆಯ್ಯೆ ಕರುಣಾಳು ರಾಘವ ।
ಡಂಬಕನೀತಿ ಆರ್ಯರದೆ ॥
ಕುಂಬಿಟ್ಟು ವಾನರೇಶ್ವರ ವಾಲಿ ದುಸ್ಸಾಧ್ಯ ।
ನೆಂಬುದ ಮೊದಲೆ ಪೇಳರ್ದೆ ॥ ೮–೭೭ ॥

ವಚನ: ರಾಘವಂ ಪೇಳ್ದನದಕೆ –

ಮನ್ನಿಸಬೇಕಯ್ಯ ರೂಪಸಾದೃಶ್ಯದಿ ।
ನಿನ್ನಣ್ಣ ನಿನಗೆ ಈರ್ವರಿಗೆ ॥
ಭಿನ್ನಭೇದಗಳನ್ನು ಕಾಣದಾದೆನು ನಾನು ।
ಇನ್ನೊಮ್ಮೆ ಕರೆಯೊ ವಾಲಿಯನು ॥ ೮–೭೮ ॥

ಆ ಮಿಗಗಳಿಗೆ ಬೇಂಟೆಯ ಸೋವು ಬಲಿವಂತೆ ।
ತಾಮಸತನವ ತೋರುವುದು ॥
ಪೂಮಾಲೆಯೊಂದನು ತೊಡಿಸುವೆ ಕುರುಹಿಂಗೆ ।
ಕಾಮಾಂಧನನು ಕರೆ ರಣಕೆ ॥ ೮–೭೯ ॥

ವಚನ: ಇತ್ತ ವಾಲಿಯರಮನೆಯೊಳ್ –

॥ **ಕೇದಾರಗೌಳ – ಅಟ** ॥
ಸೆಜ್ಜೆಯ ಮನೆಯಲ್ಲಿ ವಾಲಿಯ ಪದಸೇವೆ
ಯುಜ್ಜುಗದೊಳು ತಾರೆಯು ॥
ಬಿಜ್ಜಣಿಗೆಯ ಬೀಸಿ ಮದ್ದಿಕ್ಕಿ ಗಾಯಕ್ಕೆ ।
ಕಜ್ಜ ಮುಂದೇನೆಂದಳು ॥ ೮–೮೦ ॥

ಬಡಿದಟ್ಟಿ ಬಂದೆನು ರುಮೆಯ್ಯೈದೆತನಕೆ ಕೇ ।
ಡಡಸದ ತೆರ ತಮ್ಮನ ॥
ಬಡಗ ರಾಮನ ನಾಮವಿಡಿದು ಕೂಗಿದನ್ನೈಸೆ ।
ಕಡೆಗು ಕಾಣಿಸದಾದನು ॥ ೮-೮೧ ॥

ಮಡದಿಮಾತನು ಮೀರಿ ರುಮೆಯ ಸೆರೆಯೊಳಟ್ಟು ।
ಕಡೆಗಣಿಸಿದೆ ಪ್ರೀತಿಯ ॥
ಒಡಹುಟ್ಟಿದವನ ತಾಯ್ನೆಲಕೆ ಕರೆಸಿಕೊಳ್ಳ ।
ಲೆಡೆಗೊಡಲಿಲ್ಲ ಮನ ॥ ೮-೮೨॥

ಅದೊ ಮತ್ತೆ ಸುಗ್ರೀವ ಕರೆವ ಧ್ವನಿಯ ಕೇಳು ।
ಮದವೆಷ್ಟರವಗೆ ನೋಡು ॥
ಸದೆಯದಿದ್ದರೆ ಮುಂದೆ ಹದಮೀರುವುದು ಎಂದು ।
ಕದನಕರ್ಕಶ ಪೊರಡೆ ॥ ೮-೮೩ ॥

ಮನದನ್ನ ಹಟಕೆ ಬಾಳಿನ ಭಾಗ್ಯ ಬಿಡದಿರು ।
ಗುಣದೊಳೌದಾರ್ಯ ಮೇಲು ॥
ಜನನಿ ಜನಕರನ್ನು ಸಹಜಾತನೊಲವನ್ನು ।
ಮನವಾರೆ ನೆನೆಯುವುದು ॥ ೮-೮೪ ॥

॥ **ಭಾಮಿನಿ** ॥
ಅನ್ನೆಗದಿ ನೆನಪಾಯ್ತು ಬಾಲ್ಯದಿ ।
ಚಿಣ್ಣ ಸುಗ್ರೀವನನು ಮೋಹದಿ ।
ಬೆನ್ನಮೇಲಕೆ ಪೊತ್ತು ಲವಣವ ಕೇಳ್ದ ಸವಿಚಿತ್ರ ॥
ಮನ್ನಿಸೌ ರುಮೆಯನ್ನು ಮನದೊಳ ।
ಗನ್ಯಮಂ ನೆನೆಯದಿರು ಕಾಳೆಗ ।
ವನ್ನು ಪೂಡುವ ನೆವದಿ ತಮ್ಮನ ತಹೆನು ತಾನೆಂದ ॥ ೮-೮೫ ॥

॥ **ಮಾರವಿ - ಏಕ** ॥
ಸಂಧ್ಯಾಸಮಯದಿ ಸಹಭವನೆಲ್ಲಿಹ ।
ನೆಂದೆನುತಲಿ ವಾಲಿ ॥
ಪಿಂದಿಕ್ಕುತ ಕೋಂಟೆಯ ಪೆರ್ಬಾಗಿಲ ।
ಬಂದನು ಬಲಶಾಲಿ ॥ ೮-೮೬ ॥

ಕಂಡಾಗಲೆ ಸುಗ್ರೀವನು ಕ್ರೋಧದಿ ।
ಬಂಡೆಯ ಪಿಡಿದು ನಿಲೆ ॥
ಗಂಡುಗಲಿಯು ಭುಜದಂಡದೊಳೇರಿಸಿ ।
ಕೊಂಡೋಡಿದನು ಭಲೆ ॥ ೮–೮೭ ॥

॥ **ಭಾಮಿನಿ** ॥
ಆಸುರೀಸಾಧನೆಯಹಂಕೃತಿ ।
ವಾಸಿಪಂಥದ ಸ್ವಾರ್ಥ ನೆಮ್ಮುತೆ ।
ದ್ವೇಷಿಸುತ ಸತ್‌ಶಕ್ತಿ ದೈವೀವಿಮುಖಪಥಪಿಡಿಯೆ ॥
ಈ ಸಕಲ ವಿಶ್ವದೊಳು ಪೇಳಾ ।
ದೋಷಯುತ ವಿಕ್ರಮದ ಬೆನ್ನೆ ಕೃ ।
ಪಾಶರಕೆ ನಿಜಲಕ್ಷ್ಯಮೈಸಲೆ ಕೊನೆಗೆ ಬೇರಿಹುದೆ ॥ ೮–೮೮ ॥

॥ **ಸಾಂಗತ್ಯ – ರೂಪಕ** ॥
ಬಟ್ಟೆದೋರದೆ ಬೇರೆ ರಾಘವ ಕಣೆಯೊಂದ ।
ಬಿಟ್ಟ ವಾಲಿಯ ಬೆನ್ನಿನೆಡೆಗೆ ॥
ಕಟ್ಟಿ ದೀವದ ಹೋರಿ ಬೇಟೆಯಾಡಿದ ಹಾಗೆ ।
ತಟ್ಟನೆ ಬಿದ್ದ ಧಾರುಣಿಗೆ ॥ ೮–೮೯ ॥

ವಚನ: ಮತ್ತಾ ವಾಲಿ ಉದ್ಗರಿಸಿದನಿಂತು –

ಏನ ಮಾಡಿದೆ ತಮ್ಮ ನಿನ್ನನಳ್ಕರೆಗೈದ ।
ಈ ನನ್ನ ತೋಳ ಛಿದ್ರಿಸಿದೆ ॥
ಬಾಣ ಬೆನ್ನಿಗೆ ಪೂಡಿದಂಥ ರಾಮನ ಮೊಗ ।
ಕಾಣಿಸಬಾರದೇನಯ್ಯ ॥ ೮–೯೦ ॥

ಆರು ನೀನೆಲೊ ವೀರವೇಷಿ ಬಿಲ್ವಿಡಿದಂಥ ।
ಕಾರ್ಯಕೀಳ್ಮೆಗೆ ಕಯ್ಯನಿಟ್ಟೆ ॥
ಕೂರುಮೆಯಿಂದ ತಮ್ಮನ ಪೊತ್ತುಪೋಪಾಗ ।
ಚೋರತ್ವದಿಂದೆನ್ನ ಕೊಂದೆ ॥ ೮–೯೧ ॥

ನಿನ್ನ ಪೊಗಳುತಿರ್ದ ಎನ್ನ ತಾರೆಯ ಬಾಳ್ಗೆ ।
ಕಣ್ಣಿಲ್ಲದಂತೆ ಕಿಚ್ಚಿಟ್ಟೆ ॥
ಮುನ್ನ ಸ್ವಾರ್ಥಕೆ ಧರ್ಮವನ್ನೆ ಹೋಮವ ಗೈದೆ ।
ನಿನ್ನ ಕೀರುತಿಗೆ ಧಿಕ್ಕಾರ ॥ ೮–೯೨ ॥

ವಚನ: ರಾಮಚಂದ್ರಂ ವಾಲಿಯ ಸಮ್ಮುಖಕೆ ಬಂದು –

॥ **ಕೇದಾರಗೌಳ – ಆಟ** ॥
ವಿಧಿಯ ವಿನ್ಯಾಸವ ನಿಂದಿಸಿ ಫಲವಿಲ್ಲ ।
ಒದಗಿ ಬಂದಪುದು ಶಿಕ್ಷೆ ॥
ಹದಿಬದೆಗಳುಪಿದ ಮದಮುಖರಿಂಗೆ ಕಾ ।
ದಿದೆ ಕಡೆಗಾಲ ಹೀಗೆ ॥ ೮–೯೩ ॥

ವಿಧಿಯೆಂದಾದರೆ ನಿನ್ನ ಸುದತಿಯ ಕದ್ದೊಯ್ದು ।
ಹದನಮಿಂತಹುದಲ್ಲವೆ ॥
ಸದರವಾಡದಿರೆನ್ನ ಮಗಳಂತೆ ರುಮೆಯು ತಾ ।
ನಿದಕೆ ತಾರೆಯೆ ಸಾಕ್ಷಿಯು ॥ ೮–೯೪ ॥

ಬಗೆಬಗೆಯಿಂದ ಬೇಡಿದ ಸಹೋದರನನ್ನು ।
ಪಗೆತನದಿಂದಟ್ಟಿದೆ ॥
ಜಗದೊಳಗಿಂತು ನಿರ್ದೋಷಿಯ ಕಳೆದ ಕೇ ।
ಡಿಗೆ ಶಿಕ್ಷೆಯನು ನೀಡಿದೆ ॥ ೮–೯೫ ॥

ನೀ ತಳುವಿದೆ ದುಷ್ಟಘಾತಶಿಕ್ಷಣಕೆ ಮ ।
ತ್ತೀತನೀಗಳು ಪಾಪಿಯಲ್ತು ॥
ಪ್ರೀತಿಯಿಂದಲಿ ಪಶ್ಚಾತ್ತಾಪಪೊಂದಿದ ಶುದ್ಧ ।
ಭ್ರಾತೃಮೈತ್ರಿಯ ಜೀವನು ॥ ೮–೯೬ ॥

॥ **ಕಾಂಭೋದಿ – ಝಂಪೆ** ॥
ಓ ವೀರ ವಾನರನೆ ತಪ್ಪಿದೆನು ನಾ ನಿನಗೆ ।
ದೇವತಾವರದ ಬಲೆಯೊಳಗೆ ಸಿಲುಕಿ ॥
ದೇವಿ ಸೀತೆಯನಗಲ್ದ ಮಬ್ಬಿಂದ ಮಂಕಡಸಿ ।
ಜೀವಗೊಂಡೆನು ಮರದ ಮರೆಯೊಳಡಗಿ ॥ ೮–೯೭ ॥

ಮೋದಗೊಂಡೆನು ನಿನ್ನ ಬೀರ ಸಲ್ಲಕ್ಷಣಕೆ ।
ಈ ಧರಣಿಯೊಳು ಸತ್ಯವ್ರತನು ನೀನೆ ॥
ಸಾಧಿಸುತೆ ಕಜ್ಜಮಂ ನೆರವು ನಿಮಗಿರುತಿರ್ದೆ ।
ಆದರೇಂ ವಿಧಿಯ ಬಗೆ ಬೇರೆ ತಾನೆ ॥ ೮–೯೮ ॥

ತಾರೆ ಮೇಣಂಗದರಿಗೀ ವಾರ್ತೆ ತಲುಪಿದುದೆ ।
ಮಾರುತಾತ್ಮಜ ಜಾಂಬವಂತರಿಹರೆ ॥
ವೀರ ಸುಗ್ರೀವ ನೆರವಾಗು ದಶರಥಸುತಗೆ ।
ಸಾರುತಿದೆ ಸಂಧ್ಯೆ ಕಿಷ್ಕಿಂಧೆ ಬಳಗೆ ॥ ೮-೯೯ ॥

ತಾಯ್ತಂದೆಯರ ನಾಡೆ ತಾಯ್ನುಡಿಯ ನೆಲೆವೀಡೆ ।
ಆಯಸಕೆ ತೊಟ್ಟಿಲುಯ್ಯಾಲೆಯಾದೆ ॥
ಮಾಯೆ ಸತಿ ಧರ್ಮದಾಶ್ರಯ ಶಾಂತಿ ನೀನಾದೆ ।
ನೋಯದಿರು ತೊರೆವೆ ಮನ್ನಿಪುದು ತಾಯೆ ॥ ೮-೧೦೦ ॥

॥ **ಭಾಮಿನಿ** ॥
ತಾರೆ ಕಂಬನಿಗೂಡಿ ಬಂದು ಕು ।
ಮಾರನನು ರುಮೆವಶಕೆ ನೀಡುತ ।
ಸಾರಿ ರಘುವರನಡಿಗೆ ಮಣಿದಳು ಮಹಿಮೆ ಕೊಂಡಾಡಿ ॥
ಧೀರವಾನರ ವಾಲಿಯಾತ್ಮ ಶ ।
ರೀರಮಂ ತೊರೆದಿರಲು ಪತಿಚಿತೆ ।
ಯೇರಿದಳು ದಂಪತಿಗಳೊಂದಾದರು ವಿಭೂತಿಯೊಳು ॥ ೮-೧೦೧ ॥

॥ **ಕಂದ** ॥
ಮುಕ್ತಿಯ ನೀಡಿ ಕಬಂಧಗೆ ।
ಭಕ್ತಿಯ ಪಣ್ಣಿತ್ತ ಶಬರಿಯಾತ್ಮಕೆ ಮೋಕ್ಷಂ ॥
ಮತ್ತೌ ವಾಲಿಗೆ ಹರಿಪದ ।
ವಿತ್ತಿಹ ಕಥೆ ಯಕ್ಷಗಾನದ ಮಹಾಕಾವ್ಯಂ ॥ ೮-೧೦೨ ॥

***

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೬
ಸಾಗರೋಲ್ಲಂಘನಂ

ಪಾತ್ರಪಟಲ

ರಾವಣ

ಚಂದ್ರನಖಿ

ಸೀತಾದೇವಿ

ಮಂಡೋದರಿ

ಧಾನ್ಯಮಾಲಿನಿ

ಶ್ರೀರಾಮ

ಲಕ್ಷ್ಮಣ

ಸುಗ್ರೀವ

ನೀಲ

ನಳ

ಜಾಂಬವಂತ

ಅಂಗದ

ಹನುಮಂತ

ಗಜ

ಗವಯ

ಗವಾಕ್ಷ

ಮೈಂದ

ತಾರ

ಶರಗುಲ್ಮ

ಸಂಪಾತಿ

ಸುರಸೆ

ಸಿಂಹಿಕೆ

ಲಂಕಾಲಕ್ಷ್ಮಿ

ಸಾಗರೋಲ್ಲಂಘನಂ

॥ **ಮತ್ತೇಭವಿಕ್ರಿಡಿತ ವೃತ್ತ** ॥
ವರ ಸುಗ್ರೀವಗೆ ವಾನರೇಂದ್ರಪದಮಂ ನೀಡುತ್ತೆ ಸೌಮಿತ್ರಿಯಂ ।
ವೆರಸುತ್ತಾ ಗಿರಿಮಾಲ್ಯವಂತಗುಹೆಯೊಳ್ ಕಾರ್ಗಾಲ ಪೋಪನ್ನೆಗಂ ।
ವಿರಹಂಬಟ್ಟುರೆನೊಂದು ಬೆಂದು ನಿರತಂ ಸೀತಾಂಗನಾಮಂತ್ರದಿಂ ।
ಶರದಾಕಾಶನಿರೀಕ್ಷೆಯಿಂದಿರುತಿರಲ್ ಶ್ರೀರಾಮಚಂದ್ರಂ ಸದಾ ॥ ೬–೧ ॥

॥ **ಭಾಮಿನಿ** ॥
ಬಿತ್ತರದ ನೀಲಿಮೆಯ ಶರಧಿಯ ।
ನುತ್ತರಿಸಿ ದಶಕಂಠ ಸೀತೆಯ ।
ಪೊತ್ತುತಂದಿರೆ ಕನಕಲಂಕಾಲಕ್ಷ್ಮಿಯರಮನೆಗೆ ॥
ಗುಪ್ತಮಂದಿರದೊಳಗೆ ತಾನಿಳು ।
ಹುತ್ತ ಮುಂದಣ ಕಜ್ಜದೆಸಕಕೆ ।
ಮತ್ತೆ ಕರೆಕಳುಹಲ್ಕೆ ಬಂದಳು ತಂಗಿ ಚಂದ್ರನಖಿ ॥ ೬–೨ ॥

ವಚನ: ಅಣ್ಣನಂ ನುಡಿಸಿದಳ್ ಸಂತೋಷದಿಂದ ತಾನಿಂತು –

॥ **ರೇಗುಪ್ತಿ – ಆದಿ** ॥
ಭಳಿರೆ ಭಾಪುರೆ ಅಣ್ಣಯ್ಯ । ಸೀತೆಯ ತಂದ ।
ಛಲದಂಕಮಲ್ಲನಯ್ಯ ॥
ನಳಿನಮುಖಿಯನಿಂದು । ಸೆಳೆದು ತಂದಿಹುದೊಂದು ।
ಸುಲಭಸಾಹಸವಲ್ಲಯ್ಯ ॥ ಕೇಳಯ್ಯ ॥ ೬–೩ ॥

ಕದ್ದುತಂದಾಯ್ತು ನೀನು । ಜಾಣ್ಮೆಯ ತೋರಿ ।
ಗೆದ್ದು ಮುಂದೀವೆ ನಾನು ॥
ಮುದ್ದುಹೆಣ್ಣಿನ ಮನ । ಸಿದ್ಧಗೊಳ್ಳುವ ತೆರ ।
ಮದ್ದರೆಯುವೆನು ಮಾಣು ॥ ಇನ್ನೇನು ॥ ೬–೪ ॥

ಅತ್ತಿಗೆಯರ ಹಾಗಲ್ಲ । ನಿಶ್ಚಲಗುಣ ।
ಚಿತ್ತದೊಳಿದೆ ಸುಳ್ಳಲ್ಲ ॥
ಮತ್ತಿವಳನ್ನು ನಿ । ನ್ನತ್ತ ಬರುವ ಹಾಗೆ ।
ಬಿತ್ತುವೆ ಮೋಡಿಯೆಲ್ಲ ॥ ತಡವಿಲ್ಲ ॥ ೬–೫ ॥

॥ **ದ್ವಿಪದಿ** ॥
ಸೋದರಿಯೆ ತಿಳಿದಿರ್ಪೆ ಪೆಣ್ಗಳೆದೆಯಾಳ ।
ಈ ಧರೆಯೊಳೆನ್ನ ಬಯಸದರಾರು ಪೇಳಾ ॥ ೬–೭ ॥

ನನ್ನಿಚ್ಛೆ ಕೈಗೂಡುವಂತೆ ನೀ ಮಾಡು ।
ನಿನ್ನಾಸೆ ಈಡೇರುವುದು ತಿಳಿದು ನೋಡು ॥ ೬–೭ ॥

ಎನುತ ಜಾನಕಿಯನ್ನು ತಂಗಿಗೊಪ್ಪಿಸುತ ।
ದನುಜೇಶ್ವರನು ನಡೆದ ಮನದಿ ಶಂಕಿಸುತ ॥ ೬–೮ ॥

ಅನ್ನೆಗಂ ಕನಸೊಡೆದು ಸೀತೆ ಕಣ್ದೆರೆಯೆ ।
ಮನ್ನಿಸಿದಳಾಕೆಯಂ ಕೈಕಸಾತ್ಮಜೆಯೆ ॥ ೬–೯ ॥

॥ **ಸಾಂಗತ್ಯ– ರೂಪಕ** ॥
ಜಡಜಲೋಚನೆ ಭಯಪಡಬೇಡ ಸಂಸ್ಕೃತಿ ।
ಮಡಿಲೊಳಗಿರ್ಪೆ ನೀನೀಗ ॥
ಎಡಬಲದೊಳು ನಿನ್ನ ಬಿಡದೆ ರಕ್ಷಿಸುವಂಥ ।
ಪಡೆವೆಣ್ಗಳಿಹರು ನೋಡಿಲ್ಲಿ ॥ ೬–೧೦ ॥

ಅಣ್ಣನಾಚಾತುರ್ಯ ಮನ್ನಿಸುವುದು ನೀನು ।
ಭಿನ್ನಮಾರ್ಗದ ರಾಜಕೀಯ ॥
ನಿನ್ನೊಳಗಪರಾಧವನ್ನು ಸಾಧಿಸಿದುದು ।
ಬಿನ್ನಹವನು ಲಾಲಿಸವ್ವ ॥ ೬–೧೧ ॥

ಮಾನಿನಿ ನಿನಗೆ ಕುಂದಿನಿತು ಬಾರದ ಹಾಗೆ ।
ನಾನಿನ್ನ ನೋಡಿಕೊಳ್ಳುವೆನು ॥
ದಾನವ ಗೈದ ತಪ್ಪುಗಳನ್ನು ತಿದ್ದುವೆ ।
ನೀನೆಸಗುವುದು ಪೇಳ್ದುದನು ॥ ೬–೧೨ ॥

॥ **ಭಾಮಿನಿ** ॥
ಆ ನುಡಿಗೆ ನಯನೀತಿ ಪ್ರೀತಿಗೆ ।
ಮಾನಸದಿ ಬೆರಗಾಗಿ ಜಾನಕಿ ।
ಕಾಣುತಿಹ ಕಮನೀಯ ವೈಭವಗಳನು ಚಿಂತಿಸುತ ॥

ಕಾನನಾಂತರವಾಸ ನೋಂಪಿಯ ।
ಧ್ಯಾನಭಂಗವಿದೆಂದು ಭಾವಿಸಿ ।
ತಾನವಳ ನುಡಿಸಿದಳು ನೇಹದಿ ಬಳಿಗೆ ಕರೆದಿಂತು ॥ ೬–೧೩ ॥

॥ **ಕೇದಾರಗೌಳ– ಆಟ** ॥
ಶ್ರೀರಾಮನೊಡನೆ ಕಾಂತಾರವಾಸಕೆ ಬಂದೆ ।
ನಾರುಡೆಯುಟ್ಟುಕೊಂಡು ॥
ಕಾರುಣ್ಯನಿಧಿಯ ಕಣ್ಣೀರಲ್ಲಿ ಮುಳುಗಿಸಿ ।
ದೂರಳಾಗಿರುವೆನಿಂದು ॥ ೬–೧೪ ॥

ಎನಗೆ ಮಂದಿರ ಕಾಡು ಉಡುಗೆ ವಲ್ಕಲ ನೋಡು ।
ತಿನಲು ಗಡ್ಡೆಯು ಗೆಣಸು ॥
ಇನಿತು ಕಾರಣದಿಂದ ಇರಲಾರೆ ನಾನಿಲ್ಲಿ ।
ವನಕೆನ್ನ ಕಳುಹಿಕೊಡು ॥ ೬–೧೫ ॥

ಅಣ್ಣನಾಣತಿಯನ್ನು ಮೀರಲಾರೆನು ನಾನು ।
ನಿನ್ನೊಳಾತಗೆ ಗೌರವ ॥
ಇನ್ನಿದು ದಿಟಮ್ಮೈಸೆ ತನ್ನ ಸರ್ವಸ್ವವ ।
ಜನ್ನಗೈಯುವರೆ ಸಿದ್ಧ ॥ ೬–೧೬ ॥

ಸಾಕು ಸಾಕೆಲೆ ಬಿಡು ಕಾಕುಮಾತುಗಳೇಕೆ ।
ರಾಕ್ಷಸಾಂಗನೆ ಸುಶೀಲೆ ॥
ನೀ ಕರುಣದೊಳು ನನ್ನಿಷ್ಟದೊಲ್ ನಡೆವುದು ।
ನಾ ಕೃತಜ್ಞೆಯು ನಿನಗೆ ॥ ೬–೧೭ ॥

॥ **ಮಧ್ಯಮಾವತಿ– ತ್ರಿವುಡೆ** ॥
ರಘುವರನ ಪಡೆವನ್ನೆಗಂ ಮೈ ।
ಉಗೆಯೆ ಮಡಿಯೆಂದೆನುತ ಮೀಯದೆ ।
ಮಿಗೆ ನಿರಾಹಾರದೊಳು ಕಳೆದಳು ।
ಹಗಲು ಬೈಗುಗಳರಿಯದೆ ॥ ೬–೧೮ ॥

ಇದನು ತಿಳಿದಾ ದನುಜನೆದೆಯೊಳು ।
ಕುದಿದು ಕಾಂಚನ ಖಚಿತ ವಸನದೊ ।

ಳದನು ಮರೆಗೊಳಿಸುತ್ತ ಬಂದನು ।
ಹದಿಬದೆಯು ಕೆಡೆದಲ್ಲಿಗೆ ॥ ೬-೧೯ ॥

ಸಲ್ಲದೀ ಹಠ ನಿನಗೆ ಆರ್ಯೇರ ।
ಸಲ್ಲಲಿತ ಸಂಸ್ಕೃತಿಗೆ ನಿರಶನ ।
ದಲ್ಲಿ ತನುವನು ಹಿಂಸೆಗೊಳಿಸುತ ।
ಕೊಲ್ಲುವರೆ ಪೇಳ್ ದೇವಿಯೆ ॥ ೬-೨೦ ॥

ಶರಧಿತೀರದ ಗಿರಿಯ ಶಿಖರದಿ ।
ಮೆರೆವಶೋಕಾರಾಮಮಿರ್ಪುದು ।
ತರುಫಲಂಗಳನುಂಡು ಬೇಕಾ ।
ಗಿರುವ ನೋಂಪಿಯ ಮಾಳ್ಪುದು ॥ ೬-೨೧ ॥

॥ **ಭಾಮಿನಿ** ॥
ಕೊಡುವ ಕೊಂಬುವ ಕಾರ್ಯಮೆನ್ನುತ ।
ಪಡೆದು ರಾಜಾಜ್ಞೆಯನು ಸೀತೆಯ ।
ಬಿಡದೆ ತಂದಳಶೋಕವನದೆಡೆ ಚಂದ್ರನಖಿ ಬಳಿಕ ॥
ಮಡದಿ ಮಂಡೋದರಿಯನಾಗಲೆ ।
ನುಡಿಸಬೇಕೆಂದೆನುತ ದಶಶಿರ ।
ನಡೆತರುತ ಮೃಡನೆದುರು ಕಂಬನಿ ಮಿಡಿಯುತಿರೆ ಕಂಡು ॥ ೬-೨೨ ॥

॥ **ಕಾಂಭೋದಿ – ಝುಂಪೆ** ॥
ದೇವಿ ಮಂಡೋದರಿಯೆ ನಿನ್ನ ಮನದಾಳದಾ ।
ನೋವದೇನೆಂದೆನುತ ಬೆಸಸು ॥
ಈ ವಿಧದ ಬಿಸುಗಣ್ಣಪನಿಯ ಸೋಂಕಿಂಗೆ ವಸು ।
ಧಾವನಿತೆ ಬೆಂದು ಪೋಗುವಳು ॥ ೬-೨೩ ॥

ಜೀವಿತೇಶ್ವರ ಪತಿಯ ಹೃದಯಸಾನ್ನಿಧ್ಯ ಪೊರ ।
ತಾವುದೈ ಸತಿಮನೋರಥವು ॥
ಏವೇಳ್ವೆ ಮಗಳ ಕಂಬನಿಯ ಕಿಡಿಯಿಂದ ಭೂ ।
ದೇವಿ ಮರವಟ್ಟಿಹಳು ಬೆಂದು ॥ ೬-೨೪ ॥

ಮಾನಿನೀಮಣಿಯೆ ಕೇಳಾನು ನಿನ್ನವನೆ ನಿಜ ।
ಏನು ಸಂದೇಹ ಬಾಧಿಪುದು ॥
ಪೂರ್ಣಪ್ರೇಮಕೆ ಕೊರತೆಯಿಲ್ಲ ಹಂಚಿದರಿಂದ ।
ನ್ಯೂನತೆಯ ಮನದೊಳೆಣಿಸದಿರು ॥ ೬–೨೫ ॥

॥ **ನಾದನಾಮಕ್ರಿಯೆ – ಆಟ** ॥
ಹಧಿಬದೆ ಹೃದಯದ ಬೆಂಕೆಗೆ । ತಪ್ಪಿ
ಬದುಕಲಾಗುವುದೇನು ಲಂಕೆಗೆ ॥
ಮಧುರದಾಂಪತ್ಯ ಪ್ರೇಮದ ಪಾಶ ॥ ಕಿತ್ತು
ಸದೆವ ಸಾಹಸದಿಂದ ಕುಲನಾಶ ॥ ೬–೨೬ ॥

ಎನ್ನಾತ್ಮದೊಳತೋಟಿ ನೀ ಕಾಣೆ । ಸೀತೆ
ಯನ್ನು ತಂದುದರಿಂದ ಕೇಳ್ ಜಾಣೆ ॥
ಮನ್ಮಥವಾಂಛೆಯು ಕೃಶವಾಯ್ತು । ಇದು
ನಿನ್ನ ತಪದ ಫಲಮೆಂದಾಯ್ತು ॥ ೬–೨೭ ॥

ರಾಕೇಂದುವದನೆ ಜಾನಕಿಯನ್ನು । ನೋಡ
ಬೇಕೆಂದು ಬಯಸಿದೆ ಮನವಿನ್ನು ॥
ಆಕೆ ಎಲ್ಲಿರ್ಪಳೊ ನೋಡುವೆ । ನೀ ನಿ
ರಾಕರಿಸುವುದೇಕೊ ಬೇಡುವೆ ॥ ೬–೨೮ ॥

ನಿನ್ನ ದರ್ಶನದಿಂದ ಸೀತೆಯ । ದೃಢ
ಘನ್ನವಾಗುವುದು ನಿಸ್ಸಂಶಯ ॥
ನನ್ನಿಂದಾಕೆಯ ಕದ್ದ ರಾಮನು । ನಾನು
ಪುಣ್ಯವಶದಿ ಗೆದ್ದು ತಂದೆನು ॥ ೬–೨೯ ॥

॥ **ಕೇದಾರಗೌಳ– ಝಂಪೆ** ॥
ತಂದಿರುವೆ ದೇಹವನ್ನು । ಸ್ತ್ರೀಭಾವ
ದಂದವನು ತಿಳಿಯೆ ನೀನು ॥
ಮಂದಾರ ಹೃದಯವನ್ನು । ನೀ ಗೆಲದೆ
ಬಂದಪುದೆ ಸೌಖ್ಯವಿನ್ನು ॥ ೬–೩೦ ॥

ತನುವಿನಂಶವೆ ಹೃದಯವು । ಜೊತೆಯಾಗಿ
ಅನುಸರಿಸುವುದು ಸಹಜವು ॥
ವನಿತೆ ಸೋಲುವಳು ದಿಟವು । ಮುಂದೊಂದು
ದಿನದಿ ನಿನಗಹುದು ತಿಳಿವು ॥ ೬–೩೧ ॥

ಶಿವನ ಕೃಪೆಯಿಂದಲವಳು । ನೀನಾಶಿ
ಸುವುದನ್ನು ಪುಸಿಗೈವಳು ॥
ತವೆ ಭ್ರಾಂತಿ ಬಿಟ್ಟು ಬಾಳು । ಸುಜ್ಞಾನ
ಸುವಿವೇಕಗಳನು ತಾಳು ॥ ೬–೩೨ ॥

ನನ್ನಿಚ್ಛೆಯೆಲ್ಲ ಸೋಲ್ಗೆ । ಹದಿಬದೆಯ
ಘನ್ನಗುಣ ಜಗದಿ ಗೆಲ್ಗೆ ॥
ನಿನ್ನಾಸೆ ಪೂರ್ಣ ಸಲ್ಗೆ । ಬಲದಿಂದ
ಮುನ್ನಡೆದು ಪಡೆವೆ ಏಳ್ಗೆ ॥ ೬–೩೩ ॥

॥ **ದ್ವಿಪದಿ** ॥
ಪೊರಮಡುವ ಕಾಂತನಂ ಮಯತನುಜೆ ಕರೆದು ।
ಹರನ ಭಸಿತವನಿಟ್ಟು ಪದತಲಕೆ ಮಣಿದು ॥ ೬–೩೪ ॥

ಕಳುಹಿದಳು ಶುಭವಾಗಲೆಂದು ಮಾನಸದಿ ।
ಕಳೆದಳಾ ರಾತ್ರೆಯನು ಶಿವನಾಮ ಜಪದಿ ॥ ೬–೩೫ ॥

॥ **ಸೌರಾಷ್ಟ್ರ – ತ್ರಿವುಡೆ** ॥
ಪತಿಪರಾಯಣೆ ಧಾನ್ಯಮಾಲಿನಿ ।
ಕ್ರತುಹರನ ಪೂಜಿಸುತ ಮನದೊಳು ।
ಅತುಳಬಲ ರಾವಣನ ಪದಯುಗ ।
ನುತಿಸಿ ನಮಿಸೆ ॥ ೬–೩೬ ॥

ಬಿಸಜಮುಖಿ ಬಾರೆಂದು ಕರೆಯುತ ।
ಹಸಿರುಹಾಸಿದಶೋಕ ವನದೆಡೆ ।
ಬೆಸನಗಳ ಮುಸುಕಿಟ್ಟು ಬಂದನು ।
ದಶಶಿರಾಖ್ಯ ॥ ೬–೩೭ ॥

ಮೊಗಮಿಳುಹಿ ಮರದಡಿಗೆ ಕುಳಿತಿಹ ।
ಮುಗುದೆ ಜಾನಕಿಯನ್ನು ಕಾಣುತ ।
ಬಗೆಯ ಭಾವವ ತಿಳಿವೆನೆನ್ನುತ ।
ನಗುತ ನುಡಿದ ॥ ೬–೩೮ ॥

॥ **ಕಾಪಿ–ಆಟ** ॥
ಪೊಸತಿರ್ಕೆದಾಣ ಎಂತಿಹುದು । ದೇವಿ
ಹಸನು ಹಣ್ಣುಗಳನ್ನು ಬೆಸಗೈಯಬಹುದು ॥
ಬಿಸುಪೀಯುವನೆ ಎಳೆಬಿಸಿಲಿಂದ ನೇಸರ ।
ಕುಸುಮ ಬಿಜ್ಜಣಿಗೆ ಬೀಸುವನೇನು ಮಾರುತ ॥ ೬–೩೯ ॥

ತೆಂಕು ಬಡಗು ನೋಡಬೇಡ । ನಮ್ಮ
ಲಂಕೆಯೆಂದರೆ ಶಂಕೆ ಯಮನಿಗೂ ಕೂಡ ॥
ಬಿಂಕಮರೆತು ದೈನ್ಯವಂಕುರಿಸಿದೆ ನೋಡು ।
ಪಂಕಜಾಂಬಕಿ ಪ್ರೇಮದಂಕಸುಖವ ನೀಡು ॥ ೬–೪೦ ॥

ವಚನ: ಆಗಳಾ ಜಾನಕಿಯು ನುಡಿದಳಂತು –

ಬಿದಿಯ ಬೇಳ್ವೆಗೆ ಬಂದ ಪಶುವೆ । ನಿನ್ನ
ಹದನಕೆ ಮರುಗುವೆ ಕೇಡಾಡಿ ಶಿಶುವೆ ॥
ಸುದಿನ ಬಂದರೆ ಕಲ್ಲನೆದೆ ಕರಗುವುದ್ಯೆಸೆ ।
ಇದಕೊ ನೋಂತಿಹೆ ನಿನ್ನ ಸದಮಲೋದ್ಧಾರಕೆ ॥ ೬–೪೧ ॥

॥ **ಭಾಮಿನಿ** ॥
ಪಿರಿಯನಹುದ್ಯೆ ನೀನು ನಿನ್ನಯ ।
ಪಿರಿತನವ ಕೆಡಿಸದೆಯೆ ಬಾಳ್ವುದು ।
ಬರಿದೆ ಧರ್ಮವ ಕೆಣಕಿ ಲಂಕೆಯ ನಾಶಗೈಯದಿರು ॥
ಶರಧಿಸೇತುವೆಯಾಗಿ ಮರಣದ ।
ಕರುಣಕೇತುವು ನಿನ್ನನಟ್ಟದೆ ।
ತರದಿರ್ಯೆ ವೈಧವ್ಯದೀಕ್ಷೆಯ ನಿನ್ನನೊಲಿದರಿಗೆ ॥ ೬–೪೨ ॥

॥ **ದ್ವಿಪದಿ** ॥
ಬಿಗುಮಾತನಾಲಿಸುತ ದನುಜ ಮೌನದೊಳು ।
ಮೊಗದಿರುಹಿ ತಾ ನಡೆದ ಸತಿಯ ಬಳಸಿನೊಳು ॥ ೯–೪೩ ॥

ಅನಕ ದೂರದೊಳೊಂದು ಲಲನೆಯಾಕೃತಿಯು ।
ಕನಕನೂಪುರ ಹೆಜ್ಜೆಯಿಡುತ ಬರೆ ಸತಿಯು ॥ ೯–೪೪ ॥

ಕರಗಿ ಕನಿಕರವಾಂತು ಮೇಲೆದ್ದು ನಿಂದು ।
ಬರುವ ನಾರಿಯ ಕರೆದು ನುಡಿದಳಂತೆಂದು ॥ ೯–೪೫ ॥

ವಚನ: ಬಂದ ಮಂಡೋದರಿಯನಾರೆಂದು ತಿಳಿಯದೆ ಸೀತೆ
ವಿಚಾರಿಸಿದ ಪರಿಯೆಂತೆನೆ –

॥ **ಕೇದಾರಗೌಳ– ಅಟ** ॥
ಆರಮ್ಮಾ ಓ ತಂಗೆ ಬಾರಮ್ಮ ಸನಿಹಕೆ ।
ಕಾರಿರುಳಲಿ ನೀನಿಂತು ॥
ಓರುವಳೀ ವನಸೇರಿದುದೇಕೆಂಬ ।
ಕಾರಣವನ್ನು ಪೇಳು ॥ ೯–೪೬ ॥

ಅಕ್ಕ ನಾನಿಹೆ ವರ್ಷ ತಕ್ಕುದಾದುದರಿಂದ ।
ಮಿಕ್ಕ ಮಾತುಗಳನ್ನೇಕೆ ॥
ಸಿಕ್ಕರು ಎನ್ನಂಥ ದುಃಖಿಗಳೀ ಲೋಕ ।
ದಿಕ್ಕೆಲ್ಲ ಪುಡುಕಿದರು ॥ ೯–೪೭ ॥

ದೇಶ ತ್ಯಜಿಸಿ ವನವಾಸಕೈತಂದಿರ್ಪ ।
ದಾಶರಥಿಯ ಭಾರ್ಯೆಯು ॥
ಆಸುರೀಕೃತ್ಯದ ದೋಷಕ್ಕೆ ಬಲಿಯಾದ ।
ಬೇಸರವೆಂತು ಪೇಳ್ವೆ ॥ ೯–೪೮ ॥

ಸೀತೆಯಂತಹರೆಷ್ಟೋ ಪಾತಿವ್ರತ್ಯೆಯರನ್ನು ।
ಈ ತೆರದೊಳು ತಂದಿರ್ಪ ॥
ಯಾತುಧಾನನ ಪೊಂದಿದಾ ತಳೋದರಿ ಮಯ ।
ಜಾತೆ ಮಂಡೋದರಿಯು ॥ ೯–೪೯ ॥

॥ **ಸಾಂಗತ್ಯ – ರೂಪಕ** ॥
ಧನ್ಯೆಯಾದೆನು ನಾನು ನಿನ್ನ ಬೆಳ್ಗಸವನು ।
ಮುನ್ನವೆ ಕೇಳಿಕೊಂಡಿಹೆನು ॥
ಸನ್ನುತ ಪತಿವ್ರತೆ ನಿನ್ನ ಪದಾಬ್ಜಕೆ ।
ಬಿನ್ನೈಸಿ ನಮಿಸುವೆನೀಗ ॥ ೬–೫೦ ॥

ನಮಿಸಬಾರದು ಆರ್ಯೆ ನಾನು ರಾಕ್ಷಸನಾರಿ ।
ಕ್ರಮವಿಪರ್ಯಯಮಪ್ಪುದೈಸೆ ॥
ಕಮಲಾಕ್ಷ ರಘುಕುಲರಮಣನ ಸತಿ ನೀನು ।
ಕ್ಷಮೆಯ ಕೋರುವರೆ ಬಂದಿಹೆನು ॥ ೬–೫೧ ॥

ಧರಣಿಮಂಡಲದೊಳು ಸ್ಥಿರಕೀರ್ತಿ ಪಡೆದಂಥ ।
ಪರಮ ಪತಿವ್ರತೆ ನೀನು ॥
ವರಮಾತೆ ದೇವತೆ ಚರಣಕಾನತಳಾದೆ ।
ಸರುವಮಂಗಳ ಸಿದ್ಧಿಯಹುದು ॥ ೬–೫೨ ॥

॥ **ಭಾಮಿನಿ** ॥
ತಂಗೆ ಲಾಲಿಸು ವಹ್ನಿ ಕಶ್ಮಲ ।
ದಂಗವುರಿಗೈವಂತೆ ಮಮ ಪತಿ ।
ಯಿಂಗಿತವು ಪರಿಶುದ್ಧಗೊಳ್ಳಲಿ ನಿನ್ನ ನೋಂಪಿಯಲಿ ॥
ಮುಂಗುರುಳ ಮುಡಿ ಚಾಚಿ ಪದಕಮ ।
ಲಂಗಳಿಗೆ ಮಯತನುಜೆ ವಂದಿಸಿ ।
ಮಂಗಳದ ಸುಖಮಕ್ಕೆ ಸರ್ವರಿಗೆಂದು ಪೊರಮಡಲು ॥ ೬–೫೩ ॥

॥ **ಸೌರಾಷ್ಟ್ರ– ತ್ರಿವುಡೆ** ॥
ಇತ್ತಲಾ ಕಿಷ್ಕಿಂಧೆಯೊಳು ಸೌ ।
ಮಿತ್ರಿಯನು ಕರೆಯುತ್ತ ರಾಘವ ।
ಸುತ್ತ ಮಳೆಸುರಿಯುತ್ತಲಿರೆ ತೋ ।
ರುತ್ತಲೆಂದ ॥ ೬–೫೪ ॥

ಕಾಡುನಾಡುಗಳನ್ನು ಬೆಸೆದಿಹ ।
ಮೋಡದಾಟೋಪಗಳು ಮನುಜನ ।
ಪಾಡು ದುರ್ಬಲವೆಂದು ಸಾರಿವೆ ।
ನೋಡು ನೀನು ॥ ೬–೫೫ ॥

ಇಲ್ಲಿ ಸಾಧನೆ ಮಾಡಿದವನಿಗೆ ।
ಸಲ್ಲುವುದು ದೃಢತೆಗಳು ಸಂಶಯ ।
ವಿಲ್ಲಮಿದಕಾ ಹನುಮನೋರ್ವನೆ ।
ಚೆಲ್ವ ಸಾಕ್ಷಿ ॥ ೬–೫೩ ॥

ವಚನ: ಎನಲು ಲಕ್ಷ್ಮಣದೇವನಿಂತೆಂದನು –

॥ **ಕಾಪಿ – ಆಟ** ॥
ಅವಧರಿಸುವುದಣ್ಣ ದೇವ । ಮತ್ತೆ
ಅವನಿಜಾತೆಯ ಪುಡುಕುವರೆ ಸುಗ್ರೀವ ॥
ಕವಲುಮನದಿ ಮರೆತಿರುವ । ಕಾಣೆ
ನವನ ವಿಚಾರಿಪೆ ಸಲಹೊ ಸಂಜೀವ ॥ ೬–೫೭ ॥

ಅದೊ ಕೇಳುತಿದೆ ಮಹಾರವವು । ನಮ್ಮ
ಸುದಿನ ಸಾರುವ ಕಪಿಗಳ ಕೇಕೆಭರವು ॥
ಕದನಚೌಪಟಮಲ್ಲರಿರವು । ಲೋಕ
ಹೃದಯಚೇತನಗೊಂಡ ಸಂತೋಷದರಿವು ॥ ೬–೫೮ ॥

ವಚನ: ಆಗಳಾ ವಾನರಾಧಿಪ ಸುಗ್ರೀವನ್ನೈತಂದು ರಾಮಚಂದ್ರಂಗೆ
ತನ್ನ ಸೈನ್ಯಮಂ ತೋರ್ದನು–

॥ **ಶಂಕರಾಭರಣ – ಮಠ್ಯ** ॥
ದೇವ ರಾಮಚಂದ್ರ ನಿನ್ನ ।
ಪಾವನಾಂಘ್ರಿಗಳಿಗೆ ಮಣಿದೆ ।
ಸೇವೆಗಾಗಿ ನೆರೆದರಿಲ್ಲಿ ।
ಕೋವಿದರುಗಳು ॥ ೬–೫೯ ॥

ವೀರಹನುಮ ಗಜ ಸುಷೇಣ ।
ತಾರ ನೀಲ ಜಾಂಬವಾದಿ ।
ಕಾರಣೀಕರೆಲ್ಲ ಬಂದು ।
ಸೇರಿಕೊಂಡರು ॥ ೬–೬೦ ॥

॥ **ವಾರ್ಧಕ** ॥
ಕೆಚ್ಚೆದೆಯ ಕಲಿಗಳಿರ ಕಿವಿಗೊಟ್ಟು ಕೇಳಿರೈ ।
ಸಚ್ಚರಿತ ರಾಮನರ್ಧಾಂಗಿಯಂ ದಶಕಂಠ ।
ಮುಚ್ಚಿ ಬೈತಿಟ್ಟುದನು ಪುಡುಕಿದರೆ ಕಪಿಕುಲಕೆ ಸತ್ಕೀರ್ತಿ ಸ್ಥಿರವಾಪುದು ॥
ತುಚ್ಛ ತಸ್ಕರನವನ ಲಂಕೆಯಂ ಪುಡುಕಿ ನಮ ।
ಗಚ್ಚರಿಯ ವಾರ್ತೆಯಂ ತರವೇಳ್ಕು ಶೀಘ್ರಮೆಂ ।
ದುಚ್ಚರಿಸೆ ಸುಗ್ರೀವನಾಜ್ಞೆಯಂ ಕೇಳುತ್ತ ಕಪಿಸೈನ್ಯ ಜಯಮೆಂದಿತು ॥ ೯–೭೧ ॥

॥ **ಕಾಂಭೋದಿ – ಝಂಪೆ** ॥
ಬಡಗು ಮೂಡಣ ಮತ್ತೆ ಪಡುವಣದ ದೆಸೆಗಳಿಗೆ ।
ಕಡುಗಲಿಗಳಂ ಕಳುಹಿಕೊಟ್ಟು ॥
ಕಡೆಗೆ ತೆಂಕಣ ದಿಕ್ಕಿನೆಡೆಗೆ ನುಗ್ಗಲಿಕೈದು ।
ಸಿಡಿಲಮರಿಗಳ ಕರೆದನಾಗ ॥ ೯–೭೨ ॥

ನೀಲ ನಳ ಜಾಂಬವಂ ವಾಲಿಸುತನಂಗದಂ ।
ಬಾಲಾರ್ಕತೇಜಾಂಜನೇಯ ॥
ಸಾಲಾಗಿ ಪಂಚಶಿಖರಗಳಂತೆ ಮುಂಬರಲು ।
ವೀಳೆಯವನಿತ್ತು ಹರಸಿದನು ॥ ೯–೭೩ ॥

ಅತುಳ ಸಾಮರ್ಥ್ಯದಿಂ ಕ್ಷಿತಿಸುತೆಯ ಪುಡುಕಿರೈ
ಜೊತೆಗಿರಲಿ ಶ್ರೀರಾಮನಾಮ ॥
ಪೃಥಿವಿಯೊಳು ಸತ್ಕೃತಿಗೆ ಸ್ಮೃತಿನಿಕೇತನರಾಗಿ ।
ಸತತ ಗುರುದೇವಕೃಪೆಯಿರಲಿ ॥ ೯–೭೪ ॥

ಪವನಸುಕುಮಾರ ನೀನೆಮ್ಮ ಕುಲಭೂಷಣನು ।
ಅವನಿಯೊಳಗಪ್ರತಿಮನಿರುವೆ ॥
ಬುವಿ ವ್ಯೋಮ ಪಾತಾಳ ಗಂಧರ್ವಲೋಕದೊಳು ।
ರವಿಕುಲೇಂದ್ರನ ಸತಿಯ ಪುಡುಕು ॥ ೯–೭೫ ॥

॥ **ದ್ವಿಪದಿ** ॥
ಕರಪುಟಾಂಜಲಿಗೊಂಡು ನಿಂದಿರಲು ಹನುಮ ।
ಬರಸೆಳೆದು ಬಿಗಿದಪ್ಪಿಕೊಳುತ ಶ್ರೀರಾಮ ॥ ೯–೭೬ ॥

ಪ್ರತ್ಯಭಿಜ್ಞಾನಕ್ಕೆ ಇತ್ತನುಂಗುರವ ।
ಅತ್ಯಧಿಕ ಪ್ರೀತಿಯಿಂದೊರೆದ ಮನದಿರವ ॥ ೯–೬೭ ॥

ನಿನ್ನನಪನಂಬಿದೊಡೆ ತೋರ್ಪುದೀ ಮುದ್ರೆ ।
ಇನ್ನು ಮಂಗಳಮಕ್ಕೆ ಕಾಣಿಸಲಿ ಭದ್ರೆ ॥ ೯–೬೮ ॥

ವಕ್ಷಕೊದಗಲು ವಜ್ರರಕ್ಷೆ ಹನುಮನಿಗೆ ।
ದಕ್ಷಿಣದ ದೆಸೆಗೆ ಪೊರವಂಟರಾ ಗಳಗೆ ॥ ೯–೬೯ ॥

॥ **ಸೌರಾಷ್ಟ್ರ– ತ್ರಿವುಡೆ** ॥
ಪುಡುಕಿ ನದ ನದಿ ಜಲ ಸರೋವರ ।
ಬಿಡದೆ ಗಿರಿಗುಹೆ ಕಂದರಂಗಳ ।
ಅಡವಿ ಭೀಕರ ತಿಮಿರ ಬಿಲಗಳ ।
ತಡವಿ ನೋಡಿ ॥ ೯–೭೦ ॥

ಬಳಲಿ ಬಲುಬಗೆಯಿಂದ ಕಾನನ ।
ದೊಳಗೆ ರಘುವರನರಸಿ ಸೀತೆಯ ।
ಸುಳಿವುಗಾಣದೆ ಹಸಿವು ತೃಷೆಯಲಿ ।
ತೊಳಲಿ ಕೊನೆಗೆ ॥ ೯–೭೧ ॥

ವಾಲಿಸಂಭವನಾಗ ಜಾಂಬವ ।
ನೀಲ ಗಜ ಗವಯಾದಿ ಕಪಿಗಳ ।
ಜಾಲವನು ನೆರಹುತ್ತ ಚಿಂತೆಯ ।
ಪೇಳ್ದನಿಂತು ॥ ೯–೭೨ ॥

॥ **ಬೇಗಡೆ – ಆಟ** ॥
ಲಾಲಿಪುದು ಕಪಿಕೇತನಾದಿಗಳು ॥ ಸುಗ್ರೀವನಾಜ್ಞೆಯ ।
ಪಾಲಿಸಲು ಪೊರಟಿರುವ ಸಹಸಿಗಳು ॥
ಪೇಳಲೇನೈ ಕಂಡೆನೊಂದು ಕ ।
ರಾಳಮಯ ತಿಮಿಯಸ್ಥಿಪಂಜರ ।
ಖೂಳ ರಾವಣನಿರುವ ಲಂಕಾ ।
ಭೀಳ ನಗರಾಭಾಸವೊಂದನು ॥ ೯–೭೩ ॥

ಮುಂದೆ ನುಗ್ಗಲು ಜಟೆಯ ತಪಸಿಯನು ॥ ಕಾಣುತ್ತ ರಾಕ್ಷಸ ।
ನೆಂದೆನುತ ನೆತ್ತಿಯನು ಗುದ್ದಿದೆನು ॥
ಮುಂದೆ ಸಾಯುವ ಸಮಯದೊಳಗವ ।
ನೊಂದು ನುಡಿ ಪೇಳದ ನಿಶಾಕರ ।
ನೆಂದೆನುವ ಪೆಸರವನು ಗುರುವಿಹೆ ।
ಬೆಂದೊಡಲ ಸಂಪಾತಿಗೆನ್ನುತ ॥ ೬–೨೪ ॥

ಇನ್ನು ಶಿಷ್ಯನ ಶಾಪಮೋಚನೆಗೆ ॥ ಸಹಕರಿಸಿ ನೀವೆಂ ।
ದೆನ್ನುತಾಶೀರ್ವದಿಸಿ ಮತ್ತೆಮಗೆ ॥
ಪುಣ್ಯಪುರುಷನ ಸೇವೆಗವನಿಂ ।
ದುನ್ನತದ ನೆರವಾಹುದೆನ್ನುತ ।
ಮನ್ನಿಸುತ ಕಳುಹಲು ನಿರಾಶೆಯ ।
ಕಣ್ಣಕತ್ತಲೆಗಿದುವೆ ಕಿರಣವು ॥ ೬–೨೫ ॥

ವಚನ: ಆಗಳಾ ನೀಲ ಗಜ ಮೈಂದ ತಾರಾದಿಗಳು ಪೇಳ್ದರು ತಮ್ಮ ಮನದಿರವನು –

॥ **ಮಾರವಿ – ಏಕ** ॥
ಕಾರಡವಿಯೊಳಾ ರಾಕ್ಷಸಬೇಹಿನ ।
ಚಾರರ ಸದೆಬಡಿದು ॥
ದಾರಿಯ ಪುಡುಕುತ ಸಾರಿದೆವೀಕಡೆ ।
ಮೀರುತ್ತಿಹುದವಧಿ ॥ ೬–೨೬ ॥

ಕತ್ತು ಹಿಡಿದು ಗಜರುತ್ತಲಿ ಲಂಕೆಯ ।
ದೆತ್ತ ತೋರಿಸೆನಲು ॥
ಇತ್ತಲತ್ತಲೆಂದುತ್ತರಿಸುತ್ತಲಿ ।
ಸತ್ತನು ಖಳನೊರ್ವ ॥ ೬–೨೭ ॥

ಸಾವರ್ಣಿಯ ಸುತೆಯಾದ ಸ್ವಯಂಪ್ರಭೆ ।
ದೇವಿಯ ಗುಹೆಯೊಳಗೆ ॥
ನಾವು ಪ್ರವೇಶಿಸಿ ಬದುಕುಳಿದೆವು ಮಹಿ ।
ಮಾವಿಲಸಿನಿ ದಯದಿ ॥ ೬–೨೮ ॥

ಕೆಚ್ಚಿನ ಕಲಿಗಳಿಗೆಚ್ಚರವಿರಲ್ಕೈ ।
ಮೆಚ್ಚುಗೆ ಮಾತೇಕೆ ॥
ಸಚ್ಚರಿತನಿಗಿದನುಚ್ಚರಿಸುವುದೈ ।
ನಿಚ್ಚಳ ಜಯ ತುದಿಗೆ ॥ ೬–೭೯ ॥

॥ **ಭಾಮಿನಿ** ॥
ಇದ್ದಕಿದ್ದಂತಾಗ ಶಿಖರದಿ ।
ಸದ್ದನೊಂದನು ಸಭೆಯು ಕೇಳುತ ।
ರುದ್ರಸಮ ಶರಗುಲ್ಮ ಪೋಗೆಂದೆನುತ ನೇಮಿಸಲು ॥
ತದ್ವನದ ತುದಿಯೇರಿ ಬಂದಾ ।
ವೃದ್ಧತನು ಕೃಶಪಕ್ಷ ಪುಣ್ಗಳ ।
ಗೃಧ್ರರಾಜನ ಕಂಡು ಮಾತಾಡಿಸಿದನಿಂತೆಂದು ॥ ೬–೮೦ ॥

॥ **ಕೇದಾರಗೌಳ – ಅಟ** ॥
ಖಗರೂಪಿ ನೀನಾರು ತಡವ ಮಾಡಿದರೀಗ ।
ತೆಗೆವರು ನಿನ್ನ ಪ್ರಾಣ ॥
ಅಗೊ ನಮ್ಮ ಕಿಷ್ಕಿಂಧಾದೊರೆಯ ಬಂಟರು ಕಲ್ಲ ।
ನೊಗೆಯೆ ನಿಂತಿಹರು ಕಾಣಾ ॥ ೬–೮೧ ॥

ವಚನ: ಶರಗುಲ್ಮನೆಂದುದಕಾ ಗೃಧ್ರನಿಂತೆಂದನು –

ಮುದುಕನಾಗಿಹೆ ನಾನು ನೆಗಹ ಬನ್ನಿರಿ ಬೇಗ ।
ಮುದುಡಿಕೊಂಡಿಹೆ ಚಳಿಗೆ ॥
ಒದಗಿ ಕುಳಿತ ಮೇಲೆ ಮನದಿಷ್ಟವೇನೆಂಬು ।
ದದನು ಪೇಳುವೆ ನಿಮಗೆ ॥ ೬–೮೨ ॥

ವಚನ: ಆ ಮಹಾತ್ಮನಂ ಮೇಲೆತ್ತಲಾಗದಿರಲ್ ಮತ್ತೆ
ಸಂಪಾತಿಯಿಂತೆಂದನು–

ಗರಿಬಿದ್ದು ಮುಪ್ಪಾದ ಕೊರಡು ಮೇಲೆತ್ತಲು ।
ಕರಗಳು ತಿಣುಕುತ್ತಿರೆ ॥
ಹರಣವ ಸೆಳೆವ ಸಾಹಸವಚನಂಗಳ ।
ಬರಿದೇಕೆ ನುಡಿಯುವಿರಿ ॥ ೬–೮೩ ॥

ವಚನ: ಶರಗುಲ್ಮನಾಕ್ಷಣದಿ ಕೈಮುಗಿದಿಂತೆಂದನು –

॥ ಕಾಂಭೋದಿ – ಝಂಪೆ ॥
ಖಗಮಹಾತ್ಮನೆ ದಯದಿ ಮನ್ನಿಸೆನ್ನಪರಾಧ ।
ಮಿಗೆ ಶಂಕೆಯಿಂದ ವರ್ತಿಸಿದೆ ॥
ಜಗದೊಳೇನ್ನೈ ಕಷ್ಟ ನಿನಗೆ ರೋದನವೇಕೆ ।
ಬಗೆಯ ಪೇಳುವುದೆನ್ನ ಕೂಡೆ ॥ ೬–೮೪ ॥

ವಚನ : ಆಗಳಾ ಸಂಪಾತಿ ಪೇಳ್ದನಿಂತು

ವಿನಯಮೂರುತಿ ಕೇಳು ಸಂಪಾತಿ ನಾನಿಹೆನು ।
ಅನುಜನಾಗಿಹನಾ ಜಟಾಯು ॥
ಜನಕ ಜನನಿಯರರುಣ ಶ್ಯೇನಿಯೆಂಬವರೆನಗೆ ।
ಘನ ಪರಾಕ್ರಮಿಯು ಲೋಕದೊಳು ॥ ೬–೮೫ ॥

ಸಾಗರದ ಫಣಿಯ ಮೇಲೆರಗಿ ನಾನಾಗಸದಿ ।
ಸಾಗುತಿರಲದರ ಬಾಯಿಂದ ॥
ಕೂಗಿಕೊಂಡುರೆ ತಿಮಿಂಗಿಲವೊಂದು ಕೆಳಬೀಳೆ ।
ನೀಗಿತು ನಿಶಾಕರಾಶ್ರಮವು ॥ ೬–೮೬ ॥

ಅಂದಿನಿಂದಾ ಮುನಿಯ ಪೊಂದಿದೆನು ಶಿಷ್ಯತ್ವ ।
ದಿಂದ ಸೇವಿಸಿದೆ ಬಹುಕಾಲ ॥
ಮುಂದೆ ಸೂರ್ಯನ ತೇಜದಿಂದ ಸಹಜನ ಪೊರೆದು ।
ಬೆಂದೊಡಲಿನಿಂದ ನೊಂದಿರುವೆ ॥ ೬–೮೭ ॥

॥ ಸಾಂಗತ್ಯ – ರೂಪಕ ॥
ಕ್ಲೇಶರೂಪದಿ ದೈವ ಕೃಪೆಯಾಗಬಹುದೆಂಬ ।
ಭಾಷಿತ ಹುಸಿಯಾಗದ್ಯೆಸೆ ॥
ಈಶ್ವರನೊಲುಮೆಗೆ ಕಿಡಿಯೊಂದು ಸಿಡಿಲಾಗಿ ।
ಆಶಯ ಕೈಗೂಡಬಹುದು ॥ ೬–೮೮ ॥

ವಚನ : ಸಂಪಾತಿಯಂ ಸಂತೈಸಿ ಶರಗುಲ್ಮನಿಂತೆಂದನು

ಇನಕುಲೇಶನು ರಾಮ ವನವಾಸಕ್ಕೈತರೆ ।
ವನಿತೆಯನೊಯ್ದ ರಾವಣನು ॥
ದನುಜಕಾರ್ಯವನು ಖಂಡಿಸಲ್ಕಾ ಜಟಾಯುವ ।
ಕಿನಿಸಿನಿಂದವನು ಕೊಂದಿಹನು ॥ ೬–೮೯ ॥

ವಚನ: ಸೋದರರನ ಮರಣವಾರ್ತೆಯ ಕೇಳಿ ದುಃಖಾತಿರೇಕದಿಂ
ಸಂಪಾತಿ ಗರ್ಜಿಸಿದನು –

ಗುರುಕೃಪೆಯಿಂದೆನ್ನ ಗರಿಹುಟ್ಟಿ ಬಂದರೆ ।
ದುರುಳ ರಾವಣಶಿರವಿಳುಹಿ ॥
ಸುರಿವೆ ನೆತ್ತರಧಾರೆ ತಮ್ಮನಾತ್ಮಕೆ ವಾನ ।
ರರು ಸಾಕ್ಷಿ ಪೂಣ್ಕೆಯಿನ್ನಿದಕೆ ॥ ೬–೯೦ ॥

॥ **ಭಾಮಿನಿ** ॥
ದೇವಿಯನು ಕದ್ದೊಯ್ದ ನೀಚನ ।
ದಾವನೆಂಬುದು ತಿಳಿದೆ ಲಂಕೆಯ ।
ಸೋವನರಿತಿಹೆ ನೂರುಯೋಜನ ತೆಂಕುದೆಸೆಗೆನಲು ॥
ಈ ವಚನದರೆಚಣಕೆ ಮರಕತ ।
ಹೂವಿನಂದದಿ ರೆಂಕೆಮೂಡಲು ।
ದೇವಕಾರ್ಯಕೆ ಬನ್ನಿ ದಾರಿಯ ತೋರಿಸುವೆನೆಂದ ॥ ೬–೯೧ ॥

ವಚನ: ಮತ್ತಾ ಶರಗುಲ್ಮಂ ಸಂಪಾತಿಯಂ ಕರೆತಂದನು –

॥ **ದ್ವಿಪದಿ** ॥
ಹನುಮಾಂಗದರು ನೀಲ ಜಾಂಬವರ ಸಭೆಗೆ ।
ಕನಕಪಕ್ಷನ ತಂದು ತೋರಿದನು ಕೊನೆಗೆ ॥ ೬–೯೨ ॥

ಪರಮಪುರುಷೋತ್ತಮನ ಸೇವೆಗಾನಿಹೆನು ।
ಬರಿದೆ ಚಿಂತಿಸಬೇಡಿರೆಂದು ಪೇಳಿದನು ॥ ೬–೯೩ ॥

ಸಹಜಾತ ಗುರುಗಳಿಗೆ ತರ್ಪಣವನಿತ್ತು ।
ವಿಹಗೇಂದ್ರನೇರಿದನು ಗಗನಕಾ ಹೊತ್ತು ॥ ೬–೯೪ ॥

ವಚನ: ಅಂಗದಕುಮಾರಂ ತನ್ನಂತರಂಗಮಂ ಪೇಳ್ದನಿಂತು –

॥ **ಅಠಾಣ – ಆಟ** ॥
ಮಂಗಳಾಂಗಿಯ ಕದ್ದುಕೊಂಡು ಲಂಕೆಯೊಳಟ್ಟ ।
ಸಂಗತಿ ತಿಳಿದುದಾಯ್ತು ॥
ತುಂಗವಿಕ್ರಮದಿಂದ ದಕ್ಷಿಣೋದಧಿಯನ್ನು ।
ಲಂಘಿಸುವವರು ಯಾರು ॥ ೯–೯೫ ॥

ಸೀತಾಮಾತೆಯ ಹರ್ಷಭಾಷ್ಪದಿಂದಲಿ ರಘು ।
ನಾಥನನ್ನೊಲಿಪರಾರು ॥
ಸಾತಿಶಯದಿ ಲೋಕಪ್ರೀತಿಯ ಗಳಿಸುವ ।
ದೂತವಿಖ್ಯಾತನಾರು ॥ ೯–೯೬ ॥

ಯಾರು ನೀವೆಷ್ಟೊಂದು ದೂರ ಹಾರುವಿರೆಂದು ।
ಸಾರಿ ಧೈರ್ಯವನು ತಾಳಿ ॥
ಕ್ಷಾರವಾರಿಧಿಯ ವಿಸ್ತಾರ ನೆಗೆಯುವಂಥ ।
ಧೀರವಾನರರು ಪೇಳಿ ॥ ೯–೯೭ ॥

ವಚನ; ಅಂಗದನ ನುಡಿಯಂ ಕೇಳ್ದು ಗಜ ಗವಯ ಗವಾಕ್ಷ
ಜಾಂಬವಾದಿಗಳ್ ಒಬ್ಬೊಬ್ಬರಿಂತೆಂದರು –

॥ **ಸಿಂಧುಭೈರವಿ – ಏಕ** ॥
ಸತ್ತ್ವದಿ ಕಿರಿಯನು ನಾನು । ಈ ।
ಬಿತ್ತರ ನೆಗೆಯುವೆನೇನು ॥
ಮತ್ತೆ ಭೀತಿಯ ಪಡಲೊಲ್ಲೆ । ನಾ ।
ಹತ್ತುಯೋಜನ ಹಾರಬಲ್ಲೆ ॥ ೯–೯೮ ॥

ಅಪ್ಪಣೆಯಾದರೆ ಇನ್ನು । ಜಲ ।
ವಪ್ಪಳಿಸದೆ ದೂರವನ್ನು ॥
ತಪ್ಪದೆ ಸೇರುವೆ ನಾನು । ಮುಂ ।
ದಿಪ್ಪತ್ತು ಯೋಜನವನ್ನು ॥ ೯–೯೯ ॥

ಸಲಿಲ ಸಮುದ್ರದ ತೀರ । ಬಿಟ್ಟು ।
ನಲುವತ್ತು ಯೋಜನ ದೂರ ॥
ಛಲದಿಂದ ಹಾರುವೆ ನೋಡಿ । ಆ ।
ಚೆಲುವ ರಾಮನ ನಾಮಪಾಡಿ ॥ ೯–೧೦೦ ॥

ಜಂಬದ ಮಾತಲ್ಲವಿದನು । ಕೇ ।
ಳಂಬುಧಿಯನು ಹಾರಿದಪೆನು ॥
ನಂಬುವುದೀ ವಚನವನು । ನಾ ।
ನೆಂಬತ್ತು ಯೋಜನಗಳನು ॥ ೯-೧೦೧ ॥

ವಚನ: ವಾನರವೀರರ ಧೈರ್ಯೋಕ್ತಿಯಂ ಕೇಳ್ದು ಅಂಗದಂ
ತಾನಿಂತೆಂದನು –

॥ **ಭಾಮಿನಿ** ॥
ಜನಕನಿತ್ತಿಹ ಮಂತ್ರಶಕ್ತಿಯು ।
ಮುನಿವಧೆಯ ದೆಸೆಯಿಂದ ನಶಿಸಿತು ।
ವನಧಿ ಮೇಲಕೆ ನೂರುಯೋಜನ ಹಾರಿದಪೆ ಮರಳ ॥
ತನಗೆ ಬರಲರಿದೆನಲು ಜಾಂಬವ ।
ಸನುಮತದಿ ಸಂತೈಸಿ ಸ್ವಾಮಿಯ ।
ಘನತೆಯನು ಸಲಿಸುವರೆ ಭೃತ್ಯರ ಕೃತ್ಯ ಲೇಸೆಂದ ॥ ೯-೧೦೨ ॥

॥ **ಬೇಹಾಗ್ – ರೂಪಕ** ॥
ನಮ್ಮ ಹನುಮ ನೀನು ನಿಜದಿ ಹೆಮ್ಮೆ ವಂಶಕೆ ।
ಹುಮ್ಮಸಿರದೆ ಕುಳಿತುಕೊಂಡೆ ಸುಮ್ಮಗೇತಕೆ ।
ಬೊಮ್ಮಚರ್ಯ ಮಹಿಮೆಯನ್ನು ಧರ್ಮಕಾರ್ಯಕೆ ।
ನೆಮ್ಮಿಕೊಂಡರೇನು ದೋಷ ನಿರ್ಮಲಾತ್ಮಕೆ ॥ ೯-೧೦೩ ॥

ರಾಮನಂಗುಳೀಯಕವನು ನಿನಗೆ ಕೊಟ್ಟನು ।
ನೀ ಮಹಾತ್ಮನೆಂದು ಬಲು ವಿಶ್ವಾಸವಿಟ್ಟನು ।
ಆ ಮಹಾಬ್ಧಿಯನ್ನು ದಾಂಟಿಬರುವ ದಿಟ್ಟನು ।
ಭಾಮೆಯನ್ನು ಪುಡುಕಿತರುವ ಖಳಘರಟ್ಟನು ॥ ೯-೧೦೪ ॥

॥ **ದ್ವಿಪದಿ** ॥
ಆಗಳಂತರ್ಮುಖದಿ ಕೇಳ್ದು ಯೋಗನಿಧಿ ।
ಸಾಗರೋಲ್ಲಂಘನಕೆ ನಿಶ್ಚಯಿಸಿ ಮನದಿ ॥ ೯-೧೦೫ ॥

ಪೂರಕದ ರೇಚಕದ ಕುಂಭಕದ ದ್ವಾರ ।
ಮಾರುತಿ ಸುಷುಮ್ನೆಯಿಂದೇರಿ ಸಹಸ್ರಾರ ॥ ೯-೧೦೬ ॥

ಆ ನರಾಕೃತಿ ಪೊದ್ದಿತನಿಲತೆಯ ಸಿದ್ಧಿ ।
ತಾ ನಿರಾಕೃತಿಯಾಗಿ ವಿಶ್ವಾತ್ಮವೃದ್ಧಿ ॥ ೬-೧೦೭ ॥

ವ್ಯೋಮಸಂಚಾರಿಯಂ ನುತಿಸಿ ರಸವಶರು ।
ಭೂಮಾನುಭೂತಿಯಂ ಪಡೆದರೆಲ್ಲವರು ॥ ೬-೧೦೮ ॥

ವಚನ: ಪವನಸಂಜಾತನಂ ಪೊಗಳಿದರು ಪರಿಪರಿಯೊಳು –

॥ **ಮಧ್ಯಮಾವತಿ – ಏಕ** ॥
ಜಯತು ಜಯತು ಜಯ ಪವನಕುಮಾರ ।
ಜಯಜಯ ಕಪಿಕುಲಕೀರ್ತಿಯುದ್ಧಾರ ।
ಜಯತು ಮಾನವಗರ್ವಮಾನಪಾರಾವಾರ ।
ಜಯತು ಯೋಗೀಶ್ವರ ಜಗದೇಕವೀರ ॥ ೬-೧೦೯ ॥

ಓಂ ನಮೋ ರಸರೂಪಿ ವ್ಯೋಮಸಂಚಾರಿ ।
ವಾನರಕುಲಚೂತ ಚೈತ್ರಾವತಾರಿ ।
ಮಾನವಾತ್ಮದ ಮಹತ್ಸಾಧನ ಸುವಿಚಾರಿ ।
ಕ್ರೀಂ ನಮೋ ಶರಧಿಲಂಘನ ಬ್ರಹ್ಮಚಾರಿ ॥ ೬-೧೧೦ ॥

ವಚನ: ಆಂಜನೇಯಂ ಸಾಗರೋಲ್ಲಂಘನಕೆ ಸಿದ್ಧನಾಗಿರೆ
ಮೊಳಗಿತಾತನ ಗಂಭೀರಸಿಂಹವಾಣಿ –

॥ **ಸೌರಾಷ್ಟ್ರ – ತ್ರಿವುಡೆ** ॥
ಅಣುವ ನಾ ನಿಮ್ಮೆಲ್ಲರಿಚ್ಛೆಯೆ ।
ಗುಣಿಸಿ ಮಹದಾಕಾರನಾಗಿಹೆ ।
ಕ್ಷಣದಿ ವಾರಿಧಿ ಲಂಘಿಸುವೆ ನಾ ।
ದಣಿಯದಿನಿತು ॥ ೬-೧೧೧ ॥

ನಿಮ್ಮ ಪ್ರಾರ್ಥನೆ ಸೃಷ್ಟಿಗೈದಿಹ ।
ನಿಮ್ಮ ಸ್ತೋತ್ರವು ಪುಷ್ಟಿಗೊಳಿಸಿದ ।
ನಿಮ್ಮ ಚೇತನದೂತ ಯೋಗದ ।
ಹೆಮ್ಮೆಯಿಂದ ॥ ೬-೧೧೨ ॥

ಕಡಲ ತುಳ್ಕಿ ಹಿಮಾದ್ರಿಗೆಸೆಯುತ ।
ವಡಬಶಿಖಿಯಿಂದಸುರನೂರನು ।
ಸುಡುತ ತಾರೆಗಳನ್ನು ಬಾಲದಿ ।
ಗುಡಿಸಬಲ್ಲೆ ॥ ೬–೧೧೩ ॥

ಮಾನಸಾನ್ನದೊಳೆನ್ನ ಪಾಲಿಸಿ ।
ಜಾನಕಿಯನರಸುತ್ತ ಮರಳುವೆ ।
ಧ್ಯಾನದಪರೋಕ್ಷದಲಿ ಲೀಲೆಯ ।
ಕಾಣಿರಯ್ಯ ॥ ೬–೧೧೪ ॥

॥ **ವಾರ್ಧಕ** ॥
ಅನಿಮೇಷವಿಸ್ಮಯಕೆ ಹನುಮವಿಗ್ರಹವಿಭವ ।
ಘನಮಹೋದಧಿ ಮೇಘಮಂಡಲವ ತಾನೇರಿ ।
ಕೊನೆಗೆ ನೀಲವ್ಯೋಮ ಮೆಯ್ಯಾಂತನೆಂಬಂತೆ ಗೋಚರಾತೀತನಾಗೆ ॥
ಅನುಸರಿಸುತವನ ಸಂಚಾರಮಂ ಕಡಲು ನೀರ್ ।
ಗಣಿವೆಗೊಳೆ ರಭಸದಿಂ ತೆರೆಗಿರಿಗಳೇಳುತಿರೆ ।
ವನಧಿಮಧ್ಯದೊಳಿರ್ದ ಮೈನಾಕ ಮೇಲೆದ್ದು ಕರಮುಗಿದು
ಸಂಸ್ತುತಿಸಲು ॥ ೬–೧೧೫ ॥

॥ **ಕೇದಾರಗೌಳ – ಅಟ** ॥
ವಂದಿಪೆ ಹನುಮಂತ ಇಂದ್ರನ ಮುನಿಸಿಂದ ।
ಹಿಂದೆ ನಿನ್ನಯ ತಂದೆಯು ॥
ಬಂದೆನ್ನ ಕಾಪಾಡಿದಂದವ ಮರೆತಿಲ್ಲ ।
ಸಂದರುಶನ ಪುಣ್ಯವು ॥ ೬–೧೧೬ ॥

ಈಗ ನನ್ನೆಡೆ ಬಂದು ಆತಿಥ್ಯವನು ಕೊಂಡು ।
ನೀಗುತ ದಣಿವು ಮುಂದೆ ॥
ಸಾಗಬಹುದು ಎಂದು ಬಾಗಿ ಬಿನ್ನೈಸುವೆ ।
ಸ್ವಾಗತವಿದು ನಿನಗೆ ॥ ೬–೧೧೭ ॥

ಮರಳಿ ಬರುವ ವೇಳೆ ಬರುವೆ ನಿನ್ನೆಡೆಗೆ ಸ್ವೀ ।
ಕರಿಪೆನಾತಿಥ್ಯವನ್ನು ॥

ಪರಮಗಂತವ್ಯ ಮುಂದಿರುವುದು ತನಗೆಂದು ।
ಮರುತಜ ಗಮಿಸಿದನು ॥ ೬–೧೧೮ ॥

ವಚನ: ಅನಿತರೊಳಾಗಸದಿ ಕೇಳಾಶ್ಚರ್ಯಮಂ –

॥ **ಭೈರವಿ – ಝಂಪೆ** ॥
ಕಡಲಿನಿಂದೆದ್ದು ಬಾ । ಯ್ದುಡುತೆ ಬಂದಾ ಸುರಸೆ ।
ಬಿಡೆನು ಮಾರ್ಗವನೆಂದು । ಗುಡುಗುಡಿಸಲಾಗ ॥ ೬–೧೧೯ ॥

ಪರಿಕಿಸುತಲಾಕೆಯಂ । ಮುರಿದು ಶಾಪವ ಕಳೆದು ।
ಶರದಭ್ರಪಥದಿ ಮುಂ । ಬರಿಯಲಾಕ್ಷಣದಿ ॥ ೬–೧೨೦ ॥

ಕಾಮರೂಪಿಣಿ ದನುಜೆ । ಯಾ ಮಹಾಸಿಂಹಿಕೆಯು ।
ವ್ಯೋಮದೂರದಿ ಕಂಡ । ಆ ಮರುತಸುತನ ॥ ೬–೧೨೧ ॥

ಒಡನೆ ವಾರಿಧಿಯಲ್ಲಿ । ಕೆಡೆದ ನೆರಳಿನ ನೇಣು ।
ಪಿಡಿದು ಸೆಳೆಯಲು ಬಾನೊ । ಳೆಡಹಿದನು ಹನುಮ ॥ ೬–೧೨೨ ॥

॥ **ನಾದನಾಮಕ್ರಿಯೆ – ಆಟ** ॥
ಎಲವೊ ಭೂತಿನಿಯೆ ಪಾತಾಳದ । ಬಾಯಿ ।
ಬಿಲಕೆ ಬೀಳುವನಲ್ಲ ಕೇಳದ ॥
ಕೊಲುವೆ ಸಹಿಸಿಕೊಳ್ಳು ಎನ್ನುತ । ವಜ್ರ
ಬಲದ ಮುಷ್ಟಿಯೊಳಿಟ್ಟನುನ್ನತ ॥ ೬–೧೨೩ ॥

ನಾಲಗೆಯಗಲವನಿಕ್ಕುತ । ಮತ್ತೆ
ನೀಲದಾಗಸವನ್ನೆ ನೆಕ್ಕುತ ॥
ಕಾಲಪ್ರಳಯದಂತೆ ಸೊಕ್ಕುತ । ಶಕ್ತಿ
ಶಾಲಿಯ ಬಾಯೊಳು ಮುಕ್ಕುತ ॥ ೬–೧೨೪ ॥

ಬೆಳೆದನಿಮ್ಮಡಿಗೈದು ತನುವನು । ಬಾನ
ಹೊಳೆಯ ಕುಡಿಯುವಂತೆ ಹನುಮನು ॥
ಕಳೆದನಂತ್ಯದಲಿ ರಕ್ಕಸಿಯನು । ಮೈಯ
ತೊಳೆದು ನೀಗಿದನು ಮೈಲಿಗೆಯನು ॥ ೬–೧೨೫ ॥

॥ **ಭಾಮಿನಿ** ॥
ಕಡಲೆದೆಯ ಮೇಲೊಂದು ಹೊನ್ನಿನ ।
ಬೆಡಗುದಾವರೆದೀವಿ ಕಾಣುತ ।
ಸೊಡರುರಿಗೆ ಬೀಳುವ ಪತಂಗದ ತೆರದಿ ಕೆಳಗಿಳಿಯೆ ॥
ತಡೆ ಮಹಾತ್ಮನೆ ಕಲೆಯ ಬಲೆಯೊಳು ।
ಕೆಡೆವ ಕೃತ್ರಿಮವೆಂದು ಬಾನುಲಿ ।
ನುಡಿಯೆ ಮುಂಬರಿಯುತ್ತ ಕಂಡನು ಕನಕಲಂಕೆಯನು ॥ ೯-೧೨೬ ॥

॥ **ಕಾಫಿ – ಆಟ** ॥
ಶಿಶಿರಚಂದಿರಕಾಂತಿಯಿಂದ । ಇಂತು
ನಿಶೆಯ ನೀಲಿಯೊಳಿರ್ಪ ಈ ಲಂಕೆಯಿಂದ ॥
ವಿಷಯಸ್ವರ್ಗದ ಸುಖದಿಂದ । ಮೆರೆವ
ಕುಶಲಸೌಂದರ್ಯ ರಾಕ್ಷಸಮಹಾನಂದ ॥ ೯-೧೨೭ ॥

ಪೊಲ್ಲಮೀ ಸಿರಿಯ ವೈಭವವು । ಛೀ ಛೀ
ಸಲ್ಲದೀ ನರಕಕ್ಕೆ ಸ್ವರ್ಣಗೌರವವು ॥
ಕಳ್ಳ ರಾವಣನ ಸಂಭ್ರಮವು । ದುಷ್ಟ
ಗಲ್ಲದಿನ್ನಾರಿಗೆ ಸಾಧ್ಯಸಂಪದವು ॥ ೯-೧೨೮ ॥

ದಾರಿಯೆಲ್ಲಿದೆ ಪುಗುವುದಕೆ । ಬ್ರಹ್ಮ
ಚಾರಿಗೆ ಯೋಗ್ಯಮಸ್ತೇಯ ನೋಡಲಿಕೆ ॥
ಕೋರೈಪ ಬೆಳಕಿನದ್ಭುತಕೆ । ಇಲ್ಲಿ
ತೋರದಾವುದು ಮುಂದೆ ಕಾಂಬೆ ಕಂಡರಿಕೆ ॥ ೯-೧೨೯ ॥

॥ **ದ್ವಿಪದಿ** ॥
ಬಾಗಿಲಿಲ್ಲದ ಬರಿಯ ಕೋಂಟೆಬಾಯೆಡೆಗೆ ।
ಆಗಳನಿಲಜ ಬಂದು ನಿಂತನರೆಗಳಿಗೆ ॥ ೯-೧೩೦ ॥

ಮುಂದೆ ಕಾಲಿಡೆ ಕವಣೆಕಲ್ಲು ಸಿಡಿದವೊಲು ।
ಒಂದು ಬಿಲ್ಲೆಸೆದೂರ ನೂಂಕಿದಂತಿರಲು ॥ ೯-೧೩೧ ॥

ಬಹುಭುಜಗಳಾಯುಧದ ಮೂರ್ತಿ ತಾನೊಂದು ।
ಮಹಿಮಾಸ್ವರೂಪದೊಳು ನೆರಳಿರದೆ ನಿಂದು ॥ ೯-೧೩೨ ॥

ಚಿನ್ನದುಡೆಯಿಂದೆಸೆವ ಶಿಲ್ಪಸುಂದರಿಯು ।
ಕಣ್ಣಿಟ್ಟು ನೋಡಿ ಮಾತಾಡಲಚ್ಚರಿಯು ॥ ೬–೧೩೩ ॥

॥ **ಕಾಂಭೋದಿ – ಝಂಪೆ** ॥
ಆರು ನೀನಪರಿಚಿತವೇಷಿ ಸತ್ತ್ವಾಢ್ಯ ದಿಟ ।
ದ್ವಾರಯಂತ್ರವನಿರದೆ ಮುರಿದು ॥
ಸಾರಿ ಪೊಕ್ಕವರಿಲ್ಲ ಕನಕಲಂಕಾಪ್ರಜೆಯ ।
ಮೀರಿ ಮತ್ತೊರ್ವನನು ಕಾಣೆ ॥ ೬–೧೩೪ ॥

ರಾವಣನ ಪ್ರಜೆಯಲ್ಲ ಪರದೇಶಿಯೆನ್ನ ನಿಜ ।
ಭಾವಿಸಲು ಸಾಕ್ಷಿ ದೊರೆಯುವುದು ॥
ಆವುದೀ ದೈತ್ಯದಾಸ್ಯದ ನಿನ್ನ ದಾರಿದ್ರ್ಯ ।
ದೇವಿ ನೀನಾರೆಂದು ಪೇಳು ॥ ೬–೧೩೫ ॥

ಕಾಡುಡೆಯ ಕಪಿವೇಷಿ ಯಾರ ಮುಂದಿರ್ಪೆ ತಿಳಿ ।
ಆಡದಿರು ಸೊಕ್ಕುನುಡಿಗಳನು ॥
ನೋಡು ದಶಶಿರ ಕನಕಲಕ್ಷ್ಮಿ ಲಂಕಾದೇವಿ ।
ಕೇಡೊದಗಿ ಬರಿದೆ ಸಾಯದಿರು ॥ ೬–೧೩೬ ॥

॥ **ಸೌರಾಷ್ಟ್ರ – ತ್ರಿವುಡೆ** ॥
ಎಲ್ಲ ಭೋಗಕೆ ತವರು ನೆಲವಿದು ।
ಬಲ್ಲೆ ಕಲೆಗಳ ಬೀಡಿದೆಂಬುದ ।
ಕೊಲ್ಲದೀ ಹೈದನಿಗೆ ಲಂಕೆಯ ।
ಚೆಲ್ವ ತೋರು ॥ ೬–೧೩೭ ॥

ದಶಶಿರನ ವೈಭವದ ದರ್ಶನ ।
ವೆಸಗುವಂದದಿ ಕೃಪೆಯ ಮಾಡೌ ।
ಮಿಸುನಿ ಲಂಕೆಯ ನೋಡಿ ಮರಳುವೆ ।
ಪುಸಿಯಿದಲ್ಲ ॥ ೬–೧೩೮ ॥

॥ **ಶಂಕರಾಭರಣ – ಮಠ್ಯ** ॥
ಸಾಕು ನಿನ್ನ ಕಪಟವಚನ ।
ಏಕೆ ಧೂರ್ತತನವ ತೋರ್ಪೆ ।
ಜೋಕೆಯಿಂದ ಮನೆಗೆ ತೆರಳು ।
ಕಾಕು ಮರ್ಕಟ ॥ ೬–೧೩೯ ॥

ಎನುತಲಾ ತ್ರಿಶೂಲವೆತ್ತಿ ।
ಹನುಮನೆದೆಗೆ ಬೀಸಲಾಗ ।
ಕ್ಷಣದಿ ನೆಗೆದು ಕರವ ಪಿಡಿದ ।
ಘನಪರಾಕ್ರಮಿ ॥ ೬–೧೪೦ ॥

ಮಿಡುಕಗೊಡದೆ ವಜ್ರಮುಷ್ಟಿ ।
ಪಿಡಿಯಲಾಗ ನೋವಿನಿಂದ ।
ಕಡೆಗೆ ಲಂಕಾಲಕ್ಷ್ಮಿಯಳುತ ।
ನುಡಿದಳೀ ತೆರ ॥ ೬–೧೪೧ ॥

॥ **ಕೇದಾರಗೌಳ – ಆಟ** ॥
ಪರಮವಿಕ್ರಮಿ ನಿನ್ನ ಚರಣಕಾನತಳಾದೆ ।
ಧುರದೊಳು ನಿನಗೆ ಸೋತೆ ॥
ಧರೆಯ ಧರ್ಮದ ಮಾರ್ಗ ಪೊರೆಯಬೇಕದರಿಂದ ।
ಮುರಿಯಬೇಡೆಲೊ ಶೂಲವ ॥ ೬–೧೪೨ ॥

ಹೆಣ್ಣೆಂದು ನೋಡದೆ ನಿನ್ನ ನೋಯಿಸಿದೆನು ।
ಮನ್ನಿಸಬೇಕು ಮಾತೆ ॥
ಇನ್ನು ಬೇರೆಯ ದಾರಿಯನ್ನು ಕಾಣದೆ ಹೀಗೆ ।
ಬನ್ನವನಿತ್ತೆನಿಂದು ॥ ೬–೧೪೩ ॥

ಸಿಟ್ಟಿನಿಂದಲಿ ಶೂಲ ಮುಟ್ಟಿ ಬಾಳಿದರಿಲ್ಲ ।
ಕೆಟ್ಟಿತು ಧರ್ಮನೀತಿ ॥
ಕಟ್ಟುಗ್ರತನದಿಂದ ಕಟ್ಟಿದೆ ಕರವನ್ನು ।
ದಿಟ್ಟ ನೀನಾರು ಪೇಳು ॥ ೬–೧೪೪ ॥

ದೇವಿ ಜಾನಕಿಯಿರ್ಪ ಸೋವನು ತಿಳಿಯಲು ।
ನಾವಿಲ್ಲಿಗೈತಂದೆವು ॥
ಭಾವಕಿಯಳದಿರು ರಾವಣಸೇವೆಯಿಂ ।
ದೀವಿಧ ಸೋಲಾಯಿತು ॥ ೯–೧೪೫ ॥

॥ **ಭಾಮಿನಿ** ॥
ನಿನಗೆ ಸೀತಾರಾಮರೀರ್ವರ ।
ಸನುಮತದಿ ಸೇರಿಸುವ ಚಿಂತೆಯು ।
ನನಗೆ ಮತ್ತದರೊಡನೆ ಬೇರೊಂದಿಹುದು ಘನಚಿಂತೆ ॥
ದನುಜನಾತ್ಮೋದ್ಧಾರವಾಗುವ ।
ದಿನವು ಬೇಗನೆ ಬರಲಿ ಲಂಕಾ ।
ಜನಕೆ ಕ್ಷೇಮವು ಸಿಗಲಿ ಶುಭಫಲಕೊಡಲಿ ವಿಧಿಮಾಳ್ಕೆ ॥ ೯–೧೪೬ ॥

॥ **ಸಾಂಗತ್ಯ – ರೂಪಕ** ॥
ಕಡೆಗೊಂದು ಬೇಡುವೆ ಕೊಡುವುದು ಭಿಕ್ಷೆಯ ।
ಕಡುಗಲಿ ನೀನು ಸತ್ಯವಿದು ॥
ಬೆಡಗಿನ ಲಂಕೆಯ ಕಡಲೊಳದ್ದುವ ಬಲ್ಮೆ ।
ಪಡೆದವನೆಂಬ ಕಾರಣದಿ ॥ ೯–೧೪೭ ॥

ಕಲೆಗಳ ಬಲೆಯಾದ ಚೆಲುವಿನ ನೆಲೆಯಾದ ।
ಲಲಿತಲಂಕೆಯ ಕೆಡಿಸದಿರು ॥
ತಿಳಿದೆ ಶೂಲದ ಕೊಂಕಿನೊಳು ವಿಘ್ನಸೂಚನೆ ।
ಗೆಲಮಕ್ಕೆ ನಿನಗೆ ಕಾರ್ಯದೊಳು ॥ ೯–೧೪೮ ॥

ಪ್ರತಿಮೆಯಾಗಲು ಲಂಕಾಸತಿಯು ತತ್ಕ್ಷಣದಿ ಮಾ ।
ರುತಿಯು ಯೋಗದ ಸಿದ್ಧಿಯಿಂದ ॥
ಸತತ ರಾಮನ ನಾಮ ನುತಿಸುತ್ತ ಲಂಕೆಯ ।
ರತ್ನುನವೀಥಿಯಲಿ ಸಾಗಿದನು ॥ ೯–೧೪೯ ॥

॥ **ಕಂದ** ॥
ಪಂಕಜಲೋಚನನಾ ಪದ ।
ಕಿಂಕರ ಹನುಮನ ಸಮುದ್ರಲಂಘನಕಾರ್ಯಂ ॥
ಲಂಕಾಲಕ್ಷ್ಮಿಯ ದರ್ಶನ ।
ಸಂಕಥನಂ ಯಕ್ಷಗಾನದ ಮಹಾಕಾವ್ಯಂ ॥ ೬–೧೫೦ ॥

***

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಲಂಕಾಸಂಪುಟಂ

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೧೦
ಕನಕಲಂಕಾನ್ವೇಷಣಂ

ಪಾತ್ರಪಟಲ

ಹನುಮಂತ

ತಾರಾಕ್ಷಿ

ಇಂದ್ರಜಿತು

ವಿಭೀಷಣ

ಅನಲಾಕುಮಾರಿ

ಮಂಡೋದರಿ

ರಾವಣ

ತ್ರಿಜಟೆ

ಸೀತಾದೇವಿ

ನೀಲ

ಅಂಗದ

ಜಾಂಬವಂತ

ಕನಕಲಂಕಾನ್ವೇಷಣಂ

॥ **ವಾರ್ಧಕ** ॥
ಸುಳಿದನಿಚ್ಛಾರೂಪಿಯಾಗಿ ಲಂಕಾಪುರದಿ ।
ಪೊಳೆವ ಪೊಂಗಳಸ ಸೌಧಾಗ್ರದಿಂ ಸೌಧಕ್ಕೆ ।
ನೆಳಲಂತೆ ಶಶಿಯಂತೆ ನಿಶೆಯ ನಿಟ್ಟುಸಿರಂತೆ ನಿಃಶಬ್ದಸಂಚಲನದಿ ॥
ನಿಳಯ ನಿಳಯಂಗಳಲಿ ಲಂಕಾಲತಾಂಗಿಯರ ।
ಲಲಿತದೇಹದ್ಯುತಿಗೆ ಸ್ಥಿತಿಗೆ ವಸನಚ್ಯುತಿಗೆ ।
ಕಳವಳಿಸಿ ಧೂಪರೂಪಂದಳೆದು ತಾನಿಂದ್ರಜಿತುಮಂದಿರವ
ಸೇರ್ದನು ॥ ೧೦-೧ ॥

॥ **ಸೌರಾಷ್ಟ್ರ – ತ್ರಿವುಡೆ** ॥
ತರುಣಿಮಣಿ ತಾರಾಕ್ಷಿ ತನ್ನಯ ।
ತರಳ ಕೂಗಿದ ಧ್ವನಿಯ ಕೇಳುತ ।
ಭರದಿ ಮಂಚವನಿಳಿದು ಮಣಿಸೊಡ ।
ರುರಿಸಿ ಮತ್ತೆ ॥ ೧೦-೨ ॥

ತೂಗುತೊಟ್ಟಿಲೊಳಿರ್ದ ಕುವರನ ।
ಬಾಗಿ ತನ್ನೆದೆಗವಚಿಕೊಳ್ಳುತ ।
ಬೇಗ ಬಾ ಎಂದೆನುತ ಕಾಂತನ ।
ಕೂಗಿಕೊಳಲು ॥ ೧೦-೩ ॥

ಕಳವಳದ ನುಡಿ ಕೇಳಿ ತಾನರೆ ।
ಗಳಿಗೆಯೊಳು ಶಕ್ರಾರಿ ಧನುಶರ ।
ಗಳನು ಧರಿಸುತ ಬಂದು ನುಡಿಸಿದ ।
ನಳಿನಮುಖಿಯ ॥ ೧೦-೪ ॥

॥ **ಸಾರಂಗ – ಆಟ** ॥
ಏನಿದೇನಿದು ಮನದನ್ನೆ । ನಿನ್ನ ।
ಮಾನಸದೊಳಗಿಂತು ಭೀತಿ ಸಂಪನ್ನೆ ॥
ಏನು ಬಾಧೆಯು ನಮ್ಮ । ಸೂನು ವಜ್ರಾರಿಗೆ ।
ಮಾಣದೀಗಲೆ ಪೇಳು । ಕ್ಷೋಣಿಯ ಮಥಿಸುವೆ ॥ ೧೦-೫ ॥

ಹೇಸಿಗೆ ಹೊಗೆಯಿರೆ ಹೀಗೆ । ನಮ್ಮ ।
ಕೂಸು ನಿದ್ರಾಸೌಖ್ಯ ತಳೆವುದು ಹೇಗೆ ॥
ಈಸು ಗವಾಕ್ಷದಿ । ಬೀಸಲು ತಂಗಾಳಿ ।
ಲೇಸಾಗುವುದು ಮೌಢ್ಯ । ಭಾಸ ಸಲ್ಲದು ಸಖಿ ॥ ೧೦–೬ ॥

ವಚನ: ಆಗಳಾ ತಾರಾಕ್ಷಿ ಪತಿಗಿಂತೆಂದಳು –

॥ **ಸಾಂಗತ್ಯ– ರೂಪಕ** ॥
ಊಳಿತು ಶುನಕ ಕೇಗಿತು ನೀಲಕಂಠವು ।
ಬಾಲಕ ಚೀರ್ದ ತೊಟ್ಟಿಲೊಳು ॥
ಪೇಳಲಾರೆನು ಇಂಥ ಶಕುನಚಿಹ್ನೆಯ ಕೆಟ್ಟ ।
ಕಾಲಬಂದಿತೆ ಲಂಕೆಗೀಗ ॥ ೧೦–೭ ॥

ಹೊತ್ತಿಳಿಯುವ ಕಾಲ ಲಂಬಪರ್ವತತುದಿ ।
ಯುತ್ತರದೆಡೆಗುಲ್ಕೆಯೊಂದು ॥
ಚಿತ್ತರ ಕಪಿಗಾತ್ರವೆತ್ತು ಕಾಣಿಸಿತಂತೆ ।
ಮೃತ್ಯು ತಾನಂತೆ ರಾಯಂಗೆ ॥ ೧೦–೮ ॥

॥ **ಭಾಮಿನಿ** ॥
ಅಂತೆಕಂತೆಯ ಬೊಂತೆ ಕಟ್ಟಿಡು ।
ಚಿಂತೆಯೇತಕೆ ಬಿಡು ವಿಧಾತನ ।
ದೆಂತು ಸೃಷ್ಟಿಯ ಗೈದ ಭುವನದೊಳಿಂಥ ಸ್ತ್ರೀಮನವ ॥
ಇಂತು ಮಿಥ್ಯೆಗೆ ಮನವ ಮಾಡದೆ ।
ಸಂತವಿಸು ಸುತನನ್ನು ಶಸ್ತ್ರ ।
ಗ್ರಂಥದಧ್ಯಯನವನು ಮುಗಿಸುತ ಬಹೆನು ತಾನೆಂದ ॥ ೧೦–೯ ॥

ವಚನ: ಮತ್ತೆ ಸತಿ ತಾನಿಂತೆಂದಳು –

॥ **ಕಾಂಭೋದಿ – ಝಂಪೆ** ॥
ವೀರವರ ಕೇಳೊಲಿದ ನಾರಿಯಾಂತರ್ಯವನು ।
ಈ ರೀತಿ ಕಡೆಗಣಿಸಿ ನುಡಿದು ನಡೆಯುವುದು ॥
ಮೂರವಧಿ ಮಂತ್ರದಾಲೋಚನೆಯ ಮಂದಿರದಿ ।
ಸೇರಿರ್ಪ ನಿನಗೆಂತು ಸತ್ಯ ತಿಳಿಯುವುದು ॥ ೧೦–೧೦ ॥

ಶ್ರೀರಾಮಸತಿಯನ್ನು ಮಾವ ತಂದಂದಿನಿಂ ।
ತೋರುತಿದೆ ದುಃಶಕುನ ದುಃಸ್ವಪ್ನವೆಮಗೆ ॥
ಮಾರುಹೋಗದ ಮಾತೆಯನು ಮರಳಿಸಲು ಪೇಳ ।
ಬಾರದೇ ನೀವೊಮ್ಮೆ ನಿಮ್ಮ ಜನಕನಿಗೆ ॥ ೧೦-೧೧ ॥

ವಚನ: ಸತಿಯ ಸಲಹೆಯ ಕೇಳಿ ಇಂದ್ರಜಿತು ನುಡಿದನಿಂತು -

ಅನಲಾಕುಮಾರಿಯುಪದೇಶಮಂ ಕೇಳುತ್ತೆ ।
ನಿನಗಾ ವಿಭೀಷಣನ ಮತಿಯೊದಗಿತೇನು ॥
ಜನಕನಾಣತಿಯಂತೆ ನಡೆಯಲ್ಕೆ ನಾನಿಹೆನು ।
ನಿನಗೆ ಭೀತಿಯದೇಕೆ ಲಂಕೆ ದುರ್ಗಮವು ॥ ೧೦-೧೨ ॥

॥ **ದ್ವಿಪದಿ** ॥
ಮಲಗು ಪೋಗೆಂದವಳ ಕಳುಹಲಿಂದ್ರಾರಿ ।
ಎಲರಮಗ ಮುಂಬರಿದು ಕಂಡ ಪೊಸದಾರಿ ॥ ೧೦-೧೩ ॥

ಆ ಮಹಾಪಾರ್ಶ್ವ ಪ್ರಹಸ್ತನತಿಕಾಯ ।
ಧಾಮಗಳ ಶೋಧಿಸುತ ರಾಕ್ಷಸರ ಮಾಯ ॥ ೧೦-೧೪ ॥

ಸ್ತಂಭಕೌಶಲ ಶಿಲ್ಪ ಕಂಡು ಮುಂಬರಲು ।
ಕುಂಭಕರ್ಣನ ಭದ್ರಸದನ ಶೋಭಿಸಲು ॥ ೧೦-೧೫ ॥

ಮಲ್ಲಕಾಳಗದೊಳರೆ ದೈತ್ಯಬಲ ಕಂಡು ।
ಗೆಲ್ಲುವರೆ ಧರ್ಮವೇ ಗತಿಯೆಂದುಕೊಂಡು ॥ ೧೦-೧೬ ॥

ಮುಂದು ಮುಂದೈತರೆ ವಿಭೀಷಣನ ಪೊಸತು ।
ಮಂದಿರಕೆ ಬರಲಾಗ ವೀಣೆ ಬಾಜಿಸಿತು ॥ ೧೦-೧೭ ॥

ವಚನ: ಅನಲಾದೇವಿ ತಂದೆತಾಯ್ಗಳಂ ಕುಳ್ಳಿರಿಸಿ ವೀಣೆಯಂ
ಬಾಜಿಸುತಿರ್ದಳು -

॥ **ಕಮಾಚು - ಆದಿ** ॥
ಶ್ರೀಕರ ಸುಮಧುರ ಓಂಕಾರ ।
ಏಕಮೇವ ಸ್ವರ ಝೇಂಕಾರ ॥ ಪ ॥

ಲೋಕಕೃಪಾಕರ ನಾದಬಿಂದುಧರ ।
ವ್ಯಾಕುಲಸಂಹರ ನಿಜ ಸುಮನೋಹರ ॥ ಅ. ಪ ॥

ಮಾದನಿ ಸಸಸಾಸ ನೀಸರಿ ನಿಸನೀದ ।
ಮಾಗಮ ರಿಗಸಾಸ ರೀಸನಿ ದಮಪಾದ ॥
ಪ್ರಾಣಪ್ರಣವ ವೈಶ್ವಾನರ ಪರತರ ।
ವೀಣಾತ್ಮೈಜಸ ಪ್ರಾಜ್ಞಪ್ರಭಾಕರ ॥ ೧೦–೧೮ ॥

॥ **ಕೇದಾರಗೌಳ – ಆಟ** ॥
ಆರೋ ಬಂದಂತಾಯಿತೆಂದು ತನ್ನೊಳಗೆ ಕು ।
ಮಾರಿ ವೀಣೆಯ ನಿಲ್ಲಿಸಿ ॥
ಪಾರಮಾರ್ಥದ ನಾದಲೋಕ ತ್ಯಜಿಸಿ ವ್ಯಾವ ।
ಹಾರಿಕವನೆ ಕಂಡಳು ॥ ೧೦–೧೯ ॥

ಮಗಳೆ ಸೋಜಿಗಮೇಕೆ ಕಲೆಯಿರ್ಪ ತಾಣಕೆ ।
ನಗುತೆ ದೇವತೆಗಳೆಲ್ಲ ॥
ಪಗಲಿರುಳ್ಕೈತಂದು ಮಿಗಿಲು ರಸವನುಂಡು ।
ಸೊಗವಾಂತುಕೊಂಬರ್ಕೈಸೆ ॥ ೧೦–೨೦ ॥

ಜನಕ ಲಾಲಿಪುದೀಗ ಸುಖದುಃಖ ತಿಳಿಯೆನು ।
ಮನಸು ವಿಹ್ವಲಗೊಂಡಿದೆ ॥
ವನದಿ ರಾಮನ ತಪಸ್ವಿನಿಯ ಕಂಡಾಮೇಲೆ ।
ಘನಚಿಂತೆ ಮನೆಮಾಡಿದೆ ॥ ೧೦–೨೧ ॥

॥ **ಭಾಮಿನಿ** ॥
ಗಿರಿಯ ನೆತ್ತಿಗೆ ನಿನ್ನೆ ಬಿದ್ದೊಂ ।
ದುರಿವರಿಲ ನಾ ಕಂಡೆ ಸೀತೆಯ ।
ಮರಳಿ ಪತಿಯೆಡೆ ಕಳುಹದಿರಲೀ ಲಂಕೆಯುಳಿಯುವುದೆ ॥
ಬೆರಳ ಮಿಡಿತಕೆ ಮುನಿದು ಬೀಣೆಯು ।
ಪರಿತಪಿಸಿ ಶಪಿಸುತಿದೆ ರೋದನ ।
ಮೊರತು ಗಾನಮಿದಲ್ಲ ಸಂಕಟ ಮನೆಯ ತುಂಬುತಿದೆ ॥ ೧೦–೨೨ ॥

॥ **ಕಂದ** ॥
ಸಚ್ಚರಿತಾತ್ಮ ವಿಭೀಷಣ ।
ಮುಚ್ಚಿರುತಿರೆಯಳಲ ಬೇಗೆಯಂ ಮಾನಸದೊಳ್ ॥
ಅಚ್ಚರಿಯಿಂದಾಲಿಸುತಿರೆ ।
ಚುಚ್ಚಿತು ಸ್ಮೃತಿಮಾತ್ರಮಾಗುತಶ್ರುತನಾದಂ ॥ ೧೦-೨೩ ॥

॥ **ಸೌರಾಷ್ಟ್ರ – ತ್ರಿವುಡೆ** ॥
ಇಂಥ ಜನರಿರೆ ಲಂಕೆಯೊಡಲಿದು ।
ಪಂಥ ಪಿಡಿಯದೆ ಕ್ಷೇಮದೊಳಗಿಹು ।
ದಿಂತೆನುತ ಚಿಂತಿಸುತಲಾ ಹನು ।
ಮಂತ ನಡೆದು ॥ ೧೦-೨೪ ॥

ಭೀಮದೈತ್ಯಶರೀರ ವೃಶ್ಚಿಕ ।
ರೋಮನನು ಸಂಭ್ರಾಂತಿಗೊಳಿಸುತ ।
ರಾಮದೂತನು ಕಂಡನುಪವನ ।
ಸೀಮೆಯೊಂದ ॥ ೧೦-೨೫ ॥

ಹರನ ಗುಡಿಯೊಂದರಲಿ ಮಂಡೋ ।
ದರಿಯು ನಿರ್ಮಲ ಭಕ್ತಿಭಾವದೊ ।
ಳಿರುವುದನು ಕಾಣುತ್ತ ಮಾರುತಿ ।
ಮರೆಯೊಳಿರ್ದ ॥ ೧೦-೨೬ ॥

ವಚನ: ಮಂಡೋದರಿಯು ಭಕ್ತಿಯಿಂ ಪರಶಿವನ ನುತಿಸುತಿರ್ದಳು –

॥ **ಕೇದಾರಗೌಳ– ಝಂಪೆ** ॥
ಕರುಣಿಸೈ ಪರಮೇಶ್ವರ । ಆರ್ತಜನ ।
ಸುರಭೂಜ ಶಿವಶಂಕರ ॥
ಗಿರಿಜಾತೆ ಕಾತ್ಯಾಯನಿ । ಸಂಕಟವ ।
ಹರಿಸಿ ಕಾಪಾಡು ಜನನಿ ॥ ೧೦-೨೭ ॥

ಪತಿಭಿಕ್ಷೆಯನ್ನು ನೀಡು । ಮಂಗಳದ ।
ಮತಿಯನ್ನು ಕೃಪೆಯಮಾಡು ॥
ಪತಿತಪಾವನ ಮೂರುತಿ । ಪಾಲಿಪುದು ।
ಸುತೆಗೈದೆತನದ ಶಕುತಿ ॥ ೧೦-೨೮ ॥

ವಚನ: 'ರಾಮಚಂದ್ರಂ ಗೆಲ್ಗೆ ಜನಕನಂದಿನಿ ಬಾಳ್ಗೆ' ಎಂಬ
ಮರೆಯಘೋಷವ ಕೇಳ ವನಿತೆ ಬೆಬ್ಬಳಸೆ ಮಂದಿರದ
ಮೌನಮದುರುವಂದದಿ ರಾವಣೇಶ್ವರ ಬಂದನು –

॥ **ಶಂಕರಾಭರಣ – ಏಕ** ॥
ಕಾಂತೆ ನಿನ್ನ ಮುಖದೊಳೇನೀ । ಕಾಂತಿಹೀನ ಭಾವ ॥
ಶಾಂತಸ್ಥಿತಿಯ ಕಳೆದು ಮನವು । ಭ್ರಾಂತಿಗೊಂಡ ಹೇವ ॥ ೧೦–೨೯ ॥

ಕೆಡೆದ ಉಲ್ಕಾಪಾತದಿಂದ । ನಡುಗಿ ಭೀತಿಗೊಂಡು ॥
ಮೃಡನ ಪ್ರಾರ್ಥಿಸುವರೆ ಬಂದೆ । ಕೊಡು ಅಭೀಷ್ಟವೆಂದು ॥ ೧೦–೩೦ ॥

ಧ್ಯಾನಸಮಯದಲ್ಲಿ ಏಕೆ । ನೀನು ಚೀರಿರುವುದು ॥
ಮಾನಸದೊಳು ನೆನೆದುದೆಲ್ಲ । ತಾನೆ ಕೇಳಸುವುದು ॥ ೧೦–೩೧ ॥

ನೆನೆವೆನೇನು ಅಶುಭವನ್ನು । ಕನಸು ಮನಸುಗಳಲಿ ॥
ನಿನಗೆ ನನಗೆ ಜನಕಸುತೆಗೆ । ಚಿನುಮಯೇಚ್ಛೆ ಸಲಲಿ ॥ ೧೦–೩೨ ॥

ವಚನ: ಸತಿಯ ಹಿತವಚನಮಂ ಕೇಳ ದಶಶಿರಂ ನುಡಿದನು –

॥ **ಕೇದಾರಗೌಳ – ಆಟ** ॥
ಮಂಡೋದರಿಯೆ ಕೇಳು ಮಂಗಳಾಂಬಿಕೆ ನುತಿ ।
ಗೊಂಡು ಧೈರ್ಯವನು ತಾಳು ॥
ಪುಂಡರೀಕಾಕ್ಷಿ ಜಾನಕಿದೇವಿಯನು ನೀನು ।
ಕಂಡುದುಂಟೇನು ಪೇಳು ॥ ೧೦–೩೩ ॥

ಮನ್ನಿಸು ರಾಜೇಂದ್ರ ಮನದೊಳೀವರೆಗಾನು ।
ನಿನ್ನಾಜ್ಞೆ ಮೀರಲಿಲ್ಲ ॥
ನಿನ್ನೆ ಜಾನಕಿದೇವಿ ಸನ್ನಿಧಿ ಸೇರುತ ।
ಪುಣ್ಯದರ್ಶನವಾಂತೆನು ॥ ೧೦–೩೪ ॥

ಹಿಂದೆ ಸೋಲದ ದಶಕಂಧರನನು ನೀನು ।
ಇಂದು ಸೋಲಿಸಿದೆ ಪ್ರಿಯೆ ॥

ಒಂದು ಭಾವನೆ ನಿನ್ನ ಮುಂದೆ ಮತ್ತವಳಾಸೆ ।
ದ್ವಂದ್ವದಿಂದಲಿ ಕೆಟ್ಟೆನೆ ॥ ೧೦-೩೫ ॥

ಸತಿಯ ಸುವ್ರತದಿ ಸಂಯಮವನ್ನು ತಾಳ್ದಾವ ।
ಕೃತಿಯು ಸೋಲೆನಿಪುದೆಂತು ॥
ಕ್ಷಿತಿಯೊಳಿಂದ್ರಿಯವನ್ನು ಜಯಿಸಿದಾತನೆ ಧೀರ ।
ಮತಿವಿವೇಕವೆ ಗೆಲುವು ॥ ೧೦-೩೬ ॥

॥ **ಭಾಮಿನಿ** ॥
ಚೆಲುವಿಗೊಲಿದೆನು ಮೊದಲು ಜಾನಕಿ ।
ಯೊಲುಮೆಗೋಸುಗ ಮೀಹ ಭೋಜ್ಯಂ ।
ಗಳನು ತೊರೆದೆನು ಛಲವದೊಂದೇ ಮನದೊಳೀಗಿಹುದು ॥
ಲಲನೆ ನೀನು ವಿಭೀಷಣನು ಸಂ ।
ಚಲಿಸುತಿರ್ಪಿರಿ ನನ್ನ ಚಿತ್ತವ ।
ಗೆಲುವೆ ರಾಮನ ಮತ್ತೆ ನಿಮ್ಮನಿಬರನು ಇದು ಪೂಣ್ಕೆ ॥ ೧೦-೩೭ ॥

ವಚನ: ಅನಿತರೊಳಗಾ ಹನುಮದ್ಧ್ವನಿ ಕೇಳಿತು –

॥ **ಕಾಂಭೋದಿ – ಝಂಪೆ** ॥
ರಾಮಚಂದ್ರಂ ಗೆಲ್ಗೆ ಜನಕನಂದಿನಿ ಬಾಳ್ಗೆ ।
ಕ್ಷೇಮವಿರಲೀ ಲೋಕದೊಳಗೆ ॥
ಈ ಮಾತನುಲಿಯುತ್ತ ಹನುಮ ಸೂಕ್ಷ್ಮದಿ ಚರಿಸೆ ।
ಆ ಮಂದಿರದಿ ಧ್ವನಿಯು ಮೊಳಗೆ ॥ ೧೦-೩೮ ॥

ವಚನ: ರಾವಣಂ ಅಚ್ಚರಿಯನಾಂತು –

ಗೋಡೆಯಿಂದಲಿ ಬಂತೆ ಕಂಬದಿಂದಲಿ ಬಂತೆ ।
ಮಾಡಬೋದಿಗೆಯಿಂದ ಬಂತೆ ॥
ನೋಡುನೋಡುತ್ತಿರಲು ಶಿವಪ್ರತಿಮೆಯಿಂ ಬಂತೆ ।
ಗೂಢರವ ಕಂಗೆಡಿಸಲಿಂತೆ ॥ ೧೦-೩೯ ॥

॥ **ಸಾಂಗತ್ಯ – ರೂಪಕ** ॥
ನೀನು ಪೇಳಿದ ಮಾತು ಮತ್ತೆ ಕೇಳಿಸಿತಲ್ಲ ।
ಮಾನಸಭ್ರಮೆಗುಂಟು ಜಾಡ್ಯ ॥
ಈ ನಮ್ಮ ಬಗೆಯಿಂತು ಪಗೆಯಾಗಿ ತೋರ್ಪುದು ।
ಜಾಣೆ ಭೀತಿಯನು ತಾಳದಿರು ॥ ೧೦–೪೦ ॥

ಮಾಯಾವಿದ್ಯೆಯ ಬಲ್ಲ ಮಹಿಮ ರಕ್ಕಸರೆಲ್ಲ ।
ಕಾಯುತಿರಲು ಲಂಕೆಯನ್ನು ॥
ಹಾಯಾಗಿ ಮಲಗಿ ನಿದ್ರೆಯಮಾಡು ನೀನೆಂದು ।
ಆಯತಾಕ್ಷಿಯ ಸಂತೈಸಿದನು ॥ ೧೦–೪೧ ॥

॥ **ದ್ವಿಪದಿ** ॥
ಕಡಲತಡಿಯೊಳಗಿರ್ಪಶೋಕವನ ಸೇರಿ ।
ಅಡಗೆ ಮಾರುತಿ ಶಿಂಶುಪಾವೃಕ್ಷವೇರಿ ॥ ೧೦–೪೨ ॥

ಬೆಳಗಾಗಲೆಂದವನು ಕಾದುಕುಳಿತಿರಲು ।
ಎಲೆಮನೆಯ ಬಿರುಕಿನಿಂ ರವಿರಶ್ಮಿ ಬರಲು ॥ ೧೦–೪೩ ॥

ರಾಮಚಂದ್ರನ ನಾಮಸ್ಮರಣೆಗೈಯುತ್ತ ।
ಭೂಮಿಸುತೆ ಜಾನಕಿಯು ಹೊರಗೆ ಬರಲತ್ತ ॥ ೧೦–೪೪ ॥

ಖಿನ್ನಮುಖಿ ಚಂದ್ರನಖಿ ಸಹಿತ ರಾವಣನು ।
ತನ್ನೆಡೆಗೆ ಬರುತಿರಲು ಕಂಡು ಸೀತೆತನು ॥ ೧೦–೪೫ ॥

ಕದಳಿಯೊಲು ಕಂಪಿಸುತ ನಿಂತಲ್ಲೆ ಕುಸಿಯೆ ।
ಒದಗಿಬಂದಾ ತ್ರಿಜಟೆ ಕರಪುಟದಿ ಪಿಡಿಯೆ ॥ ೧೦–೪೬ ॥

ವಚನ: ಆ ದೃಶ್ಯಮಂ ಕಂಡು ಕೋಪೋದ್ರಿಕ್ತನಾಗಿ ರಾವಣೇಶ್ವರಂ
ತ್ರಿಜಟೆಯಂ ಬೈದನು –

॥ **ಸೌರಾಷ್ಟ್ರ– ತ್ರಿವುಡೆ** ॥
ಏತಕಿಹೆ ನೀನಿಲ್ಲಿ ಪೇಳೆಲೆ ।
ಸೀತೆ ಬಹುಬಳಲಿಹಳು ಸುಮ್ಮನೆ ।

ಘಾತಿಸುವುದೇಕೆನ್ನ ಪ್ರಾಣವ ।
ಪ್ರೇತರೂಪಿ ॥ ೧೦-೪೭ ॥

ಮಸಣಗೈಯದಶೋಕವನವನು ।
ಬಿಸಜಮುಖಿಯನು ಸೇವಿಸುತ್ತಿರು ।
ಹಸಿವು ತೃಷೆ ಪರಿಹರಿಸಿ ನಿತ್ಯವು ।
ಬೆಸಸು ವಾರ್ತೆ ॥ ೧೦-೪೮ ॥

ವಚನ: ಆಗಳಾ ಚಂದ್ರನಖಿ ಇಂತೆಂದಳು –

॥ ಜಂಜೂಟಿ – ಆಟ ॥
ಅಣ್ಣಯ್ಯ ಕೇಳೆನ್ನ ಸೊಲ್ಲ । ಸೀತೆ
ಪುಣ್ಯರೂಪಿಣಿಯು ಸುಳ್ಳಲ್ಲ ॥
ನಿನ್ನಿಂದ ಎನಗೆ ವೈಧವ್ಯವುಂಟಾಯಿತು ।
ಘನ್ನಘಾತಕ ನೀನೆನಿಸಿ ಬಳಿ ।
ಕೆನ್ನ ನೀ ಪಾತಕಕೆ ನೂಂಕಿದೆ ॥ ೧೦-೪೯ ॥

ದಿಟದಿ ನೋಡಲು ದೇವಿ ಈಕೆ । ನಿನಗೆ
ಹಟದ ಹಂಬಲದ ಬಾಳೇಕೆ ॥
ಕುಟಿಲತನದ ಕೂಪಕಿಳಿಯಬೇಡೆಲೊ ನೀನು ।
ಸಟೆಯ ಬದುಕಿದು ನರಕವೆನ್ನುವ ।
ಕಟುತರದ ದಿಟ ತೋರ್ದಳೀಕೆಯು ॥ ೧೦-೫೦ ॥

ವಚನ: ದಶಶಿರಂ ಸಿಡುಕಿ ತಂಗೆಯಂ ಬೈದನಿಂತು –

॥ ಭೈರವಿ– ಝಂಪೆ ॥
ಸಾಕು ಸಾಕೀ ಮಾತು । ಬೇಕಷ್ಟು ಕೇಳಿದೆನು ।
ಲೋಕನೀತಿಯ ಬಲ್ಲೆ । ಕಾಕು ನುಡಿಯದಿರು ॥ ೧೦-೫೧ ॥

ಮೆರೆವಶೋಕೆಯ ವನಕೆ । ಬರುವರಾರೇ ಇರಲಿ ।
ಪರಿಯನು ವಿಚಾರಿಸದೆ । ಕೊರಳನುರುಳಿಸುವೆ ॥ ೧೦-೫೨ ॥

ವಚನ: ಮತ್ತೆ ರಾವಣಂ ವಿನಯದೊಳ್ ಜಾನಕಿಯ ಕುರಿತು
ಇಂತೆಂದನು –

॥ **ಕೇದಾರಗೌಳ – ಆಟ** ॥
ಎನ್ನ ದುರ್ವಿನಯವ ಕ್ಷಮಿಸು ಕ್ಷಮಾಕನ್ಯೆ ।
ನಿನ್ನ ಸ್ಥಿತಿಗೆ ನೊಂದೆನು ॥
ಅನ್ಯಾಯಮಿದು ನಿನ್ನ ಆತ್ಮಘಾತಕವ್ರತ ।
ಇನ್ನು ವೇದೋಕ್ತವಲ್ಲ ॥ ೧೦–೫೩ ॥

ತಿಳಿಯೆನೆ ನಿನ್ನಂತರಂಗಗೂಢತೆ ದೊರೆ ।
ಕೊಳುವುದೆ ಪುರುಷಾರ್ಥವು ॥
ನಳಿನಲೋಚನೆ ವ್ಯರ್ಥ ದುಃಖಿಸುತಿಹೆ ಏಕೆ ।
ತಳೆಯಬಾರದೆ ವಿವೇಕ ॥ ೧೦–೫೪ ॥

ಆವಳ ನೆರೆದು ಕಿಷ್ಕಿಂಧೆಯೊಳಿರುವನು ।
ದೇವಿ ನಿನ್ನಯ ರಾಮನು ॥
ದೇವದುರ್ಲಂಘ್ಯಸಾಗರಮಿದು ನಿನ್ನಯ ।
ಜೀವನ ಕೆಡಿಸದಿರು ॥ ೧೦–೫೫ ॥

ಪರಶಿವಧನುವ ಸ್ವಯಂವರದೊಳಗೆತ್ತಿ ।
ಮುರಿದ ಮಾತ್ರದೊಳಾತನು ॥
ವರ ನಿನಗಪ್ಪೊಡೆ ನೂರ್ಮಡಿ ಬಲುಹುಳ್ಳ ।
ಪರಮವಿಕ್ರಮಿಯು ನಾನು ॥ ೧೦–೫೬ ॥

ವಚನ: ಕೋಪದಿಂದುರಿದ ಜಾನಕೀದೇವಿ ತ್ರಿಜಟೆಯಂ ನೋಡಿ
ಇಂತೆಂದಳು –

॥ **ಮಾರವಿ –ಏಕ** ॥
ಕತ್ತೆಯ ತತ್ತ್ವವ ಕತ್ತೆಯೆ ಕತ್ತೆಗೆ ।
ಬಿತ್ತರಿಸಲು ಬೇಕು ॥
ಉತ್ತಮ ರಘುಜನ ಚಿತ್ತದ ಸತಿಯದ ।
ಕುತ್ತರಿಸುವಳಲ್ಲ ॥ ೧೦–೫೭ ॥

ವಿನಯ ಮರುಕ ಸೌಜನ್ಯವ ನಟಿಸುವ ।
ಶುನಕಗೆ ಧಿಕ್ಕಾರ ॥
ಇನಿತಾಡಿದ ಪುಸಿನಾಲಗೆ ಪೊಲೆಸಿರಿ ।
ದನುಜಗೆ ಧಿಕ್ಕಾರ ॥ ೧೦-೫೮ ॥

ಎಂತಿರಲಾ ಶ್ರೀರಾಮಚಂದ್ರಮನೆ ।
ಸಂತತ ಪತಿಯೆನಗೆ ॥
ಇಂತೀ ಮರಣಾನಂತರವಾದರು ।
ಸಂತಸದೊಳು ಸೇರ್ವೆ ॥ ೧೦-೫೯ ॥

॥ **ಭಾಮಿನಿ** ॥
ಖೂಳರಿಂಥವರಿರ್ಪ ಲೋಕದಿ ।
ಬಾಳುವೆಯೆ ಬಲುಹೀನವೆಂಬುದ ।
ಪೇಳ ನಿನ್ನೊಡೆಯಂಗೆ ತೀರಿಸು ಜೋಳವಾಳಯನು ॥
ಕೇಳರುವೆ ರಾಕ್ಷಸವಿಕಾರವ ।
ಮೂಲಭಾವವಿದೆಂಬುದರಿತೆನು ।
ಪೇಳು ಸಾಗರಸೇತುವಾಗುತೆ ಮೃತ್ಯುತಹುದೆಂದು ॥ ೧೦-೬೦ ॥

ವಚನ: ಆಗಳಾ ದಶಶಿರಂ ಇಂತೆಂದನು –

॥ **ಮಧುಮಾಧವಿ – ತಿವುಡೆ** ॥
ಅನ್ನವಿಲ್ಲದೆ ಬುದ್ಧಿಕೆಟ್ಟಿದೆ ।
ಎನ್ನ ಬರುವಿಕೆಯನ್ನು ತಿಳಿಸೌ ।
ಮುನ್ನ ಭೇಷಜವಿತ್ತು ಮತಿಭ್ರಮೆ ।
ಯನ್ನು ಕಳೆಯುವೆ ಮುಂದಕೆ ॥ ೧೦-೬೧ ॥

ತರುಣಿಯನ್ನವನುಣ್ಣಲೊಲ್ಲದೆ ।
ಮರಣವಾಂತರೆ ಚಿತೆಯನೇರುವೆ ।
ಒರಗುವೆನು ಶವದೊಡನೆ ಭಸ್ಮದಿ ।
ಬೆರೆತು ಮುಕ್ತಿಯ ಪೊಂದುವೆ ॥ ೧೦-೬೨ ॥

ವಚನ: ಕರ್ಕಶನುಡಿಯೊಳಿಂತೆಂದು ರಾವಣಂ ಪಿಂತಿರುಗೆ
ಕಂಬನಿಧಾರೆಯಂ ಸುರಿಸುತಿರ್ಪಾ ಸೀತೆಯಂ
ಸಂತೈಸತೊಡಗಿದಳು ತ್ರಿಜಟೆಯಿಂತು –

॥ **ಸಾಂಗತ್ಯ – ರೂಪಕ** ॥
ಪುಸಿಯ ನಂಬದಿರವ್ವ ಗೈಯ ಬಲಾತ್ಕಾರ ।
ಪಶುಭಾವದವನಲ್ಲ ದೈತ್ಯ ॥
ವಶವಾಗದಿಹ ನಾರಿಯರನು ಕೂಡುವನಲ್ಲ ।
ವಿಷಮನಾದರೂ ಹೇಡಿಯಲ್ಲ ॥ ೧೦–೬೩ ॥

ಚಂದಿರನಖಿಯನ್ನು ಸನ್ಮಾರ್ಗಕೆಳಸಿದ ।
ಬಂಧುತ್ವ ನಿನ್ನ ರಕ್ಷಿಪುದು ॥
ಇಂದು ಕಡೆಯ ಜಾವದೊಳಗೆ ಕಂಡಿಹ ಸ್ವಪ್ನ ।
ವೊಂದ ಪೇಳುವೆನು ನಿನ್ನೊಡನೆ ॥ ೧೦–೬೪ ॥

॥ **ವಾರ್ಧಕ** ॥
ಸರಸಿಮಧ್ಯದೊಳೆಸೆವ ಕನಕನೀಲದವರ್ಣ ।
ದರವಿಂದಯುಗ್ಮಮಂ ಭ್ರಮರಾಳಿ ಚುಂಬಿಸಿರೆ ।
ಪರಿಮಳವ ಮೂಸುತ್ತೆ ಬಳಿಬಂದ ನಕ್ರಮಂ ಪುಚ್ಛದಿಂ ಚುಚ್ಚಿಕೊಲಲು ॥
ಬರಲಾ ಕಳೇವರಂ ರಾವಣನದಾಗಿರಲು ।
ಭರದಿ ಕುಮುದವನಪ್ಪಿಕೊಳಲು ತಾವರೆಯೊಳಗೆ ।
ಪರಮಧ್ಯಾನದೊಳಿರ್ದ ನಿನ್ನ ವಪುವಂ ಕಂಡೆನೇನೆಂಬೆನಚ್ಚರಿಯನು ॥ ೧೦–೬೫ ॥

॥ **ಕೇದಾರಗೌಳ –ಅಟ** ॥
ಕನಸಿಂಗೆ ಮಿಗಿಲಾದ ಹರುಷಸೌಭಾಗ್ಯವ ।
ನೆನಗೆ ನೀಡಿದೆ ನೀ ಸಖಿ ॥
ದನುಜನಟ್ಟುಳಿಯಿಂದ ಮನಸು ವಿಹ್ವಲವಾಗೆ ।
ಬಿನದವಿತ್ತಿಹೆಯಾತ್ಮಕೆ ॥ ೧೦–೬೬ ॥

ಇಂದಿದೇನಿದು ಚೈತ್ರಸೌಂದರ್ಯವೋಲ್ಯೈಸಿ ।
ಬಂದಿದೆ ವನದೆಲ್ಲೆಡೆ ॥

ಎಂದಾಗದನುಭೂತಿ ಶ್ರೀರಾಮಸಾನ್ನಿಧ್ಯ ।
ಪೊಂದಿದೆ ಶಿಂಶುಪವು ॥ ೧೦-೩೭ ॥

ಹೊಳೆಯ ನೀರೊಳು ಮೊಗತೊಳೆದು ಕಂಡಪೆ ನಾನು ।
ಬಳಸಿರ್ಪ ತರುಗುಲ್ಮವ ॥
ಕುಲಗುರು ರವಿಗರ್ಘ್ಯವನ್ನಿತ್ತು ಬಂದಪೆ ।
ಸಲಲಿ ನಿನ್ನಯ ಹಾರೈಕೆ ॥ ೧೦-೩೮ ॥

ಮಗಳೆ ಒಳ್ಳಿತ ಕಾಂಬೆ ಫಲಜಲ ಸೇವಿಸು ।
ಮಿಗೆ ನೆನೆಯದಿರಕಾರ್ಯರ್ ॥
ಅಗಲಿ ಪೋಗುವುದೆನ್ನ ಹರಣವು ನಿನ್ನುಸಿ ।
ರಿಗೆ ಕೇಡು ತಾನೊದಗೆ ॥ ೧೦-೩೯ ॥

ವಚನ: ಮಿಂದು ಬೊಗಸೆಯೊಳ್ ಅರ್ಘ್ಯಜಲಮಂ ಪಿಡಿದು
ಜಾನಕೀದೇವಿ ಪ್ರಾರ್ಥಿಸಿದಳು –

॥ ಭಾಮಿನಿ ॥
ಜಗದ ತಿಮಿರವನಳಿಸಿ ಮೆರೆಯುವ ।
ಖಗಮಣಿಯೆ ಕುಲಗುರುವೆ ವಂದಿಪೆ ।
ಮಗಳವಳ ಮಾನವನು ಕಾಪಾಡುವುದು ಶರಣೆಂಬೆ ॥
ರಘುಕುಲೋತ್ತಮ ರಾಮಚಂದ್ರನ ।
ಸೊಗದರಸಿಯಂಜಲಿಯ ಜಲವನು ।
ತೆಗೆದುಕೊಳ್ಳೆಂದೆನುತ ಕಣ್ಮುಚ್ಚಿರಲು ಧ್ವನಿಯಾಯ್ತು ॥ ೧೦-೨೦ ॥

ವಚನ: ಆಗಳಾ ಶಿಂಶುಪಾವೃಕ್ಷದ ಮೇಲಿರ್ದ ಆಂಜನೇಯಂ
ರಾಮಕಥೆಯಂ ಪೇಳ್ದನು –

॥ ಸಾಂಗತ್ಯ – ರೂಪಕ ॥
ವರ ಹಿಮಾಚಲದ ದಕ್ಷಿಣದೊಳು ಹರಿವಂಥ ।
ಸರಯೂನದಿಯ ತಟದೊಳಗೆ ॥
ಮೆರೆವ ಕೋಸಲದೇಶದರಸನು ದಶರಥ ।
ಗಿರುವ ಮೂವರು ರಾಣಿಯರಿಗೆ ॥ ೧೦-೨೧ ॥

ಶ್ರೀರಾಮ ಲಕ್ಷ್ಮಣ ಭರತ ಶತ್ರುಘ್ನ ಕು ।
ಮಾರರು ನಾಲ್ವರಾತನಿಗೆ ॥
ಮಾರಾರಿ ಧನುವನ್ನು ಮುರಿದ ರಾಘವನನ್ನು ।
ಸೇರಿದಳಂತೆ ಜಾನಕಿಯು ॥ ೧೦-೨೨ ॥

ದುರುಳ ರಾವಣ ತನ್ನ ಸತಿಯ ಕದ್ದೊಯ್ದುದ ।
ವರ ಜಟಾಯುವಿನಿಂದ ತಿಳಿದು ॥
ತರಣಿನಂದನ ಸಖ್ಯವೆರಸಲಾತನ ಬಂಟ ।
ಮರುತಸಂಭವನು ಬಂದಿಹೆನು ॥ ೧೦-೨೩ ॥

ರಘುರಾಮಚಂದ್ರ ನೀಡಿದ ಮುದ್ರಿಕೆಯು ನಿನ್ನ ।
ಬೊಗಸೆಕ್ಕೆ ನೀರೊಳಗಿಹುದು ॥
ಜಗದಿ ಗೆಲ್ಲಲಿ ಧರ್ಮ ಮಿಗೆ ಶುಭವಾಗಲಿ ।
ಇಗೊ ನೋಡು ಕೈಮುಗಿದಿಹೆನು ॥ ೧೦-೨೪ ॥

॥ **ಭಾಮಿನಿ** ॥
ಬೆದರಬೇಡೆಲೆ ತಾಯೆ ರಾಮನ ।
ಪದವ ಸೇರಲುಬೇಕು ತ್ವರಿತದೊ ।
ಉದಧಿ ಲಂಘಿಸಿ ಬಂದೆ ಲಂಕೆಗೆ ನಿನ್ನೆ ಸಂಜೆಯೊಳು ॥
ಒದಗಿ ಕುಳಿತೆನು ಶಿಂಶುಪಾಗ್ರದಿ ।
ಹದನ ತಿಳುಹಲು ಗುರುತನೊಂದನು ।
ಮುದದೊಳೀವುದು ಮರಳಿಪೋಗುವೆ ಪರಸಿ ಕಳುಹೆನಲು ॥ ೧೦-೨೫ ॥

ವಚನ: ಆ ನುಡಿಯಂ ಕೇಳ್ದು ಸೀತಾದೇವಿ –

॥ **ಸೌರಾಷ್ಟ್ರ – ತಿವುಡೆ** ॥
ಬಿಸಜಲೋಚನ ಪತಿಯ ವಾರ್ತಾ ।
ರಸವಶದಿ ನಾನಿರುವೆ ಹರ್ಷಾ ।
ತಿಶಯದತಿರೇಕವನು ಕ್ಷಮಿಸೈ ।
ಕುಶಲಮತಿಯೆ ॥ ೧೦-೨೬ ॥

ಎಂತಿರುವ ಪತಿದೇವ ಪೇಳೈ ।
ಚಿಂತಿಸುತ ಕೃಶನಾದನೇನೈ ।

ಅಂತರಂಗದಿ ಮರೆತನೇ ಹನು ।
ಮಂತ ತಿಳುಹು ॥ ೧೦-೭೭ ॥

ಶಂಕೆಯನು ಬಿಡು ಭದ್ರೆ ನಿನ್ನಯ ।
ಸಂಕಟವು ಕೊನೆಯಾಯ್ತು ಕಪಿಗಳ ।
ಮುಂಕೊಳುತ ರಘುವರನು ಗೆಲುವನು ।
ಲಂಕೆಯನ್ನು ॥ ೧೦-೭೮ ॥

ಮರೆಯಲಾಪನೆ ನಿನ್ನ ನಾಮೋ ।
ಚ್ಚರಣೆಯಾತನ ಮಾತು ಮಂತ್ರವು ।
ತೊರೆಯ ಮೊರೆಯಲಿ ನಿನ್ನ ದನಿಯನು ।
ಗುರುತಿಸುವನು ॥ ೧೦-೭೯ ॥

ಕಂದಮೂಲಗಳುಣಿಸು ಸೀತಾ ।
ಸುಂದರಿಯ ಸವಿಗನಸು ಪಗಲಿರು ।
ಒಂದೆ ಧ್ಯಾನದ ತಪಸು ಯೋಗಾ ।
ನಂದ ಮನಸು ॥ ೧೦-೮೦ ॥

ವಚನ: ಹನುಮನಾಡಿದ ನುಡಿಕೇಳ್ದು ಸಂತೋಷವನು ತಾಳಿ ಸೀತೆ ಇಂತೆಂದಳು –

॥ **ಕೇದಾರಗೌಳ – ಆಟ** ॥
ಹನುಮಂತ ನಿನ್ನನು ಹಡೆದವ್ವೆಗೆರಗುವೆ ।
ಘನಕೀರ್ತಿ ನಿನಗಿರಲಿ ॥
ದನುಜೇಂದ್ರನಾ ಪತ್ನಿ ದಯೆಯಿಂದ ನಾ ಕಳೆ ।
ದೆನು ಹತ್ತು ತಿಂಗಳನ್ನು ॥ ೧೦-೮೧ ॥

ತಮ್ಮ ವಿಭೀಷಣನೊರೆದ ನೀತಿಯ ವಾಕ್ಯ ।
ಸಮ್ಮತಿಸದೆ ದೈತ್ಯನು ॥
ಹಮ್ಮುತೋರುವನೆಂದು ಅನಲೆ ಪೇಳಿದಳೆಂದು ।
ದುಮ್ಮಾನದೊಳಗಿಹೆನು ॥ ೧೦-೮೨ ॥

ಕಣ್ಣೀರಿನಭಿಷೇಕದಿಂದ ಪೂಜಿಸುತಿಹೆ ।
ಚಿನ್ಮಯ ಪದಕಮಲ ॥
ಇನ್ನಾದರೂ ಬಂದು ರಾವಣನನು ಕೊಂದು ।
ಎನ್ನ ಕೊಂಡೊಯ್ಯೆಪೇಳು ॥ ೧೦-೮೩ ॥

ವಚನ: ಆ ವಚನಮಂ ಕೇಳುತ್ತೆ ಮಾರುತಿಯು ಅತ್ಯುತ್ಸಾಹವಾಂತು–

॥ **ಮಾರವಿ – ಏಕ** ॥
ಮಾತೆಯೆ ಮನದೊಳು ಮರುಗದಿರೆಲೆ ಮಮ ।
ಮಾತೊಂದನು ಕೇಳು ॥
ವಾತಕುಮಾರನ ಪೆಗಲೇರಲು ರಘು ।
ನಾಥನ ಬಳಿಗೊಯ್ವೆ ॥ ೧೦-೮೪ ॥

ಗಂಗೆ ಯಮುನೆ ಕಾವೇರಿ ಸರಸ್ವತಿ ।
ತುಂಗಭದ್ರೆಯಾಣೆ ॥
ಮಂಗಳ ವಿಂಧ್ಯ ಹಿಮಾಚಲ ಸಹ್ಯದ ।
ಶೃಂಗಶಕ್ತಿಯಾಣೆ ॥ ೧೦-೮೫ ॥

ವಾರಿಧಿ ಹನಿಜಲ ಲಂಕೆಯು ತೃಣವಲ ।
ಏರುವೆ ಗಗನತಳ ॥
ತೇರು ದೇವರನು ಗುಡಿಗೊಯ್ಯುವ ತೆರ ।
ಸೇರಿಪೆ ರಾಮಪದ ॥ ೧೦-೮೬ ॥

ವಚನ: ಜಾನಕೀದೇವಿ ತನ್ನಂತರಂಗಮಂ ನುಡಿದಳಂತು –

॥ **ಕಾಂಭೋದಿ – ಅಟ** ॥
ರಾಮದೂತನೆ ಭಳರೆ । ಲೋಕದೊಳು ನಿ ।
ಸ್ಸೀಮ ನಿನಗೆ ಸಮರಿಹರೆ ॥
ಸ್ವಾಮಿಕಾರ್ಯದಿ ಮುದ್ರಿಕೆಯ ತಂದುನೀಡಿದೆ ।
ನೇಮ ಸೀತಾನ್ವೇಷಣೆಯು ಪೊರ ।
ತೀ ಮನೋಪ್ರೀತೆಯನು ಒಯ್ವರೆ ॥ ೧೦-೮೭ ॥

ಅನ್ಯರ ಮುಟ್ಟಲಾರೆ । ಬೇಸರಿಸದಿರ್ ।
ಅಣ್ಣ ಕ್ಷಮಿಸು ಮನವಾರೆ ॥
ನಿನ್ನಂಥ ನಯವಿದಗಿನ್ನೇನು ಪೇಳುವೆ ।
ಮುನ್ನ ತಹುದೀ ತಂಗಿಯೆಡೆ ಪತಿ ।
ಸನ್ನಿಧಿಯ ಮಾಂಗಲ್ಯಭಾಗ್ಯವ ॥ ೧೦-೮೮ ॥

ವಚನ: ಆಗ ಹನುಮಂತಂ ಭಕ್ತಿಯಿಂದೆ –

॥ **ಮಧುಮಾಧವಿ – ತ್ರಿವುಡೆ** ॥
ಮನ್ನಿಸೆನ್ನಪಚಾರ ಭಗಿನಿಯೆ ।
ಚಿನ್ಮಯನ ಪಿರಿದಾದ ಮೈತ್ರಿಗೆ ।
ಮುನ್ನುಡಿದೆ ನಾನಿಂತು ಬೇಡುವೆ ।
ಅನ್ಯಮಂ ಭಾವಿಸದಿರು ॥ ೧೦-೮೯ ॥

ಹನುಮ ಸ್ವೀಕರಿಸಯ್ಯ ಪರಿಣಯ ।
ದಿನದಿ ರಾಘವನಿತ್ತ ಚೂಡಾ ।
ಮಣಿಯ ಪ್ರತ್ಯಭಿಜ್ಞಾನವೆಂದಾ ।
ತನಿಗೆ ನೀಡೀ ಕಾಣಿಕೆ ॥ ೧೦-೯೦ ॥

ಅನಘ ಸ್ಮೃತ್ಯಭಿಜ್ಞಾನವೊಂದನು ।
ನಿನಗೆ ಪೇಳುವೆ ಚಿತ್ರಕೂಟದಿ ।
ಬಿನದವಾಡುತಲಿರಲು ಮಂದಾ ।
ಕಿನಿಯ ಮಳಲಿನ ಮಂಚದೆ ॥ ೧೦-೯೧ ॥

ಬೆರಳ ಪಿಡಿಯುತ ಪ್ರಣಯಮಂತ್ರವ ।
ಬರೆಸಿ ವಾಚಿಸುಯೆಂದು ಪೇಳಿದ ।
ಅರೆದು ಕಲ್ಗಾವಿಯನು ಕೆನ್ನೆಗೆ ।
ಒರೆಸಿ ತಿಲಕವನಿಟ್ಟನು ॥ ೧೦-೯೨ ॥

॥ **ಭಾಮಿನಿ** ॥
ಚಿಣ್ಣ ನೀ ಹಸಿದಿರುವೆಯದರಿಂ ।
ಹಣ್ಣುಗಳ ತಂದೀವೆನೆನ್ನಲು ।
ನುಣ್ಣಗಳೆಯುತ ಯೋಗಶಕ್ತಿಯ ಮಹಿಮೆ ತನಗೆಂದ ॥

ಇನ್ನು ರಾಕ್ಷಸ ಕಹಳೆ ಕೇಳಲು ।
ತಿಣ್ಣಭುಜಬಲ ಸೂಕ್ಷ್ಮದಾಕೃತಿ ।
ಯನ್ನು ಪಡೆಯುತ ನಭಕೆ ಚಿಮ್ಮಲು ಲಂಕೆ ಕಂಪಿಸಿತು ॥ ೧೦-೯೩ ॥

॥ **ದ್ವಿಪದಿ** ॥
ಮರ್ಮ ತಿಳಿಯದ ತ್ರಿಜಟೆಗಾಗಲಚ್ಚರಿಯು ।
ಧರ್ಮ ಕಳುಹಿದ ದೂತನೆಂದು ಜಾನಕಿಯು ॥ ೧೦-೯೪ ॥

ಸಂತೈಸುತಿರಲು ಬಿರುಗಾಳಿ ಬೀಸಿರಲು ।
ಚಿಂತಿಸುತೆ ತನಿವಣ್ಣಗಳನ್ನು ಸೇವಿಸಲು ॥ ೧೦-೯೫ ॥

ಜಂಬುಮಾಲಿಯ ಸಿಡಿಲಮಿಂಚಿನಿಂದುರಿಸಿ ।
ಮುಂಬರಿದು ಹನುಮ ಸಾಗರವನುತ್ತರಿಸಿ ॥ ೧೦-೯೬ ॥

ಬಂದಾ ಮಹೇಂದ್ರಗಿರಿಶಿಖರ ಮೇಲಿಳಿಯೆ ।
ಒಂದಾಗಿ ಜಯವೆಂದು ಕಪಿಕಟಕವುಲಿಯೆ ॥ ೧೦-೯೭ ॥

ವಚನ: ವಾನರವೀರರಂ ಕಂಡು ಆಂಜನೇಯಂ ಘೋಷಿಸಿದನಿಂತು–

॥ **ತುಜಾವಂತು – ಝಂಪೆ** ॥
ರಘುವಂಶತಾಮರೆಗೆ ರವಿಯುದಯಮಕ್ಕೆ ।
ಮಿಗೆ ವಾನರಾಂಬುಧಿಗೆ ಶಶಿಯ ಸೊಗಮಕ್ಕೆ ॥
ಪಗೆಯ ಲಂಕೆಯ ಸೇರಿ ರಾಮಸತಿಯನು ಕಂಡೆ ।
ಸೊಗದ ವಾರತೆ ಚಿಹ್ನೆ ಸಂದೇಶ ತಂದೆ ॥ ೧೦-೯೮ ॥

ನೀಲಾಂಗದರೆ ಕೇಳಿ ಕಡಲ ದಾಂಟುವುದು ।
ಖೂಳನನು ವಧಿಸಿ ಜಾನಕಿಯ ಬಿಡಿಸುವುದು ॥
ಕಾಲಹರಣವದೇಕೆ ಎನಲು ವಾನರಸ್ತೋಮ ।
ಪೇಳಿದನು ಜಾಂಬವನು ವಿಹಿತ ವಾಕ್ಯವನು ॥ ೧೦-೯೯ ॥

ನೂರುಯೋಜನ ಜಲಧಿ ದಾಂಟಲಸದಳವು ।
ಘೋರರಾಕ್ಷಸಮಾಯೆ ಗೆಲಲಾರಿಗಳವು ॥

ಶೂರತನದೊಡನೆ ನಿಜಬುದ್ಧಿ ಕೌಶಲಸಿದ್ಧಿ ।
ಸೇರಿದರೆ ಮಾತ್ರ ಲಂಕೆಯನು ಗೆಲಬಹುದು ॥ ೧೦-೧೦೦ ॥

ರಾಮಲಕ್ಷ್ಮಣರು ಸುಗ್ರೀವರೆಲ್ಲವರು ।
ಕ್ಷೇಮವಾರತೆಗೆ ಕಾತರದಿ ಕಾದಿಹರು ॥
ಸಾಮರಸ್ಯದಿ ನಾವು ಕಿಷ್ಕಿಂಧೆಯನು ಸೇರಿ ।
ನೇಮವೇನೆಂದೆನುತ ದೊರೆಯ ಕೇಳುವುದು ॥ ೧೦-೧೦೧ ॥

॥ **ಆರ್ಯಾಸವಾಯಿ – ಏಕ** ॥
ಜಯಜಯ ಘೋಷದಿ ವಾನರರೆಲ್ಲರು ।
ಭಯಭಕ್ತಿಯ ಭಾವದಿ ಬರುತ ॥
ನಿಯತಿಗೊಡೆಯ ಶ್ರೀರಾಮನ ಚರಣವ ।
ಬಯಸುತ ಬಗೆಬಗೆ ಪಾಡುತ್ತ ॥ ೧೦-೧೦೨ ॥

ಜನಕಜೆ ನೀಡಿದ ಚೂಡಾಮಣಿಯನು ।
ಹನುಮನು ರಾಮಂಗರ್ಪಿಸುತ ॥
ಘನ ಕರುಣಾನಿಧಿ ಭಾವಾವೇಶದಿ ।
ತನುವಾಲಿಂಗಿಸಿ ನಿಂತಿರ್ದ ॥ ೧೦-೧೦೩ ॥

ಆಶುಗನಂದನನುಸುರಿದ ಲಂಕಾ ।
ನ್ವೇಷಣ ಯಾತ್ರೆಯ ಮುದದಿಂದ ॥
ಭೀಷಣ ಕಥನದ ಕಾವ್ಯಾವೇಶದ ।
ಭಾಷಣ ಕೇಳ್ದರು ನಲವಿಂದ ॥ ೧೦-೧೦೪ ॥

॥ **ಕಂದ** ॥
ಕನಕದ್ವೀಪವ ಪುಡುಕುತ ।
ಜನಕಜೆಗೀಯುತ್ತ ಮುದ್ರೆಯಂ ವರಚೂಡಾ ॥
ಮಣಿಯಂ ರಾಮಂಗಿತ್ತಿಹ ।
ಹನುಮಾಯಣ ಯಕ್ಷಗಾನದ ಮಹಾಕಾವ್ಯಂ ॥ ೧೦-೧೦೫ ॥

***

ಯಕ್ಷಗಾನ ಮಹಾಕಾವ್ಯ

ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೧೧

ವಿಭೀಷಣ ಶರಣಾಗತಿ

ಪಾತ್ರಪಟಲ

ಶ್ರೀರಾಮ
ಲಕ್ಷ್ಮಣ
ಸುಗ್ರೀವ
ಹನುಮಂತ
ನೀಲ
ಅಂಗದ
ವಹ್ನಿ
ರಂಹ
ರಾವಣ
ಮಂಡೋದರಿ
ಪ್ರಹಸ್ತ
ಅಕಂಪನ
ಹಿರಣ್ಯಕೇಶಿ
ಇಂದ್ರಜಿತು
ವಿಭೀಷಣ
ವಿಶ್ವಕರ್ಮ
ಅನಲಾಕುಮಾರಿ
ಸಾರಣ
ಶುಕ
ಮೈಂದ
ದ್ವಿವಿದ
ಸ್ವಪ್ನದೇವಿ
ತಪೋದೇವಿ
ಧೂಮ್ರಾಕ್ಷ
ಶತಬಲಿ
ವಜ್ರದಂಷ್ಟ್ರ
ದರೀಮುಖ
ಮಹಾಪಾರ್ಶ್ವಕ
ಗರುಡ

ವಿಭೀಷಣ ಶರಣಾಗತಿ

॥ **ಸೌರಾಷ್ಟ್ರ – ತ್ರಿವುಡೆ** ॥
ವೀರವಾನರ ಮುಖ್ಯರೆಲ್ಲರ ।
ಸೂರ್ಯಸುತ ಸುಗ್ರೀವ ಕರೆಸುತ ।
ದೂರ ದಕ್ಷಿಣದೆಸೆಗೆ ಸೇನೆಯು ।
ಸಾರಲೆಂದ ॥ ೧೧–೧ ॥

ನೀಲ ನಳ ಗಜ ಶರಭ ಶತಬಲಿ ।
ವಾಲಿಜಾತ ಸುಷೇಣ ಮಾರುತ ।
ಬಾಲ ಮೈಂದ ದ್ವಿವಿದ ಜಾಂಬವ ।
ಜಾಲವೆಲ್ಲ ॥ ೧೧–೨ ॥

ಗಂಧತರು ಸಹ್ಯಾದ್ರಿ ದಾಟುತ ।
ಮುಂದೆ ಮಲಯಾಚಲವನೇರಿ ಮ ।
ಹೇಂದ್ರಪರ್ವತದೆಡೆಗೆ ಕಪಿಗಳು ।
ಬಂದರಾಗ ॥ ೧೧–೩ ॥

ಗಿರಿಯನಿಳಿಯುತ ದಕ್ಷಿಣೋದಧಿ ।
ಪರಮದರ್ಶನವಾಂತು ರಾಘವ ।
ಶರಧಿನೀಲಿಮೆಯಲ್ಲಿ ತನುಮನ ।
ಮರೆತು ನಿಂತ ॥ ೧೧–೪ ॥

ಫಾಲ್ಗುಣದ ರವಿಯಸ್ತಮಿಸೆ ಕಪಿ ।
ಜಾಲವೆಲ್ಲವು ವಿಶ್ರಮಿಸಲಾ ।
ನೀಲಮೇಘಶ್ಯಾಮ ನುಡಿಸಿದ ।
ನೀಲನನ್ನು ॥ ೧೧–೫ ॥

॥ **ಕೇದಾರಗೌಳ – ಆಟ** ॥
ಅಗ್ರಸೇನಾನಿ ನೀನಗ್ನಿಸಂಭವನೈಸೆ ।
ಭಗ್ನಗೊಂಡಿದೆ ಮನಸು ॥
ಹೆಗ್ಗಡಲಿದು ನೂರುಯೋಜನ ಹಬ್ಬಿದೆ ।
ನುಗ್ಗಿ ದಾಟುವುದು ಹೇಗೆ ॥ ೧೧–೬ ॥

ದಾಶರಥಿಯೆ ಕೇಳು ಧರ್ಮ ನಮ್ಮೆಡೆಗಿರೆ ।
ಬೇಸರ ಮನದೊಳೇಕೆ ॥
ಈ ಶರಧಿಯ ಮಧ್ಯೆ ದಾರಿನಿರ್ಮಿಸುವಂಥ ।
ಬೀಸುಕೈಯವರಿಹರು ॥ ೧೧-೭ ॥

ಮಡದಿಗೋಸುಗ ಬಹುಜನರ ಸಂಸಾರದ ।
ಸಡಗರ ಕೆಡುವುದೆಂಬ ॥
ಕಡುದುಃಖದೊಳಗೆನ್ನ ಒಡಲು ಬೇಯುತ್ತಿದೆ ।
ನಡೆಯುವುದೆಂತು ಮುಂದೆ ॥ ೧೧-೮ ॥

ನೃಪನೆ ಕೇಳೀ ಯಜ್ಞ ಪುರುಷಾರ್ಥಸಿದ್ಧಿಗೆ ।
ನೆಪಮಾತ್ರ ನೀವೀರ್ವರು ॥
ವಿಪರೀತ ಸ್ವಾರ್ಥಮೂಲವಿದಲ್ಲ ಸಾಹಸ ।
ತಪಸಲ್ತೆ ಬದುಕೆಂಬುದು ॥ ೧೧-೯ ॥

॥ **ಭಾಮಿನಿ** ॥
ನೀಲನಾಡಿದ ತತ್ತ್ವವಚನವ ।
ನಾಲಿಸುತ ಶ್ರೀರಾಮಚಂದಿರ ।
ಪೇಳಿದನು ತನ್ನಂತರಂಗದ ಮೆಚ್ಚುಮಾತುಗಳ ॥
ಮೇಲೆ ಮುಂದಡಿಯಿಡುತ ಬರುತಿರೆ ।
ಕಾಳಗತ್ತಲೆಯೊಳಗೆ ಸೇನಾ ।
ಮೂಲವಾನರವೀರರೀರ್ವರ ಕಂಡು ನುಡಿಸಿದನು ॥ ೧೧-೧೦ ॥

॥ **ತೋಡಿ – ಆಟ** ॥
ಯಾರಯ್ಯಾ । ನೀವು । ಯಾರಯ್ಯಾ ॥
ವಾರಿಧಿತೀರದೊಳೀರೀತಿ ಚರಿಸುತ್ತ ।
ಮೀರಿದುತ್ಸಾಹವಾಂತವರು ನೀವೀರ್ವರು ॥ ೧೧-೧೧ ॥

ಕೇಳಯ್ಯಾ । ರಾಮ । ಕೇಳಯ್ಯಾ ॥
ದಧಿಮುಖ ದಳದಲ್ಲಿ ಕದನಚೌಪಟರೈಸೆ ।
ಮುದದಿ ವಹ್ನಿಯು ನಾನು ರಂಹನೆಂಬವನೀತ ॥ ೧೧-೧೨ ॥

॥ **ಕೇದಾರಗೌಳ– ಝುಂಪೆ** ॥
ಆವ ರಣಪ್ರಾವೀಣ್ಯವು । ಸಂಸಾರ ।
ಭಾವಬಿಟ್ಟವರೆ ನೀವು ॥
ಈ ವಿಧದ ಬಾಳಪರಿಯು । ಬವರದಲಿ ।
ಜೀವಬಿಡಲೇನು ಗತಿಯು ॥ ೧೧–೧೩ ॥

ರಣವು ಮರಣದ ಭೂಮಿಕೆ । ಕೈಯ ಬರ ।
ವಣಿಗೆ ಸತ್ಯದ ತೋರಿಕೆ ॥
ಕ್ಷಣಭಂಗುರತೆಯ ಭವವು । ವಿಧಿಯಿಚ್ಛೆ ।
ಹೆಣೆದಂತೆ ಬಾಳನೊಲವು ॥ ೧೧–೧೪ ॥

ಪಾತಕವು ಸ್ತ್ರೀಯ ಚೌರ್ಯ । ಲೋಕಕಿದು ।
ಸ್ತ್ರೀತ್ವದಪಮಾನ ಕಾರ್ಯ ॥
ಭೂತಳದಿ ಕೊನೆಪುರುಷನು । ಇರುವನಕ ।
ಓತು ಕಾವುದು ಸತಿಯನು ॥ ೧೧–೧೫ ॥

ನಿನ್ನೊಲುಮೆ ಪಡೆದು ನಾವು । ಇಂದೀಗ ।
ಪುಣ್ಯಭಾಜನರಾದೆವು ॥
ಇನ್ನಿದುವೆ ಸತಿಪುತ್ರರ । ರಕ್ಷಿಪುದು ।
ಧನ್ಯ ಬಾಳದು ಭೂವರ ॥ ೧೧–೧೬ ॥

॥ **ಕಂದ** ॥
ರಘುವರ ಬೀಳ್ಕೊಂಡವರಂ ।
ಸುಗುಣಾಗ್ರಣಿಯಾದ ನೀಲನಂ ಕರೆದೆಂದಂ ॥
ಮಿಗಿಲಹುದೀ ಕಪಿಸಂಸ್ಕೃತಿ ।
ಬಗೆಗೊಂಡುದು ನಿಮ್ಮ ನಾಗರಿಕತೆಯೆ ಪಿರಿದುಂ ॥ ೧೧–೧೭ ॥

॥ **ಅರ್ಧವಾರ್ಧಕ** ॥
ಅತ್ತಲಾ ದೈತ್ಯಸಭೆಯನು ಸೇರಿ ದಶಶಿರಂ ।
ಚಿತ್ತದೊಳು ಪೆಣ್ಣುಗೈದವಹೇಳನದಿ ನೊಂದು ।
ಮತ್ತದನು ಪೊರತೋರಗೊಡದೆ ಕಿಡಿಯುಗುಳುತ್ತ ದರ್ಪಕೇಸರವ
ಕೆಡಹೆ ॥ ೧೧–೧೮ ॥

॥ **ಕಾಂಭೋದಿ – ಝಂಪೆ** ॥
ಲಂಕೆಯ ಮಹೋದಯರೆ ಸಚಿವ ಸೇನಾನಿಗಳೆ ।
ಬಿಂಕನಾಡಿನ ಮಾನಕೊದಗಿದೆ ವಿಪತ್ತು ॥
ಕೊಂಕಿನಿಂದೆಮ್ಮ ಖರ ದೂಷಣರ ಕೊಂದ ಛಲ ।
ದಂಕ ರಾಮನು ಕಡಲತಡಿಗೆ ಬಂದಿಹನು ॥ ೧೧–೧೯ ॥

ವಾಲಿಯನು ಕೊಂದ ರಣಹೇಡಿ ರಾಮನ ಬಂಟ ।
ನೀ ಲಂಕೆಲಕ್ಷ್ಮಿಯನು ಭಂಗಿಸಿದ ಮೊನ್ನೆ ॥
ಕಾಳೆಗಕೆ ಕಪಿಸೈನ್ಯ ಕೂಡಿಬಂದಿಹುದೀಗ ।
ಪೇಳುವುದು ಸಮರದುಜ್ಜುಗವನೇನೆಂದು ॥ ೧೧–೨೦ ॥

ವಚನ: ರಾಕ್ಷಸೇಂದ್ರನ ನುಡಿಗೆ ಪ್ರಹಸ್ತನಿಂತೆಂದನು –

॥ **ಕಾಪಿ – ಆಟ** ॥
ಬೆದರಲೇತಕೆ ದೈತ್ಯನಾಥ । ಸೇನೆ ।
ಕದನಕಾಂಕ್ಷೆಯೊಳಿದೆ ಕೇಳೆನ್ನ ಮಾತ ॥
ಮೊದಲು ಮೋಸದಿ ಕಪಿ । ಯೊದಗಿ ಬಂದಿಹುದೈಸೆ ।
ಹದನಹೀನವ ಯೋಚಿ । ಸುದೆ ನೀನು ಮನದಲ್ಲಿ ॥ ೧೧–೨೧ ॥

ಸಲಗಕೆ ನೊರಜು ತಾನಿದಿರೆ । ಶತ್ರು ।
ಬಲವ ನುಂಗುವೆ ನಾನು ರಣರಂಗವದುರೆ ॥
ಮಳಲಿನ ಕಣವೆಣಿ । ಸಲು ಬಹುದಲ್ಲದೆ ।
ಕಲಿಯ ಸಾಹಸಬೆಂಕಿ । ಮಳೆಯಾಗಿ ಕೊಲ್ಲದೆ ॥ ೧೧–೨೨ ॥

ವಚನ : ಆಗಳಾ ಮಹಾಪಾರ್ಶ್ವ ತಾನಿಂತೆಂದನು –

॥ **ಮಾರವಿ – ಏಕ** ॥
ಮದ್ದಿನ ಮನೆಯೊಳು ನಿದ್ದೆಗೆಡಿಸೆ ಕಿಡಿ ।
ಬಿದ್ದರೊಂದೆ ಸಾಕು ॥
ಯುದ್ಧದಿ ಕಡಲೊಳಗದ್ದುವೆ ರಿಪುಗಳ ।
ಸದ್ದಡಗಿಪೆ ಕೇಳು ॥ ೧೧–೨೩ ॥

ನೀರೊಳು ರಂಧ್ರದಿ ಮುಳುಗಿದ ನೌಕೆಯ ।
ಪಾರುಗೊಳಪುದೆಂತು ॥
ಧೀರರು ಧರ್ಮವ ಮೀರಿ ನಡೆಯೆ ಜಯ ।
ಸೇರುವ ಬಗೆಯೆಂತು ॥ ೧೧–೨೪ ॥

ಲಂಕಾಲಕ್ಷ್ಮಿಯ ಕರದ ತ್ರಿಶೂಲವು ।
ಡೊಂಕಾಗಿಹುದೇಕೆ ॥
ಮಂಕುಬಡಿದವರನಂಕೆಗೊಳ್ಳಲೀ ।
ಶಂಕೆ ತಳೆ ಪರಾಕೆ ॥ ೧೧–೨೫ ॥

ವಚನ: ಮಹಾಪಾರ್ಶ್ವಕನ ನುಡಿಗೊಡಂಬಡದೆ ಅಕಂಪನಂ
ತಾನಿಂತೆಂದನು–

॥ **ನಾದನಾಮಕ್ರಿಯೆ – ಆಟ** ॥
ದೊರೆಯೆ ನಮ್ಮೆಲ್ಲರ್ಗೆ ದೈವವು । ಹೀಗೆ ।
ಮರುನುಡಿಯುವುದೆ ದುರ್ದೈವವು ॥
ಮರಕೆ ನೀರಿರದಿರೆ ದೋಷವು ॥ ಹಾಗೆ ।
ಸರುವ ಪ್ರಜಾವರ್ಗ ನಾಶವು ॥ ೧೧–೨೬ ॥

ಮಾಯಾರಕ್ಕಸರೆಲ್ಲ ಸೇರಲಿ । ರಾಮ ।
ನಾಯತಿಕೆಯನೆಲ್ಲ ಮೀರಲಿ ॥
ಜೀಯಸೋದರಿಯನ್ನು ದಂಡಿಸಿ । ಬಂದ ।
ಹೇಯತನವನೀಗ ಖಂಡಿಸಿ ॥ ೧೧–೨೭ ॥

ವಚನ: ಸಭೆಯೊಳಿರ್ದಾ ಹಿರಣ್ಯಕೇಶಿ ತನ್ನ ಮನದಿರವನುಸುರ್ದನಾಗ–

॥ **ಭಾಮಿನಿ** ॥
ಕಿರಿಯ ನಾನಿಹೆನಿಲ್ಲಿ ಸಭೆಯೊಳ ।
ಗಿರುವ ಹಿರಿಯರು ಯೋಚಿಸುವುದೀ ।
ದೊರೆಯ ಸುಖ ಬಲಿಗೊಳಬಹುದೆ ಸಾಮಾನ್ಯ ಜನಹಿತವ ॥
ಬರಿಯ ಸೈನ್ಯದ ಬಲವ ನೆಮ್ಮುತ ।
ಪುರದ ಚೆಲುವನು ಪಾಳುಗೈವಿರೆ ।
ಪರಮಧರ್ಮಚ್ಯುತಿಯನೆಸಗದೆ ಧುರಕೆ ಮೊದಲಾಗಿ ॥ ೧೧–೨೮ ॥

ವಚನ: ಹಿರಣ್ಯಕೇಶಿಯ ವಚನಮಂ ಕೇಳ್ದು ಇಂದ್ರಜಿತು ಬೊಬ್ಬಿರಿದನು–

॥ **ಶಂಕರಾಭರಣ – ಮಠ್ಯ** ॥
ಯಾವನಿವನು ಕಾರ್ಯದ್ರೋಹಿ ।
ಕಾವ್ಯಕಲೆಯ ಮೋಹದಿಂದ ।
ಭಾವಾವೇಶದೊಳಗೆ ಬುದ್ಧಿ ।
ಸೋವಗೆಡಿಪನು ॥ ೧೧–೨೯ ॥

ಇದು ವಿರಾಗವನ್ನು ಹೊತ್ತ ।
ಮುದುಕರಿರುವ ಸಮಿತಿಯಲ್ಲ ।
ಕದನಕಲಿಗಳೆಂಬದನ್ನು ।
ಮೊದಲು ತಿಳಿಯಲಿ ॥ ೧೧–೩೦ ॥

ಇಪ್ಪ ವಜ್ರಕಿದ್ದಿಲಿಂದ ।
ಒಪ್ಪಗೊಡುವ ಕೃತ್ಯವೇಕೆ ।
ಬೆಪ್ಪುತನವ ತೋರದೀಗ ।
ತಪ್ಪು ತಿದ್ದಿಕೊ ॥ ೧೧–೩೧ ॥

ಕರಡಹುಲ್ಲ ಬಣವೆಯನ್ನು ।
ಉರುಹುವಂತೆ ಶತ್ರುದಳವ ।
ಧುರದಿ ಭಸ್ಮಗೈವೆನೆಂದ ।
ಸುರಪವೈರಿಯು ॥ ೧೧–೩೨ ॥

ವಚನ : ಸಾವಧಾನದಿ ಎಲ್ಲರ ನುಡಿಯಂ ಕೇಳ್ದು ವಿಭೀಷಣಂ
ಧರ್ಮಸೂಕ್ಷ್ಮವನೊರೆದನಿಂತು –

॥ **ಭಾಮಿನಿ** ॥
ದನುಜವಂಶದ ಕೀರ್ತಿರಕ್ಷೆಗೆ ।
ತನುವಿನಾಸೆಯ ತೊರೆದು ಹೋರುವ ।
ಘನಪರಾಕ್ರಮರಿಹರು ನಮ್ಮೀ ಕನಕಲಂಕೆಯೊಳು ॥
ರಣದ ನೀತಿಯು ಸಹಜವಾದರು ।
ಕೊನೆಗೆ ಧರ್ಮವಿಹೀನ ಸಾಹಸ ।
ತೃಣಕೆ ಸಮವೆನಿಸುವುದು ಲೋಕದ ನಿತ್ಯಸತ್ಯವಿದು ॥ ೧೧–೩೩ ॥

॥ **ಸೌರಾಷ್ಟ್ರ – ತ್ರಿವುಡೆ** ॥
ಸತಿಶಿರೋಮಣಿ ಜಾನಕಿಯ ತಪ ।
ದತಿಶಯದ ಭೀಕರತೆಯೆದುರಿಗೆ ।
ಶತಸಹಸ್ರದ ರಾವಣಾದ್ಯರು ।
ಹತಗೊಳುವರು ॥ ೧೧–೩೪ ॥

ಒಲಿಯದಾ ಸತಿಯಿಂದ ಬದುಕಿಗೆ ।
ಸಲೆ ಸುಖವು ಸದ್ಧರ್ಮ ಸಾಧ್ಯವೆ ।
ಕುಲವಿನಾಶಕ ಪಾಪಕಾರ್ಯವು ।
ನಿಲಲಿ ಮೊದಲು ॥ ೧೧–೩೫ ॥

ಮತ್ತೆ ಬರಲಾ ರಾಮ ಲಕ್ಷ್ಮಣ ।
ಸುತ್ತ ಮರ್ಕಟಸೇನೆ ಸೇರಲಿ ।
ಮೃತ್ಯುಲೋಕವ ತೋರಬಹುದಾ ।
ಶತ್ರುಗಳಿಗೆ ॥ ೧೧–೩೬ ॥

॥ **ದ್ವಿಪದಿ** ॥
ಬಹುವಿಧದ ನುಡಿಕೇಳಿ ಬಳಲಿ ರಾವಣನು ।
ವಿಹಿತದಿಂದರಮನೆಗೆ ತಾನು ತೆರಳಿದನು ॥ ೧೧–೩೭ ॥

ಇಕ್ಷ್ವಾಕುವಂಶಜನು ಕಪಿಕಟಕ ಸಹಿತ ।
ದಕ್ಷಿಣೋದಧಿತಟದಿ ನಿಂತುಕೊಂಡಿರುತ ॥ ೧೧–೩೮ ॥

ಕಡಲು ಪಥ ಬಿಡದಿರಲು ಕುಡಿವೆನೆಂದವನು ।
ಸಿಡಿಲಕೋದಂಡವನು ಪಿಡಿದು ಗುಡುಗಿದನು ॥ ೧೧–೩೯ ॥

ಮರಣಮಥವಾ ಶರಧಿತರಣಮೆಂದೆನಲು ॥
ವರುಣ ಕಳುಹಿದ ವಿಶ್ವಕರ್ಮ ಪ್ರಾರ್ಥಿಸಲು ॥ ೧೧–೪೦ ॥

॥ **ಆರಭಿ – ಏಕ** ॥
ಜಯನಮೋ ಶ್ರೀರಾಮಚಂದ್ರ । ಸದ್ಗುಣಸಾಂದ್ರ ।
ಭಯನಿವಾರಕ ರಾಘವೇಂದ್ರ ॥ ಪ ॥

ವರುಣಸಂದೇಶವ ಪೊತ್ತು ಬಂದಿಹೆನಯ್ಯ ।
ಕರುಣದಿಂದಲಿ ನಿಯತಿಯ ಮಾನವುಳಸಯ್ಯ ॥ ೧೧–೪೧ ॥

ನಳನೆನ್ನ ಸುತನಾತನೊಳಗೆ ನಾನಿರುವೆನು ।
ಜಲಧಿಸೇತುವೆಗಟ್ಟೆ ಸುಲಭವೆಂದೆನಿಪೆನು ॥ ೧೧–೪೨ ॥

ಸೀತಾರಾಮರ ಪ್ರೇಮಸೇತು ಸೂಕ್ಷ್ಮದೊಳದೆ ।
ಪೂತಭಾವವೆ ಇಂದ್ರಿಯಾತೀತ ತಾನ್ಯೆಸೆ ॥ ೧೧–೪೩ ॥

॥ **ಸಾಂಗತ್ಯ – ರೂಪಕ** ॥
ಭಾವಗಮ್ಯದ ಸೇತು ನೋಡೆಂದು ಪೇಳುತ್ತ ।
ಲಾ ವಿಶ್ವಕರ್ಮ ಕೈಮುಗಿದು ॥
ಭೂವಲಯವ ಬಿಟ್ಟು ತೆರಳಲಾಲಕ್ಷಣ ನಳ ।
ಪಾವಮಾನಿಯ ಜೊತೆ ಬಂದು ॥ ೧೧–೪೪ ॥

ಭೂವ್ಯೋಮಗಳನೆಚ್ಚರಿಸುವಂತೆ ಘೋಷಿಸೆ ।
ಶ್ರೀವಿಕ್ರಿಯಾಶಕ್ತಿಯಿಂದೆ ॥
ಆ ವಾರಿಧಿಗೆ ಕಲ್ಲು ಬೆಟ್ಟಗುಡ್ಡಗಳನ್ನು ।
ಸಾವಿರದಲ್ಲಿ ತುಂಬಿದರು ॥ ೧೧–೪೫ ॥

ವಿಘ್ನವ ತರೆ ವಿದ್ಯುಜ್ಜಿಹ್ವನೆಂಬಾತನ ।
ಅಗ್ನಿಬಂಡೆಯೊಳು ಸಂಹರಿಸಿ ॥
ನುಗ್ಗಿ ವಾನರವೀರರೆಲ್ಲರೊಂದಾಗುತ್ತೆ ।
ಹೆಗ್ಗಡಲಿಗೆ ಸೇತು ರಚಿಸೆ ॥ ೧೧–೪೬ ॥

ವಚನ: ಇತ್ತಲಾ ಲಂಕೆಯೊಳ್ ವಿಭೀಷಣಕುವರಿಯು –

॥ **ಭಾಮಿನಿ** ॥
ನಿದ್ದೆಯಿಲ್ಲದೆ ಮನದಿ ಕೊರಗುತ ।
ಬಿದ್ದಿರುವ ರಾವಣನ ಸೇವೆಯೊ ।
ಆದ್ದಳನಲಾಕುವರಿ ಮುಂದಿನ ಪರಿಯ ನೆನೆನೆನೆದು ॥
ಉದ್ಧರಿಪುದೆಂತಿವನನೆನ್ನುತ ।
ಸದ್ವಿವೇಕಿ ವಿಭೀಷಣಾಂಕನು ।
ಮುದ್ದು ಮಗಳನು ಕರೆದು ಕೇಳಿದನಣ್ಣನಂತಸ್ಥ ॥ ೧೧–೪೭ ॥

॥ **ಸೌರಾಷ್ಟ್ರ – ತ್ರಿವುಡೆ** ॥
ಎಂತಿಹನು ದೊಡ್ಡಯ್ಯನಾತನ ।
ಚಿಂತೆ ಕಳೆಯಿತೆ ಪುರುಷಕಾರದ ।
ಪಂಥ ಮಸುಳಿತೆ ಧರ್ಮನೀತಿಯು ।
ಸಂತವಿಸಿತೆ ॥ ೧೧–೪೮ ॥

ತಂದೆ ಬಾ ನಿನ್ನಗ್ರಜಾತನ ।
ಮಂದನಿದ್ರಾಸ್ಥಿತಿಯ ನೋಡುವು ।
ದೆಂದು ಮೋದದಿ ಜನಕನನು ಕರೆ ।
ತಂದಳಾಗ ॥ ೧೧–೪೯ ॥

ರಕ್ಕಸನು ಕಣ್ದೆರೆದು ಬಾಲೆಯ ।
ನಕ್ಕರದಿ ನೋಡುತ್ತೆ ತನ್ನನು ।
ಅಕ್ಕ ತೊರೆಯದಿರೆಂದು ಹಲುಬಿದ ।
ದುಃಖದಿಂದೆ ॥ ೧೧–೫೦ ॥

ನಿನ್ನ ಪಿತ ತಾನೆನ್ನ ತೊರೆದರು ।
ಮುನ್ನ ಬಿಡದಿರು ಮಗಳೆ ಬಾಳ್ವೆಗೆ ।
ಬಣ್ಣ ನೀನೆಂದೆನುತ ಕಂಬನಿ ।
ಯನ್ನು ಸುರಿಸೆ ॥ ೧೧–೫೧ ॥

॥ **ಕೇದಾರಗೌಳ – ಆಟ** ॥
ಒಡಹುಟ್ಟಿದವನನ್ನು ಬಿಡಲಾರನೆಂಬುದು ।
ದೃಢವೈಸೆ ಶಂಕೆಯೇಕೆ ॥
ಕಡುಪ್ರೀತಿಯಿಂದ ನಿನ್ನಡಿಯ ಸೇವಿಸುತಿರ್ಪ ।
ಪಡೆದಯ್ಯನಿಲ್ಲೆ ನೋಡು ॥ ೧೧–೫೨ ॥

ವಚನ: ಎಂದ ನುಡಿಯಂ ಕೇಳ್ದು ರಾವಣಂ ರೌದ್ರಾವೇಶದಿಂ
ಬುಸುಗುಡುತ ಮತ್ತಿಂತೆಂದನು –

ಕುಲಗೇಡಿಯನು ಎನ್ನ ಬಳಿಗೆ ಬಿಟ್ಟವರಾರು ।
ನಿಲಯಕ್ಕೆ ವೈರಿಯೀತ ॥
ಕೊಲೆಗೊಳಸಂಚು ಗೈದಿರುವ ದ್ರೋಹಿಯ ಮನೆ ।
ಯೊಳಗಿಂತು ಪುಗಿಸಿರ್ಪಿರೆ ॥ ೧೧–೫೩ ॥

॥ **ಕಂದ** ॥
ಪರಿಪರಿಯಿಂದಾ ಮಂಡೋ ।
ದರಿಯನಲಾದೇವಿಯೀರ್ವರಳುತಿರಲಾಗಳ್ ॥
ಮರುಕದ ಬಿರುಕೊಡೆಯುತೆ ತ ।
ನ್ನರಗಿಣಿಯನಲಾಕುಮಾರಿಯಂ ಕುರಿತೆಂದಂ ॥ ೧೧–೫೪ ॥

॥ **ಕೇದಾರಗೌಳ – ಝಂಪೆ** ॥
ಅಳುವುದೇಕಿಂತು ಮಗಳೆ । ಈ ಜೀವ ।
ದೊಲವೆ ಮಲ್ಲಿಗೆಯ ಮುಗುಳೆ ॥
ಬಳಲಿಕೆಯ ನಿನ್ನ ನೋವು । ನಾ ಸಹಿಸೆ ।
ಸುಳಿಯಲೆನಗಿಂದೆ ಸಾವು ॥ ೧೧–೫೫ ॥

ಬಗೆಮಾತನೊಂದ ಕೇಳು । ಸೋದರನೆ ।
ಹಗರಣಗಳೇಕೆ ತಾಳು ॥
ಮಗಳಲ್ಲ ನಿನಗೆ ಈಕೆ । ನನ್ನ ಪಾ ।
ಲಿಗೆ ದೇವಿ ರಕ್ಷಾಂಬಿಕೆ ॥ ೧೧–೫೬ ॥

ಅಣ್ಣಯ್ಯ ಅನಲೆಯೊಲವು । ನಿನಗಿರಲಿ ।
ಪುಣ್ಯವದು ಎನಗೆ ಬಲವು ॥
ನಿನ್ನೆ ನಾನೆಂದ ವಚನ । ನಿಜವಾಗಿ ।
ನಿನ್ನಭ್ಯುದಯ ಕಾರಣ ॥ ೧೧–೫೭ ॥

ಒದಗಿಹುದು ಯುದ್ಧ ತಮ್ಮ । ನೆರವಾಗು ।
ವುದೆ ಕಲಿಗೆ ಸಹಜಧರ್ಮ ॥
ಇದನೊಪ್ಪದಿರಲು ಮುಂದೆ । ಅನ್ಯತ್ರ ।
ಬದುಕು ನಡೆ ಲಂಕೆಯಿಂದೆ ॥ ೧೧–೫೮ ॥

॥ **ಭಾಮಿನಿ** ॥
ಆದರಿನ್ನೊಂದಿಹುದು ಕೇಳೈ ।
ನೀ ದಯದಿ ಬಾಲಕಿಯನಿಲ್ಲಿಯೆ ।
ಭೇದವಿಲ್ಲದೆ ಬಿಟ್ಟುಪೋಪುದು ಜೀವದೊಳ್ಪಿಂಗೆ ॥
ಸೋದರನ ವಾಂಛಿತವನೊಪ್ಪಿ ವಿ ।
ಷಾದದಿಂದಲೆ ತಲೆಯ ತಗ್ಗಿಸಿ ।
ಕಾದುಕೊಳಲಾ ದೈವವೆನ್ನುತೆ ಗೃಹದಿ ಬೀಳ್ಗೊಂಡ ॥ ೧೧–೫೯ ॥

॥ ಪಂತುವರಾಳಿ – ಆಟ ॥
ಸಾರಣ ಶುಕರೆಂಬ ಈರ್ವರು ದನುಜರು ।
ಮಾರುವೇಷವನಾಂತರು ॥
ಓರ್ವ ರಾಕ್ಷಸಗೂಢಚಾರನಂದದೊಳು ಮ ।
ತ್ತೋರ್ವ ಮರ್ಕಟರೂಪದಿ ॥ ೧೧–೩೦ ॥

ಅರಿತು ವಾನರ ಗಂಧಮಾದನನೆಂಬಾತ ।
ಬರಲು ಕೌಶಲದಿಂದಲಿ ॥
ದುರುಳ ಸಾರಣನಾಗ ಭರದಿಂದೋಡಲು ಶುಕ ।
ಸೆರೆಗೆ ಸಿಕ್ಕಿದನು ತಾನು ॥ ೧೧–೩೧ ॥

ಕರಚರಣವ ಕಟ್ಟಿ ಕರೆತಂದು ರಾಮನ ।
ಚರಣಕ್ಕೆ ಕೆಡಹಿರಲು ॥
ತರಳ ನೀನಾರೆಂಬುದರಿಯಬೇಕೆನೆ ಶುಕ ।
ನೊರೆದ ಸ್ವವಿವರವನ್ನು ॥ ೧೧–೩೨ ॥

॥ ಸಾಂಗತ್ಯ – ರೂಪಕ ॥
ಗೂಢಚಾರಕನಾದ ಶುಕನೆಂಬಾತನು ನಾನು ।
ರೂಢಿಪಾಲನೆ ನಿನ್ನನೀಗ ॥
ನೋಡಿ ಸಂತಸವಾಯ್ತು ನಿನ್ನಂತರಂಗದ ।
ಪಾಡನರಿಯೆ ಬಂದೆನಿಂತು ॥ ೧೧–೩೩ ॥

ಕಾರ್ಯಸಾಧನೆಗಾಗಿ ಪಾಪರಥವು ಪುಣ್ಯ ।
ದಾರಿಯ ಪಿಡಿವುದುಂಟೈಸೆ ॥
ತೋರು ಸೇನೆಯನಿವಗೆಂದು ರಾಘವನಾಗ ।
ಸೂರ್ಯಸಂಭವಗೆ ಸೂಚಿಸಲು ॥ ೧೧–೩೪ ॥

ಆಯಾಸವೇಕಿಂತು ಆಹವದೊಳು ಸತ್ತು ।
ತಾಯಿತಂದೆಯರ ನೋಯಿಸುವೆ ॥
ಜೀಯ ರಾವಣಗೆ ಜಾನಕಿ ರಾಣಿಯೆಂಬ ನಿ ।
ಜಾಯತ ತಿಳಿದು ಪಿಂತಿರುಗು ॥ ೧೧–೩೫ ॥

ಎನಲು ಹನುಮ ರೋಷದೊಳಗೆ ಕಪಾಳಕ್ಕೆ ।
ಘನಘಾತವೊಂದ ನೀಡುತಲಿ ॥
ದನುಜರು ಗುಣದಿ ತಾಮಸರಾಗಿಹರು ವಿಭೀ ।
ಷಣನೊರ್ವ ಸಾತ್ವಿಕನೆಂದ ॥ ೧೧-೩೬ ॥

ಈಗ ವಿಭೀಷಣ ನಮ್ಮ ಲಂಕೆಯ ಬಿಟ್ಟು ।
ಪೋಗಿರ್ಪ ಪರದೇಶಿಯಾಗಿ ॥
ಕಾಗೆಯು ನುಡಿಸದ ಕಡುಕಷ್ಟದೊಳಗೆ ವೇ ।
ಲಾಗಿರಿಯೊಳಗಿರ್ಪನೆಂದ ॥ ೧೧-೩೭ ॥

॥ **ದ್ವಿಪದಿ** ॥
ತಿಳಿಯೆ ಪೂರ್ವಾಪರವ ಶುಕನ ಸೆರೆಗಿರಿಸಿ ।
ಬಳಿಕ ಸುಗ್ರೀವ ಹನುಮಾದಿಗಳವೆರಸಿ ॥ ೧೧-೩೮ ॥

ಯೋಚಿಸಿ ವಿಭೀಷಣನ ಕರೆದುತರುವುದಕೆ ॥
ಸೂಚಿಸಿದನಾ ಮೈಂದ ದ್ವಿವಿದರೀರ್ವರಿಗೆ ॥ ೧೧-೩೯ ॥

ವಚನ: ಶ್ರೀರಾಮನಾಜ್ಞೆಯಂ ಪೊತ್ತು ಮೈಂದ ದ್ವಿವಿದರೀರ್ವರಾ
ಸುವೇಲಾದ್ರಿಗೈತಂದರು –

॥ **ಶಂಕರಾಭರಣ – ತ್ರಿವುಡೆ** ॥
ವರ ಸುವೇಲಾದ್ರಿಯೊಳು ಸರಮಾ ।
ವರ ವಿಭೀಷಣ ಮೌನದಿ ॥
ತರುಲತಾಸೌಂದರ್ಯವೀಂಟುತ ।
ಇರಲು ಮೈಂದ ದ್ವಿವಿದರು ।
ಬರಲು ಕಂಡು ॥ ೧೧-೪೦ ॥

ಅತಿಥಿಗಳೆ ನಿಮ್ಮಾಗಮನ ಧ ।
ನ್ಯತೆಯ ತಂದಿಹುದೈಸಲೆ ॥
ಹಿತದ ಕಜ್ಜವನುಸುರುತಿದೆ ಸು ।
ಸ್ಮಿತದ ಸುಂದರವದನವೆ ।
ಪ್ರಥಿತಮಲ್ತೆ ॥ ೧೧-೪೧ ॥

ವಚನ: ಮತ್ತೆ ಬಿನ್ನೈಸಿದರ್ ರಾವಣಾನುಜಂಗೆ –

॥ **ಸಾರಂಗ –ಆಟ** ॥
ಕೇಳು ವಿಭೀಷಣಾಂಕ । ಸಜ್ಜನಬಂಧು ।
ಶೀಲವಾರಿಧಿ ಶಶಾಂಕ ॥ ಪ ॥
ಶ್ರೀಲಲಾಮನ ಪಾದದೊಳಗದವರ್ಸೈಸೆ ।
ಬಾಲ ಮೈಂದನು ನಾನು ಮೇಲೆ ದ್ವಿವಿದನೀತ ॥ ಅ.ಪ ॥

ಪಗೆಯಲ್ಲ ನಮಗೆ ಲಂಕೆ । ರಾಜ್ಯವನಾಳ್ವ ।
ಬಗೆಯಿಲ್ಲ ಬೇಡ ಶಂಕೆ ॥
ಮುಗುದೆ ಸೀತೆಯ ಕದ್ದವಗೆ ಶಿಕ್ಷೆ ನಿಶ್ಚಯ ।
ಜಗದೊಳಾರಿಗು ವಿಧಿ ಮಿಗುವರಿಯಲಶಕ್ಯ ॥ ೧೧–೭೨ ॥

ಪಾಪವ ಕಂಡು ನೀನು । ದೂರಕೆ ನಿಲ್ಲೆ ।
ಆ ಪುಣ್ಯ ಪಡೆವೆಯೇನು ॥
ಸ್ಥಾಪಿತ ಸದ್ಧರ್ಮದಾ ಪಕ್ಷವಾಂತರೆ ।
ನೀ ಪಡೆಯುವೆ ಸಿದ್ಧಿಸಾಫಲ್ಯ ಬದುಕಿಂಗೆ ॥ ೧೧–೭೩ ॥

ವಚನ: ಎನಲಾ ವಿಭೀಷಣಂ ಅಂತಸ್ಥಮಂ ಪೇಳ್ದನಿಂತು–

॥ **ಭಾಮಿನಿ** ॥
ಸತಿ ಸುತೆಯರೀರ್ವರನು ರಾಮನ ।
ಸತಿಯ ರಕ್ಷಣೆಗಾಗಿ ನಿಲ್ಲಿಸಿ ।
ವ್ಯಥಿಸುತಿರುವೆನು ಮನದೊಳಗ್ರಜ ಗೈದ ದುಷ್ಕೃತಕೆ ॥
ಸತತ ಪೊರೆದೀ ಜನ್ಮಭೂಮಿಯ ।
ನತಿಗಳೆದು ರಿಪುಗಳಿಗೆ ನೀಡೆನು ।
ಋತವ ಸಂಪ್ರಾರ್ಥಿಸುವೆ ಧರ್ಮವು ಗೆಲಲಿ ತಾನೆಂದು ॥ ೧೧–೭೪ ॥

ವಚನ: ಎನಲಾ ಮೈಂದದ್ವಿವಿದರ್ ಮತ್ತೆ ಅಸುರಲಲಾಮಂಗೆ
ಇಂತೆಂದರ್ –

॥ **ಭೈರವಿ – ಝಂಪೆ** ॥
ತಪದ ಪ್ರಾರ್ಥನೆಯಲ್ಲಿ । ವಿಪುಲ ಶಕ್ತಿಯು ಸಾಧ್ಯ ।
ನೃಪತಿ ರಾಘವನಡಿಯ । ಕೃಪೆಗೆ ಪಾತ್ರನಹೆ ॥ ೧೧–೨೫ ॥

ಇನ್ನು ಲಂಕೆಯ ಭಾಗ್ಯ । ವನ್ನು ಸಂರಕ್ಷಿಸಲು ।
ನಿನ್ನ ನೆರವಿನ ಹಸ್ತ । ವನ್ನು ಬಯಸುವನು ॥ ೧೧–೨೬ ॥

ಅಳಿಯುವುದು ಕೆಡುಕೆಲ್ಲ । ಉಳಿಯುವುದು ಶುಭವೆಲ್ಲ ।
ಬಳಿಯೆ ನೀನಿರೆ ಧರ್ಮ । ಬೆಳಗುವುದು ಜಗದಿ ॥ ೧೧–೨೭ ॥

॥ **ಕಂದ** ॥
ಪರಿಪರಿ ಫಲಗಳನಿತ್ತುಪ ।
ಚರಿಸುತಲಾ ರಾತ್ರೆ ಕಳೆದು ನಿರ್ಮಲಚಿತ್ತಂ ॥
ಮರುದಿನದುದಯದ ಕಾಲದಿ ।
ಹರಿತಂದಾ ರಾಮಚಂದ್ರನಾಸರೆವಡೆದಂ ॥ ೧೧–೨೮ ॥

॥ **ನವರೋಜು – ಆದಿ** ॥
ಜಯಜಯಹೇ ದಾಶರಥಿ । ಪಾ ।
ಲಯಮಾಂ ಸಾಕೇತಪತಿ ॥ ಪ ॥
ದಯೆದೋರುತ ಲಂಕೆಯ ಪೊರೆಯ್ಯೆ ಭವ ।
ಭಯಹರ ಸೀತಾಪ್ರಿಯ ಪುರುಷೋತ್ತಮ ॥ ಅ.ಪ ॥

ಪೊಂದಿದೆ ಪಾವನಚರಣ । ನಾ ।
ನೆಂದಿಗು ನಿನ್ನಯ ಶರಣ ॥
ಬಂದೆಡರನು ಧುರದಿಂದಲೆ ಕಳೆವುದು ।
ಇಂದೀಗಲೆ ಶರಸಂಧಿಸಿ ಕರೆವುದು ॥ ೧೧–೨೯ ॥

॥ **ಭಾಮಿನಿ** ॥
ಪರಮಕರುಣಾಸಿಂಧು ರಾಘವ ।
ಶರಣು ಬಂದ ವಿಭೀಷಣಾಂಕನ ।
ಬರಸೆಳೆದು ಬಿಗಿಯಪ್ಪಿ ಬಾಂಧವನೆಂದು ಮನ್ನಿಸುತೆ ॥

ಪರಿಪರಿಯ ರಾಕ್ಷಸರ ಮಾಯಾ ।
ಧುರದ ರೀತಿಯ ತಿಳಿದು ಮತ್ತಾ ।
ತರಣಿಜಾದಿಗಳೊಡನೆ ಮಂತ್ರಾಲೋಚನೆಯ ಗೈದ ॥ ೧೧-೮೦ ॥

॥ **ಸೌರಾಷ್ಟ್ರ – ತಿವುಡೆ** ॥
ಇತ್ತಲಾ ದಶಕಂಠನೋಲಗ ।
ವೆತ್ತು ಕುಳಿತಿರೆ ಮೇಘನಾದ ಪ್ರ ।
ಹಸ್ತ ಶಾರ್ದೂಲಾದಿ ದಾನವ ।
ಮೊತ್ತದೊಡನೆ ॥ ೧೧-೮೧ ॥

ಶತ್ರುಸೈನ್ಯದ ಶಿಬಿರದಿಂದಲಿ ।
ಗುಪ್ತಕೌಶಲದಿಂದ ತಪ್ಪಿಸಿ ।
ಭೃತ್ಯ ಸಾರಣನಾಗ ಓಡೋ ।
ಡುತ್ತ ಬಂದ ॥ ೧೧-೮೨ ॥

॥ **ಮುಖಾರಿ – ಏಕ** ॥
ಲಾಲಿಸಬೇಕು ನಮ್ಮ ಧಣಿಯೆ ॥ ಸೌಭಾಗ್ಯದ ಗಣಿಯೆ ।
ಪಾಲಿಸಬೇಕು ದೈತ್ಯಮಣಿಯೆ ॥ ಪ ॥
ಪೇಳಲೇನು ರಿಪು । ಜಾಲದ ಬಲವನು ।
ಕೋಳುಗೊಂಡು ಸೆರೆ । ಯಾಳಾದನು ಶುಕ ॥ ಅ.ಪ ॥

ತಮ್ಮ ವಿಭೀಷಣಾಂಕನವರ ॥ ಕೂಡಿರ್ಪ ವಿವರ ।
ಜುಮ್ಮೆನಿಸುವುದು ಮುಂದೆ ಸಮರ ॥
ಸುಮ್ಮಗೆ ಬಿಡರೈ । ಹಮ್ಮಿನ ಕಪಿಗಳು ।
ನಮ್ಮ ಸೇನೆಯನು । ಹಿಮ್ಮೆಟ್ಟಿಸುವರು ॥ ೧೧-೮೩ ॥

ವಚನ: ಸಾರಣನ ವಚನಮಂ ಲಾಲಿಸುತ ರಾವಣಂ ತಾನಿಂತೆಂದನು–

॥ **ಕಾಂಭೋದಿ – ಝಂಪೆ** ॥
ಇತರರಿಂಗಂಜಿಕೆಯ ವಿತರಿಸಲು ಬೇಡವೈ ।
ಜತನದಿಂದಲಿ ಯುದ್ಧಸನ್ನಾಹವೆರಸಿ ॥
ಪ್ರತಿದಾಳಿಯಿಂದ ಕಪಿಗಳ ಸೈನ್ಯ ಸದೆಬಡಿದು ।
ಕೃತಕೃತ್ಯರಾಗಿ ಲಂಕೆಯ ಮಾನವುಳಿಸಿ ॥ ೧೧-೮೪ ॥

ವಚನ: ಆಗಳಾ ಶಾರ್ದೂಲನೆಂಬ ರಾಕ್ಷಸಂ ದುರ್ಮಂತ್ರಮಂ ಪೇಳ್ದನು–

ವಾನರರ ಸೇನೆಗಿಂ ಮಿಗಿಲಾದ ಪಗೆ ತಾನು ।
ಜಾನಕಿಯೊಳಿರ್ಪ ಪಾತಿವ್ರತ್ಯಮಹಿಮೆ ॥
ಕಾಣಿಸೀಗಲೆ ಮಾಯೆಯಿಂದ ರಾಮನ ಶಿರವ ।
ಮಾನಸದಿ ಸೋತು ವಶವಾಗುವಳು ನಿನಗೆ ॥ ೧೧–೮೫ ॥

ವಚನ: ಚಿಂತಾಕುಲಂ ರಾವಣಂ ಮತ್ತೆ ತಾನಿಂತೆಂದನು –

ವಶವಾಗುವವಳಲ್ಲ ದುಷ್ಕೃತ್ಯದೊಳು ಮೃತ್ಯು ।
ವಶಳಾಗುವಳು ಕಳೇವರ ಮಾತ್ರ ವಶವು ॥
ದಶವದನ ಬಲ್ಲನೀ ಶಶಿವದನೆಯಾಂತರ್ಯ ।
ಪಸುಳೆ ನೀನರಿಯೆ ತೊಲಗಾಚೆ ಸಭೆಯಿಂದ ॥ ೧೧–೮೬ ॥

ವಚನ: ಮತ್ತಾ ಪ್ರಹಸ್ತನಂ ಕುರಿತು –

ಸೇನಾನಿ ಲಾಲಿಸೈ ಬೆಳಕು ಹರಿವುದರೊಳಗೆ ।
ಸೇನೆಯಂ ಸಜ್ಜುಗೊಳಿಸುವುದೈಸೆ ಭರದಿ ॥
ಮಾನಿನಿಯ ಹಂಬಲದಿ ಬಂದ ರಾಮನಿಗೆಮ್ಮ ।
ದಾನವೀಬಲ ತೋರಿ ಸೋಲಿಪುದು ರಣದಿ ॥ ೧೧–೮೭ ॥

ವಚನ: ಎಂದ ಮಾತ್ರದೊಳ್ ಪ್ರಹಸ್ತಂ ಮಹಾಯುದ್ಧಸಿದ್ಧತೆಯ
ಗೈದಂ ಆ ರಾತ್ರಿಯೊಳ್ –

॥ **ವಾರ್ಧಕ** ॥
ಘನ ವಜ್ರಹನು ರಾಹುರೋಷ ಪೂರ್ವದೊಳು ದ ।
ಕ್ಷಿಣದೊಳು ಮಹಾಪಾರ್ಶ್ವ ಮತ್ತಾ ಮಹೋದರಂ ।
ದನುಜಸುತನಿಂದ್ರಾರಿ ಶೋಣಿತಾಕ್ಷರು ಪಶ್ಚಿಮದ ಭಾಗದೊಳು
ನಿಂದಿರೆ ॥
ರಣ ವಜ್ರದಂಷ್ಟ್ರಕಾಕಂಪನೋತ್ತರ ದೆಸೆಯೊ ।
ಳಣಿಗೊಳೆ ಪ್ರಹಸ್ತ ಸೇನಾಧ್ಯಕ್ಷನಾಗೆ ರಾ ।
ವಣ ಬದ್ಧಭೃಕುಟಿಯಿಂದವರನುತ್ತೇಜಿಸುತೆ ದಿನಪನುದಯಕೆ
ಕಾದನು ॥ ೧೧–೮೮ ॥

॥ **ಸಾಂಗತ್ಯ – ರೂಪಕ** ॥
ದಾನವಾಗ್ರಣಿ ವಿಭೀಷಣ ವೀರ ಹನುಮಾದಿ ।
ವಾನರಾದಿಗಳ ಕೂಡುತಲಿ ॥
ಭಾನುನಂದನ ಬಂದು ಪದಕೆ ವಂದಿಸೆ ಸಮಾ ।
ಧಾನದೊಳಂತೆಂದ ರಾಮ ॥ ೧೧–೮೯ ॥

ಯುದ್ಧಸಾರುವ ಮೊದಲೊಂದು ಸಂಧಾನದ ।
ಸುದ್ದಿ ಸಾರುವುದು ರಾವಣಗೆ ॥
ಕದ್ದ ಸೀತೆಯ ಕೊಡದಿದ್ದರೆ ಸಮರವು ।
ಸಿದ್ಧವೆಂದೆನುತ ಪೇಳುವುದು ॥ ೧೧–೯೦ ॥

ಸೆರೆಯೊಳಗಿರುವಂಥ ಶುಕನನ್ನು ಕಳುಹುತ್ತ ।
ಶರಣಾಗತಿಗೆ ಸೂಚಿಸುವುದು ॥
ಮರುದಿನದುದಯದವರೆಗೆ ಕಾಯುವುದೆಂದು ।
ತರಣಿನಂದನಗೆ ಪೇಳಿದನು ॥ ೧೧–೯೧ ॥

॥ **ಭಾಮಿನಿ** ॥
ಆ ದಯಾಬ್ಧಿನಿರೂಪ ಧರಿಸುತ ।
ಪೋದ ಶುಕ ಬರದಿರಲು ತೂರ್ಯವ ।
ನೂದಿರಲು ರವಿಯುದಯಕಾಲದಿ ವಾನರಸ್ತೋಮ ॥
ಕಾದುವರೆ ನಿಂತಿರುವ ವ್ಯೂಹವ ।
ಭೇದಿಸುವೆ ತಾನೆಂದು ಘರ್ಜಿಸಿ ।
ಕ್ರೋಧಭೀಷಣ ಮೇಘನಾದನು ರಣಕೆ ನಡೆತಂದ ॥ ೧೧–೯೨ ॥

ವಚನ: ಮೊದಲದಿನ ಯುದ್ಧರಂಗದೊಳ್ ಇಂದ್ರಜಿತು
ಆಂಜನೇಯರು ಮುಖಾಮುಖಿಯಾದರದೆಂತೆನೆ–

॥ **ಶಂಕರಾಭರಣ – ಮಠ್ಯ** ॥
ಸುರಪನನ್ನು ಗೆಲಿದ ದೈತ್ಯ ।
ತರುಣ ಮೇಘನಾದನೆಂಬ ।
ಪರಮನಾಮಧೇಯದಿಂದ ।
ಕರೆವರೆನ್ನನು ॥

ಶರಧಿ ಲಂಘಿಸುತ್ತ ಬಂದು ।
ಕರದಿ ಕೊಂಬೆ ಪಿಡಿದುಕೊಂಡು ।
ಧುರವ ಗೈವ ಕಪಿಯೆ ನಿನ್ನ ।
ಪರಿಯ ಪೇಳೆಲಾ ॥ ೧೧-೯೩ ॥

ಮೊನ್ನೆ ಬಂದು ಲಂಕಾಲಕ್ಷ್ಮಿ ।
ಯನ್ನು ಧುರದಿ ಕೆಣಕಿ ಶೂಲ ।
ವನ್ನು ಸೆಳೆದ ರಣಪ್ರತಾಪಿ ।
ಇನ್ನು ಮನದೊಳು ॥
ಸನ್ನುತಾಂಗ ರಾಮಚಂದ್ರ ।
ನನ್ನು ಭಕ್ತಿಯಿಂದ ಭಜಿಪ ।
ಧನ್ಯದಾಸ ಹನುಮನೆಂಬ ।
ರೆನ್ನ ಕೇಳೆಲಾ ॥ ೧೧-೯೪ ॥

॥ **ಘಂಟಾರವ – ಆಟ** ॥
ರಣದಿ ಸಾಹಸಿ ಕಣೆಯನ್ನು ಸಹಿಸೆಂದು ।
ಹನುಮವಕ್ಷಕೆ ಶರವನೊಂದನು ।
ದನುಜನೆಚ್ಚನು ರಭಸದಿ ॥ ೧೧-೯೫ ॥

ವೀರಮಾರುತಿ ರಾಮನಾಮವ ಪಾಡಿ ।
ಹಾರಿ ಕುಪ್ಪಳಿಸುತ್ತ ದನುಜನ ।
ತೇರ ಪುಡಿಪುಡಿಗೈದನು ॥ ೧೧-೯೬ ॥

ಕತ್ತಲಾಗಲು ದೈತ್ಯ ಮಾಯೆಯ ಬೀಸಿ ।
ಮತ್ತೆ ನಾಗಾಸ್ತ್ರವನು ಪೂಡುತ ।
ಬಿತ್ತಿದನು ವಿಷಗಾಳಿಯ ॥ ೧೧-೯೭ ॥

॥ **ದ್ವಿಪದಿ** ॥
ಬೀಸಿದ ವಿಷಾನಿಲದಿ ರಾಮಲಕ್ಷ್ಮಣರು ।
ಘಾಸಿಗೊಳ್ಳುತ ಮೂರ್ಛೆಯನ್ನು ಪೊಂದಿದರು ॥ ೧೧-೯೮ ॥

ವಾನರರ ಸೇನೆ ಮೈಮರೆತು ಮಲಗಿರಲು ।
ದಾನವಾಗ್ರಣಿ ವಿಭೀಷಣನು ಸೂಕ್ಷ್ಮದೊಳು ॥ ೧೧-೯೯ ॥

ವ್ಯಾಳವೈದ್ಯ ಸುಷೇಣನಂ ಮಡುಕೆ ರಣದಿ ।
ಕೇಳಿಸಿತು ದಿವ್ಯಸಂವಾದವಾಗಸದಿ ॥ ೧೧-೧೦೦ ॥

ವಚನ: ಗಗನಾಂಗಣದೊಳ್ ತಪೋದೇವಿಯಂ ಸ್ವಪ್ನದೇವಿ
ನುಡಿಸಿದಳ್ ಇಂತು –

॥ **ಬಿಲಹರಿ – ಏಕ** ॥
ಅಕ್ಕ ಏನಿದು ಹೀಗೆ । ದುಃಖವಾಯ್ತಲ್ಲ ॥
ಮಿಕ್ಕ ಕಾರ್ಯಗಳೆಲ್ಲ । ದಿಕ್ಕೆಟ್ಟಿತಲ್ಲ ॥ ೧೧-೧೦೧ ॥

ತಂಗೆ ಶೋಕಿಸದಿರು । ಮಂಗಳಮಹುದು ॥
ತುಂಗಧರ್ಮದ ಶಕ್ತಿ । ಮುಂಗಾಣಲಿಹುದು ॥ ೧೧-೧೦೨ ॥

ರಾಮಚಂದ್ರಮ ಸೋಲೆ । ಭಾಮೆಗೇನಹುದು ॥
ತಾಮಸಗುಣವೆಲ್ಲ । ಭೂಮಿ ತುಂಬುವುದು ॥ ೧೧-೧೦೩ ॥

ಸೀತಾದೇವಿಯ ಮಹಾ । ಪಾತಿವ್ರತ್ಯದಲಿ ॥
ಧಾತುಗುಂದುವ ದೈತ್ಯ । ವ್ರಾತವಿಂದಿನಲಿ ॥ ೧೧-೧೦೪ ॥

ಗೆದ್ದಿದೆ ದುಃಶಕ್ತಿ । ಬಿದ್ದಿದೆ ಧರ್ಮ ॥
ಯುದ್ಧದಿ ಮುಗಿವುದೆ । ಶುದ್ಧಾತ್ಮಕರ್ಮ ॥ ೧೧-೧೦೫ ॥

ಇಂತು ಪ್ರಕೃತಿನೇಮ । ತಂತುಗೊಳ್ಳುವುದು ॥
ಮುಂತಾಗುವುದ ನೀನು । ನಿಂತು ನೋಡುವುದು ॥ ೧೧-೧೦೬ ॥

॥ **ಕಂದ** ॥
ಸತಿಯ ಮಹಾವ್ರತ ಜನನಿಯ ।
ಹಿತನುಡಿ ಸೋದರನ ಪರಕೆಗೊಳುತಾ ನಭದಿಂ ॥
ಸುತಪೋಲಕ್ಷ್ಮಿಯು ಕೆಳಗಿಳಿ ।
ಯುತೆ ಲಕ್ಷ್ಮಣದೇವಗಿತ್ತು ಶುಭಮೆಂದುಲಿದಳ್ ॥ ೧೧-೧೦೭॥

॥ **ಮಧುಮಾಧವಿ – ತಿವುಡೆ** ॥
ಅಮರವಪುವಿನ ದೇವತರುವಿನ ।
ಸುಮಸುಶೋಭಿತ ಗರುಡದೇವನು ।
ವಿಮಲಸುಧೆಯನು ರಾಮಸೇನೆಗೆ ।
ಚಿಮುಕಿಸಿದನೇನೆಂಬೆನು ॥ ೧೧-೧೦೮ ॥

ದುರುಳನೆಚ್ಚಿದ ಬೆರಳ ಬಾಣದ ।
ಗರಳದುರುಬೆಯು ವಿರಳವಾಯಿತು ।
ಧರೆಯ ಮೇಲೊರಗಿರುವ ಸರ್ವರ ।
ಹರಣ ಚೇತನಗೊಂಡಿತು ॥ ೧೧-೧೦೯ ॥

ವಚನ: ಮತ್ತೆ ಆಹವರಂಗದೊಳ್ ಧೂಮ್ರಾಕ್ಷನುಂ ಶತಬಲಿಯುಂ
ಕಾದಿದರ್ ಖಾಡಾಖಾಡಿಯಾಗಿ –

॥ **ಭೈರವಿ – ಝಂಪೆ** ॥
ಕ್ಷುಲ್ಲಕದ ಕಪಿತ್ರಾಣ । ಬಲ್ಲವನು ನಾನ್ಯೆಸೆ ।
ಪಲ್ಲನುದುರಿಪೆನೆಂದು । ಮಲ್ಲಗದೆ ತಿವಿಯೆ ॥ ೧೧-೧೧೦ ॥

ದುಷ್ಟದಾನವನು ನೀ । ನೆಷ್ಟರವನೆಂಬುದನು ।
ನಿಷ್ಠುರದಿ ನೋಳ್ಪೆನೀ । ಮುಷ್ಟಿಘಾತದೊಳು ॥ ೧೧-೧೧೧ ॥

ಬರಿದೆ ಟಿಟ್ಟಿರಿಗುಟ್ಟಿ । ತಿರುಗಿಹಾರುವ ಕಪಿಯೆ ।
ಸುರಗಿಯಿಂದಲೆ ಬೆನ್ನ । ಹರಿವೆ ನೋಡೆಂದ ॥ ೧೧-೧೧೨ ॥

ನಿನ್ನ ರಾಕ್ಷಸಧೈರ್ಯ । ವನ್ನು ಸದೆಯುವೆನೆಂದು ।
ತಿಣ್ಣ ಭುಜಬಲದಿಂದ । ಮಣ್ಣುಗೂಡಿಸಿದ ॥ ೧೧-೧೧೩ ॥

ವಚನ: ಮತ್ತೊಂದೆಡೆ ವಜ್ರದಂಷ್ಟ್ರನುಂ ಅಂಗದನುಂ ಕಾದಿದರ್ –

॥ **ಶಂಕರಾಭರಣ – ಮಠ್ಯ** ॥
ಬೆಟ್ಟದಲ್ಲಿ ಬದುಕುವಂಥ ।
ಗುಟ್ಟನೆಲ್ಲ ಬಲ್ಲೆ ವೃಕ್ಷ ।
ಬಿಟ್ಟ ಹಣ್ಣುತಿನುವ ನಿನ್ನ ।

ಕಟ್ಟಿ ಕಂಬಕೆ ॥
ಸೊಟ್ಟಮೊಗಕೆ ನಾಲ್ಕು ಏಟು ।
ಕೊಟ್ಟರಾರು ಕಾಯುವವರು ।
ದಿಟ್ಟ ವಜ್ರದಂಷ್ಟ್ರನೆನ್ನ ।
ಮುಟ್ಟಲಾಪೆಯ ॥ ೧೧–೧೧೪ ॥

ಬಾಲನೆಂದು ಭಾವಿಸುತ್ತ ।
ಕೀಳು ಭಾಷೆಯನ್ನು ನುಡಿವೆ ।
ಕಾಳೆಗದಲಿ ತಿಳಿದುಕೊಂಬೆ ।
ಸೋಲಿನಾ ರುಚಿ ॥
ಖೂಳತನದ ರಕ್ಕಸನಿಗೆ ।
ಪೇಳಲೆಂತು ಬುದ್ಧಿಮಾತು ।
ಬಾಳ ಬದುಕುವಾಸೆಯಿರಲು ।
ಕಾಲಿಗೆರಗೆಲಾ ॥ ೧೧–೧೧೫ ॥

॥ ಘಂಟಾರವ – ಆಟ ॥
ಬರಿದೆ ಪೌರುಷ ಗಳಹುವುದೇತಕೆ ।
ಧುರಪರಾಕ್ರಮಿ ಎನ್ನ ಮುಂದಕೆ ।
ನೊರಜು ನೀನೇಂಗೈಯುವೆ ॥ ೧೧–೧೧೬ ॥

ಘೋರರಕ್ಕಸ ಗರುವ ತೋರದಿರೆಂದು ।
ಕೋರೆದಾಡೆಯ ಮುರಿಯುತಾಗಲೆ ।
ವೀರನಂಗದ ಮೆರೆದನು ॥ ೧೧–೧೧೭ ॥

ವಚನ: ಇನ್ನೊಂದೆಡೆಯೊಳ್ ಅಕಂಪನನಂ
ದರೀಮುಖನೆದುರುಗೊಂಡ ಪರಿಯೆಂತೆನೆ –

॥ ಭೈರವಿ – ಏಕ ॥
ಕಡಲಿಗೆ ಸೇತುವ ಕಟ್ಟಿ । ಕಪಿ ।
ಪಡೆಗಳು ಲಂಕೆಯ ಮೆಟ್ಟಿ ॥
ಕೊಡುವಿರೆ ಪ್ರಾಣವನಿಲ್ಲಿ । ಎದೆ ।
ಯೊಡೆಯುತೆ ನೆತ್ತರ ಚೆಲ್ಲಿ ॥ ೧೧–೧೧೮ ॥

ಬಡಿವಾರದ ನುಡಿ ಸಾಕು । ಕೈ ।
ಖಡುಗದ ಕೌಶಲ ಬೇಕು ॥
ಕಡುಗಲಿತನವನು ತೋರು । ಶಿರ ।
ಹೊಡೆದುರುಳಿಸುವೆನು ಸಾರು ॥ ೧೧-೧೧೯ ॥

ಮುರಿವೆನು ಗಂಟಲಗಾಣ । ಸಂ ।
ಗರದೊಳಗೆನಿತಿದೆ ತ್ರಾಣ ॥
ಬಿರುನುಡಿ ಕಟ್ಟಿಡು ಕೊನೆಗೆ । ಶರ ।
ದುರಿಯನು ಸಹಿಸೆಲೊ ಬಿನುಗೆ ॥ ೧೧-೧೨೦ ॥

ನಾರಿಯ ಕದ್ದಸುರನನು । ತಲೆ ।
ನೂರಿರೆ ಕತ್ತರಿಸುವೆನು ॥
ಯಾರವನೆಲ್ಲಿಹನೆಂದು । ನೆಲೆ ।
ತೋರಲುಳಿವೆ ನೀನಿಂದು ॥ ೧೧-೧೨೧ ॥

ವಚನ: ಅನಿತರೊಳಾ ಪ್ರಹಸ್ತನಂ ಕಪಿವೀರ ನೀಲಂ ತಾನೆದುರಾಗಿ
ಕಾದಿದಂ ಬಹುಪರಿಯೊಳು –

॥ **ನಾದನಾಮಕ್ರಿಯೆ – ಅಟ** ॥
ನೀಲನೆಂಬವನೇನು ನೀನಿಂದು । ರಾಮ ।
ನೂಳಿಗವಾಂತ ವಾನರನೆಂದು ॥
ಕೇಳಬಲ್ಲೆನು ಬಾಹುಬಲವನ್ನು । ತೋರ್ಪೆ ।
ಕಾಲನ ಪುರಿಯ ಸೇರುವುದನ್ನು ॥ ೧೧-೧೨೨ ॥

ನರಕವೆಂಬುದನು ನೋಡುವೆ ಇಲ್ಲಿ । ದಂಡ ।
ಧರನಿಗೇತರ ಕಾರ್ಯ ಮತ್ತಲ್ಲಿ ॥
ದುರುಳ ರಾವಣನನ್ನು ತೋರೆಲಾ । ನಿನ್ನ ।
ಕೊರಳ ಕತ್ತರಿಸುವೆ ಬಾರೆಲಾ ॥ ೧೧-೧೨೩ ॥

॥ **ಮಾರವಿ – ಏಕ** ॥
ಸೀತಾಮಾತೆಯ ಬಿಡಿಸುವ ಭಟರಿಗೆ ।
ಮಾತುಗಳೇಕಿನಿತು ॥
ಸಾತಿಶಯದ ಕಪಿವ್ರಾತವನುರುಳಿಸಿ ।
ದೀತನೊಡನೆ ಸೆಣಸು ॥ ೧೧-೧೨೪ ॥

ಮುಚ್ಚು ದುರಾತ್ಮನೆ ಮುಂದಡಿಯಿಟ್ಟರೆ ।
ಕೊಚ್ಚಿಕೊಲುವೆ ನಿನ್ನ ॥
ಕೆಚ್ಚನು ಕಾಂಬೆನೆನುತ್ತಲಿ ಗುದ್ದಿಡೆ ।
ಕಚ್ಚಿದ ನೆಲವನ್ನೆ ॥ ೧೧-೧೨೫ ॥

ವಚನ: ಅನಿತರೊಳ್ ಸತಿ ಮಂಡೋದರಿಯುಂ
ರಾವಣೇಶ್ವರನೆಡೆಗೆ ಬಂದಳ್ –

॥ **ಭಾಮಿನಿ** ॥
ಬವರವಾರತೆಯನ್ನು ಕೇಳುವ ।
ನೆವದಿ ಮಂಡೋದರಿಯು ಬರಲಾ ।
ಧವನ ಹಣೆಯೊಳು ಬೆವರು ಹನಿಗೊಂಡಿರಲು ಕಾಣುತ್ತ ॥
ಶಿವಶಿವಾ ಎಂದೆನುತ ಹಣೆಯೊರೆ ।
ಸುವಳ ಕಂಬನಿತೊಡೆದು ಯುದ್ಧದ ।
ಹವಣು ನಿನಗೇಕೆನುತ ದಶಶಿರನೊರೆದ ಕನಸೊಂದ ॥ ೧೧-೧೨೬ ॥

॥ **ಮೋಹನ –ಅಟ** ॥
ಕಳೆದ ರಾತ್ರಿಯ ಕನಸೊಂದ ಪೇಳುವೆ ಕಾಂತೆ ।
ನಳಿನಾಕ್ಷಿ ವೇದವತಿ ॥
ಸುಳಿದು ಚಿತೆಯನೇರಿ ಬಿಳಿಬೂದಿಯಾಗುತ್ತೆ ।
ತಳೆದಳಾಕೃತಿಯೊಂದನು ॥ ೧೧-೧೨೭ ॥

ಅದುವೆ ಸೀತೆಯ ರೂಪವೆಂದು ಭಾವಿಸುತಿರೆ ।
ಬೆದರಿ ಮೆಯ್ ಬೆಮರಿತಾಗ ॥
ಹದನ ನೋಡುವೆನೆಂದು ಉಪವನದೆಡೆ ಪೋಗೆ ।
ಬದಲಾಯ್ತು ಭ್ರಾಂತಿಯೆಲ್ಲ ॥ ೧೧-೧೨೮ ॥

ವಚನ: ಆ ನುಡಿಯಂ ಕೇಳ್ದು ಮಂಡೋದರಿ ತಾನಿಂತೆಂದಳಾ ಕಾಂತಗೆ–

ದನುಜೇಶ ನೀ ಕಂಡ ಕನಸು ಆತ್ಮದ ಶಕ್ತಿ ।
ನಿನಗೆಚ್ಚರಿಕೆಯಿತ್ತುದು ॥
ವನಿತಾಶಾಪದಿ ಸೈನ್ಯ ಕ್ಷಯಿಸುತಿರ್ಪುದು ಕಡೆ ।
ಗಣಿಸಬಾರದು ಪ್ರಾರ್ಥಿಪೆ ॥ ೧೧-೧೨೯ ॥

ಅನಲಾಕುಮಾರಿಗೆ ಸ್ವಪ್ನದಿ ಸೀತೆ ಯೋ ।
ಗಿನಿಯಂತೆ ಕಂಡಳಂತೆ ॥
ಘನಸೃಷ್ಟಿಚಕ್ರವೆಲ್ಲವ ತಿರುಗಿಸುವಂಥ ।
ತನುತೇಜ ತೋರ್ದಳಂತೆ ॥ ೧೧-೧೩೦ ॥

ವಚನ: ಸತಿಯ ಮಾತಿಗೆ ರಾವಣಂ ತುಸು ಕಿನಿಸಿನಿಂ ಇಂತೆಂದನು-

॥ **ಕಲ್ಯಾಣಿ – ಝಂಪೆ** ॥
ಅನಲೆ ನಿಜವಾಗಿ ನಮಗನಲೆಯಾಗಿಹಳೈಸೆ ।
ಮನಸಿನಕ್ಕರೆ ತೋರ್ದುದರಿಯಾಯಿತೆನಗೆ ॥
ತನುಜೆ ಸೀತೆಯ ಪಕ್ಷ ತಂದೆ ರಾಮನ ಪಕ್ಷ ।
ಇನಿತೀರ್ವರೂ ದ್ರೋಹವೆಸಗಿದರು ನಮಗೆ ॥ ೧೧-೧೩೧ ॥

ಬಿಡದೆ ಬೇಡುತ ಕಾಡಿ ಪಡೆಯುತಪ್ಪಣೆ ಸೀತೆ ।
ಯೊಡನಿರುವೆ ತಾನೆಂದು ನುಡಿದು ಮೋಹದೊಳು ॥
ಗುಡಿಯೊಳಗೆ ಕಥೆಕಟ್ಟಿ ನಡುಗಿಸುವಳೀ ಹುಡುಗಿ ।
ಕಡುಮಿಥ್ಯೆಯೆಂಬುದನು ಕಡೆಗೆ ತೋರಿಸುವೆ ॥ ೧೧-೧೩೨ ॥

ವಚನ: ಅನಿತರೊಳ್ ಶುಕನು ಬಂದೆರಗಿ ರಣವಾರ್ತೆಯಂ
ಉಸುರಿದನು –

॥ **ಸಾರಂಗ – ಆಟ** ॥
ಕೇಳಯ್ಯ ದಾನವೇಶ । ಕಾಳಗವಾರ್ತೆ ।
ಪೇಳಲೇನೆಲ್ಲ ನಾಶ ॥ ಪ ॥

ವೀರರೆ ಧೂಮ್ರಾಕ್ಷರಕಂಪನ ಮೊದಲಾದ ।
ಘೋರ ರಕ್ಕಸರೆಲ್ಲ ತೀರಿಕೊಂಡರು ದೊರೆ ॥ ೧೧-೧೩೩ ॥

ಸತ್ತ್ವಸಾಹಸದಿಂದ ಮೃತ್ಯುರೂಪವ ತೋರಿ ।
ಮತ್ತೆ ಸೇನಾನಿ ಪ್ರಹಸ್ತನಳಿದನೀಗ ॥ ೧೧-೧೩೪ ॥

ವಚನ: ಎಂದ ನುಡಿಯಂ ಕೇಳ್ದು ದಶಶಿರಂ ರಾಜಾಜ್ಞೆಯಂ ಪೇಳ್ದನು-

॥ **ಸೌರಾಷ್ಟ್ರ – ತ್ರಿವುಡೆ** ॥
ಆ ಮಹಾಪಾರ್ಶ್ವಕನ ಕದನಕೆ ।
ನೇಮಗೊಳ್ಳೆಂದೆನುತ ಪೇಳ್ವುದು ।
ರಾಮಸೇನೆಯ ಮಥಿಸೆ ಸಮರೋ ।
ದ್ದಾಮನವನು ॥ ೧೧–೧೩೫ ॥

ವಚನ: ಆಗಳಾ ಮಹಾಪಾರ್ಶ್ವಕಂ ಬಂದು ಪದಕಭಿವಂದಿಸಿದನು –

ಶಕ್ತಿಪೂಜೆಯ ಮುಗಿಸುತಾಕ್ಷಣ ।
ಮುಕ್ತಿಮಾರ್ಗವಿದೆಂದು ಭಾವಿಸಿ ।
ನಕ್ತಕಾಲದಿ ಬಂದು ನಮಿಸಿದ ।
ಭಕ್ತಿಯಿಂದ ॥ ೧೧–೧೩೬ ॥

ಜೀಯ ಕೇಳ್ಕೈ ಸಮರರಂಗದೊ ।
ಳಾಯು ತೀರುವ ತನಕ ಸೆಣಸುವೆ ।
ಕಾಯವಿದು ಸ್ಥಿರವಲ್ಲ ಬದುಕಿದು ।
ಮಾಯೆಯ್ಯೆಸೆ ॥ ೧೧–೧೩೭ ॥

ವಚನ: ಮಹಾಪಾರ್ಶ್ವಕನಂ ಬಲುಮೋಹದಿಂದಪ್ಪಿ ರಾವಣೇಶ್ವರಂ –

ಈಗ ನಮಗೀ ಯುದ್ಧವಲ್ಲದೆ ।
ಆಗಮವು ಬೇರಿಲ್ಲ ತಿಳಿಯೈ ।
ಯೋಗಿ ನೀನೆಂಬುದನು ಬಲ್ಲೆನು ।
ಸಾಗು ಮುಂದೆ ॥ ೧೧–೧೩೮ ॥

॥ **ಭಾಮಿನಿ** ॥
ಪರಮಸಾಹಸದಿಂದ ನೀನೊಂ ।
ದಿರುಳು ಕಾದರೆ ಸಾಕು ನಾಳೆಗೆ ।
ಭರದಿ ಕುಂಭಶ್ರವನನೆಬ್ಬಿಸಿಕೊಳುವೆ ತಾನೆಂದು ॥
ತರಿಸಿ ಹೊಂಬಟ್ಟಲೊಳು ವೀಳೆಯ ।
ವಿರಿಸುತಾತನ ಕಳುಹಿಕೊಟ್ಟನು ।
ಧರೆ ನಡುಗುವಂದದೊಳು ಸಮರದ ಭೇರಿ ಬಾರಿಸಿತು ॥ ೧೧–೧೩೯ ॥

॥ **ಕಂದ** ॥
ಶರನಿಧಿತರಣ ವಿಭೀಷಣ ।
ಶರಣಾಗತಕರುಣ ಪುಣ್ಯನಾಮಸ್ಮರಣಂ ॥
ಧುರನೀತಿಯ ರಘುರಾಮನ ।
ಚರಿತಾಮೃತ ಯಕ್ಷಗಾನದ ಮಹಾಕಾವ್ಯಂ ॥ ೧೧–೧೪೦ ॥

***

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಶ್ರೀಸಂಪುಟಂ

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೧೨
ನಿಕುಂಭಿಳಾಧ್ವರಂ

ಪಾತ್ರಪಟಲ

ಶ್ರೀರಾಮ

ಲಕ್ಷ್ಮಣ

ಮಹಾಪಾರ್ಶ್ವ

ಸಾರಥಿ

ಕುಂಭಕರ್ಣ

ರಾಕ್ಷಸಭಟರು

ರಾವಣ

ಶಿವ

ಪಾರ್ವತಿ

ಹನುಮಂತ

ವಿಭೀಷಣ

ಸೀತಾದೇವಿ

ತ್ರಿಜಟೆ

ಅನಲಾಕುಮಾರಿ

ಅತಿಕಾಯ

ಇಂದ್ರಜಿತು

ಸುಷೇಣ

ಧಾನ್ಯಮಾಲಿನಿ

ದಾಸಿ

ತಾರಾಕ್ಷಿ

ನಿಕುಂಭಿಳಾಧ್ವರಂ

॥ ಮತ್ತೇಭವಿಕ್ರೀಡಿತವೃತ್ತ ॥
ಬೆರಗಿಂದೇರಿ ಮನೋಮಯಕ್ಷಿತಿಜಮಂ ಪ್ರಾಣಾನ್ನಕೋಶಂಗಳಂ ।
ತೊರೆವಂತಾದುದಯೋಧ್ಯೆಯಿಂದ ಪೊರಟೀ ಕಿಷ್ಕಿಂಧೆಯಂ ಲಂಕೆಯಂ ।
ನೆರೆ ಸಂದರ್ಶಿಸಿ ದೈತ್ಯ ವಾನರತೆಯಿಂ ಮಾನುಷ್ಯತಾಸಿದ್ಧಿ ತಾಂ ।
ದೊರೆಕೊಂಡಂತಿದೆ ಕಾವ್ಯಪೂರ್ಣರಸಮಂ ರಾಮಾಯಣಾನಂದಮೇ
॥ ೧೨-೧ ॥

॥ ಕಂದ ॥
ಅಸುರ ಮಹಾಪಾರ್ಶ್ವಕನಾ ।
ನಿಶಿಯೊಳೆ ದಶಕಂಠನಾಜ್ಞೆ ಧರಿಸುತೆ ಶಿರದೊಳ್ ॥
ವಿಶಿಖಂಗಳ ಮಳೆಸುರಿಸುತೆ ।
ಮುಸುಕಿದ ರಣಧಾತ್ರಿಯೆಲ್ಲ ನಡುಗುವ ತೆರದೊಳ್ ॥ ೧೨-೨ ॥

॥ ಭೈರವಿ – ಝಂಪೆ ॥
ನಟ್ಟಿರುಳ ಕೆನ್ನೀರ ಕಟ್ಟೆಯೊಳು ರಥವೇರಿ ।
ನೆಟ್ಟನೆ ಮಹಾಪಾರ್ಶ್ವನಟ್ಟೆ ಕಪಿಗಳನು ॥
ಕಟ್ಟುಗ್ರತನಕೆ ಕಂಗೆಟ್ಟು ನೀಲಾಂಗದರು ।
ಬಟ್ಟೆಗಾಣದೆಯೆ ಮರವಟ್ಟು ನಿಂದಿರಲು ॥ ೧೨-೩ ॥

ಅನಿತರೊಳಗಾ ಲಕ್ಷ್ಮಣನು ಖಡುಗ ಬೀಸುತ್ತ ।
ರಣದೊಳಧಿರಾಗಿ ದೈತ್ಯನ ಕರೆದನಿಂತು ॥
ಕುಣಪಭಕ್ಷಕ ನಿನ್ನ ಹಣೆಯ ಬರೆಹವನಳಿಸಿ ।
ಸೆಣಸಿನಲಿ ನರಕದರ್ಶನವ ಮಾಡಿಸುವೆ ॥ ೧೨-೪ ॥

ವಚನ: ಮಹಾಪಾರ್ಶ್ವನಾಕ್ಷಣದಿ ಲಕ್ಷ್ಮಣನಂ ರಣದೊಳೆದುರಿಸಿದ ಪರಿಯೆಂತೆನೆ-

॥ ಶಂಕರಾಭರಣ – ಮಠ್ಯ ॥
ಆರು ನೀನೆಲಾ । ರಾಮ । ನಾರು ತೋರೆಲಾ ॥
ವಾರಿನಿಧಿಯ ಮೀರಿಬಂದ ।

ಶೂರತನವನೀಗ ನೋಳ್ಪೆ ।
ತೂರಿಬರುವ ಕಣೆಗಳನ್ನು ।
ವೀರ ಸಹಿಸೆಲಾ ॥ ೧೨–೫ ॥

ವಚನ: ಲಕ್ಷ್ಮಣಂ ರಾಕ್ಷಸನ ಮೂದಲಿಸಿದನಿಂತೆಂದು –

ಏಕೆ ರಕ್ಕಸ । ಕೂಗ । ಲೇಕೆ ಕರ್ಕಶ ॥
ಸಾಕು ನಿನ್ನ ಕಾಕುಧೈರ್ಯ ।
ಏಕಶರದಿ ಶಿರವನರಿದು ।
ಶಾಕಿನಿಯರಿಗುಣಿಸನೀವೆ ।
ಲೋಕಕಂಟಕ ॥ ೧೨–೬ ॥

ವಚನ: ಲಕ್ಷ್ಮಣನ ಖಡ್ಗಮಂ ಭಂಗಿಸಿ ಮಹಾಪಾರ್ಶ್ವಕಂ
ತಾನಿಂತೆಂದನು –

॥ ಭೈರವಿ – ಆಟ ॥
ಶಿರದಿ ಜಟೆಯ ಬಂಧಿಸಿ । ವಲ್ಕಲವುಟ್ಟು ।
ಕರದಿ ಕಾರ್ಮುಕ ಧರಿಸಿ ॥
ತರುಣಿರಕ್ಷಣೆಗೈಯ । ದಿರುವ ಕ್ಷತ್ರಿಯವೀರ ।
ಧುರವೆಂತು ಗೈವೆ ನೀನು ॥ ಏನೆಂಬೆನು ॥ ೧೨–೭ ॥

ವಚನ: ಸೌಮಿತ್ರಿ ಇಂತುತ್ತರಿಸಿದನು ದನುಜಸೇನಾಪತಿಗೆ –

ಸತಿಯನ್ನು ಕದ್ದುತಂದ । ರಾವಣಸೇನಾ ।
ಪತಿ ನಿನ್ನ ಧೈರ್ಯದಂದ ॥
ಪೃಥಿವಿಯೊಳಿದು ವೀರೋ । ಚಿತಕಾರ್ಯವೇನಯ್ಯ ।
ಮತಿವಂತರಿಗೆ ಸರಿಯೆ ॥ ಮಾಯಾವಿಯೆ ॥ ೧೨–೮ ॥

ವಚನ: ಯುದ್ಧಮಧ್ಯದೊಳ್ ಮಹಾಪಾರ್ಶ್ವಕನ ಹೃದಯಮಂ
ಶರವೊಂದು ಚುಚ್ಚೆ ಸಾರಥಿಯ ಕರೆದೆಂದನು –

॥ ಭಾಮಿನಿ ॥
ಸಾರಥಿಯೆ ಲಾಲಿಪುದು ವೈರವ ।
ತೋರುವವನಧ್ಯಾತ್ಮ ಪ್ರಗತಿಗೆ ।
ಕಾರಣನು ಲೋಕದೊಳು ಪಾತಕ ಪುಣ್ಯಮುಖಿಯೈಸೆ ॥
ಕಾರ್ಯಸಾಧನೆಗಾಗಿ ವಿಧಿ ಬಹು ।
ದಾರಿ ಪಿಡಿಯುವುದೆನ್ನ ದೇವತೆ ।
ನಾರಿ ಜಾನಕಿರೂಪದೊಳಗಗ್ರಜನ ಸೆಳೆದಿಹುದು ॥ ೧೨-೯ ॥

॥ ಸೌರಾಷ್ಟ್ರ – ತಿವುಡೆ ॥
ಅಣ್ಣನೋರ್ವನೆ ಕೆಣಕಿ ರಾಮನ ।
ಧನ್ಯ ತಾನಾಗಿರ್ಪ ಬೇಗನೆ ।
ಮಣ್ಣಿನಾ ಋಣಹರಿದು ಪಡೆವೆನು ।
ಪುಣ್ಯಪದವ ॥ ೧೨-೧೦ ॥

ಚಿನ್ಮಯದ ಕರೆಕೇಳಿಸುತ್ತಿದೆ ।
ಇನ್ನಿದನು ತಿಳಿಸುವುದು ಲಂಕೆಗೆ ।
ಎನ್ನ ಮರಣ ಮುಹೂರ್ತಕಾಲವು ।
ಸನ್ನಿಹಿತವು ॥ ೧೨-೧೧ ॥

ವಚನ : ಎನುತಾ ಮಹಾಪಾರ್ಶ್ವಕಂ ಧರೆಗುರುಳಲ್

ಪುಷ್ಪರಾಶಿಯ ಕಂಡು ಸಾರಥಿ ।
ಕ್ಷಿಪ್ರದಿಂದೈತಂದು ವಾರ್ತೆಯ ।
ನೊಪ್ಪಿಸಲು ದಶಕಂಠ ಕೇಳುತ ।
ಲುಪ್ಪವಡಿಸೆ ॥ ೧೨-೧೨ ॥

॥ ಸಿಂಧುಭೈರವಿ – ಏಕ ॥
ಎಲವೋ ಯೂಪಾಕ್ಷನೀ ಗಳಿಗೆ ॥ ಕರೆ ।
ಕಳುಹಯ್ಯ ಕುಂಭಕರ್ಣನಿಗೆ ॥
ಮಲಗಿದಾತನನು ಎಬ್ಬಿಸುತ ॥ ಈಗ ।
ಪ್ರಳಯಭೀಕರನಾಗೆಂದೆನುತ ॥ ೧೨-೧೩ ॥

ಬ್ರಹ್ಮಶಾಪವೆ ಮೂರ್ತಿವೆತ್ತ । ಎನ್ನ ।
ತಮ್ಮನೆದ್ದರೆ ರಾಮ ಸತ್ತ ॥
ಹೊಮ್ಮಲಿ ಶಂಖ ಜೇಗಟೆಯು । ಭೇರಿ ।
ತಮ್ಮಟೆಗಳ ಆರುಭಟೆಯು ॥ ೧೨-೧೪ ॥

ವಚನ: ಕೋಲಾಹಳದ ಧ್ವನಿಗೆ ಕುಂಭಕರ್ಣಂ ಎಚ್ಚರವಾದನದೆಂತೆನೆ–

॥ **ಭೈರವಿ – ಝಂಪೆ** ॥
ನಿದ್ದೆಯಿಂದಾ ದೈತ್ಯ । ನೆದ್ದು ಮೈಮುರಿಯುತ್ತ ।
ಮುದ್ದೆಗೈದನ್ನವನು । ಮೆದ್ದು ಗಹಗಹಿಸಿ ॥ ೧೨-೧೫ ॥
ಹಂಡೆಹಂಡೆಯೊಳಿರುವ । ಹೆಂಡವನು ಕುಡಿಕುಡಿದು ।
ಖಂಡಮಾಂಸವನುಂಡು । ಮಂಡೆತೂಗಿದನು ॥ ೧೨-೧೬ ॥

ಮಬ್ಬುನಿದ್ದೆಯೊಳಿರಲು । ಬೊಬ್ಬೆಗಳ ಹೊಡೆದಿಂತು ।
ಎಬ್ಬಿಸಿದುದೇಕೆಂದು । ಅಬ್ಬರಿಸಲಾಗ ॥ ೧೨-೧೭ ॥

ವಚನ: ರಾಕ್ಷಸಭಟರ್ ನಡೆದ ವೃತ್ತಾಂತಮಂ ಸಂಕ್ಷೇಪದಿಂ ಪೇಳ್ದರ್–

॥ **ಭಾಮಿನಿ** ॥
ದಾಶರಥಿಯೆಂಬವನ ಪತ್ನಿಯ ।
ನಾಶಿಸುತ್ತಪಹರಿಸಲೀ ಲಂ ।
ಕೇಶನೊಂದಿಗೆ ಕದನಗೈಯಲು ಬಂತು ಕಪಿಸೇನೆ ॥
ದೇಶಕೋಶಂಗಳನು ತ್ಯಜಿಸಿ ವಿ ।
ಭೀಷಣನು ರಿಪುಪಕ್ಷವಾಂತನು ।
ರೋಷದಾವಾನಲದಿ ರಾಕ್ಷಸವೀರರಳಿದಿಹರು ॥ ೧೨-೧೮ ॥

॥ **ಸೌರಾಷ್ಟ್ರ – ತ್ರಿವುಡೆ** ॥
ತೊರೆದನೇ ಲಂಕೆಯ ವಿಭೀಷಣ ।
ಸರಿದನೆ ಮಹಾಪಾರ್ಶ್ವ ನಿದ್ರೆಯ ।
ಹರುಷದವಧಿಗೆ ಮೊದಲೆ ನನ್ನನು ।
ಕರೆದಿರಲ್ಲಾ ॥ ೧೨-೧೯ ॥

ಮೂರು ಕೇಡಿದು ಸಾಕು ಲಂಕೆಯ ।
ಸೂರುಗೆಡಿಸಲು ಎಂದು ತನ್ನೊಳೆ ।
ಪಾರಮಾರ್ಥವ ನೆನೆದು ಯುದ್ಧಕೆ ।
ವೀರ ನಡೆದ ॥ ೧೨-೨೦ ॥

ವಚನ: ಬಂದಾ ರಾವಣೇಶ್ವರಂಗೆ ಪೊಡಮಟ್ಟು ಕುಂಭಶ್ರವಂ ಇಂತೆಂದನು–

॥ **ಕೇದಾರಗೌಳ – ಆಟ** ॥
ಅಣ್ಣಯ್ಯ ನಿದ್ರೆಯಿಂದೆನ್ನನೆಬ್ಬಿಸದೆ ದಾ ।
ಕ್ಷಿಣ್ಯಮಾಡುವುದೆ ನೀನು ॥
ಪೆಣ್ಣಿಗೋಸುಗ ಬಂದಾರಣ್ಯದ ಕಪಿಗಳ ।
ಮಣ್ಣುಗೂಡಿಸುವೆ ನಾನು ॥ ೧೨-೨೧ ॥

ನೀತಿ ಧರ್ಮಾಧರ್ಮ ರೀತಿಗಲ್ಲವು ಕಾಲ ।
ಮಾತೇಕೆ ಬರಿದೆ ಈಗ ॥
ಈ ತಮ್ಮನಿಗೆ ಲಂಕಾನಾಥನಾಜ್ಞೆಯೆ ಗತಿ ।
ಘಾತಿಸುವೆನು ರಾಮನ ॥ ೧೨-೨೨ ॥

ಮುಸಲಕೇಶಿನಿಯೆಂಬ ಪೆಸರ ಮುದ್ಗರಕೀಗ ।
ಬಿಸಿನೆತ್ತರನು ಕುಡಿಸಿ ॥
ಅಸುರವೈರಿಗಳನ್ನು ದೆಸೆಗೆಡಿಸುತ ಲಂಕೆ ।
ಗಸದಳ ಕೀರ್ತಿ ತಹೆ ॥ ೧೨-೨೩ ॥

ವಚನ: ಲಂಕೇಶ್ವರಂ ಸಹೋದರನಿಂಗೆ ಆಶೀರ್ವದಿಸಿದನಿಂತು –

ಅರಿಭಯಂಕರನಾಗು ಪುರಕೆ ಮಂಗಳವಾಗು ।
ಧುರಧೀರ ವಿಜಯಿಯಾಗು ॥
ವರಮಾತೆ ಪಿತರಿಗೆ ಹರುಷದಾಯಕನಾಗು ।
ಚಿರಕೀರ್ತಿ ಬೆಳಗು ಪೋಗು ॥ ೧೨-೨೪ ॥

ವಚನ: ಇತ್ತಲಾ ಕೈಲಾಸದೊಳು ಶಿವ ಪಾರ್ವತಿಯರು
ಸಂವಾದಮಂ ಗೈದರು–

॥ **ಸಾಂಗತ್ಯ – ರೂಪಕ** ॥
ಪರಮಕೈಲಾಸಪರ್ವತಶಿಖರದಿ ಶಿವ ।
ಗಿರಿಜೆಯ ಕರೆದು ಸಂತಸದಿ ॥
ಬೆರಳ ಲಂಕೆಯಕಡೆತೋರುತ್ತ ಪೇಳಿದ ।
ನಿರುಪಮ ದೃಶ್ಯಸೌಂದರ್ಯ ॥ ೧೨–೨೫ ॥

ಕುವರ ಸ್ಕಂದನ ತಾಯೆ ಪರಿಕಿಸಾತನು ಕುಂಭ ।
ಶ್ರವಣನೆನ್ನುವ ಲಯಮುಖಿಯು ॥
ಅವನ ದೇಹವನು ಭೈರವನು ಪೊಕ್ಕಿರುವನು ।
ವಿವರ ಕಣ್ಣಿಗೆ ಹಬ್ಬವಹುದು ॥ ೧೨–೨೬ ॥

ಮೃಗಚರ್ಮಧರನೆ ಜಾನಕಿ ಮತ್ತೆ ರುಮೆಯ ತಾ ।
ಆಗೆ ಭಂಗ ಬರದಂತೆ ಸಲಹು ॥
ಮಗಳೂರ್ಮಿಳೆಯು ಮುಡಿದಿರುವ ಹೂವೆಂದಿಗೂ ।
ಮಿಗೆ ಬಾಡದೊಲು ಕರುಣಿಪುದು ॥ ೧೨–೨೭ ॥

ಸೀತೆ ನಿನ್ನಂಶ ದಾನವರೆಲ್ಲ ಭಕ್ತರು ।
ಮಾತೆ ಲೋಕಕೆ ರಾವಣನಿಗೆ ॥
ಸಾತಿಶಯದ ಸಿದ್ಧಿದಾತೆಯಾಗಲು ನೀನು ।
ಈ ತೆರದೊಳು ಮೋಹಿಸಿರುವೆ ॥ ೧೨–೨೮ ॥

ಲೋಕಭೀಕರವಾದ ರಣಕಾವ್ಯಕೃತಿ ರುದ್ರಾ ।
ಲೋಕನಕಿದು ರೌದ್ರರಸವು ॥
ಏಕಾನೇಕದ ಸೃಷ್ಟಿ ಸ್ಥಿತಿಲಯಕಾರಿಣಿ ।
ಆ ಕಡೆಗೊಮ್ಮೆ ನೋಡುವುದು ॥ ೧೨–೨೯ ॥

॥ **ವಾರ್ಧಕ** ॥
ಯುದ್ಧಸನ್ನಹವಾದ ಕುಂಭಕರ್ಣನು ತನ್ನೊ ।
ಆದ್ದ ಬಲವಿಕ್ರಿಯಾಮಹಿಮೆಯಿಂ ಬೆಳೆಬೆಳೆದು ।
ಮಧ್ಯರಣರಂಗದೊಳಗದ್ಭುತದ ಗಜರಥವನೊದ್ದು ಭೂರಥಕಿಳಿದನು ॥
ಮುದ್ಗರದ ಬಡಿತದಿಂ ಕಪಿಸೈನ್ಯ ಮೂರ್ಛೆಯಂ ।
ಪೊದ್ದುತಿರಲನಿತರೊಳು ಕ್ರುದ್ಧನಾಗುತ ಹನುಮ ।
ನದ್ರಿಯೊಂದನು ಕಿತ್ತು ಬಡಿದನಾತನ ಶಿರಕೆ ದಿಗ್ಗಜಗಳಲ್ಲಾಡಲು ॥ ೧೨–೩೦ ॥

ವಚನ: ಹನುಮ ಕುಂಭಕರ್ಣರೊಳಾಹವಂ
ಮೆರೆಯಿತೇನೆಂದೊರೆವೆನು –

॥ **ಶಂಕರಾಭರಣ – ಮಠ್ಯ** ॥
ಪಿಂದಕೊಮ್ಮೆ ಲಂಕಾಪುರಕೆ । ಬಂದು ಪೋದ ಸಹಸಿಯ್ಯೆಸೆ ।
ಅಂದು ನೋಡಲಿಲ್ಲ ನೀನು । ಪೊಂದಿದಾ ಬಲ ॥
ಇಂದು ಶೌರ್ಯದಿಂದ ಬೆಟ್ಟ । ವೊಂದನೆತ್ತಿ ಬಡಿದರೆನ್ನ ।
ಸಂದು ಮುರಿಯಲಾರೆ ನಿನ್ನ । ಕೊಂದು ತೀರ್ಚುವೆ ॥ ೧೨-೩೧ ॥

ನಿದ್ದೆಯಲ್ಲಿ ಬಿದ್ದು ಮಧ್ಯೆ । ಯೆದ್ದು ಬಂದವರನು ಬಲ್ಲೆ ।
ಮೆದ್ದುದೆಲ್ಲ ಹೊರಗೆ ಬಹುದು । ಗುದ್ದನೀಯಲು ॥
ಮುದ್ದೆಮಾಂಸ ಕಡಿದು ರಣದ । ಹದ್ದುಗಳಿಗೆ ಬಲಿಯನೀವೆ ।
ಮದ್ಯದಮಲನಿಳಿಪೆನೀಗ । ಯುದ್ಧಕೊದಗೆಲಾ ॥ ೧೨-೩೨ ॥

ವಚನ: ಅನಿತರೊಳಾ ಲಕ್ಷ್ಮಣಂ ರಣಾಂಗಣಕೆ ಆಗಮಿಸೆ
ಕುಂಭಕರ್ಣಂ ತಾನಿಂತೆಂದನು –

॥ **ಭೈರವಿ – ಏಕ** ॥
ಭಳರೆ ಜಟಾಧರ ಹುಡುಗ । ಸರಿ ।
ತಿಳಿವುದೆ ಪಿಡಿಯಲು ಖಡುಗ ॥
ಇಳೆಯೊಳಗಿದು ಬಾಲಿಶವೆ । ಕೊಳು ।
ಗುಳವಿದ್ಯೆಯು ಕೈವಶವೆ ॥ ೧೨-೩೩ ॥

ಮರಿಸಿಂಹಕೆ ಗಜವಿದಿರೆ । ಕ ।
ರ್ಬುರನಿಗೆ ಪಾಠವಿದರರೆ ॥
ದುರುಳ ಮದಾಂಧನೆ ರಣದಿ । ಶರ ।
ದುರಿಯನು ಸಹಿಸಿಕೊ ಕ್ಷಣದಿ ॥ ೧೨-೩೪ ॥

ರಾಮಾನುಜ ನೀನೆಳಸು । ರಘು ।
ರಾಮನನೀಗಲೆ ಕರೆಸು ॥
ತಾಮಸ ತಿಳಿಯೆಂದೆನುತ । ಮಾ ।
ಯಾಮಹಿಮನು ಮರೆಗೊಳುತ ॥ ೧೨-೩೫ ॥

ವಚನ: ಆಗಳಾ ವಿಭೀಷಣಂ ಶ್ರೀರಾಮಚಂದ್ರಂಗೆ
ಅಸುರಮಾಯೆಯಂ ಸೂಚಿಸಿದನು –

॥ **ಸೌರಾಷ್ಟ್ರ – ತ್ರಿವುಡೆ** ॥
ಅವಧರಿಸು ರಘುವರನೆ ದೈತ್ಯನು ।
ಶಿವನ ಭಕ್ತಾಗ್ರಣಿಯು ಲೋಕದೊ ।
ಳವನ ವರಬಲ ತಡೆಯಲಸದಳ ।
ಬವರ ಕಠಿನ ॥ ೧೨–೩೬ ॥

ಇನ್ನು ನೀನು ವಿಳಂಬಗೈಯದೆ ।
ಅಣ್ಣನೀತನ ಮಂತ್ರಶರದೊಳು ।
ಮಣ್ಣುಗೂಡಿಸದಿರಲು ಗೆಲುವಿಗೆ ।
ಬನ್ನವಹುದು ॥ ೧೨–೩೭ ॥

ಅಳುಕಬೇಡೈ ಶರಣ ಕರ್ಮವು ।
ತೊಳೆದುಪೋಗುವ ಕಾಲ ಬಂದರೆ ।
ಇಳೆಯೊಳಗೆ ಯಾರಿಹರು ರಾಕ್ಷಸ ।
ನಳಿವು ಸಹಜ ॥ ೧೨–೩೮ ॥

ಕೊಂಡನಾಕ್ಷಣ ಕರದೊಳಾ ಕೋ ।
ದಂಡವನು ರಿಪುಮಥನಕೋಸುಗ ।
ಚಂಡಭುಜಬಲ ನಡೆದು ಬರೆ ಖಳ ।
ಕಂಡನವನ ॥ ೧೨–೩೯ ॥

ವಚನ: ಶ್ರೀರಾಮಚಂದ್ರನಂ ಕಂಡು ಕುಂಭಶ್ರವಂ ನುಡಿಸಿದಂ
ಮೃದುವಚನದೆ –

॥ **ಹಂಸಧ್ವನಿ –ಆಟ** ॥
ಕೊನೆಗೂ ಸಿಕ್ಕಿದೆಯಾ ರಾಮ । ವಲ್ಕಲವುಟ್ಟ ।
ತನು ನೀಲಮೇಘಶ್ಯಾಮ ॥ ಪ ॥
ಜನಿಸಿದಾರಭ್ಯ ದರ್ಶನಕಾಗಿ ಮಡುಕಿದೆ ।
ರಣದೊಳೀದಿವಸ ಕಂಡೆ ॥ ಸಂತಸಗೊಂಡೆ ॥ ಅ. ಪ ॥

ಅನ್ಯರನೆದುರಿಸಲು । ಆಯುಧ ಬೇಕು ।
ನಿನ್ನ ನಿರೀಕ್ಷಿಸಲು ॥
ಪುಣ್ಯವೊಂದೇ ಸಾಕು ಇನ್ನು ನೋಯಿಸದಿರೆ ।
ಕಣ್ಣಿಗೆ ಕಾಂಬೆಯೆಂತು ॥ ಭಾಗ್ಯವು ಬಂತು ॥ ೧೨–೪೦ ॥

ವಚನ: ಶ್ರೀರಾಮಚಂದ್ರಮಂ ಕಿನಿಸಿನಿಂದೆ –

॥ ಭೈರವಿ – ಝಂಪೆ ॥
ಕೋದಂಡತುದಿಯಿಂದ । ಲಾ ದಯಾಂಬುಧಿ ನೂಂಕೆ ।
ಕ್ರೋಧಶಿಖಿಯಿಂದುರಿದ । ನಾ ದೈತ್ಯನಾಗ ॥ ೧೨–೪೧ ॥

ಮೇಲೆದ್ದು ಮೈಕೊಡಹಿ । ತೋಳು ಚಾಚುತ ನಭಕೆ ।
ಕಾಲಭೈರವನಂತೆ । ಲೀಲೆ ತೋರಿದನು ॥ ೧೨–೪೨ ॥

ಹರನೆಸೆದ ಶೂಲದಿಂ । ತೆರಳೆ ಭೈರವಶಕ್ತಿ ।
ಪರಮ ಶಕ್ತ್ಯಾಯುಧದಿ । ತರಿದ ಕಂಠವನು ॥ ೧೨–೪೩ ॥

ಮತ್ತೆ ಭೂಮಿಗೆ ಬೈಗು । ಕತ್ತಲೆಯನುಡಿಸಿತ್ತು ।
ಇತ್ತಂಡ ತೂರ್ಯಗಳು । ಬಿತ್ತಿರೆ ವಿರಾಮ ॥ ೧೨–೪೪ ॥

ವಚನ: ಇತ್ತ ಅಶೋಕವನದೊಳ್ ಸೀತಾದೇವಿ ತ್ರಿಜಟೆಯಂ ನುಡಿಸಿದಳ್–

॥ ಸೌರಾಷ್ಟ್ರ – ಆಟ ॥
ಕ್ಷೇಮವೆ ರಾಮಚಂದ್ರನಿಗೆ ಮೈದುನನಿಗೆ । ತ್ರಿಜಟೆ ಪೇಳೆ ॥ ಕಪಿ ।
ಸ್ತೋಮಕೇನಾಯ್ತು ಸಂದೇಹ ಬಾಧಿಸುತಿದೆ । ತ್ರಿಜಟೆ ಪೇಳೆ ॥
ಆ ಮಹಾ ಕುಂಭಕರ್ಣನ ವಧೆಯಾಯಿತೆ । ತ್ರಿಜಟೆ ಪೇಳೆ । ಯುದ್ಧ ।
ಭೂಮಿಯೊಳೇನಂಥ ಬಾನಿನೆತ್ತರ ಪೊಗೆ ॥ ತ್ರಿಜಟೆ ಪೇಳೆ ॥ ೧೨–೪೫ ॥

ವೀರಯೋಧರ ಚಿತೆಯಿಂದ ಏರಿದೆ ಧೂಮ । ದೇವಿ ಕೇಳೆ ॥ ಲಂಕಾ ।
ನಾರಿಯರಳಲ ಕೇಳುವರಿಲ್ಲದಾಯಿತೆ । ದೇವಿ ಕೇಳೆ ॥
ಘೋರಸಂಗರ ನೆತ್ತರೋಕುಳಿಯಾಯಿತು । ದೇವಿ ಕೇಳೆ ॥ ಪ್ರಾಣ ।
ಹಾರಿಪೋಯಿತು ನಿನ್ನೆ ರಾವಣಾನುಜನಿಗೆ ॥ ದೇವಿ ಕೇಳೆ ॥ ೧೨–೪೬ ॥

ಲೋಕಸಂಕಟಕೆಲ್ಲ ನಾನೆ ಕಾರಣಳಾದೆ । ತ್ರಿಜಟೆ ಪೇಳೆ ॥ ತಂದೆ ।
ಶೋಕಗರ್ಭದೊಳೆನ್ನ ಪಡೆದು ರಾಮನಿಗಿತ್ತ ॥ ತ್ರಿಜಟೆ ಪೇಳೆ ॥
ಸಾಕೇತದಿಂದ ಲಂಕೆಗೆ ದುಃಖದುಯ್ಯಾಲೆ । ತ್ರಿಜಟೆ ಪೇಳೆ ॥ ತೂಗು ।
ಹಾಕಿ ಹೆಣ್ಣುಗಳ ಮಂಗಳಸೂತ್ರ ಹರಿದನು ॥ ತ್ರಿಜಟೆ ಪೇಳೆ ॥ ೧೨-೪೭ ॥

॥ **ಭಾಮಿನಿ** ॥
ವಿಧಿಯ ಹಸ್ತದ ಬೊಂಬೆಗಳು ಕ ।
ರ್ಮದ ಫಲವನುಣಬೇಕು ಲಾಲಿಸು ।
ಮುದದೊಳೀ ಮಾಂಗಲ್ಯದಾಣೆಯನಿಡುತ ಪೇಳುವೆನು ॥
ಕದನಗಲಿ ಬ್ರಹ್ಮಾಸ್ತ್ರ ಪೂಡುತ ।
ಲದುಭುತದ ಸಂಗ್ರಾಮ ನಡೆಯಲಿ ।
ವಿಧವೆತನ ನಿನಗೊದಗದಿರಲೆಂದೆನುತ ಪರಸುವೆನು ॥ ೧೨-೪೮ ॥

ವಚನ: ಅನಿತರೊಳಲ್ಲಿಗೆ ಅನಲಾಕುಮಾರಿ ಐತಂದಳ್ –

॥ **ಕೇದಾರಗೌಳ –ಆಟ** ॥
ದೇವಿ ನಿನ್ನೆದೆಗುದಿಯನು ತಣಿಸುವರೆ ಇ ।
ನ್ನಾವ ಕಂಬನಿಗೆ ಸಾಧ್ಯ ॥
ಹೂವಿನ ಚೆಂಡೆಂದು ಕರೆದ ದೊಡ್ಡಯ್ಯನು ।
ಸಾವಿಗೆ ಶರಣಾದನು ॥ ೧೨-೪೯ ॥

ಆದುದಾಯಿತು ತಾಯೆ ಗೋಳು ನಿಲ್ಲುವುದೇನು ।
ಕಾದಿದೆ ಘೋರಯುದ್ಧ ॥
ರೋದಿಸುತಿಹ ಪಿತನನು ಸಂತೈಸುತ ಮೇಘ ।
ನಾದ ಶಪಥಗೊಂಡನು ॥ ೧೨-೫೦ ॥

ಮಾರಣಾಧ್ವರದಿಂದ ರಾಮಸೇನೆಯನು ಸಂ ।
ಹಾರಗೈಯುವನವನು ॥
ಧಾರುಣಿಗಿದು ಸರ್ವನಾಶಕಾರ್ಯದ ಬೀಜ ।
ಮೀರುವುದೆಂತಿದನು ॥ ೧೨-೫೧ ॥

ಚಂದಿರನಖಿ ಮಂಡೋದರಿತಾಯಿ ತಾರಾಕ್ಷಿ ।
ಯೊಂದಿಗೆ ನಾನು ಸೇರಿ ॥

ಇಂದು ಪುರುಷಕಾರ್ಯದಂದಗೆಡಿಪುದೆಂದು ।
ಬಂದೆನು ಸಮ್ಮತಿಸು ॥ ೧೨-೫೨ ॥

ವಚನ: ಸೀತಾಮಾತೆ ಮತ್ತೆ ತಾನಿಂತೆಂದಳು –

॥ **ಮಧ್ಯಮಾವತಿ – ತ್ರಿವುಡೆ** ॥
ಅನಲೆ ನಿನ್ನಯ ಪುಟ್ಟಹೃದಯದೊ ।
ಳೆನಿತು ಸಾಹಸ ಶೌರ್ಯವು ॥
ಎನಗೆ ತಪಸಿನ ಶಕ್ತಿ ಮಾತ್ರವೆ ।
ನಿನಗೆ ಹರಕೆ ಸಹಾಯವು ॥ ೧೨-೫೩ ॥

ಬೇಸರಿಸದಿರು ಸುರಪಜಿತುವಿನ ।
ಆಸೆ ಫಲಿಸುವ ಮುನ್ನವೆ ॥
ಬೀಸುವರು ವಿಘ್ನವನು ಕಪಿಗಳು ।
ಘಾಸಿಗೊಳುವುದು ಜನ್ನವೆ ॥ ೧೨-೫೪ ॥

ಪಲ್ಲವಾಧರೆ ಪರಮಧರ್ಮವೆ ।
ಗೆಲ್ಲುವುದು ಬಿಡು ಸಂಶಯ ॥
ಕೊಲ್ಲುವುದು ಕಾಯುವುದು ನಮ್ಮೊಳ ।
ಗಿಲ್ಲ ದೈವದ ನಿಶ್ಚಯ ॥ ೧೨-೫೫ ॥

ವಚನ: ಅನಲಾಕುಮಾರಿ ಸೀತೆಗಿಂತೆಂದಳು –

ನಿನ್ನ ತೆರ ಹದಿಬದೆಯ ಕಾಣದೆ ।
ತನ್ನ ಮರೆತನು ದಶಶಿರ ॥
ಇನ್ನು ಬುದ್ಧಿಯ ಪೇಳಿ ಕರುಣಿಸು ।
ಜನ್ಮದಾತೆಯ ಕನಿಕರ ॥ ೧೨-೫೬ ॥

ವಚನ: ಇತ್ತಲಾ ಅತಿಕಾಯ ತಂದೆಯಾಣತಿ ಪಡೆದು ರಣಕಣಕೆ
ಮುನ್ನುಗ್ಗಿದಂ –

॥ **ಕಾಂಭೋದಿ – ಝಂಪೆ** ॥
ಕನಕಲಂಕಾದುರ್ಗವನು ರಕ್ಷಿಸುವ ಕತದಿ ।
ತನುಜನತಿಕಾಯ ರಾವಣನಾಜ್ಞೆಯಿಂದ ॥
ಜನನಿಯಾ ಧಾನ್ಯಮಾಲಿನಿಯನ್ನು ಮನದೊಳಗೆ ।
ನೆನೆಯುತ್ತ ರಣಕೆ ತಾನನುವಾದನಾಗ ॥ ೧೨–೫೭ ॥

ಮನವೊಪ್ಪದಿದ್ದರೂ ತನುವನೊಪ್ಪಿಸಿ ಪಿತಗೆ ।
ಘನತ್ಯಾಗಮೂರ್ತಿ ತನ್ನನು ಪೆತ್ತಳದಕೆ ॥
ಸನುಮತದೊಳೀ ದೇಹವನು ನೀಗಿದರೆ ಧುರದಿ ।
ತನಗೆ ತಾಯಿಗೆ ಶಾಂತಿಯೆನುತ ಮಾನಸದಿ ॥ ೧೨–೫೮ ॥

ಬಿದಿರಮೆಳೆ ಕಿಡಿಸೂಸಿ ಭುಗಿಲೇಳುವಂದದಲಿ ।
ಕದನಚೌಪಟಮಲ್ಲನತಿಕಾಯ ಭರದಿ ॥
ರುಧಿರ ಕುಂಭ ನಿಕುಂಭ ಮತ್ತಶಿರ ಮಕರಾಕ್ಷ ।
ಮೊದಲಾದ ದೈತ್ಯರಿಂದೊದಗಲನಿತರೊಳು ॥ ೧೨–೫೯ ॥

ವಚನ: ಯುದ್ಧರಂಗದೊಳ್ ಅತಿಕಾಯನಾ ಸೌಮಿತ್ರಿಯಂ ನುಡಿಸಿದನು–

॥ **ನಾದನಾಮಕ್ರಿಯೆ – ಆಟ** ॥
ತ್ರಿದಶದಲ್ಲಣನ ಸಂಭವ ನಾನು । ಕಾದಿ ।
ಬದುಕುವಾಸೆಯು ನಿನಗಿಹುದೇನು ॥
ಮದುವೆಯಾಗುತ್ತೆ ಮಾನಿನಿಯನ್ನು । ಸಾಕೇ ।
ತದಿ ಬಿಟ್ಟ ನೀನು ಯೋಚಿಸುವುದಿನ್ನು ॥ ೧೨–೬೦ ॥

ನಿನ್ನ ಪಿತನಿಗೆಷ್ಟು ಸತಿಯರು । ನಿತ್ಯ ।
ಕಣ್ಣೀರಿನೊಳು ಕೈಯ ತೊಳೆವರು ॥
ಎನ್ನ ವಂಶದ ಚಿಂತೆ ಬೇಡೆಲೊ । ಕಂಠ ।
ವನ್ನು ಕತ್ತರಿಸುವೆ ನೋಡೆಲೊ ॥ ೧೨–೬೧ ॥

॥ **ಮಾರವಿ – ಏಕ** ॥
ಕರದೊಳು ಚಾಪವ ಧರಿಸಿದ ಮಾತ್ರಕೆ ।
ಧುರದೊಳು ಗೆಲುವಹುದೆ ॥
ತರಳನೆ ನಿನ್ನನು ಪರಿಕಿಪೆನೆನ್ನುತ ।
ಸುರಿದನು ಶರಧಾರೆ ॥ ೧೨–೬೨ ॥

ದಂಡಧಾರಿಯೆಡೆ ಕೊಂಡುಪೋಗುತಿಹ ।
ದಂಡಿಗೆಯೇರೆಂದು ॥
ಮಂಡಲಯುದ್ಧದಿ ದಿಂಡುರುಳಿಸಿ ಶಿರ ।
ಖಂಡಿಸಿದನು ಶರದಿ ॥ ೧೨–೬೩ ॥

ವಚನ: ಅತಿಕಾಯನಳಿದಾ ವಾರ್ತೆಯಂ ತಿಳಿದು ಶಕ್ರಾರಿಯಾ ನಿಶಿಯೊಳು–

॥ **ಕಾಂಭೋದಿ – ಝಂಪೆ** ॥
ತಂದೆಯಾಣತಿ ಪಡೆದು ಇಂದ್ರಜಿತು ರಾತ್ರೆಯೊಳು ।
ಬಂದು ಮಾಯೆಯೊಳಾ ನಿಕುಂಭಿಳೆಯ ಸೇರಿ ॥
ಮುಂದೆ ಮಾರಣಕ್ರತುವಿಗೆಂದು ಸನ್ನಹದೊಳಿರೆ ।
ನಿಂದಿರ್ದರಾ ದೈತ್ಯವೃಂದ ಕಾವಲಿಗೆ ॥ ೧೨–೬೪ ॥

ಇಚ್ಛಾಗ್ನಿಯಂ ಬಲಿದು ಮೇಷಿಯೊಂದನು ತರಿದು ।
ಕೆಚ್ಚಿನಿಂ ಕೆನ್ನೀರನಭಿಷೇಕ ಗೈದು ॥
ಉಚ್ಚರಿಸಲಾಥರ್ವವೇದಮಂತ್ರಗಳನ್ನು ।
ಕಿಚ್ಚಿನೊಳು ಮಾತೃಕಾಶಕ್ತಿ ಪ್ರಜ್ವಲಿಸೆ ॥ ೧೨–೬೫ ॥

ವಚನ: ಮಾರಣಾಧ್ವರಶಾಲೆಯಂ ಪುಡುಕುತ್ತ ವಿಭೀಷಣಂ ಹನುಮ
ಲಕ್ಷ್ಮಣರೊಂದಿಗೆ ಬಂದನು –

॥ **ಭಾಮಿನಿ** ॥
ವರ ವಿಭೀಷಣ ಲಕ್ಷ್ಮಣಾಂಕನ ।
ವೆರಸಿ ಬಂದು ನಿಕುಂಭಿಳಾಧ್ವರ ।
ಪೊರಗಿನಾವರಣವನು ತೋರಿಸಿ ನುಡಿದನಿಂತೆಂದು ॥
ಸ್ಮರಿಸಿ ರಾಮನ ಪದವನೀಗಲೆ ।
ಮರುತಸಂಭವನೊಡನೆ ಪುಗುವುದು ।
ದುರುಳನೆಸಗಿದ ವಹ್ನಿಮಂಡಲದೊಳಗೆ ಧೈರ್ಯದೊಳು ॥ ೧೨–೬೬ ॥

॥ **ಮಧ್ಯಮಾವತಿ – ತ್ರಿವುಡೆ** ॥
ಶರಣನೆಂದುದ ಕೇಳುತಾಗಲೆ ।
ಪರಮನಾಮವ ನೆನೆದು ಲಕ್ಷ್ಮಣ ।
ಉರಿವ ಬೆಂಕಿಯ ಚಕ್ರಮಧ್ಯಕೆ ।
ಚರಣವಿಡಲೇನೆಂಬೆನು ॥ ೧೨–೬೭ ॥

ಒಡನೆಯಾ ಬ್ರಹ್ಮಾಂಡಕಟಹವೆ ।
ಒಡೆದು ಪೋದಂದದಿ ಮಹಾರವ ।
ಗುಡುಗಿ ರಾಮಾನುಜ ಶರೀರವು ।
ಸಿಡಿದು ಕೆಡೆದಿರೆ ಧರಣಿಗೆ ॥ ೧೨-೩೮ ॥

ಕಪ್ಪುಕಟ್ಟಿದ ಮೈಯಗಾಯವ ।
ನೊಪ್ಪಗೈದು ಸುಷೇಣ ಭೇಷಜ ।
ವಪ್ಪ ಸಂಜೀವಿನಿಯು ಹಿಮಗಿರಿ ।
ತಪ್ಪಲೊಳಗಿಹುದೆಂದನು ॥ ೧೨-೩೯ ॥

ದೂರಮಿಹ ಕೈಲಾಸಪರ್ವತ ।
ವೇರಿ ಔಷಧಲತೆಯನೀಗಲೆ ।
ಯಾರು ತಹರೆಂದೆನುತ ಕೇಳೆ ಸ ।
ಮೀರನಾತ್ಮಜನೆದ್ದನು ॥ ೧೨-೨೦ ॥

॥ **ಕೇದಾರಗೌಳ –ಆಟ** ॥
ಈಗ ಔಷಧಿಲತೆಗಾಗಿ ಪೋಗುವೆ ನಾನು ।
ಬೇಗದಿ ಮರಳುವೆನು ॥
ಆಗಸವನು ಏರಿ ಸಾಗಿ ಸಂಜೀವಿನಿ ।
ಯಾ ಗಿರಿಯನೆ ತಹೆನು ॥ ೧೨-೨೧ ॥

ವಚನ: ಆಗ ಸುಷೇಣಂ ಹನುಮನಿಗೆ ಕಿವಿಮಾತನೊಂದನೊರೆದಂ –

ಅನ್ನಮಯದಿ ಸಂಚರಿಸಲೊಂದು ದಿನ ಪ್ರಾಣ ।
ಕಿನ್ನು ಮುಹೂರ್ತ ಬೇಕು ॥
ಸನ್ಮನೋಮಯಮಾರ್ಗ ಪಿಡಿದರೆ ಶೀಘ್ರದಿ ।
ಧನ್ಯತೆ ನಿನಗಹುದು ॥ ೧೨-೨೨ ॥

॥ **ಭಾಮಿನಿ** ॥
ಯೋಗಬಲದೊಳಗಾಂಜನೇಯನು ।
ಸಾಗಿ ಭೇಷಜಗಿರಿಯೊಳಿಳಿದನು ।
ರೋಗಹರಲತೆಯನ್ನು ಪರಿಮಳಪಥದಿ ಪುಡುಕಿದನು ॥

ನಾಗಭೂಷಣನರಸಿ ಮಂಗಳೆ ।
ನೀಗುವುದು ಸಂಕಷ್ಟವೆನ್ನುತ ।
ಬಾಗಿ ಸಂಜೀವಿನಿಭವಾನಿಯ ಕಂಡು ನುತಿಸಿದನು ॥ ೧೨-೭೩ ॥

॥ **ಕೇದಾರಗೌಳ – ಝಂಪೆ** ॥
ಉತ್ತುಂಗ ಗಿರಿವಾಸಿನಿ । ಸಸ್ಯತನು ।
ವೆತ್ತಿರುವ ಕಾತ್ಯಾಯನಿ ॥
ಮತ್ತೀಗ ಬಹುದು ಜೊತೆಗೆ । ಎನ್ನ ಕೃತ ।
ಕೃತ್ಯನೆನಿಸವ್ವ ಧರೆಗೆ ॥ ೧೨-೭೪ ॥

ಸರ್ವನಿಯಮಾತೀತೆಯೆ । ಕರುಣಿಸೌ ।
ಶರ್ವಾಣಿ ಜಗನ್ಮಾತೆಯೆ ॥
ಸರ್ವಮೃತ್ಯುನಿವಾರಿಣಿ । ಕೈಲಾಸ ।
ಪರ್ವತದ ಸಂಜೀವಿನಿ ॥ ೧೨-೭೫ ॥

ರಾಮಸೋದರಗೆ ಜೀವ । ಪಾಲಿಸುತ ।
ಕ್ಷೇಮಕೊಡು ಕಳೆದು ನೋವ ॥
ಈ ಮನದ ಭಕ್ತಿಗೊಲಿದು । ಚೈತನ್ಯ ।
ಭಾಮಿನಿಯೆ ಬಾರೆ ನಲಿದು ॥ ೧೨-೭೬ ॥

॥ **ದ್ವಿಪದಿ** ॥
ಕರಪುಟಾಂಜಲಿಗೆ ಸಂಜೀವಿನಿಯ ಲತೆಯು ।
ಪರಮಪ್ರಸಾದದೊಲು ಜಗುಳಲಚ್ಚರಿಯು ॥ ೧೨-೭೭ ॥

ಓಷಧಾಶೀರ್ವಾದದಿಂದವನು ಮರಳೆ ।
ತೋಷದೊಳು ವಾನರಾದಿಗಳ ಮೊಗವರಳೆ ॥ ೧೨-೭೮ ॥

ಆ ಸುಷೇಣನು ಮಂತ್ರದಿಂದ ಪ್ರೋಕ್ಷಿಸಲು ।
ಭಾಸುರಾಂಗಗೆ ಪ್ರಾಣಶಕ್ತಿ ಮೂಡಿರಲು ॥ ೧೨-೭೯ ॥

ವಚನ: ಸೌಮಿತ್ರಿ ನಿದ್ದೆಯಿಂದೆಚ್ಚತ್ತವನಂತೆ ಎದ್ದು ಕುಳಿತು
ಊರ್ಮಿಳೆಯಂ ಕರೆದ ಪರಿ ಏನೆಂಬೆನು –

॥ **ಶಂಕರಾಭರಣ – ತ್ರಿವುಡೆ** ॥
ಕೂರ್ಮೆಯಿಂದಲಿ ಬಂದೆಯೇನೆಲೆ ।
ಊರ್ಮಿಳಾ ಸತಿ ಊರ್ಮಿಳಾ ॥
ಕಾರ್ಮುಕದ ಸಿದ್ಧಿಯನು ತೋರುವೆ ।
ಊರ್ಮಿಳಾ ಸತಿ ಊರ್ಮಿಳಾ ॥ ೧೨–೮೦ ॥

ನಾರುಡೆಯನುಟ್ಟಿಹ ತಪಸ್ವಿನಿ ।
ಊರ್ಮಿಳಾ ಸತಿ ಊರ್ಮಿಳಾ ॥
ವೀರರಕ್ಷಾಕವಚ ತೊಡಿಸಿದೆ ।
ಊರ್ಮಿಳಾ ಸತಿ ಊರ್ಮಿಳಾ ॥ ೧೨–೮೧ ॥

ಎಂದು ಭಾವೋನ್ಮಾದದಿಂದಲಿ ।
ಕಣ್ದೆರೆದು ಕುಣಿಯುತ್ತಿರೆ ॥
ಗಂಧವಾಹಾತ್ಮಜ ಸುಮಿತ್ರಾ ।
ನಂದನನ ಸಂತೈಸಿರೆ ॥ ೧೨–೮೨ ॥

ಹಿಂದೆ ನಡೆದುದ ನೆನೆದು ಲಕ್ಷ್ಮಣ ।
ನಂದು ಧನುಶರ ಪಿಡಿಯುತ ॥
ಇಂದ್ರಜಿತುವಿನ ಕೂಟ ಕೆಡಿಸುವೆ ।
ನೆಂದು ರೌದ್ರವ ಸೂಸುತ ॥ ೧೨–೮೩ ॥

॥ **ಸಾಂಗತ್ಯ – ರೂಪಕ** ॥
ಮಾರುತಿಯೊಡನೆ ಸೌಮಿತ್ರಿ ಮುನ್ನಡೆಯುತ್ತ ।
ಮಾರಣಾಧ್ವರದ ಮಂಟಪಕೆ ॥
ದೂರದಿಂದಲೆ ಮಾಯಾವಿದ್ಯಾಪ್ರವೀಣನ ।
ಘೋರರೂಪವನು ನೋಡಿದನು ॥ ೧೨–೮೪ ॥

ಈ ನಿಶಾಚರ ಸಿದ್ಧಿವಾಜಿಯೇರುವ ಮುನ್ನ ।
ಪ್ರಾಣಹಾನಿಯನೆಸಗುವುದು ॥
ನೀನೀಗ ದಿವ್ಯಮಾರ್ಗಣವನ್ನು ಪೂಡೆಂದು ।
ವಾನರೋತ್ತಮನು ಪೇಳಿದನು ॥ ೧೨–೮೫ ॥

ಇಂದ್ರಪ್ರೇರಣೆಯಿಂದ ಬಾನುಲಿಯೊಂದು ತಾ ।
ನೆಂದಿತು ಲಕ್ಷ್ಮಣಾಂಕನಿಗೆ ॥
ಐಂದ್ರಾಸ್ತ್ರವನು ತಡಮಾಡದೆ ಪೂಡುತ್ತ ।
ಇಂದ್ರವೈರಿಯನು ಕೊಲ್ಲೆಂದು ॥ ೧೨-೮೬ ॥

ಗಗನದೇವತೆಗೆ ಕೈಮುಗಿಯುತ್ತ ಐಂದ್ರಾಸ್ತ್ರ ।
ತೆಗೆದೆಚ್ಚನಾಗ ಸೌಮಿತ್ರಿ ॥
ಪಗೆಯ ಕಂಠವ ತರಿದೊಗೆಯೆ ತತ್‌ಕ್ಷಣದಲ್ಲಿ ।
ಮುಗಿಲಬಿಂದುಗಳುರುಳದವು ॥ ೧೨-೮೭ ॥

॥ **ಕಂದ** ॥
ಅತಿಕಾಯನ ಮರಣವ ಕೇ ।
ಳ್ದತಿಚಿಂತಾಭರದಿ ಧಾನ್ಯಮಾಲಿನಿ ಮೂರ್ಛಾ ॥
ಸ್ಥಿತಿಯಂ ತಾಳ್ದಿರೆ ರಾವಣ ।
ಸತಿಯಂ ಸಂತವಿಸೆ ಸುಯ್ದು ತಾಂ ಕಣ್ದೆರೆದಳ್ ॥ ೧೨-೮೮ ॥

॥ **ಕೇದಾರಗೌಳ – ಆಟ** ॥
ಮುನಿಯಬಾರದು ಸ್ವಾಮಿ ತನು ಬಳಲಿದೆ ನಿಜ ।
ಮನದೊಳು ರೋಷವಿತ್ತು ॥
ದನುಜೇಶ ನಿನಗೆ ಮೈಯನು ತೆತ್ತೆನಲ್ಲದೆ ।
ಮನ ಸಮರ್ಪಿಸಲಿಲ್ಲವು ॥ ೧೨-೮೯ ॥

ಜಗದೊಡೆಯನು ನಮ್ಮ ಬಗೆಯ ಕಾಣುವನೈಸೆ ।
ಮಿಗೆ ಮೈಯ ಪರಿಕಿಪನೆ ॥
ಮುಗುದೆ ಜಾನಕಿಗೆ ಮೈಲಿಗೆಯಾಯ್ತೆ ನಿನ್ನಿಂದ ।
ಮುಗಿವೆ ಕೈಗಳ ಕಾಂತನೆ ॥ ೧೨-೯೦ ॥

ಮುಡಿದಿರುವೆನು ರಾಮಮಡದಿಯ ಪದಧೂಳಿ ।
ಒಡೆದು ಪೋಯಿತು ಕನಸು ॥
ಕಡೆಗೂ ಪ್ರಾರಬ್ಧವಿಂಗಡಿಸಿತೆಮ್ಮನು ಬಿಡು ।
ಗಡೆಗೆ ವಂದಿಪೆ ಸೀತೆಗೆ ॥ ೧೨-೯೧ ॥

॥ **ಭಾಮಿನಿ** ॥
ವನಿತೆ ಮೋಕ್ಷದ ಪಥಕೆ ನಡೆಯಲು ।
ದನುಜನೆಣಿಸಿದ ಮನದೊಳೀ ಜೀ ।
ವನವು ಕಳ್ಳನು ಪೇಳ್ದ ಸುಳ್ಳಿನ ಸಂತೆ ತಾನೆಂದು ॥
ಅನಿತರೊಳಗೈತಂದ ದಾಸಿಯು ।
ವನಜಮುಖಿ ತಾರಾಕ್ಷಿ ದುಃಖದೊ ।
ಆನಿಯನೊಂದಿಗೆ ಚಿತೆಯನೇರುವಳೆಂದು ತಿಳುಹಿದಳು ॥ ೧೨-೯೨ ॥

॥ **ಸೌರಾಷ್ಟ್ರ – ತ್ರಿವುಡೆ** ॥
ತಡೆಯದಾಕ್ಷಣ ನಿಲದೆ ರಾವಣ ।
ನಡೆದನಲ್ಲಿಗೆ ಶೋಕದಗ್ನಿಗೆ ।
ಕೆಡೆದ ಸೊಸೆಯನು ಕಂಡು ಕಂಬನಿ ।
ಮಿಡಿದನಾಗ ॥ ೧೨-೯೩ ॥

ಅಳದಿರೌ ಕಣ್ಣೀರಕಾಲುವೆ ।
ಮುಳುಗಿಸುವುದೀ ಕನಕಲಂಕೆಯ ।
ಬೆಳಗಿಸುವುದೀ ಕುಲದ ಕುಡಿಯನು ।
ಒಲವಿನಿಂದೆ ॥ ೧೨-೯೪ ॥

ಪಸುಳೆ ವಜ್ರಾರಿಯನು ಮುದ್ದಿಸಿ ।
ಸೊಸೆಯ ಸಂತೈಸುತ್ತ ರಣಕಣ ।
ದೆಸುಗೆಯನು ಪರಿಕಿಸಲು ಖಳ ಧಾ ।
ವಿಸಿದನಾಗ ॥ ೧೨-೯೫ ॥

॥ **ಕಂದ** ॥
ಹತಕುಂಭಶ್ರವಣಾಮರ ।
ಜಿತುಸಂಹಾರಂ ನಿಕುಂಭಿಳಾಧ್ವರಭಂಗಂ ॥
ಅತಿಕಾಯವಧಾಪ್ರಕರಣ ।
ಕಥನಾಮೃತ ಯಕ್ಷಗಾನದ ಮಹಾಕಾವ್ಯಂ ॥ ೧೨-೯೬ ॥

***

ಯಕ್ಷಗಾನ ಮಹಾಕಾವ್ಯ

ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೧೩

ದಶಾನನ ಸ್ವಪ್ನಸಿದ್ಧಿ

ಪಾತ್ರಪಟಲ

ಶ್ರೀರಾಮ

ಲಕ್ಷ್ಮಣ

ರಾವಣ

ಚಂದ್ರನಖಿ

ಸೀತಾದೇವಿ

ತ್ರಿಜಟೆ

ದೇವೇಂದ್ರ

ಬ್ರಹ್ಮದೇವ

ಹನುಮಂತ

ವಹ್ನಿ

ಪರಶಿವ

ಮಂಡೋದರಿ

ವಿಭೀಷಣ

ಮಾತಳಿ

ದಶಾನನ ಸ್ವಪ್ನಸಿದ್ಧಿ

॥ **ಭೈರವಿ– ಝಂಪೆ** ॥
ಸೋಲುಗಳ ಸರಣಿಯಿಂ । ದಾಲೋಚಿಸುತ ರಣವ ।
ಮೂಲಬಲಮಂ ನೆರಹಿ । ಮೇಲೆ ದಶಶಿರನು ॥ ೧೩–೧ ॥

ನಾಳೆ ಸೂರ್ಯೋದಯದ । ವೇಳೆಯೊಳು ರಾಮನಾ ।
ಪಾಳೆಯವ ಬಲಿಗೊಂಬ । ಕಾಳೆಗವ ನೆನೆದ ॥ ೧೩–೨ ॥

ಇರುಳರ್ಧ ಕಳೆದಿರಲು । ತರುಣಿಮಣಿ ಚಂದ್ರನಖಿ ।
ಕರೆಯುತ್ತಲಗ್ರಜನ । ಪೊರೆಗೆ ಬಂದಿರಲು ॥ ೧೩–೩ ॥

ವಚನ: ತಂಗೆ ಚಂದ್ರನಖಿಯಂ ದಶಶಿರಂ ಇಂತು ನುಡಿಸಿದನು –

॥ **ಕಾಪಿ – ಅಟ** ॥
ಏನಿದು ಮಮ ಸಹೋದರಿಯೆ । ಸುಂದ ।
ರಾನನ ಸೊರಗಿದುದರಿಯೆ ॥
ಈ ನಡು ನಿಶಿಯಲ್ಲಿ । ದೀನಭಾವದಿ ಬಂದು ।
ದೇನೆಂದು ಪೇಳೆಲೆ । ದಾನವೇಶ್ವರಿಯೆ ॥ ೧೩–೪ ॥

ಪಾತಕ ತೊಳೆಯಲು ಬಂದೆ । ಎನ್ನ ।
ಘಾತಕತನವ ಕೇಳೆಂದೆ ॥
ಸೀತೆಯ ತರಲು ದು । ರ್ನೀತಿಯ ಪೇಳದೆ ।
ಈ ತೆರ ವಿಧಿಯಾಯ್ತೆ । ಖಾತಿಯಿದೊಂದೆ ॥ ೧೩–೫ ॥

ಬೆಂಕಿಯಾರಿಸಲೀಗ ಬಹುದೆ । ನಮ್ಮ ।
ಲಂಕೆಯೆಲ್ಲವು ದಹಿಸುತಿದೆ ॥
ಅಂಕೆಮೀರಿದ ಕಾರ್ಯ । ಶಂಕರನಿಗೆ ಸಾಧ್ಯ ।
ಶಂಕೆಯೇತಕೆ ಸಾವಿ । ಗಂಕುಶಮಿಹುದೆ ॥ ೧೩–೬ ॥

ಸತಿಯ ರಾಮನಿಗೊಪ್ಪಿಸುವುದು । ಸೀತಾ ।
ಪತಿಯಲ್ಲಿ ಕ್ಷಮೆಯ ಬೇಡುವುದು ॥
ಅತುಳವಿಕ್ರಮದಹಂ । ಕೃತಿಗೆ ಶೋಭಿಸದಿರೆ ।
ಹಿತ ಸಹೋದರಿಗಭಿ । ಮತವ ಪೇಳುವುದು ॥ ೧೩-೭ ॥

॥ **ವಾರ್ಧಕ** ॥
ಮೂರುಲೋಕದೊಳೆನಗೆ ಸೋಲದವರಿಲ್ಲೆಂದು ।
ನಾರಿಯರ ಪಾತಿವ್ರತ್ಯದ ಮಹಿಮೆ ಸುಳ್ಳೆಂದು ।
ಮಾರೀಚನೊಡನೆ ಪಂಥವಗೈದು ಪುಡುಕಿದೆನು ದೇಶದೇಶಂಗಳಲ್ಲಿ ॥
ಪಾರಮಾರ್ಥವ ಪರೀಕ್ಷಿಸಲೆಂದು ತಂದಿರ್ಪೆ ।
ನಾ ರಾಮಸತಿಯನ್ನು ಸರ್ವಗರ್ವವ ಮುರಿದ ।
ಕಾರಣದೊಳವಳ ಪತಿಯನೆ ಧುರದಿ ಸೆರೆಪಿಡಿದು ಕಪ್ಪಮಂ
ಕೊಡುವೆನೆಂದ ॥ ೧೩-೮ ॥

॥ **ಮಧುಮಾಧವಿ – ತ್ರಿವುಡೆ** ॥
ನೀ ಮಹಾಕವಿಯೈಸೆ ಲೋಕದ ।
ಭೂಮಿಕೆಯೊಳಾಕೃತಿಯ ಸೃಜಿಸುವ ।
ಕೋಮಲದ ಕೌಶಲದ ಶಿಲ್ಪಿ ಲ ।
ಲಾಮ ವಂದನೆಯೆಂದಳು ॥ ೧೩-೯ ॥

ಮಗನ ಮರಣದ ವಾರ್ತೆಯಿಂದಲಿ ।
ದುಗುಡವಾಂತಳು ಮಯಕುಮಾರಿಯು ।
ಬಗೆಯ ಸಂತೈಸೆನುತ ಸಹಜೆಯ ।
ನೆಗಹಿ ಕಳುಹಿದನಾಗಲೆ ॥ ೧೩-೧೦ ॥

ನೆರಹಿ ತನ್ನಯ ಮೂಲಬಲವನು ।
ಸರಸಿಜಾಸನ ವರಬಲದಿ ತಾ ।
ನಿರುವೆನೆಲ್ಲರೊಳೆಂದು ಪೇಳದ ।
ಗರುವದಿಂದಾ ದಶಶಿರ ॥ ೧೩-೧೧ ॥

ಮತ್ತೆ ಸೀತೆಯ ಸತ್ತ್ವನೋಳ್ಪೆನೆ ।
ನುತ್ತ ವನದೆಡೆ ಬರಲು ಚಂಡಿಕೆ ।
ನೆತ್ತರಾಟದೊಳಿರುವುದನು ಕಾ ।
ಣುತ್ತ ಭಯದೊಳು ಮುಳುಗಿದ ॥ ೧೩-೧೨ ॥

ರುಂಡಮುಂಡದ ಮಾಲೆಮಧ್ಯದಿ ।
ಕಂಡನಾಗಲೆ ತನ್ನ ಶಿರವನು ।
ಚಂಡಿಯನು ಕರೆತಂದ ತಾನೇ ।
ಭಂಡನೆನ್ನುತ ಮರಳಿದ ॥ ೧೩-೧೩ ॥

ವಚನ: ಅಶೋಕವನದೊಳ್ ಸೀತಾದೇವಿ ತ್ರಿಜಟೆಯಂ
ವಿಚಾರಿಸಿದಳೆಂತೆನೆ –

॥ **ಸಾಂಗತ್ಯ – ರೂಪಕ** ॥
ಅಡಿಗೆರಗಿದ ತ್ರಿಜಟೆಯ ಕರಪಿಡಿದೆತ್ತಿ ।
ಮುಡಿಯ ನೇವರಿಸಿ ಜಾನಕಿಯು ॥
ನಡುಗಬೇಡೆಲೆ ಭೀತಿಬಿಡುಯೆಂದು ಸಂತೈಸೆ ।
ನುಡಿದಳಾಕ್ಷಣದಿ ಕಂಡುದನು ॥ ೧೩-೧೪ ॥

ಬಂದು ರಾವಣ ನಿನ್ನ ಕಂಡು ಪಿಂತಿರುಗಿದ ।
ಮುಂದೇನು ತಿಳಿಯೆ ಯೋಗಿನಿಯೆ ॥
ಇಂದೆನ್ನ ಮಾತೆ ನೀನಾದಿಶಕ್ತಿಯು ಮಾಯೆ ।
ಎಂದು ಸಂಸ್ತುತಿಸಿ ಪಾಡಿದಳು ॥ ೧೩-೧೫ ॥

ಭಾವಗದ್ಗದವೇಕೆ ನಾನು ಜನಕಪುತ್ರಿ ।
ಭೂವರ ರಘುರಾಮನರಸಿ ॥
ಆವುದಾಗಲಿ ನೆಪ ಫಲದಾಯಕವು ತಪ ।
ಜೀವನದೊಳಗನುಭವವು ॥ ೧೩-೧೬ ॥

॥ **ಭಾಮಿನಿ** ॥
ಮೊದಲು ಮಂಥರೆಯಿಂದ ತೊಡಗಿದ ।
ಹದನ ಸತ್ಯದೊಳೆನಗೆ ರಾಮಂ ।
ಗದುವೆ ರಾಕ್ಷಸದೊರೆಗೆ ಲೋಕದೊಳೆನಿತೊ ಜೀವರಿಗೆ ॥
ಮುದದಿ ಜನ್ಮೋದ್ದೇಶಸಾಧನೆ ।
ಗೊದಗುತಾತ್ಮವಿಕಾಸಸಿದ್ಧಿಗೆ ।
ವಿದಿತ ಕರ್ಮಕ್ಷಯಕೆ ಧರ್ಮಾಭ್ಯುದಯ ಕಾರಣವು ॥ ೧೩-೧೭ ॥

॥ **ಪೀಲು – ಆಟ** ॥
ಸುದತಿ ಲಾಲಿಸು ಸತ್ಯದರ್ಶನ ಕೊನೆಯಲ್ಲಿ ।
ಮೊದಲಾರಿಗಳವಲ್ಲವು ॥
ಮಧುರಧ್ಯಾನದಿ ಸಿದ್ಧಿ ಲಭಿಸಿದೆಯೆನಗೀಗ ।
ಹೃದಯರಾಮನು ಸರ್ವತ್ರ ॥ ೧೩–೧೮ ॥

ನಿನ್ನ ಹಾಗೆಯೆ ಮಂಡೋದರಿಯ ವಲ್ಲಭನಿಂಗೆ ।
ಧನ್ಯೆಯಾಗಿರ್ಪೆ ನಾನು ॥
ಚಿನ್ಮಯ ಋತದಿಚ್ಛೆಯಂತೆ ರಾವಣನಿಗೆ ।
ಇನ್ನೊಳ್ಳಿತಹುದು ಕೇಳು ॥ ೧೩–೧೯ ॥

ರಾಮಸೈನಿಕರನ್ನು ರಾವಣಾಗ್ನಿಯೊಳು ನಿ ।
ರ್ನಾಮವಾಗಲು ಬಿಡೆನು ॥
ಸ್ವಾಮಿಕಾರ್ಯಕೆ ಆತ್ಮಬಲವ ನೀಡುವೆನೆಂದು ।
ಪ್ರೇಮದುಂಗುರ ಪೂಜಿಸೆ ॥ ೧೩–೨೦ ॥

॥ **ಭೈರವಿ – ಝುಂಪೆ** ॥
ಇತ್ತಲಮರಾವತಿಯ । ಪತ್ತನದಿ ಸುರಪಾಲ ।
ಚಿತ್ತದೊಳು ಚಿಂತೆಯನು । ಪೊತ್ತು ಯೋಚಿಸಿದ ॥ ೧೩–೨೧ ॥

ಲೋಕದೊಳು ತುಂಬಿರುವ । ಶೋಕವಾರತೆ ಸತ್ಯ ।
ಲೋಕೇಶನಿಗೆ ಪೇಳೆ । ನಾಕೇಶ ನಡೆದ ॥ ೧೩–೨೨ ॥

॥ **ಪಂತುವರಾಳ –ಏಕ** ॥
ಪಾಹಿ ಪಂಕಜಸಂಭವನೆ ಪರಮೇಷ್ಠಿ । ದೈತ್ಯ ।
ದಾಹಗೊಳ್ಳುತ ಬಳಲಿದೆ ನಿನ್ನ ಸೃಷ್ಟಿ ॥
ಶ್ರೀಹರಿಯವತಾರಕೊದಗಿದೆ ವಿಘ್ನ । ಹಂಸ ।
ವಾಹನ ದಯೆದೋರು ವೇದನಿಮಗ್ನ ॥ ೧೩–೨೩ ॥

ದನುಜ ರಾವಣಗಿತ್ತೆ ಬಹುರೂಪಿಣಿಯನು । ನಿನ್ನ ।
ಘನವರ ಬಲದಿ ತೋರುವ ಮಹಿಮೆಯನು ॥
ರಣದಿ ಜಾಂಬವ ನೀಲ ಗಂಧಮಾದನರು । ಸೋತ ।
ಕ್ಷಣಕೆ ಲಕ್ಷ್ಮಣ ರಾಮರೇನು ಮಾಡುವರು ॥ ೧೩–೨೪ ॥

ವಚನ: ದೇವೇಂದ್ರನಿಂಗೆ ಬೊಮ್ಮದೇವಂ ಇಂತು ಸಮಾಧಾನಮಂ
ಪೇಳ್ದನು –

ಸುರಪ ಲಾಲಿಸು ನಿರರ್ಥಕವಲ್ಲ ವರವು । ಮುಂದೆ ।
ಪರಮಸಿದ್ಧಿಯು ಪೂರ್ಣದೃಷ್ಟಿಗೋಚರವು ॥
ದುರುಳತ್ವವಳಿಯದೆ ಪರತತ್ತ್ವ ಬರದು । ಈಗ ।
ಪೊರಟುಪೋದಳು ಯೋಗಮಾಯೆ ಮುಂದರಿದು ॥ ೧೩–೨೫ ॥

ವಚನ: ಇತ್ತ ರಣರಂಗದೊಳ್ ಶ್ರೀರಾಮನ ವಿರಾಟ್ಸ್ವರೂಪಮಂ
ಕಂಡು ಹನುಮಂ ಬೆರಗಾದನು –

॥ **ದ್ವಿಪದಿ** ॥
ಯುದ್ಧರಂಗದಿ ರಾಮಭದ್ರನಂ ಪುಡುಕಿ ।
ರುದ್ರರೂಪನ ಕಂಡು ಹನುಮ ತಾನಳುಕಿ ॥ ೧೩–೨೬ ॥

ಬಿದ್ದನಾಕ್ಷಣದೆ ಪಾದದ್ವಯವ ಪಿಡಿದು ।
ಗದ್ಗದಿಸಿ ನುತಿಸಿದನು ದಿವ್ಯಮಂ ನೆನೆದು ॥ ೧೩–೨೭ ॥

॥ **ಯಮನ್‌ಕಲ್ಯಾಣಿ – ಆಟ** ॥
ರಾಮ ರಾಘವ ವಿಶ್ವರೂಪ ॥ ಪಾಹಿ ।
ವ್ಯೋಮದಾಚೆಗೆ ನಿಂತ ಭಗವತ್‌ಸ್ವರೂಪ ॥ ಪ ॥
ಸಾಮಾನ್ಯರೊಲು ನೀನು । ಭೂಮಿಗಿಳಿದು ಬಂದ ।
ಶ್ರೀಮನೋಹರ ದಿವ್ಯ । ಧಾಮ ಸರ್ವಾಧಿಪ ॥ ಅ. ಪ ॥

ನಮ್ಮಭ್ಯುದಯಕಾಗಿ ಬಂದೆ । ವಿಘ್ನ ।
ದುಮ್ಮಳಗಳನೆಲ್ಲ ನೀನೊಡ್ಡಿಕೊಂಡೆ ॥
ಸುಮ್ಮಗೆ ಸಂಸಾರ । ನೆಮ್ಮಿದರಿಗೆ ಸತ್ಯ ।
ಧರ್ಮ ಚಿದ್ಯೋಗವ । ಹೊಮ್ಮಿಸಲ್ಕೈತಂದೆ ॥ ೧೩–೨೮ ॥

ವಚನ: ಎಂದಾ ಹನುಮಂಗೆ ಶ್ರೀರಾಮಚಂದ್ರಂ ತನ್ನ
ದಿವ್ಯಾನುಭವಮಂ ಇಂತುಸುರಿದನು –

॥ **ಸೌರಾಷ್ಟ್ರ – ತ್ರಿವುಡೆ** ॥
ಅಂಜನಾಸುತ ದಿವ್ಯ ನಿಜವಿದು ।
ಸಂಜನಿತಗೊಂಡಿರ್ಪುದೀಗಲೆ ।
ಕಂಜಸಖನುದಯದೊಳು ಕರಗುವ ।
ಮಂಜಿನಂತೆ ॥ ೧೩–೨೯ ॥

ಮಂಥರೆಯು ರಾವಣನು ಕೇವಲ ।
ತಂತುಕಾರಣರೀ ತಪಸ್ಸಿಗೆ ।
ಅಂತರಂಗದ ಸಖನೆ ಮನದೊಳು ।
ಚಿಂತಿಸದಿರು ॥ ೧೩–೩೦ ॥

ನರತೆ ನಾರಾಯಣತೆಯೆನ್ನುವ ।
ಎರಡು ತತ್ತ್ವಕೆ ಸೇತು ನೀನ್ಹೈ ।
ಬೆರಗಿನಿಂದಲಿ ರಾಮ ರಾವಣ ।
ಧುರವ ನೋಡು ॥ ೧೩–೩೧ ॥

॥ **ವಾರ್ಧಕ** ॥
ನಾನವನ ಮೂಲಬಲವಲ್ಲದಿರೆ ರಾವಣನು ।
ಮಾನಿನಿಯ ಮೋಹಿಸುತ ಕರೆದೊಯ್ಯಲಪ್ಪುದೇಂ ।
ನೀನಿದಂ ತಿಳಿದು ತಿಳಿಯದ ತೆರದಿ ನೋಡುತಿರು ಮುಂದೆ
ರಣರಂಗದೊಳಗೆ ॥
ದಾನವನ ಚಿತ್ತಪಶ್ಶಕ್ತಿಯಂ ಗೆಲ್ಲುವರೆ ।
ನಾನಲ್ಲದಿನ್ನಾರ್ಗೆ ಸಾಧ್ಯಮೀ ಲೀಲೆಯಂ ।
ಧ್ಯಾನದಿಂದರಿತುಕೊಳುಯೆನುತ ಸರ್ವತ್ತ್ವಮಂ ಸಾರ್ದನಾ
ಪುರುಷೋತ್ತಮಂ ॥ ೧೩–೩೨ ॥

ವಚನ: ಅಂದಾ ರಣರಂಗದೊಳ್ ವಹ್ನಿಯೋರ್ವನೆ ನಡೆತಂದಂ –

॥ **ಭೈರವಿ – ಝಂಪೆ** ॥
ರಾವಣನ ಮೂಲಬಲ । ವಾವರಿಸೆ ಸರ್ವತ್ರ ।
ಜೀವಘಾತದ ರಂಪ । ನಾ ವಹ್ನಿ ಕಂಡು ॥ ೧೩–೩೩ ॥

ಮಿತ್ರವರ ನಿನ್ನನ್ನು । ಶತ್ರುಗಳು ಕೆಡಹಿದರೆ ।
ಮತ್ತೆಮ್ಮ ಶಿಬಿರದೆಡೆ । ಎತ್ತಿಕೊಂಡೊಯ್ವೆ ॥ ೧೩–೩೪ ॥

ಹೇಡಿಯಂತೀ ರಣದಿ । ಓಡಿಪೋಗುವುದೇಕೆ ।
ಬೇಡ ದೇಹದ ವಾಂಛೆ । ಕೂಡಲೀ ನೆಲವ ॥ ೧೩-೩೫ ॥

ರಾಮಸೇವೆಯ ಗೈದು । ದೇ ಮಹಾಪುಣ್ಯವೈ ।
ಹೇಮದುಂಗುರ ತೆಗೆದು । ಕೋ ಮಿತ್ರನೆಂದ ॥ ೧೩-೩೬ ॥

ಅನಿತರೊಳು ವಾನರರ । ತನು ರಾಮಮಯವಾಯ್ತು ।
ದನುಜಸೇನೆಯು ರಾವ । ಣನ ರೂಪವಾಯ್ತು ॥ ೧೩-೩೭ ॥

ವಚನ: ಮಧ್ಯರಾತ್ರಿಯಕಾಲದೊಳ್ ರಾವಣೇಶಂ ಪರಶಿವೆಯಂ ನುತಿಸಿದನು–

॥ **ದ್ವಿಪದಿ** ॥
ಕೃಷ್ಣಪಕ್ಷದ ಚತುರ್ದಶಿಯ ನಡುವಿರುಳು ।
ವಿಷ್ಣುಮಾಯೆಯು ರಾವಣನ ವ್ಯಾಪಿಸಿರಲು ॥ ೧೩-೩೮ ॥

ಶಿವೆಯ ಪೂಜಾಧ್ಯಾನದೊಳಗೆ ಮುಳುಗಿದನು ।
ಭುವನೇಶ್ವರಿಯು ಬಾರದಿರಲು ಸಿಡುಕಿದನು ॥ ೧೩-೩೯ ॥

ಹತ್ತುತಲೆಗಳನೀಗ ಕತ್ತರಿಪೆನೆಂದು ।
ಚಿತ್ತರಿಸಲಾಗ ಕಂಪಿಸೆ ಮೂರ್ತಿಯಂದು ॥ ೧೩-೪೦ ॥

ಶಿವನ ಮಂದಿರವೆಲ್ಲ ನಡುಗೆ ಮತ್ತವನು ।
ಕವಿಯೆ ಸ್ವಪ್ನಸಮಾಧಿ ಮರೆತನೆಲ್ಲವನು ॥ ೧೩-೪೧ ॥

ಕ್ಷಣದೊಳಾ ಶಿವೆಯು ಲಂಕಾಲಕ್ಷ್ಮಿಯಾಗೆ ।
ಮುನಿಸಿನಿಂದಲಿ ರಾವಣಾಸುರನು ಕೂಗೆ ॥ ೧೩-೪೨ ॥

॥ **ಕುಂಭಕಾಂಭೋದಿ ಝಂಪೆ** ॥
ಯಾರು ನೀನಿಲ್ಲಿ ಬಂದಿರುವ ಕಾರಣವೇನು ।
ನಾರಿಮಣಿ ಧಾನ್ಯಮಾಲಿನಿಯು ನೀನೇನು ॥
ಕಾರಿರುಳು ಚಿತೆಯ ಮೇಲೇರಿಸಿದೆ ನಾನವಳ ।
ಬೇರಾರು ಮೂಗಿ ಮಾತಾಡದಿಹೆಯೇನು ॥ ೧೩-೪೩ ॥

ವಚನ: ಆಗಳಾ ದಿವ್ಯವಿಗ್ರಹಂ ಮಾತಾಡಿತಿಂತು –

ಗುರುತು ಸಿಕ್ಕದೆ ನಿನಗೆ ನಾನೆ ಲಂಕಾಲಕ್ಷ್ಮಿ ।
ಮುರಿದು ಹೋದಕಿರೀಟ ಹರಿದ ಕೊಳೆಯುಡುಗೆ ॥
ಕರದಿ ಕಂಕಣವಿರದ ಸುರಿವ ನೆತ್ತರ ದೇಹ ।
ಮರುಕ ಕೇಳುವರಾರು ಪೊರೆವರಿಲ್ಲೆನಗೆ ॥ ೧೩–೪೪ ॥

ವಚನ: ರಾವಣಂ ಅವಳ ಸಂತೈಸಿದನಿಂತು –

ಬೆದರಬೇಡೆಲೆ ಲಂಕೆ ಶಿವೆಯ ವರಬಲದಿಂದೆ ।
ಮೊದಲಿನಂತೆಸಗುವೆನು ನಾಳೆ ನಿನ್ನನ್ನು ॥
ಕದನದಲಿ ರಾಮನಂ ಗೆಲದೆ ರಾವಣನಿರಲು ।
ಬದುಕಿದ್ದರೇನು ಫಲ ಭಾಷೆ ನೀಡುವೆನು ॥ ೧೩–೪೫ ॥

ವಚನ: ಮತ್ತೆ ಲಂಕಾಲಕ್ಷ್ಮಿ ತನ್ನಳಲಂ ಪೇಳ್ದಳು –

ತರಳರೆನಿತೋ ಮಂದಿ ಮರಣಪೊಂದಿದ ಬಳಿಕ ।
ಬರಿದಾದ ಲಂಕೆಯೊಳಗಿರುವೆನೆಂತಾನು ॥
ಪುರುಷಫಲವನ್ನುಳಿದು ದುರಿತಸಂಗರ ನಿಲಿಸು ।
ಪರಶಿವೆಯೆ ನಾನಿಹೆನು ಪರಿಕಿಪುದು ನೀನು ॥ ೧೩–೪೬ ॥

ವಚನ : ರಾವಣಂ ಮತ್ತೆ ಅವಳೊಡನೆ ಸಂವಾದಿಸಿದನಿಂತು –

॥ **ಕೇದಾರಗೌಳ – ಆಟ** ॥
ಪರಮೇಶ್ವರಿಯೆ ನಿನ್ನನರಿಯಲಾರೆನೆ ನಾನು ।
ಬರಿದೆ ಮೂದಲಿಸಬೇಡ ॥
ಕರದ ಸೂತ್ರಗಳಿಂದ ತಿರೆಯ ನಾಟಕಗೈಯು ।
ತಿರುವೆಯೆಂಬುದ ಬಲ್ಲೆನು ॥ ೧೩–೪೭ ॥

ಪರಮತತ್ತ್ವವ ನೀನು ಪರಿಪೂರ್ಣ ತಿಳಿಯುವ ।
ವರೆಗೆ ಕರ್ಮವು ತಪ್ಪದು ॥
ಶರಣ ನಿನ್ನಯ ಮನದಿರವ ನೀಡುವೆನೀಗ ।
ನೆರೆ ಭಕ್ತಿಯಿಂದ ಬೇಡು ॥ ೧೩–೪೮ ॥

ರಣದಿ ರಾಘವನನ್ನು ಸೆರೆಪಿಡಿಯುವ ಶಕ್ತಿ ।
ಎನಗೆ ನೀ ಕರುಣಿಪುದು ॥
ಜನಕನಂದನೆ ಸೀತೆ ಮನದಿ ಸೋಲುವ ಹಾಗೆ ।
ಜನನಿಯೆ ವರವೀವುದು ॥ ೧೩–೪೯ ॥

ಕಂದನೆನ್ನುತ ತಾಯಿ ಬಂದಲ್ಲಿ ಸೋಲುವು ।
ದೊಂದು ಸೋಜಿಗವೆ ಪೇಳು ॥
ಇಂದು ನಿನ್ನಯ ಭಾವದಂದವನರಿತು ನಾ
ನೆಂದ ಮಾತಿದುವೆ ಕೇಳು ॥ ೧೩–೫೦ ॥

॥ **ಸೌರಾಷ್ಟ್ರ – ತ್ರಿವುಡೆ** ॥
ಏನಿದೀ ವಕ್ರೋಕ್ತಿ ನಿನ್ನದು ।
ಜಾನಕಿಯು ಸೋಲುವಳೆ ರಾಮನ ।
ನಾನು ಜಯಿಸುವೆನೆಂಬುದಿದು ದಿಟ ।
ವೇನು ತಾಯೆ ॥ ೧೩–೫೧ ॥

ಗೆಲುವೆ ರಾಮನ ನೀನು ರಣದೊಳು ।
ಚೆಲುವೆ ನಿನ್ನನು ಚುಂಬಿಸುತ್ತಲಿ ।
ಸೆಳೆವಳೆದೆಗಿದು ಸತ್ಯ ಮರುಭವ ।
ದೊಳಗೆ ಕೇಳು ॥ ೧೩–೫೨ ॥

ವಚನ: ಅನಿತರೊಳಾ ದೇವಿ ಕಣ್ಮರೆಯಾಗೆ ದೇವಾಲಯದ
ಪೀಠಾಗ್ರದೊಳ್ –

॥ **ಸಾಂಗತ್ಯ – ರೂಪಕ** ॥
ಕುದುರೆಯೊಂದರ ನರ್ತನವ ಕಂಡು ದಶಕಂಠ ।
ಬೆದರಿ ತತ್ತರಿಸಿ ಓಡಿದನು ॥
ನದಿಯ ದೋಣಿಯನೇರಲದಕೆ ಖಡ್ಗಾಘಾತ ।
ಒದಗೆ ನೆತ್ತರುಧಾರೆ ಹರಿಯೆ ॥ ೧೩–೫೩ ॥

ಅಲೆಯೆದ್ದು ದೋಣಿಯು ಮಗುಚೆ ರಾವಣನಾಗ ।
ಹೊಳೆಯಲ್ಲಿ ಮುಳುಗಿ ಕೂಗಿದನು ॥
ಬಳಿಕ ತಮ್ಮನ ಕೂಡಿಕೊಳುತಲ್ಲಿ ಶಿಶುರೂಪ ।
ತಳೆದು ಸೇರಲು ತಟವನ್ನು ॥ ೧೩–೫೪ ॥

ಅವಳಿಮಕ್ಕಳ ಕಂಡು ಸೀತೆಯಲ್ಲಿಗೆ ಬಂದು ।
ತವೆ ಪ್ರೀತಿಯಿಂದೆತ್ತಿಕೊಂಡು ॥
ಸವಿಮುತ್ತನಿತ್ತು ಮುದ್ದಿಸಿ ತೊಡೆಯೊಳಗಿಟ್ಟು ।
ತವಕದಿಂ ಮೊಲೆಯನೂಡಿದಳು ॥ ೧೩–೫೫ ॥

ವಚನ: ಮತ್ತೆ ನಿಜಸ್ಥಿತಿಗೆ ಬಂದಾ ದಶಶಿರಂ 'ಮಂಡೋದರಿ ಬಾ' ಎಂದೊರಲಿದಂ –

॥ **ಭಾಮಿನಿ** ॥
ಕನಸೊಡೆದು ವಿಸ್ಮಯದಿ ಕಳವಳ ।
ವನು ನಿವಾರಿಸಿಕೊಂಡು ತನ್ನಯ ।
ಮನವ ಸುಸ್ಮೃತಿಗೆಳೆದು ದಶಶಿರ ಪಸುಳೆಯಂದದೊಳು ॥
ವನಿತೆ ಮಂಡೋದರಿಯೆ ಕಾಪಾ ।
ಡೆನಲು ಕೇಳುತ ಬಂದು ಕಾಂತನ ।
ಹಣೆಯ ಬೆಮರನ್ನೊರೆಸಿ ಮೈದಡವುತ್ತಲುಪಚರಿಸೆ ॥ ೧೩–೫೬ ॥

॥ **ಶಂಕರಾಭರಣ – ಏಕ** ॥
ವನರುಹಾಕ್ಷಿ ಕೇಳು ಪೇಳ್ವೆ ।
ಮನುಮಥಾರಿ ಮಂದಿರದೊಳು ।
ಮನವಿನೋದ ಘಟಿಸಿತೊಂದು ।
ಕನಸಿದಲ್ಲವು ॥ ೧೩–೫೭ ॥

ಮುನಿಕುಟೀರವೊಂದರಲ್ಲಿ ।
ವನಿತೆ ಸೀತೆ ತೊಡೆಯನೇರಿ ।
ಅನುಜನೊಡನೆ ಅಳುತಲಿದ್ದೆ ।
ನೆನುವುದಚ್ಚರಿ ॥ ೧೩–೫೮ ॥

ವಚನ: ಆಗಳ್ ಮಂಡೋದರಿಯು ಪತಿಯಂ ಸಂತೈಸಿದಳ್–

ದನುಜಕುಲಲಲಾಮ ಕೇಳು ।
ಮನದೊಳಿರುವ ಸಾತ್ವಿಕತೆಯೆ ।
ಕನಸಿನಲ್ಲಿ ಪ್ರತಿಮೆಯಾಗಿ ।
ನಿನಗೆ ತೋರಿದೆ ॥ ೧೩–೫೯ ॥

ವಚನ: ಅದಕೆ ರಾವಣಂ ಇಂತೆಂದಂ –

ಪ್ರೀತೆ ನೀನು ನಿಜದೊಳೆನ್ನ ।
ಪಾತಕವನು ಕಳೆದೆ ದೇವಿ ।
ಸೀತೆಯೆನ್ನನುದ್ಧರಿಸಿದ ।
ಮಾತೆ ಸತ್ಯವು ॥ ೧೩–೬೦ ॥

ವಚನ: ಮುಂದೆ ದಂಪತಿಗಳೀರ್ವರ್ ಅಂತರಂಗದ ಸಂವಾದಮಂ
ನಡೆಸಿದರ್ ಏಂ ಪೇಳ್ವೆನು –

॥ **ಮೋಹನ – ಆಟ** ॥
ಧನ್ಯಳಾದೆನು ಸ್ವಾಮಿ ಬಾಳು ಸಾರ್ಥಕವಾದು ।
ದೆನ್ನಲ್ಲಿ ವ್ಯಥೆಯಿಲ್ಲವು ॥
ನಿನ್ನಂತರಂಗವ ತಿಳಿಯೆ ತ್ರಿಮೂರ್ತಿಗ ।
ಳನ್ನಿಲ್ಲಿ ಮೀಯುವರು ॥ ೧೩–೬೧ ॥

ಎನ್ನ ಛಲವ ಗೆದ್ದ ಜಾನಕಿಗಾ ರಾಮ ।
ನನ್ನು ಗೆಲ್ಲುತ ಕಪ್ಪವ ॥
ಮುನ್ನ ಸಮರ್ಪಣೆ ಮಾಡಿ ಕ್ಷಮೆಯ ಬೇಡಿ ।
ಪುಣ್ಯಫಲವ ಪಡೆವೆ ॥ ೧೩–೬೨ ॥

ರಾಮ ಪ್ರಾಕೃತನಲ್ಲ ರಣದೊಳಗೆದುರಿಸ ।
ಲಾ ಮುಕ್ತಿಪದವಲ್ಲದೆ ॥
ಕಾಮಿತ ಬೇರುಂಟೆ ಗಿರಿಜೆಯಾಡಿದ ಮಾತಿ ।
ನಾ ಮರ್ಮ ತಿಳಿವರಾರು ॥ ೧೩–೬೩ ॥

ಕೊಲ್ಲುವ ರಣವಲ್ಲ ಗೆಲ್ಲುವ ಪಣಮಿದು ।
ಎಲ್ಲವು ಸೀತೆಗಾಗಿ ॥
ಸಲ್ಲದೀ ಸುದ್ದಿ ಇನ್ನೆಲ್ಲು ಪೇಳಲು ಬೇಡ ।
ಮೆಲ್ಲನಾಕೆಯ ಸೇವಿಸು ॥ ೧೩–೬೪ ॥

॥ **ಭಾಮಿನಿ** ॥
ಆಗಳಾ ಸತಿ ಪತಿಯ ಚರಣಕೆ ।
ಬಾಗಿ ಕಂಬನಿಸುರಿಸಿ ಜಯಸಿರಿ ।
ಯಾಗಲೆನ್ನುತ ಮನದಿ ಹಾರೈಸುತ್ತ ಬೀಳ್ಕೊಡಲು ॥

ಮೇಘಮಾಲೆಯ ಸರಿಸಿ ಮೂಡಣ ।
ದಾ ಗಿರಿಯ ಮೇಲೇರಿ ರವಿ ಬರೆ ।
ರಾಘವನ ಸೋಲಿಸಲು ರಣಕನುವಾದ ದಶಶಿರನು ॥ ೧೩–೬೫ ॥

ವಚನ: ಇತ್ತಲಾ ರಾಘವಂ ಬವರಾಂಗಣಕೆ ನಡೆತಂದನು –

॥ **ಸೌರಾಷ್ಟ್ರ – ತ್ರಿವುಡೆ** ॥
ಇತ್ತ ಸುಗ್ರೀವಾದಿಗಳ ಕರೆ ।
ಯುತ್ತ ರಘುವರ ಚಂಡಿಕಾಧ್ವಜ ।
ವೆತ್ತು ಬರುತಿಹ ರಥದ ಪರಿ ನೋ ।
ಡುತ್ತಲೆಂದ ॥ ೧೩–೬೬ ॥

ಇಂದಿನಾ ರಣವೆನಗೆ ಮೀಸಲು ।
ಕೊಂದವನ ಕಳೆಯುವೆನು ಮರುತಜ ।
ಗಂಧಮಾದನ ನೀಲ ಜಾಂಬವ ।
ಪಿಂದಿರುಗಲಿ ॥ ೧೩–೬೭ ॥

ತನ್ನ ಸೇರಲು ಹರಿದುಬಹ ನದಿ ।
ಯನ್ನು ಸಾಗರ ತಡೆಯಬಲ್ಲುದೆ ।
ಬನ್ನವೀಯುವ ಮಲೆಯ ಪಾಡೇ ।
ನಿನ್ನು ಕೇಳು ॥ ೧೩–೬೮ ॥

ವಚನ: ಶ್ರೀರಾಮನೆದುರು ಬಂದಾ ರಾವಣಂ ದಿವ್ಯಮೂರ್ತಿಯಂ
ಕಂಡು ತನ್ನೊಳಗೆ ತಾನಿಂತೆಂದನು –

॥ **ಶಹನ – ಆಟ** ॥
ಕದನಗೈಯಲು ನಿಂತಿರುವನೆ । ಸೀತಾ ।
ಹೃದಯಮಂದಿರದಲ್ಲಿ ಪೂಜೆಗೊಂಬವನೆ ॥
ಹದಿಬದೆತನದಿಂದೆ । ಸದೆದು ಎನ್ನಹಂಕಾರ ।
ಮುದದಿ ಪ್ರೀತಿಸಿದಂಥ । ಸದಮಲನಿವನೆ ॥ ೧೩–೬೯ ॥

ಶಿವನ ಬಿಲ್ಲನು ಎತ್ತಿದವನೆ । ಎನ್ನಾ ।
ಹವದಿ ಮೆಚ್ಚಿಸಲು ಈ ಮಗಳನೀಯುವೆನೆ ॥

ಕವಿಯ ಕಲ್ಪನೆಯಿಂದ । ಬುವಿಗೆ ದೇವತೆಯಾದ ।
ರವಿಕುಲದವನ ಪಂ । ಥವನು ನೋಡುವೆನೆ ॥ ೧೩-೨೦ ॥

॥ **ವಾರ್ಧಕ** ॥
ಮತ್ತೆ ಧನು ಹೆದೆಯೇರಿಸುತ್ತ ಜೇವಡೆಗೈದು ।
ಹತ್ತುಮೊಗದೊಳು ಪರಿಕಿಸುತ್ತ ರಾವಣನಾಗ ।
ಸುತ್ತ ನೆರೆದಿರ್ದವರನುತ್ತರಿಸಿ ರಘುವರನ ಹತ್ತಿರಕೆ ಬಂದು ನಿಲಲು ॥
ಇತ್ತಂಡ ಸೇರಿದವು ಖಗ ಸರ್ಪ ಗಜ ಸಿಂಹ ।
ಸತ್ಯ ಮಿಥ್ಯಾಯುಕ್ತಿ ರವಿ ರಾಹು ದಿವ ರಾತ್ರಿ ।
ಪೃಥ್ವಿಯ ಸಮಸ್ತಗುಣ ಸತ್ತ್ವತತ್ತ್ವಗಳೆಲ್ಲ ಎದುರಾದವೇನನೆಂಬೆ ॥೧೩-೨೧ ॥

॥ **ಸೌರಾಷ್ಟ್ರ – ತ್ರಿವುಡೆ** ॥
ಸೆಳೆದು ಶಕ್ತ್ಯಾಯುಧವ ರಾವಣ ।
ನಳಿನನೇತ್ರಗೆ ಗುರಿಯನಿಡುತಿರೆ ।
ಕಳವಳವಗೊಂಡಾ ವಿಭೀಷಣ ।
ಸುಳಿಯುತೆಂದ ॥ ೧೩-೨೨ ॥

ತೊಡುವ ಮೊದಲೀ ಶರವ ಲಕ್ಷ್ಮಣ ।
ಕೆಡಿಸು ನೀನೆಂದೆನುತ ಗದೆಯನು ।
ಪಿಡಿದು ಲಂಕಾಧಿಪನ ರಥವನು ।
ಬಡಿದನಾಗ ॥ ೧೩-೨೩ ॥

ಕಂಡು ಲಕ್ಷ್ಮಣನಾಗ ಶರದೊಳು ।
ಖಂಡಿಸುತ ಸಾರಥಿಯನುರುಳಿಸಿ ।
ಚಂಡಿಕಾಧ್ವಜ ಮುರಿಯೆ ರಾವಣ ।
ಕೆಂಡವಾದ ॥ ೧೩-೨೪ ॥

ಇಷ್ಟದೈವವ ನೆನೆದು ಪೂಡಲು ।
ಅಷ್ಟಘಂಟಾಶಕ್ತಿಯೊಂದನು ।
ದೃಷ್ಟಿಸದೆ ಸೌಮಿತ್ರಿ ನೋಯುತ ।
ಸೃಷ್ಟಿಗೊರಗೆ ॥ ೧೩-೨೫ ॥

ವಚನ: ಧರಾಶಾಯಿಯಾದ ಸೌಮಿತ್ರಿಯಂ ಕಾಣುತ್ತ ಶ್ರೀರಾಮಂ
ಮಮ್ಮಲನೆ ಮರುಗಿದಂ –

॥ **ಆನಂದಭೈರವಿ – ಏಕ** ॥
ಬಿದ್ದೆಯೇನೊ ಲಕ್ಷ್ಮಣಾಂಕ ।
ಮುದ್ದು ತಮ್ಮಾ ನನ್ನನೊಮ್ಮೆ ।
ನೋಡದೆ । ಮಾತ । ನಾಡದೆ ॥ ೧೩–೭೬ ॥

ಗಾಜಿಗಾಗಿ ರನ್ನವನ್ನು ।
ಮಾಜದೆಸೆದ ಗಾಂಪ ನಾನು ।
ಬಾರಯ್ಯಾ । ಪ್ರೀತಿ । ತೋರಯ್ಯಾ ॥ ೧೩–೭೭ ॥

ಸೀತೆಗಾಗಿ ತಮ್ಮನನ್ನು ।
ಘಾತಿಸುತ್ತ ಬಲಿಯಗೊಟ್ಟೆ ।
ಜಾಣನೆ । ಎನ್ನ । ಪ್ರಾಣನೆ ॥ ೧೩–೭೮ ॥

ವಚನ: ಮತ್ತೆ ಸಾವರಿಸಿಕೊಂಡು ಹನುಮನೊಡನೆ –

॥ **ಭಾಮಿನಿ** ॥
ಮಾರುತಾತ್ಮಜ ಕೇಳು ಯುದ್ಧದ ।
ಧಾರುಣಿಯೊಳೀ ದುಃಖ ಸಲ್ಲದು ।
ಧೀರನಿಗೆ ಭೇಷಜವ ನೀಡು ಸುಷೇಣ ಮತದಂತೆ ॥
ಸೂರ್ಯಮುಳುಗುವ ಮುನ್ನ ಖಳ ಸಂ ।
ಹಾರಗೈಯುವೆನೆನುತ ರೌದ್ರಾ ।
ಕಾರದಲಿ ಕೋದಂಡ ಧರಿಸಿದ ಭುವನ ತಲ್ಲಣಿಸೆ ॥ ೧೩–೭೯ ॥

॥ **ದ್ವಿಪದಿ** ॥
ಇಂದ್ರರಥವನ್ನೇರಿ ಮಾತಳಿಯ ಸಹಿತ ।
ಬಂದು ರಾವಣನೆದುರು ಶರವೆಸೆಯೆ ಸತತ ॥ ೧೩–೮೦ ॥

ಬಾಣರೂಪದೊಳು ಸಂಪಾತಿ ತಾನಿರಲು ।
ದಾನವದ್ವೇಷದಿಂ ಕತ್ತರಿಸೆ ಕೊರಳು ॥ ೧೩–೮೧ ॥

ಮತ್ತೊಂದು ತಲೆಚಿಗುರಿ ಹತ್ತುತಲೆಯಾಗೆ ।
ಎತ್ತಲು ಮಹಾಶೂಲ ದಳ್ಳುರಿಯ ಬೇಗೆ ॥ ೧೩-೮೨ ॥

ವಚನ: ಮಾತಳಿಯಾಕ್ಷಣವೆ ಶ್ರೀರಾಮಚಂದ್ರನಿಗೆ ಬ್ರಹ್ಮಾಸ್ತ್ರವಂ
ಪೂಡಲ್ ಸೂಚಿಸಿದನು –

॥ **ಭೈರವಿ – ಝಂಪೆ** ॥
ಈ ತ್ರಿಶೂಲವು ಮೂರು । ಧಾತ್ರಿಯನು ನುಂಗುವುದು ।
ಆ ತ್ರಯಂಬಕಶಕ್ತಿ । ಸೂತ್ರಗೊಂಡಿಹುದು ॥ ೧೩-೮೩ ॥

ವಾಯು ವರುಣೇಂದ್ರರನು । ಗಾಯಗೊಳಿಸಿಹ ಶೂಲ ।
ಮಾಯೆಯನು ಬ್ರಹ್ಮಾಸ್ತ್ರ । ಸಾಯಕದಿ ಗೆಲ್ಲು ॥ ೧೩-೮೪ ॥

ವಚನ: ಶ್ರೀರಾಮಚಂದ್ರನಾಗಳ್ ಮಾತಳಿಗೆ ಇಂತೆಂದನು –

ರಾವಣೋದ್ಧಾರವಹ । ಪಾವನಾತ್ಮಕ ಸಮಯ ।
ಈ ವಿಶೇಷವ ನೋಡು । ದೇವ ಸಾರಥಿಯೆ ॥ ೧೩-೮೫ ॥

ಆದಿತ್ಯಮಂತ್ರ ಸ । ಮ್ಮೋದದೊಳು ಮುಳುಗಿದ್ದೆ ।
ಶ್ರೀದಿವ್ಯ ಶರವೆಸೆವೆ । ನಾ ದನುಜವರಗೆ ॥ ೧೩-೮೬ ॥

॥ **ಭಾಮಿನಿ** ॥
ಸಿಡಿಲ ರಭಸದಿ ಬರುವ ಶರವನು ।
ತಡೆದು ಮುರಿಯುವೆನೆಂದು ದಶಶಿರ ।
ತುಡುಕಲಾಕ್ಷಣ ಹೃದಯಮಂದಿರ ಪೊಕ್ಕು ಬೆಳಕಾಯ್ತು ॥
ಪಿಡಿದದನು ಮತಿವಿಕಲಭಾವದಿ ।
ಕಡೆಗು ಸಿಕ್ಕಿದ ಶತ್ರುವೆನ್ನುತ ।
ನಡೆಯಲರಮನೆಗಂದು ಪಡುವಣದಡದಿ ರವಿ ಮೆರೆದ ॥ ೧೩-೮೭ ॥

ವಚನ: ವಿಕ್ರಮಾವೇಶದಿಂ ಬರಲಾಗ ರಾವಣಂ ಇದಿರ್ಗೊಂಡ
ಸತಿಯಂ ಕುರಿತೆಂದನು –

॥ **ಸಾಂಗತ್ಯ – ರೂಪಕ** ॥
ತಳಿರುತೋರಣದಿಂದ ನಗರ ಸಿಂಗರಿಸು ಮಂ ।
ಗಳವಾದ್ಯ ಮೊಳಗಲಿ ಬೇಗ ॥
ಗೆಲಿದು ತಂದೆನು ನಾನು ರಾಮಚಂದ್ರನ ಸೀತೆ ।
ಬಳಿಗೊಯ್ದು ಕಪ್ಪವೀಯುವೆನು ॥ ೧೩–೮೮ ॥

ವರಮಹಾಮತಿ ಕೇಳು ಕರದಿ ರಾಮನು ಬಿಟ್ಟ ।
ಶರವನ್ನು ಪಿಡಿದು ಭ್ರಾಂತಿಯೊಳು ॥
ಬರಿದೆ ಸಂಗರದಲ್ಲಿ ಗೆಲಿದೆನೆಂಬುವ ಮಾತು ।
ಸರಿಯೇನು ಮನದಿ ಯೋಚಿಪುದು ॥ ೧೩–೮೯ ॥

ಒಡೆಯ ರಾಮನ ಕಳೇವರಕಲ್ಲಿ ಔಷಧ ।
ನಡೆಸುತ್ತಲಿಹರು ವಾನರರು ॥
ಪಿಡಿದ ಪ್ರಾಣದ ಬಾಣ ಒಡನೆ ನೀ ತೆಗೆಯೆಂದು ।
ಮಡದಿಗಾಜ್ಞೆಯನಿತ್ತನವನು ॥ ೧೩–೯೦ ॥

ಪತಿಯೆಂದ ವಚನಕೆ ಪ್ರತಿನುಡಿ ನುಡಿಯದೆ ।
ಜತನದಿಂದೆಳೆಯೆ ಬಾಣವನು ॥
ಅತುಳ ದೈತ್ಯನ ಪ್ರಾಣ ರಾಮನಾತ್ಮದೊಳು ಸಂ ।
ಯುತವಾಗೆ ಲೋಕ ಹರ್ಷಿಸಿತು ॥ ೧೩–೯೧ ॥

ಪತಿಪರಾಯಣೆ ಮಯಸುತೆಯು ಜೀವವ ನೀಗೆ ।
ಪತಿಯ ಪಾದದ ಮೂಲಕೊರಗಿ ॥
ಕ್ಷಿತಿಯ ಕತ್ತಲೆ ಕಳೆಯುತಲಿ ಚೈತ್ರದ ಸೂರ್ಯ ।
ದ್ಯುತಿಕಿರಣಗಳ ಬೀರಿದನು ॥ ೧೩–೯೨ ॥

ವಚನ: ಕಂಬನಿಗರೆವಾ ವಿಭೀಷಣನಂ ಶ್ರೀರಾಮ ಸಂತೈಸಿದನು –

॥ **ಸೌರಾಷ್ಟ್ರ – ತ್ರಿವುಡೆ** ॥
ಶರಣ ನಿನ್ನೆದೆಯಳಲನರಿತೆನು ।
ಮರುಗದಿರು ಬಾಂಧವರನೆಲ್ಲರ ।
ಕರೆಸುತಣ್ಣನಿಗಂತ್ಯವಿಧಿಯನು ।
ವಿರಚಿಸುವುದು ॥ ೧೩–೯೩ ॥

ಬಿಸಜನಾಭನೆ ನಿನಗೆ ಬಹುಪರಿ ।
ವ್ಯಸನವನು ತಂದಿತ್ತ ದುಷ್ಟಗೆ ।
ಎಸಗಲೆಂತೈ ಚಿತೆಯ ದಹನದ ।
ಅಸುರಕರ್ಮ ॥ ೧೩–೯೪ ॥

ಮುಂದಿನಾ ಭವದೊಳಗೆ ಸುತನಹ ।
ಗಿಂದೆ ಸಂಸ್ಕಾರವನು ಗೈವುದು ।
ತಂದೆಯಾಗುವನಿಂಗೆ ಬಹುಪ್ರಿಯ ।
ವೆಂದು ಪೇಳ್ವೆ ॥ ೧೩–೯೫ ॥

ಶತ್ರುವಾದರು ನಿನ್ನ ಸೋದರ ।
ಚಿತ್ತಶುದ್ಧಿಯೊಳೆನಗೆ ಸರಿಸಮ ।
ಪೃಥ್ವಿಯೊಳಗೀವರೆಗು ಕಾಣದ ।
ಸತ್ತ್ವಸಹಸಿ ॥ ೧೩–೯೬ ॥

॥ **ಭಾಮಿನಿ** ॥
ಇಂತೆನುತ್ತ ವಿಭೀಷಣಾಂಕನ ।
ಸಂತವಿಸಿ ಶ್ರೀರಾಮ ಕಳುಹಲು ।
ಮುಂತೊದಗಿ ತಾನಪರಸಂಸ್ಕಾರವನು ಗೈದಿರಲು ॥
ಅಂತರಂಗದ ಗೆಳೆಯ ರಂಹನಿ ।
ಗಂತ್ಯಕರ್ಮವ ನಡೆಸಿ ಮನದೊಳು ।
ಚಿಂತಿಸುವ ವಹ್ನಿಯನು ಸೀತಾಕಾಂತ ಬೆಸಗೊಂಡ ॥ ೧೩–೯೭ ॥

॥ **ಕೇದಾರಗೌಳ –ಅಟ** ॥
ವಾನರಾಗ್ರಣಿ ವಹ್ನಿ ಬೈಗುಗಪ್ಪಿನೊಳಂತು ।
ನೀನೋರ್ವನಿರುವೆಯೇಕೆ ॥
ಆ ನಿನ್ನ ಗೆಳೆಯನಾಗಿಹ ರಂಹ ತಾನೆಲ್ಲಿ ।
ಕಾಣದಾಗಿಹನು ಪೇಳು ॥ ೧೩–೯೮ ॥

ಅಸುನೀಗಿದವನನ್ನು ದಹಿಸಿ ಬಂದಿಹೆನೀಗ ।
ಪುಸಿಯು ಶರೀರಮಲ್ತೆ ॥
ಅಸಮಾನ ವೀರ ನೀನೆಸೆಯೆ ಕಣ್ಮುಂದಕೆ ।
ಪೊಸತೇನು ವಾಂಛೆಯಿಲ್ಲ ॥ ೧೩–೯೯ ॥

ಸತ್ತ ರಂಹನ ನೀನು ಮತ್ತೆ ಬೇಕೆಂದರೆ ।
ಹತ್ತಿರ ಬಹನಾತನು ॥
ಮೃತ್ಯುಪಾಶವ ಬಿಡಿಸುತ್ತ ಕರೆವೆ ನಿನ್ನ ।
ಚಿತ್ತಕ್ಕೆ ಸಮ್ಮತವೆ ॥ ೧೩-೧೦೦ ॥

ಪರಮಪುರುಷ ನೀನು ಕರೆಯಲಾತನು ಬಾರ ।
ದಿರುವನೆ ಮರ್ತ್ಯಕೀಗ ॥
ಸುರಭೂಜದೆದುರು ನಶ್ವರಕಾಸೆ ಪಡುವರೆ ।
ಕರುಣದಿ ಕ್ಷಮಿಸೆನ್ನನು ॥ ೧೩-೧೦೧ ॥

ಬೆದರಬೇಡೆಲೊ ನಿನ್ನ ಮಗನಾಗಿ ಜನಿಸುವ ।
ನಿದಕೆ ಸಂಶಯವಿಲ್ಲವು ॥
ಮುದದಿ ಮಹೋತ್ಸವವಿದು ನಿನಗೆನ್ನುತ್ತ ।
ಪದುಳದಿ ಬೀಳ್ಗೊಂಡನು ॥ ೧೩-೧೦೨ ॥

॥ **ಕಂದ** ॥
ಮುಂದಿನ ಜನ್ಮದಿ ಸೀತೆಗೆ ।
ಕಂದರೆನಿಸಿ ದಾಶರಥಿಯ ಸೋಲಿಪ ವರಮಂ ॥
ಪೊಂದಿದ ಸ್ವಪ್ನದ ಸಿದ್ಧಿಯ ।
ಬಂಧುರಮೀ ಯಕ್ಷಗಾನದ ಮಹಾಕಾವ್ಯಂ ॥ ೧೩-೧೦೩ ॥

***

ಯಕ್ಷಗಾನ ಮಹಾಕಾವ್ಯ
ಶ್ರೀರಾಮಲೀಲಾದರ್ಶನಂ

ಪ್ರಸಂಗಸಂಚಿಕೆ ೧೪

ಶ್ರೀರಾಮ ಪಟ್ಟಾಭಿಷೇಕಂ

ಪಾತ್ರಪಟಲ

ಶ್ರೀರಾಮ

ಲಕ್ಷ್ಮಣ

ಸೀತಾದೇವಿ

ವಿಭೀಷಣ

ಹನುಮಂತ

ಅನಲಾಕುಮಾರಿ

ಗುಹ

ಭರತ

ಮಂಥರೆಯ ಅಂತರಾತ್ಮ

ಊರ್ಮಿಳೆ

ಮಾಂಡವಿ

ಕೌಸಲ್ಯೆ

ಕೈಕೇಯಿ

ಸುಮಿತ್ರೆ

ಶ್ರೀರಾಮಪಟ್ಟಾಭಿಷೇಕಂ

॥ **ವಾರ್ಧಕ** ॥
ಲೋಕಮೋಹಕಶೋಕದಾರುಣದ ಕರುಣರಸ ।
ದೀ ಕಾವ್ಯಮಂ ನುಡಿಸು ಬೀಣೆಯಿಂಚರದಲ್ಲಿ ।
ಶ್ರೀಕಲಾವತಿ ಪರಾತ್ಪರವಾಣಿ ಬ್ರಹ್ಮಾಣಿ ಶಾಂತಿ ಕಲ್ಯಾಣಿ ವಾಣಿ ॥
ಭೀಕರಾಹವ ಮುಗಿದ ಬಳಿಕಾ ವಿಭೀಷಣಂ ।
ಸ್ವೀಕರಿಸಲಾರೆ ಲಂಕಾಕಿರೀಟವನೆನಲು ।
ನಾಕೇಶಜಿತುಕಂದನಾದ ವಜ್ರಾರಿಗಂ ಪಟ್ಟಾಭಿಷೇಕಮಾಯ್ತು ॥ ೧೪–೧ ॥

॥ **ಸೌರಾಷ್ಟ್ರ – ತ್ರಿವುಡೆ** ॥
ಪೊತ್ತು ರಾಘವನಾಜ್ಞೆ ಶಿರದೊಳು ।
ಸತ್ವಸುಗುಣ ವಿಭೀಷಣಾಂಕನು ।
ಮತ್ತೆ ಮರುತಾತ್ಮಜನ ಜೊತೆಗೂ ।
ಡುತ್ತಲಾಗ ॥ ೧೪–೨ ॥

ಮಾತೆ ಸೀತೆಯ ಕರೆದುತರೆ ಸಂ ।
ಜಾತೆಯನಲೆಯ ಮೊದಲೆ ಕಳುಹಿಸಿ ।
ದೂತಭಾವದಿ ನಡೆದು ಬಂದನು ।
ಸಾತಿಶಯದಿ ॥ ೧೪–೩ ॥

ವಚನ: ಹನುಮ ವಿಭೀಷಣರ್ ಅಶೋಕವನದೆಡೆ ಬಂದು
ಸೀತಾಮಾತೆಗಂ ಕೈಮುಗಿದು ವಿಜ್ಞಾಪಿಸಿದರಿಂತು –

॥ **ಸಾಂಗತ್ಯ –ರೂಪಕ** ॥
ಹರಸಮ್ಮ ತಾಯೆ ರಾಮನ ನುಡಿನ್ಯೆವೇದ್ಯ ।
ಸಿರಿದೇವಿ ಗುಡಿಗರ್ಪಿಸುವರೆ ॥
ಚರಣಕಾನತರಾಗಿ ಬಂದ ನಮ್ಮೀರ್ವರ ।
ಪೊರೆಯಮ್ಮ ವಾತ್ಸಲ್ಯದಿಂದ ॥ ೧೪–೪ ॥

ಹಿಂದೆ ವಾನರರೂಪದಿಂದ ಬಂದವ ನಾನು ।
ಕಂದನು ಪ್ರಾಣದೇವನಿಗೆ ॥
ಇಂದಿನ ದಿನ ರಾಮಚಂದ್ರನ ಕೃಪೆಯಿಂದ ।
ಬಂಧನ ಹರಿಯುವಂತಾಯ್ತು ॥ ೧೪–೫ ॥

ವೀರವಿಜಯ ವಾರ್ತೆ ತಂದ ದೂತನಿಗಿನ್ನು ।
ಮೂರುಲೋಕದೊಳೆಣೆಯುಂಟೆ ॥
ಮೀರಿದೈಸಿರಿಯ ಕುಬೇರ ವಾಸವರೆಲ್ಲ ।
ದಾರಿದ್ರ್ಯ ತಳೆದರೆನ್ನಿದಿರು ॥ ೧೪–೬ ॥

ವಚನ: ಹನುಮನಂ ಸೀತಾದೇವಿ ನುಡಿಸಿದಳ್ ವಾತ್ಸಲ್ಯದೊಳ್ –

ತರಳ ನಿನ್ನಯ ಶಕ್ತಿಯನು ಕೇಳಿ ತಿಳಿದಿದ್ದೆ ।
ಅರಿತೆನು ಕಂಡು ನಾನಿಂದು ॥
ಪರಮವಿಕ್ರಮ ಕ್ಷಮೆ ದಮೆ ತೇಜೋನ್ನತಿಯೊಳು ।
ಸರಿಯಾರು ನಿನಗೆ ಮೂಜಗದಿ ॥ ೧೪–೭ ॥

ವಚನ: ವಿಭೀಷಣಂ ದೇವಿಯಂ ಸಂಪ್ರಾರ್ಥಿಸಿದನಿಂತು –

ತಾಯೆ ದಂಡಿಗೆಯೇರಿ ದಯೆಮಾಡು ರಘುರಾಮ ।
ರಾಯಸನ್ನಿಧಿಗೆ ಸಂತಸದಿ ॥
ಕಾಯುತ್ತಲಿಹರು ವಾನರರೆಲ್ಲ ಸ್ವಾಮಿಯ ।
ಜಾಯೆಯ ಕಾಂಬ ಉತ್ಸಹದಿ ॥ ೧೪–೮ ॥

॥ **ದ್ವಿಪದಿ** ॥
ಹಣ್ಣುಗಳ ಮಾಲೆಯಂ ಮರಮರದೊಳರಿಸಿ ।
ಬಣ್ಣಬಣ್ಣದ ಹೂಗಳಿಂದ ಸಿಂಗರಿಸಿ ॥ ೧೪–೯ ॥

ಎತ್ತರದ ಸುಸ್ಥಳದಿ ಮಂಟಪವ ರಚಿಸಿ ।
ಸ್ವಸ್ತಿವಾಚನದಿಂದ ರಂಗೋಲಿ ಬಿಡಿಸಿ ॥ ೧೪–೧೦ ॥

ಲಂಕಾಲತಾಂಗಿಯರ ಸಂಗೀತಸ್ವರದಿ ॥
ಕುಂಕುಮಾಂಕಿತ ಪಥದಿ ಸೀತೆ ಸಡಗರದಿ ॥ ೧೪–೧೧ ॥

ಬರುತಿರಲು ರೌದ್ರವಾಯಿತು ರಾಮವದನ ।
ಕರೆದನಾಕ್ಷಣದಲ್ಲಿ ವರ ವಿಭೀಷಣನ ॥ ೧೪–೧೨ ॥

॥ **ಭೈರವಿ – ಝಂಪೆ** ॥
ಮಿತ್ರವರ ಕೇಳು ಭೂ । ಪುತ್ರಿಯೋರ್ವಳೆ ಬರಲಿ ।
ಮತ್ತೇಕೆ ಜವನಿಕೆಯ । ಚಿತ್ರಮಯ ಶಿಬಿಕೆ ॥ ೧೪–೧೩ ॥

ಮಾನಿನಿಗೆ ಶೀಲಗುಣ । ತಾನಲ್ಲವೇ ರಕ್ಷೆ ।
ಮೇನೆಯೊಳಗಿಹ ತೆರೆಯು । ಮಾನ ಕಾಯುವುದೆ ॥ ೧೪–೧೪ ॥

ಸನ್ಮಿತ್ರ ಸಜ್ಜನರು । ಮನ್ನೆಯರು ನೆರೆದಿರಲು ।
ಎನ್ನಾಜ್ಞೆಯಂದದೊಳ । ಗಿನ್ನು ಬರಲವಳು ॥ ೧೪–೧೫ ॥

॥ **ಭಾಮಿನಿ** ॥
ಹನುಮ ಜಾಂಬವ ಲಕ್ಷ್ಮಣಾದಿಗ ।
ಳನಿತು ದೂರದೆ ಮೌನವಾಂತಿರೆ ।
ಜನಕನಂದನೆ ಮೆಲ್ಲನಡಿಯಿಡುತಾಗ ಬಳಬಂದು ॥
ಘನಕೃಪಾನಿಧಿ ಆರ್ಯಪುತ್ರನೆ ।
ನಿನಗೆ ವಂದನೆಯೆನುತ ರೌದ್ರಾ ।
ನನವ ನೋಡುತ ಬೆರಗಿನೊಳು ಮರವಟ್ಟು ನಿಂತಿರಲು ॥ ೧೪–೧೬ ॥

ವಚನ: ಆಗಳಾ ಶ್ರೀರಾಮಚಂದ್ರಂ ಇಂತೆಂದನು –

॥ **ಸೌರಾಷ್ಟ್ರ – ತ್ರಿವುಡೆ** ॥
ವನಚರರ ದೆಸೆಯಿಂದ ವೈರಿಯ ।
ರಣದಿ ಜಯಿಸಿದೆ ಶಪಥತೀರ್ಚಿದೆ ।
ದಿನಪವಂಶಾವಳಿಯ ಚರಿತೆಯ ।
ಘನತೆ ಮೆರೆದೆ ॥ ೧೪–೧೭ ॥

ಪುರುಷಕಾರದ ಗರಿಮೆಗೋಸುಗ ।
ದುರುಳನನು ನಾ ಕೊಂದೆನೈಸಲೆ ।
ತರುಣಿ ನಿನ್ನಯ ಪಡೆಯುವಾಸೆಗೆ ।
ತರಿದುದಲ್ಲ ॥ ೧೪–೧೮ ॥

ಎಲ್ಲಿಗಾದರು ತೊಲಗು ಬೇಗನೆ ।
ನಿಲ್ಲದಿರು ಕಣ್ಮುಂದೆ ಲಂಕೆಯ ।
ಖುಲ್ಲರಾಕ್ಷಸಶ್ರೀಯುತೆಯೆ ಪ್ರತಿ ।
ಸೊಲ್ಲದಿರೆಲೆ ॥ ೧೪-೧೯ ॥

ವಚನ: ಎಂದ ನುಡಿಯಂ ಕೇಳ್ದು ಜಾನಕಿ ಶ್ರೀರಾಮಪದತಲದಿ
ಗೋಗರೆದಳು –

॥ **ಸಾವೇರಿ – ಆದಿ** ॥
ಇಕ್ಷ್ವಾಕು ಕುಲಸಿರಿಯೆ ॥ ನೀನೆನ್ನನು ।
ಪೇಕ್ಷಿಸುವುದು ಸರಿಯೆ ॥
ರಾಕ್ಷಸ ತಂದನೆಂಬುದಕಾಗಿ ಎನ್ನ ನಿ ।
ರೀಕ್ಷಿಸದಿಂತು ನಿಂದಿಪುದಾವ ಪರಿಯೆ ॥ ೧೪-೨೦ ॥

ದನುಜನೊಯ್ದನು ತನುವ ॥ ಮುಟ್ಟಿದನೇನು ।
ಜನಕನಂದನೆ ಮನವ ॥
ಜನಪ ನಿನ್ನನು ಮೆಚ್ಚಿ ಮದುವೆಯಾಗಿರುವೆನ್ನ ।
ಅನುರಾಗ ಭಕ್ತಿಯು ತೃಣವಿದೆಂದೆನುವ ॥ ೧೪-೨೧ ॥

ವ್ಯಥಿಸಲಾರೆನು ನಾನೀಗ ॥ ಲಕ್ಷ್ಮಣ ನೀನು ।
ಚಿತೆಯನ್ನು ರಚಿಸು ಬೇಗ ॥
ಪತಿಸೇವೆಯೊಳು ತಿರಸ್ಕೃತವಾದ ಬದುಕೇಕೆ ।
ಹುತವಹನಗೆ ಸಮರ್ಪಿತವು ಸುಯೋಗ ॥ ೧೪-೨೨ ॥

॥ **ವಾರ್ಧಕ** ॥
ಅತಿದುಃಖದಿಂದ ಸೌಮಿತ್ರಿ ಚಿತೆಯಂ ರಚಿಸೆ ।
ಪತಿಪಾದಗಳಿಗೆ ಪಣೆಯೊತ್ತಿ ಕಂಬನಿಯಿಂದ ।
ಧೃತಿಗೆಡದೆ ತಾನಗ್ನಿಸನ್ನಿಧಿಗೆ ನಡೆದುಬಂದಿಂತೆಂದು ಪ್ರಾರ್ಥಿಸಿದಳು ॥
ಪೃಥಿವಿಯೊಳು ಸೂರ್ಯಚಂದ್ರಮ ಸಾಕ್ಷಿಯಾಗಿ ನಾ ।
ಸತತ ರಘುರಾಮನಂ ನೆನೆಯದಿರಲೀ ತನುವ ।
ಹಿತದಿ ನೀ ದಹಿಸಿಕೊಳ್ಳೆನುತ ಕೈಮುಗಿದಗ್ನಿಯೊಡಲ ಸೇರಿದಳು
ಸೀತೆ ॥ ೧೪-೨೩ ॥

॥ ರೇವತಿ – ಆಟ ॥

ನೆರೆದವರೆಲ್ಲ ಹಾಹಾಯೆಂದು ಕೂಗೆ ನಿ ।
ಷ್ಠುರಮೂರ್ತಿ ರಾಮಚಂದ್ರ ॥
ಭರದಿ ಹೆಜ್ಜೆಯನಿಟ್ಟು ಮೆರೆವ ವೇದಿಕೆಯೇರಿ ।
ಪರಮಾಗ್ನಿಯೊಳಪೊಕ್ಕನು ॥ ೧೪–೨೪ ॥

ಧರೆಗೆ ಸ್ವರ್ಗದ ಕಾಂತಿ ಸ್ಫುರಿಸುವಂದದಿ ಸುತ್ತ ।
ತರು ಸುಗಂಧವ ಸೂಸಿತು ॥
ಸುರರ ಸಂಗೀತ ಸುಸ್ವರಮೂಡಿದಂತಾಗಿ ।
ಬೆರಗು ಲೋಕವ ತುಂಬಿತು ॥ ೧೪–೨೫ ॥

ಅನಿತರೊಳಾ ರಾಮ ಜನಕಜೆ ಸಹಿತಗ್ನಿ ।
ತನುವಿನಿಂ ಹೊರಹೊಮ್ಮುತೆ ॥
ಘನತೇಜದಿಂದ ಕಂಗೊಳಸೆ ವಾನರವ್ರಾತ ।
ಕುಣಿದುಘೇಯೆಂದುದಾಗ ॥ ೧೪–೨೬ ॥

ವಚನ: ಅಚ್ಚರಿಯ ನೋಡುತ್ತ ನಿಂತಿರ್ದ ಅನಲೆ ತಾಂ
ಮೆಚ್ಚುನುಡಿಯಂ ಪೇಳ್ದಳು –

॥ ಭಾಮಿನಿ ॥

ದೇವ ನೀ ಕ್ಷಮಿಸೆನ್ನ ಸೀತಾ ।
ದೇವಿಯನು ನಿಂದಿಸಿದ ನಿನ್ನ ಸ್ವ ।
ಭಾವವರಿಯದೆ ಬೈದೆ ಬಾಯಿಗೆ ಬಂದ ತೆರ ನಾನು ॥
ಭಾವಕಿಯ ಪರಿಕಿಸುವ ನೆವದಿಂ ।
ದೀ ವರಾಗ್ನಿಯ ಪೊಕ್ಕು ನಿನ್ನನೆ ।
ನೀ ವಿಮರ್ಶಿಸಿಕೊಂಡು ಲೋಕದ ಧರ್ಮ ಪಾಲಿಸಿದೆ ॥ ೧೪–೨೭ ॥

॥ ಸಾಂಗತ್ಯ – ರೂಪಕ ॥

ಅನಲೆಯ ನುಡಿಗೆ ಸಂತಸವಾಂತು ಶ್ರೀರಾಮ ।
ಸನುಮತದೊಳಗೆ ಸರ್ವರನು ॥
ಇನಿವಾತಿನಿಂದ ವಿಶ್ರಾಂತಿಗೆ ಕಳುಹಿಸಿ ।
ನೆನೆದ ಕೈಕೇಯಿಪುತ್ರನನು ॥ ೧೪–೨೮ ॥

ಪದಿನಾಲ್ಕು ವರುಷಕೆ ಮರಳಿಬಂದಪೆನೆಂದು ।
ಮೊದಲು ಪೇಳಿದ ಮಾತಿನಂತೆ ॥
ಒದಗಬೇಕಿದೆ ನಾವು ತ್ವರಿತದೊಳೆನಲಾಗ ।
ಪದಕೆ ವಂದಿಸಿ ವಿಭೀಷಣನು ॥ ೧೪–೨೯ ॥

ಕರುಣವಾರಿಧಿ ಪುಷ್ಪಕವನೇರಿ ನೀವೆಲ್ಲ ।
ತೆರಳಬಹುದು ಕ್ಷಿಪ್ರದಿಂದ ॥
ಚರಣಸೇವೆಗೆ ನಮ್ಮ ಕಿರಿದು ಪುಷ್ಪವಿದೆಂದು ।
ಶರಣ ಬಿನ್ನಹವ ಮಾಡಿದನು ॥ ೧೪–೩೦ ॥

ಜಾನಕಿಯೊಡನೆ ಶ್ರೀರಾಮ ಲಕ್ಷ್ಮಣ ಸಹ ।
ವಾನರವೀರರೆಲ್ಲವರು ॥
ಆನಂದದಿಂದ ವಿಮಾನವನ್ನೇರುತ್ತ ।
ಬಾನಿನುತ್ತರಕೆ ಹಾರಿದರು ॥ ೧೪–೩೧ ॥

॥ **ದ್ವಿಪದಿ** ॥
ತುಸುಹೊತ್ತು ಕಿಷ್ಕಿಂಧೆಯೊಳು ತಂಗುತವರು ।
ಋಷಿಗಳಾಶ್ರಮಕಿಳಿದು ಪರಕೆಗೊಂಡವರು ॥ ೧೪–೩೨ ॥

ಮುನಿ ಭರದ್ವಾಜರಾಶ್ರಮ ಸೇರಲಂದು ।
ದಿನವೊಂದು ಕಳೆಯಬೇಕೆನಲೊಪ್ಪಿಕೊಂಡು ॥ ೧೪–೩೩ ॥

ವಾರತೆಯ ತಿಳುಹುವರೆ ಭರತನಿಗೆ ಮೊದಲು ।
ಮಾರುತಾತ್ಮಜನನ್ನು ರಾಮ ಕಳುಹಿರಲು ॥ ೧೪–೩೪ ॥

॥ **ಸೌರಾಷ್ಟ್ರ – ತ್ರಿವುಡೆ** ॥
ತ್ವರಿತದಿಂದಲಿ ಪಾವಮಾನಿಯು ।
ಗಿರಿ ವನಾಂತರ ಶೃಂಗವೇರದ ।
ಪುರವ ಸೇರುತ ಗುಹನ ಸಹಿತದಿ ।
ಪೊರಟ ಮುಂದೆ ॥ ೧೪–೩೫ ॥

ಇತ್ತ ನಂದೀಗ್ರಾಮವಾಸದಿ ।
ನಿತ್ಯರಾಮನ ನೆನೆದು ಭರತನು ।
ವತ್ಸರವು ಪದಿನಾಲ್ಕು ಮುಗಿಯುವ ।
ಹೊತ್ತಿನಲ್ಲಿ ॥ ೧೪–೩೭ ॥

ತನುವ ನಿರಶನವ್ರತದಿ ಬಳಲಿಸು ।
ತನಲಕುಂಡಕೆ ಬಿದ್ದು ಪ್ರಾಣಾ ।
ರ್ಪಣೆಯ ಗೈಯುವೆನೆನಲು ಕಂಡಿತು ।
ವನಿತೆ ರೂಪ ॥ ೧೪–೩೭ ॥

॥ **ಕೇದಾರಗೌಳ – ಝಂಪೆ** ॥
ಆರು ನೀನವ್ವ ದೇವಿ । ಅಗ್ನಿಯೊಳು ।
ತೂರಿಕೊಂಡಿರುವ ಜೀವಿ ॥
ಸಾರಿ ಬಂದಿರ್ಪೆ ಏಕೆ । ಸೂಕ್ಷ್ಮವ ।
ತಾರಿಣಿಯೆ ನುಡಿ ಪರಾಕೆ ॥ ೧೪–೩೮ ॥

ಕಂದ ಕೇಳಾನು ನಿನ್ನ । ಮಂಥರೆಯು ।
ಕಣ್ದೆರೆದು ನೋಡು ಮುನ್ನ ॥
ಇಂದೀಗ ತಾಳ್ಮೆಯಿರಲಿ । ಶ್ರೀರಾಮ ।
ಚಂದ್ರ ಬಂದಪನು ಮರಳಿ ॥ ೧೪–೩೯ ॥

ಉಸುರದಿರು ಪೆಸರ ಜಾಣೆ । ಆ ಗೂನಿ ।
ದೆಸೆಯಿಂದ ಬೇನೆ ತಾನೆ ॥
ಪುಸಿಯಾಯ್ತೆ ರಾಮವಚನ । ಈ ದೇಹ ।
ಭಸಿತವಾಗಲಿ ಈ ಕ್ಷಣ ॥ ೧೪–೪೦ ॥

॥ **ಭಾಮಿನಿ** ॥
ತರಳ ಕೇಳವಳಲ್ಲ ಕಾರಣ ।
ಕರಣ ಮಾತ್ರದ ಕುಬ್ಜೆಯಂತಃ ।
ಕರಣಮಂ ನೀ ಕಾಣೆ ನಿನ್ನಭ್ಯುದಯಕೋಸುಗವೆ ॥
ಮರಳಿ ರಾಮನ ಕರೆವ ಕಾರ್ಯದಿ ।
ಬೆರೆದಳಗ್ನಿಗೆ ಪಾಪವೇಷಿಯು ।
ಪರಿಕಿಸೆಲೊ ನಾ ನಿನ್ನ ಮಂಥರೆಯಂತರಾತ್ಮಸಿರಿ ॥ ೧೪–೪೧ ॥

॥ **ಮೋಹನ – ಅಟ** ॥
ಬೆರಗಾಗಿ ಭರತಕುಮಾರ ವೈಶ್ವಾನರ ।
ಗೆರಗಿ ಭಕ್ತಿಯೊಳಿರಲು ॥
ವರಚೈತ್ರ ಶುದ್ಧ ಪಂಚಮಿಯ ಸೂರ್ಯನ ರಶ್ಮಿ ।
ತಿರೆಯನಾವರಿಸಿರಲು ॥ ೧೪–೪೨ ॥

ರಾಮ ಸೀತಾರಾಮ ಪ್ರೇಮಸದ್ಗುಣಧಾಮ ।
ಶ್ರೀಮನೋಹರ ಮೂರುತಿ ॥
ನಾಮವ ಸ್ಮರಿಸುತ್ತ ಮಾರುತಿ ಗುಹರು ಬಂ ।
ದಾ ಮಹಿಮನಿಗೆರಗೆ ॥ ೧೪–೪೩ ॥

ಪಾದುಕಾಮಕುಟ ತಾಪಸರೂಪಧರನೆ ಸ ।
ಮಾಧಾನದಿಂದ ಕೇಳು ॥
ಸೋದರ ಲಕ್ಷ್ಮಣ ಸಹಿತ ಸೀತಾಧವ ।
ಮೋದದಿಂದಿಹನು ತಾಳು ॥ ೧೪–೪೪ ॥

॥ **ಭಾಮಿನಿ** ॥
ಭರತ ಹರುಷೋತ್ಕರ್ಷಭಾವದಿ ।
ಭರಿತನಾಗುತ ತನ್ನ ತಾನೇ ।
ಮರೆತು ಮುಳುಗಿದನಶ್ರುಧಾರಾಜಲದಿ ಶಿಶುವಿನೊಲು ॥
ಮರುತಜಾತನ ತೋಳತೆಕ್ಕೆಯೊ ।
ಳೊರಗಿರಲು ಶಿಶಿರೋಪಚಾರದಿ ।
ತರಳನನು ಸಂತೈಸೆ ವರಗುಹನೊರೆದ ರಾಮಕಥೆ ॥ ೧೪–೪೫ ॥

ವಚನ: ತಪದೊಳಿರ್ದಾ ಊರ್ಮಿಳೆಯಂ ಮಾಂಡವಿ ಕರೆದು
ರಾಮಾಗಮನವಾರ್ತೆಯಂ ತಿಳುಹಿದಳ್–

॥ **ಸುರುಟಿ – ಏಕ** ॥
ರಾಮ ಬಂದನಂತೆ । ಲಕ್ಷ್ಮಣ ।
ಪ್ರೇಮ ಬಂದನಂತೆ ॥
ಸೀಮೆಯ ಸರ್ವರ । ಕಾಮಿತ ಫಲಿಸಿದೆ ।
ನೇಮದಿ ನಂದಿ । ಗ್ರಾಮಕೆ ನಡೆನಡೆ ॥ ೧೪–೪೬ ॥

ವಚನ : ಊರ್ಮಿಳೆ ಅದಕೆ ಇಂತೆಂದಳ್ –

ಮೀಯದುಡದೆ ತೊಡದೆ । ಪೋಪುದು ।
ನ್ಯಾಯವೆ ಪೇಳ್ ಮುಗುದೆ ॥
ಕಾಯದ ಸಂಕಟ । ದಾಯವ ತೋರಿಸಿ ।
ನೋಯಿಸಬಾರದು । ತೋಯಜಮುಖಿಯೆ ॥ ೧೪–೪೭ ॥

ಅಕ್ಕ ಕೇಳೆ ನಿನ್ನ । ನೋಂಪಿಯ ।
ದುಃಖಗಳನು ಮುನ್ನ ॥
ಲಕ್ಷ್ಮಣ ನೋಡುತ । ಅಕ್ಕಟವೆನುವನು ।
ಮಿಕ್ಕುವರಿದು ಮನ । ದಕ್ಕರೆಯೀವನು ॥ ೧೪–೪೮ ॥

ಶರಧಿ ಮುಂದೆ ಹನಿಗೆ । ತೋರಿಕೆ ।
ಸರಿಯದಲ್ಲ ಕೊನೆಗೆ ॥
ಪರಮದೈವ ಗೈ । ದಿರುವ ತಪಸ್ಸಿನ ।
ಸರಿಸದಿ ನಮ್ಮದು । ಗರಿಕೆಯ ಕಾರ್ಯವೆ ॥ ೧೪–೪೯ ॥

॥ **ಶಂಕರಾಭರಣ – ತ್ರಿವುಡೆ** ॥
ಎಲ್ಲ ಸಾಧನೆಗಿದುವೆ ಕೊನೆ ಗುರಿ ।
ಇಲ್ಲವೆನಿಪುದು ತನ್ನನೆ ॥
ಸಲ್ಲಲಿತ ಸಂತೋಷಸಮಯದಿ ।
ಸಲ್ಲದಿಂಥ ನಿವೇದನೆ ॥ ೧೪–೫೦ ॥

ನಡೆದು ಸರಯೂತಟದಿ ಮೀಯುತ ।
ಮಡಿಯ ವಸನವ ಧರಿಸುತ ॥
ಮುಡಿಯ ಕಟ್ಟುತ ಪಣೆಗೆ ತಿಲಕವ ।
ನಿಡುತ ಸಂತಸದೋರುತ ॥ ೧೪–೫೧ ॥

ಪಕ್ಷಿ ಮೃಗಗಳಗುಣಿಸನೀಯುತ ।
ವೃಕ್ಷ ವನಲತೆಗೆರಗುತ ॥
ಅಕ್ಷಯದ ಚೈತನ್ಯಕರುಣದ ।
ರಕ್ಷೆ ಜಗಕಿರಲೆನ್ನುತ ॥ ೧೪–೫೨ ॥

॥ **ವಾರ್ಧಕ** ॥
ಮತ್ತೆ ಮಾಂಡವಿಯೊಡನೆ ಮನೆಸೇರಿ ಕೈಕಾ ಸು ।
ಮಿತ್ರೆ ಕೌಸಲ್ಯೆ ಮೂವರ ಕರೆದು ಸಂತೈಸಿ ।
ಹೊತ್ತುಗಳೆಯದೆ ಸರ್ವಪರಿವಾರ ಸಹಿತ ನಂದಿಗ್ರಾಮವನು ಸೇರಲು ॥
ಇತ್ತ ಪುಷ್ಪಕದಿಂದ ಕೆಳಗಿಳಿಯೆ ಶ್ರೀರಾಮ ।
ಪೃಥ್ವಿಜಾತೆಯು ಲಕ್ಷ್ಮಣಾಂಕ ಸುಗ್ರೀವ ದನು ।
ಜೋತ್ತಮ ವಿಭೀಷಣರು ಸಂತೋಷ ಸಂಭ್ರಮದಿ ಜನರು
ಜಯಜಯವೆಂದರು ॥ ೧೪–೫೩ ॥

॥ **ದೇವಗಾಂಧಾರಿ – ಝಂಪೆ** ॥
ರಾಮನಂ ದರ್ಶಿಸುತ । ರೋಮಾಂಚನದಿ ಭರತ ।
ಹೇಮಪಾದುಕೆಗಳನು । ಸ್ವಾಮಿಪದಕಿತ್ತ ॥ ೧೪–೫೪ ॥

ಪುಣ್ಯ ರಘುಕುಲಕೀರ್ತಿ । ನಿನ್ನ ಕಾಣುತಲೆನ್ನ ।
ಜನ್ಮಪಾವನವೆನುತ । ಮನ್ನಿಸಿದ ರಾಮ ॥ ೧೪–೫೫ ॥

ಮುದದಿಂದ ಮಾತೆಯರ । ಪದಗಳಿಗೆ ನಮಿಸುತ್ತ ।
ಮಧುರವಚನಗಳಿಂದ । ಹದನ ಕೇಳಿದನು ॥ ೧೪–೫೬ ॥

ಭರತನಾಶ್ರಮ ಪೊಕ್ಕು । ನೆರೆದ ಬಂಧುಗಳನ್ನು ।
ಪರಿಪರಿ ವಿಚಾರಿಸುತ । ಇರುಳೊಂದ ಕಳೆದು ॥ ೧೪–೫೭ ॥

ಮರುದಿನದ ಮುಂಬೆಳಗು । ಪುರವಯೋಧ್ಯೆಯ ಸೇರಿ ।
ಪರಮ ಸಿಂಹಾಸನದಿ । ಮೆರೆದ ಶ್ರೀರಾಮ ॥ ೧೪–೫೮ ॥

॥ **ವಾರ್ಧಕ** ॥
ಬರಿಯ ಕಥನಮಿದಲ್ಲ ಮೇಣಾತ್ಮ ತನುವಿನೊಳ ।
ಗೆರಕಮಾಗಿರ್ಪಂತೆ ಶ್ರೀರಾಮಕಥೆಯ ಪಂ ।
ಜರದಲ್ಲಿ ರಾಮರೂಪದ ಪರಮ ಪುರುಷೋತ್ತಮನ ಲೀಲೆ ಮೆಯ್ದಾಳ್ದುದು ॥
ಮೆರೆದುದೀ ಪಟ್ಟಾಭಿಷೇಕ ಪ್ರಾಣಾನ್ನ ಸುಂ ।
ದರ ಮನೋವಿಜ್ಞಾನದಾನಂದಮಯಕೋಶ ।
ಭರಿತದರ್ಶನದಿಂದೆ ಕವಿಕೃತಿವಿಭೂತಿಗಳ ರಸಋಷಿತ್ವಕೆ
ನಮಿಸುತೆ ॥ ೧೪–೫೯ ॥

॥ **ಕಂದ** ॥
ಸತಿಸಹಿತಗ್ನಿಯ ಪುಗುತಂ ।
ಪತಿಯಾದರ್ಶವನೆ ತೋರ್ದು ಮರಳುತಯೋಧ್ಯಾ ॥
ಪತಿಯೆನಿಸಿದ ರಾಮಾಯಣ ।
ಕೃತಿದರ್ಶನ ಯಕ್ಷಗಾನದ ಮಹಾಕಾವ್ಯಂ ॥ ೧೪–೩೦ ॥

॥ **ಭೂಪಾಳ – ತ್ರಿವುಡೆ** ॥
ಶ್ರೀ ಕುವೆಂಪು ಮಹಾಕವಿಯು ವಾ ।
ಲ್ಮೀಕಿ ರಾಮಾಯಣಕೆ ಕನ್ನಡ ।
ಕೋಕಿಲದ ಮಾಧುರ್ಯ ತುಂಬಿದ ।
ಲೋಕಗುರುವು ॥ ೧೪–೩೧ ॥

ಶಾಲಿವಾಹನ ಶರಧಿ ಗುಣನಿಧಿ ।
ಲೋಲ ಶಶಿ ಜಯನಾಮವತ್ಸರ ।
ಬಾಲಕೃಷ್ಣಜಯಂತಿ ಪರ್ವದ ।
ಲೀಲೆಯಂದು ॥ ೧೪–೩೨ ॥

ಇಂತು ರಚಿಸಿದೆ ಕಬ್ಬಿನಾಲೆ ವ ।
ಸಂತ ಭಾರದ್ವಾಜ ಕನ್ನಡ ।
ದಂತರಂಗವು ಹಾಡಿ ಕುಣಿಯಲಿ ।
ಸಂತಸದಲಿ ॥ ೧೪–೩೩ ॥

ಯಕ್ಷಗಾನದ ಕಾವ್ಯಕಲೆಯ ವಿ ।
ವಕ್ಷೆಯಿಂದಲಿ ರಾಮದರ್ಶನ ।
ದಕ್ಷಯದಿ ಜನಮನಕೆ ಸಂಸ್ಕೃತಿ ।
ರಕ್ಷೆಯಿರಲಿ ॥ ೧೪–೩೪ ॥

॥ ಮಂಗಲಪದ್ಯ ॥

॥ ಮಧ್ಯಮಾವತಿ – ಏಕ ॥

ಇಂತಾದ ರಾಮಾವತಾರಕಿಂ ಮಿಗಿಲೆಂಬ ।
ಗ್ರಂಥಾವತಾರಕೆ ಮಂಗಲಂ ॥
ಸಂತೋಷವೀವಂಥ ಯಕ್ಷಗಾನದ ರೂಪ ।
ಮಂ ತಾಳ್ದ ಕಾವ್ಯಕೆ ಮಂಗಲಂ ॥ ೧೪–೩೫ ॥

ವ್ಯಾಕುಲ ಕಳೆದು ಸರ್ವಾರ್ಥಸಿದ್ಧಿಯನೀವ ।
ಲೋಕಾಭಿರಾಮಂಗೆ ಮಂಗಲಂ ॥
ಸಾಕಾರ ತಾನಾಗಿ ಕಬ್ಬಿನಾಲೆಯೊಳಿರ್ಪ ।
ಶ್ರೀಕೃಷ್ಣರೂಪಂಗೆ ಮಂಗಲಂ ॥ ೧೪–೩೬ ॥

ಅಚ್ಯುತಾನಂತ ಗೋವಿಂದ ಮಂಗಲಮೂರ್ತಿ ।
ಸಚ್ಚಿದಾನಂದಗೆ ಮಂಗಲಂ ॥
ಉಚ್ಚಾರಮಾತ್ರದಿಂದಚ್ಚರಿ ಸುಖವೀವ ।
ಇಚ್ಛಾಸ್ವರೂಪಿಗೆ ಮಂಗಲಂ ॥ ೧೪–೩೭ ॥

ಇಂತು ಶ್ರೀರಾಮಲೀಲಾದರ್ಶನಮೆಂಬ ಯಕ್ಷಗಾನ ಮಹಾಕಾವ್ಯಂ
ಅಯೋಧ್ಯಾ ಕಿಷ್ಕಿಂಧಾ ಲಂಕಾ ಮತ್ತು ಶ್ರೀ ಎಂಬ ನಾಲ್ಕು ಸಂಪುಟಂಗಳೊಳ್
ಪದಿನಾಲ್ಕು ಪ್ರಸಂಗಸಂಚಿಕೆಗಳಿಂ
ಒಂದು ಸಾವಿರದ ಇನ್ನೂರ ನಲುವತ್ತೆಂಟು ಪದ್ಯಂಗಳಿಂ
ಮಂಗಳಮಾದುದು
॥ ಶ್ರೀರಾಮಾರ್ಪಣಮಸ್ತು ॥

ಕವಿ ಪರಿಚಯ

ಡಾ.ಕಬ್ಬಿನಾಲೆ ವಸಂತ ಭಾರದ್ವಾಜ ಇವರು ನಾಡಿನ ಹೊಸಪೀಳಿಗೆಯ ವಿದ್ವಾಂಸರೆಂಬ ಮನ್ನಣೆಯನ್ನು ಪಡೆದವರು. ಡಾ.ಶಿವರಾಮ ಕಾರಂತರ ಯಕ್ಷಗಾನ ಬ್ಯಾಲೆಗಳಲ್ಲಿ ದುಡಿದಿರುವ ಇವರು 'ಯಕ್ಷಗಾನ ಛಂದಸ್ಸು' ಎಂಬ ಸಂಶೋಧನ ಪ್ರಬಂಧಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಅಷ್ಟಾವಧಾನಿಗಳಾಗಿ, ಗಮಕವಿದ್ವಾಂಸರಾಗಿ, ಯಕ್ಷಗಾನ ತಾಳಮದ್ದಳೆ ಕಲಾವಿದರಾಗಿ ನಾಡಿನ ಗಮನಸೆಳೆದಿರುವ ಇವರು ಕಥೆ, ಕಾವ್ಯ, ಅನುವಾದ, ನಿಘಂಟು, ಗೀತರೂಪಕ, ಯಕ್ಷಗಾನಪ್ರಸಂಗ ಮುಂತಾದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಮಾಡಿದ್ದಾರೆ. ಇಪ್ಪತ್ತೈದು ಯಕ್ಷಗಾನಪ್ರಸಂಗಗಳನ್ನೂ ಐವತ್ತಕ್ಕೂ ಹೆಚ್ಚು ಸಾಹಿತ್ಯಕೃತಿಗಳನ್ನೂ ರಚಿಸಿದ್ದಾರೆ. ಯಕ್ಷಗಾನ ಕವಿಕಾವ್ಯ ವಿಹಾರ, ಯಕ್ಷಗಾನ ಪ್ರಸಂಗ ಸಾಹಿತ್ಯ, ಕನ್ನಡದಲ್ಲಿ ತತ್ತ್ವಪದಗಳು, ಶಬ್ದಶಾರದೆಯ ಸೆರಗು, ರಾಮನ ಹುಡುಕಾಟ, ಕುವೆಂಪು ಮತ್ತು ಅಧ್ಯಾತ್ಮ, ಹೊಸ ಬ್ಯಾಂಕಿಂಗ್ ನಿಘಂಟು, ಕನಕಮುಂಡಿಗೆ–ಅರ್ಥಾನುಸಂಧಾನ, ಕಪ್ಪುನೀರಿನ ಹೊಳೆ ಮುಂತಾದವು ಇವರ ಮುಖ್ಯ ಕೃತಿಗಳು.

ಡಾ.ಕಬ್ಬಿನಾಲೆಯವರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಬಹುಮಾನ, ಆರ್ಯಭಟ ಪ್ರಶಸ್ತಿ, ಕರಾವಳಿರತ್ನ ಪ್ರಶಸ್ತಿ, ತೌಳವಶ್ರೀ ಪ್ರಶಸ್ತಿ, ಮುದ್ದಣ ರಜತಪುರಸ್ಕಾರಗಳೇ ಮೊದಲಾದ ಪ್ರತಿಷ್ಠಿತ ಪ್ರಶಸ್ತಿಗಳು ಸಂದಿವೆ. ಮುಂಬಯಿಯಲ್ಲಿ ನಡೆದ ಎಂಟನೇ ಅಖಿಲ ಭಾರತ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (1998), ಕಾರ್ಕಳ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (2008), ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವಿಚಾರಗೋಷ್ಠಿಯ

ಅಧ್ಯಕ್ಷತೆ ಮುಂತಾದ ಗೌರವಗಳಿಗೆ ಇವರು ಪಾತ್ರರಾಗಿದ್ದಾರೆ. ಕನ್ನಡ ಗಣಕ ಪರಿಷತ್ತು ಹೊರತಂದಿರುವ 'ಕುಮಾರವ್ಯಾಸ' ಅಡಕಮುದ್ರಿಕೆಯ ಸಂಪಾದಕ ಸಮಿತಿಯ ಸದಸ್ಯರಾಗಿ, ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಗಮಕ ಕಲಾವಿದರ ಸಾಕ್ಷ್ಯಚಿತ್ರಗಳಿಗೆ ವಿಷಯತಜ್ಞರಾಗಿ, ಕರ್ನಾಟಕ ಸರಕಾರದ ಕನಕದಾಸ ಸಮಗ್ರಸಾಹಿತ್ಯದ ತುಳುಭಾಷಾಂತರ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಆಕಾಶವಾಣಿ, ದೂರದರ್ಶನಗಳಲ್ಲಿ ಇವರ ಅನೇಕ ಕಾರ್ಯಕ್ರಮಗಳು ಪ್ರಸಾರವಾಗಿವೆ. ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯರಾಗಿಯೂ (2014) ಸೇವೆ ಸಲ್ಲಿಸುತ್ತಿದ್ದಾರೆ.

ಉಡುಪಿ ಜಿಲ್ಲೆಯ ಕಾರ್ಕಳತಾಲೂಕಿನ ಕಬ್ಬಿನಾಲೆ ಇವರ ಹುಟ್ಟೂರು. ತಂದೆ ಮಧುಸೂದನ ಭಟ್ಟ, ತಾಯಿ ಸುಮತಿ. ಪತ್ನಿ ಗೀತಾ ಮತ್ತು ಮಕ್ಕಳು ಭಾಮಿನಿ–ಭಾಷಿಣಿ. ಭಾರತೀಯ ಪುರಾಣ, ಉಪನಿಷತ್ತು, ಕಾವ್ಯಕಲಾಮೀಮಾಂಸೆ ಇವರ ಆಸಕ್ತಿಯ ವಿಷಯ. ಭಾಷೆ, ವ್ಯಾಕರಣ, ಛಂದಃಶಾಸ್ತ್ರಗಳಲ್ಲಿ ಆಳವಾದ ವಿದ್ವತ್ತನ್ನು ಪಡೆದಿರುವ ಇವರು ಉತ್ತಮವಾಗ್ಮಿಯಾಗಿ ನಾಡಿನಾದ್ಯಂತ ಪ್ರಸಿದ್ಧರಾಗಿದ್ದಾರೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಸಿಬ್ಬಂದಿ ತರಬೇತಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಹಿರಿಯ ವ್ಯವಸ್ಥಾಪಕರಾಗಿ ಇಪ್ಪತ್ತೈದು ವರ್ಷಗಳ ಕಾಲ ದುಡಿದ ಇವರು ಈಗ ಸ್ವಯಂ ನಿವೃತ್ತಿ ಪಡೆದು ಮೈಸೂರಿನಲ್ಲಿ ಸಾಹಿತ್ಯ–ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

***

ಕಾವ್ಯಾವಲೋಕನ

ನೆಚ್ಚಿನ ನೇಹಿಗರಾದ ಸಂಮಾನ್ಯ ಡಾ.ಕಬ್ಬಿನಾಲೆ ವಸಂತಭಾರದ್ವಾಜರು ಅವರ ಹೆಸರಿಗೆ ತಕ್ಕಂತೆ ಸಿಹಿಯಾದ ಕಬ್ಬಿನ ಹಾಲನ್ನು ದಾರಿಯಲ್ಲಿ ಹಾದುಹೋಗುವ ಬಳಲಿದ ಪಾಂಥರಿಗೆ ಕರೆದೀಯುವ ಕಬ್ಬಿನಾಲೆಯಂಥ ಔದಾರ್ಯಶೀಲರು. ಅಂತೆಯೇ ಖ್ಯಾತಿವೆತ್ತ ಕರಮೆಸೆವ ಕವಿಗಳೆಂಬ ಕಮನೀಯೋದ್ಯಾನಂಗಳ ಮಧ್ಯದಲ್ಲಿ ಪರಿಪರಿಯ ಪರಿಮಳ ಬೀರುವ ಪಲವಿಧದ ಪುಷ್ಪಗಳಿಂದ ಪರಿಶೋಭಿಸುವ ವಸಂತೋದ್ಯಾನಸಮರು. ಅಷ್ಟೇ ಅಲ್ಲ; ಭಾರದ್ವಾಜರೆಂಬ ಅನ್ವರ್ಥನಾಮವನ್ನಾಂತ ಕ್ರಿಯಾಶೀಲ ತಾಪಸಗುಣಾಢ್ಯರು. ಮಿಗಿಲಾಗಿ "ನಾನೃಷಿಃ ಕುರುತೇ ಕಾವ್ಯಂ" ಎಂಬ ನಾಣ್ನುಡಿಯಂತೆ "ಶ್ರೀರಾಮಲೀಲಾದರ್ಶನಂ" ಎಂಬೀ ಯಕ್ಷಗಾನಮಹಾಕಾವ್ಯವನ್ನು ರಚಿಸಿರುವ ಋಷಿಸದೃಶರು.

"ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ ಸತತಾಭ್ಯಾಸಪ್ರಯತ್ನಂ ಸತ್ಕವಿತೆಗೆ ನಿಯತಂ ಕಾರಣಂ" ಎಂಬುದು ಪ್ರಾಚೀನಕವಿವಾಣಿ. ಅಂತೆನ್ನುವುದಾದರೆ ಇವೊಂದೊಂದೂ ಏನೇನು? ಸತ್ಕವಿತೆಯೆಂದರೇನು? ಸ್ವಲ್ಪ ಚಿಂತಿಸೋಣ.

ಸ್ಮೃತಿ ಹಿಂದಣದ ನೆನಪು ಮತಿ ಮುಂದಣದರೂಹೆ
ಹಿತವಿವೇಚನೆ ಇಂದಿನದರ ಚರ್ಚೆ
ಜತೆಗೂಡಲಿವು ಪ್ರಜ್ಞೆ – ಇದು ನವೋನ್ಮೇಷಮಿರೆ
ಪ್ರತಿಭೆ – ಇದಿರಲವ ಕವಿ – ಬೋಳುಬಸವ

ಅಂದರೆ ಸ್ಮೃತಿ, ಮತಿ ಹಾಗೂ ವಿವೇಚನೆ ಈ ಮೂರರ ಹದವಾದ ಸಂಮಿಶ್ರಣವೇ ಪ್ರಜ್ಞೆ. ಈ ಪ್ರಜ್ಞೆಯು ನವೋನವೋನ್ಮೇಷಶಾಲಿನಿಯಾದಾಗ ಅದು ಪ್ರತಿಭೆ. ಇದೇ ಸತ್ಕವಿತೆಯ ಮೂಲಬಂಡವಾಳ. ಇದು ಇದ್ದವನೇ ಕವಿ. ಇದಿಷ್ಟೇ ಸಾಲದು. ಕಾವ್ಯಶಾಸ್ತ್ರಪ್ರಚಯಪರಿಚಯವಿರಬೇಕು. ಅಂದರೆ ವ್ಯಾಕರಣ, ಅಲಂಕಾರ, ಛಂದಸ್ಸು ಹಾಗೂ ಕಾವ್ಯಮೀಮಾಂಸೆಗಳಲ್ಲಿ ಪಾಂಡಿತ್ಯವಿರಬೇಕು. ಡಾ. ಕಬ್ಬಿನಾಲೆಯವರೋ ವೈಯಾಕರಣೋತ್ತಮರು, ಅಲಂಕಾರಕೋವಿದರು, ಛಂದಶ್ಶಾಸ್ತ್ರಪರಿಣಿತರು, ಜತೆಗೆ ಕಾವ್ಯಮೀಮಾಂಸಾನಿಷ್ಣಾತರು. ಇವರಿಗೆ ಈ ನಾಲ್ಕುಶಾಸ್ತ್ರಗಳ ಸಾಕಷ್ಟು ಪಾಂಡಿತ್ಯವಿದೆ. ಈ ಪಾಂಡಿತ್ಯದೊಡನೆ ಆ ಪ್ರತಿಭೆ ಸಂಗಮಗೊಂಡಾಗ ಸುವರ್ಣಸುಮಕ್ಕೆ ಸುಗಂಧ ಬೆರೆದಂತಾಗುತ್ತದೆ. ಸತ್ಕವಿತೆ ಪುಟಿದೇಳುತ್ತದೆ. ಈ ಪವಿತ್ರಸಂಗಮಕ್ಕೂ ಸಹ ಮಾರಾರಿಯ ಕೃಪೆಯು ಅಗತ್ಯವೆನ್ನುತ್ತಾನೆ ಷಡಕ್ಷರದೇವನಿಂತು:

ಆರಾರೇರರ್ಶಾಸ್ತ್ರ
ಶ್ರೀರೋಹಣಗಿರಿಯನಲ್ಲಿ ನವಕವಿತಾಚಿಂ ।
ತಾರತ್ನಂ ದೊರೆಗುಮೆ ಮಾ
ರಾರಿಯ ಕೃಪೆಯಿಲ್ಲದಂಗೆ ಧರಣೀತಳದೊಳ್ ॥

ಇವರು ಜ್ಞಾನವೃದ್ಧರ ಸೇವೆಯನ್ನು ಮಾಡುವುದರ ಮೂಲಕ ಮಾರಾರಿಯ ಕೃಪೆಯನ್ನೂ ಸಹ ಪಡೆದಿದ್ದಾರೆ. ಸತತಾಭ್ಯಾಸವಂತೂ ಇವರಿಗೆ ಹುಟ್ಟಿನಿಂದಲೇ ಮೈಗೂಡಿದೆ. ಅಂದರೆ ಸತ್ಕವಿತೆಗೆ ಕಾರಣವಾದ ಸಮಸ್ತಗುಣಗಳೂ ಇವರಲ್ಲಿ ವಿಜೃಂಭಿಸುತ್ತಿವೆ. ಇಂತಹವರಿಂದ ಸತ್ಯದರ್ಶನ ಮಾಡಿಸುವ ಸತ್ಕವಿತೆ ಪುಟಿಯುತ್ತದೆ. ಹೀಗಾಗಿ ಪಂಡಿತ–ಪಾಮರರೀರ್ವರನ್ನೂ ಸಹ ಸಂತೃಪ್ತಿಗೊಳಿಸುವ ಇಂತಹ ಮಹಾಕಾವ್ಯ ಇವರಿಂದ ಹೊರಹೊಮ್ಮಿದೆ.

ಡಾ. ಕಬ್ಬಿನಾಲೆಯವರು ಸತ್ಕವಿ ಮಾತ್ರವೇ ಅಲ್ಲ. ಬಹುಶ್ರುತವಿದ್ವಾಂಸರು, ಉದಾತ್ತಚಿಂತಕರು, ಉಜ್ವಲಭಾಷಣಕಾರರು, ಉತ್ತಮೋತ್ತಮ ಯಕ್ಷಗಾನಕಲಾಕೋವಿದರು. ಅಂತೆಯೇ ಯಕ್ಷಗಾನತಾಳಮದ್ದಳೆಯ ಉನ್ನತೋನ್ನತಾರ್ಥಧಾರಿಗಳು. ಹೀಗೆ ನಾಡಿನಾದ್ಯಂತ ಬಹುಪ್ರಖ್ಯಾತರು, ಸುಪ್ರಸಿದ್ಧರು. ಅಷ್ಟಾವಧಾನಚತುರರೂ ಹೌದು. ಇವರನ್ನು ಹುಡುಕಿಕೊಂಡು ಬಂದ ಪ್ರಶಸ್ತಿ–ಪುರಸ್ಕಾರಗಳದೆಷ್ಟೋ! ಇವರಿಗೆ ಅವುಗಳು ಲಭ್ಯವಾಗಿ, ಅವಕ್ಕೆಯೇ ಹೆಚ್ಚಿನ ಮಾನ್ಯತೆಗಳಸಿಕೊಂಡಿವೆಯೆಂದರೆ ತಪ್ಪಾಗಲಾರದು. ಯಕ್ಷಗಾನಛಂದಸ್ಸಿನಲ್ಲಂತೂ ಇವರಿಗೆ ಇವರೇ ಸಮಾನರು. ಹೀಗಾಗಿ ಇವರ “ಯಕ್ಷಗಾನಛಂದಸ್ಸು” ಎಂಬ ನಿರುಪಮನಿಬಂಧಕ್ಕೆ “ಡಾಕ್ಟರೇಟ್” ಪದವಿ ಸಲ್ಲಿಸಿ ಮೈಸೂರು ವಿಶ್ವವಿದ್ಯಾನಿಲಯ ತನ್ನ ಉನ್ನತಿಕೆಯನ್ನು ತಾನೇ ಹೆಚ್ಚಿಸಿಕೊಂಡಿದೆಯೆಂದರೆ ಅತಿಶಯೋಕ್ತಿಯಲ್ಲ. ಈಗ ಈ ಮಹಾಕಾವ್ಯವನ್ನು ಮೈಸೂರಿನ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವು ಪ್ರಕಟಿಸುತ್ತಿರುವುದು ಅಭಿನಂದನೀಯವಾದ ವಿಚಾರವೇ ಸರಿ.

ಪ್ರಾತಃಸ್ಮರಣೀಯರಾದ ಮಹಾಕವಿ ಕುವೆಂಪು ಅವರ ಮನೆಗೆ ನಾನು ಒಮ್ಮೆ ಹೋಗಿದ್ದೆ. ಆಗ ಅವರು “ಬರಿಯ ರಾಮಾಯಣಕಥಾವಸ್ತು ಬೇಕಾದರೆ ನಾನೇ ವಯಸ್ಕರಶಿಕ್ಷಣಸಮಿತಿಗೆ ಅದನ್ನು ಬರೆದುಕೊಟ್ಟಿದ್ದೇನೆ. ಅಲ್ಲಿ ನೋಡಿಕೊಳ್ಳಿ; ಆದರೆ ದರ್ಶನವನ್ನು ಅರಗಿಸಿಕೊಳ್ಳುವ ಸಾಮರ್ಥ್ಯವಿದ್ದರೆ ಈ ನನ್ನ ರಾಮಾಯಣದರ್ಶನವನ್ನು ಓದಿ” ಎಂದು ಅವರಲ್ಲಿದ್ದ ಕೊನೆಯ ಪ್ರತಿಯನ್ನು ನನ್ನ ಕೈಗಿತ್ತರು. “ಇತಿಹಾಸಮಲ್ತು; ಬರಿ ಕಥೆಯಲ್ತು; ಕಥೆ ತಾಂ ನಿಮಿತ್ತಮಾತ್ರಂ, ಆತ್ಮಕೆ ಶರೀರದೋಲಂತೆ, ಮೆಯ್ವೆತ್ತುದಿಲ್ಲಿ ರಾಮನ ಕಥೆಯ ಪಂಜರದಿ ರಾಮರೂಪದ ಪರಾತ್ಪರನ ಪುರುಷೋತ್ತಮನ ಲೋಕಲೀಲಾದರ್ಶನಂ” ಎಂಬುದು ಅವರ ಕಾಣ್ಕೆ. ಅಂತಹ ‘ಲೋಕಲೀಲಾದರ್ಶನ’ದ ನಿಲುವಿಗೆ

ಮಾರುಪೋಗಿ ಸಂಮಾನ್ಯ ಡಾ.ಕಬ್ಬಿನಾಲೆಯವರು ಅದನ್ನು ಯಕ್ಷಗಾನಛಂದಸ್ಸಿನಲ್ಲಿ ತರಬೇಕೆಂದು ಭಾವಿಸಿ ಈ "ಶ್ರೀರಾಮಲೀಲಾದರ್ಶನಂ" ಮಹಾಕಾವ್ಯವನ್ನು ರಚಿಸಿದ್ದಾರೆ. ಅದರಲ್ಲಿ ಯಶಸ್ಸನ್ನೂ ಸಹ ಕಂಡಿದ್ದಾರೆ. ಅವರಿಗೆ ಹಾರ್ದಿಕ ಅಭಿನಂದನೆಗಳು.

ಭಾರತೀಯ ಕಾವ್ಯಪರಂಪರೆಯಲ್ಲಿ ಕಾವ್ಯವು ನಿರ್ವಿಘ್ನವಾಗಿ ಸಾಗಲು ಪ್ರಾರಂಭದಲ್ಲಿ ಮಂಗಲಮಯ ನಾಂದಿಪದ್ಯವನ್ನು ರಚಿಸುವುದು ಸಂಪ್ರದಾಯ. ಆ ನಾಂದಿಯಲ್ಲಿ ಆಶಿಸ್, ನಮಸ್ಕ್ರಿಯಾ ಹಾಗೂ ವಸ್ತುನಿರ್ದೇಶವೆಂದು ಮೂವಿಧಗಳುಂಟು. ಇಲ್ಲಿ ಕವಿ ಭಾರದ್ವಾಜರು ವಸ್ತುನಿರ್ದೇಶ ಹಾಗೂ ನಮಸ್ಕ್ರಿಯಾ ಎರಡನ್ನೂ ಸಂಲಗ್ನಗೊಳಿಸಿ ಕುವೆಂಪು ಅವರ ಮಹಾಛಂದಸ್ಸಿನಲ್ಲಿಯೇ 'ಸಚ್ಚಿದಾನಂದಮಯ ಚಿತ್ಕಲಾಮೂರ್ತಿ'ಗೆ ಶರಣು ಸಮರ್ಪಿಸಿದ್ದಾರೆ.

ಶ್ರೀಜನಕಜಾರಮಣ ಲೋಕಾಭಿರಾಮಗುಣ
ಪೂರ್ಣ ಸಾಕೇತಪತಿ ಕರುಣನಿಧಿ ದಾಶರಥಿ
ಮಾನುಷಾಕೃತಿವೆತ್ತ ಮನುಜಜೀವನಧರ್ಮ
ದಾ ಮೌಲ್ಯ ನಂಬಿ ನಡೆದು
ಲೋಕಲೀಲಾರಾಮ
ದರ್ಶನದ ರಸಸಿದ್ಧಿಯಿಂದ ಸೀಮಾತೀತ
ನಿತ್ಯರಾಮಾಯಣದ ಸತ್ಯಮಂ ಸ್ಥಾಪಿಸಿದ
ಸಚ್ಚಿದಾನಂದಮಯ ಚಿತ್ಕಲಾಮೂರ್ತಿ ಶರಣು (1-1)

ಯಕ್ಷಗಾನದ 'ಸುರುಟಿ-ಏಕ' ಛಂದಸ್ಸಿನಲ್ಲಿ ಗಣಪತಿಯನ್ನು ಮೂರು ಪದ್ಯಗಳಲ್ಲಿಯೂ, ಸರಸ್ವತಿಯನ್ನು 'ಸಾರಂಗ-ಆಟ'ದಲ್ಲಿ ಮೂರುಪದ್ಯಗಳಲ್ಲಿಯೂ ಸ್ತೋತ್ರಮಾಡಿದ್ದಾರೆ. ಅವುಗಳ ಸೌಂದರ್ಯ ಆಪಾತಮನೋಹರ.

ಅಂಬಾಶಿವಸುತನೆ । ವಿಘ್ನ ಕ । ದಂಬವ ಕಳೆವವನೆ ॥
ನಂಬಿದೆ ನಿನ್ನ ಪ । ದಾಂಬುಜ ಯುಗಳವ ।
ಕಂಬದ ಗಣಪತಿ । ಬೆಂಬಿಡದೇ ಪೊರೆ ॥ (1-2)

ಶ್ರೀ ವೀಣಾಪಾಣಿ ವಾಣಿ । ಸಂಗೀತಕ ।
ಲಾವಿನೋದಿನಿ ಕಲ್ಯಾಣಿ ॥
ಕಾವ್ಯಕನ್ನಡದ ವಾ । ಗ್ದೇವಿ ಬ್ರಹ್ಮನ ರಾಣಿ ।
ಪಾವನರಸತೀರ್ಥ । ಭಾವಗಂಗಾವೇಣಿ ॥ (1-5)

"ರಂನರಂನತಭಮಂಯಮ್ಮೈದೆ ವರಛಂದೋವಿದರ್ಥನಛಂದೋಬಂಧ ಮೆಂಬರ್" ಎಂಬ ಸೂತ್ರಲಕ್ಷಣವಾಂತ ನನ್ನ 'ಛಂದೋಬಂಧ' ವೃತ್ತದಲ್ಲಿ :

ಛಂದಮೆಂದೊಡನದೊಂದು ಗೋಜಲೊಣಕಗ್ಗಂ ಮಿದುಳ್ಗದು ಹಿಂಸಾಬಂಧನಂ ಸ್ವ
ಚ್ಛಂದದಿಂ ಹರಿವ ಭಾವಕೊಂದುತೆರದೊಡ್ಡೈ ವಿಚಾರಿಸಿ ನೋಡಲ್ಸಿಕ್ಕುಸಿಕ್ಕಾ
ದೊಂದು ಸೀಗೆಮೆಳೆ ಶುಷ್ಕಪಂಡಿತಜನರ್ಮಂಡೆ ನೋಯಿಪ ಪೇಸೀರುಂಡೆ ಚೀರ್ವಂ
ಥೊಂದು ಕೂರ್ಕೋರೆತಮೆಂದು ಪೇಳ್ವರು ಕೆಲರ್ಕೈಯ್ದು ನೋಡದೆ ಛಂದೋಬಂಧದೊಳ್ಪಂ ॥

ಎಂದು ಹೇಳಿರುವಂತೆ ಮೂಗುಮುರಿಯುವ ಈ ಕಾಲದಲ್ಲೂ ಸಹ ಸಂಮಾನ್ಯ ಡಾ.ಕಬ್ಬಿನಾಲೆಯವರು ಧ್ರುವಮಠ್ಯಾದಿ ಸಪ್ತತಾಳಗಳಲ್ಲಿಯೂ ಕಾಂಭೋದಿ, ಬಿಲಹರಿ, ಕೇದಾರಗೌಳ ಮುಂತಾದ ಪ್ರಸಿದ್ಧ ನಲುವತ್ತೈದು ರಾಗಗಳಲ್ಲಿಯೂ ದ್ವಿಪದಿ, ತ್ರಿಪದಿ, ಚೌಪದಿ, ಪಂಚಪದಿ, ಷಟ್ಪದಿ ಮೊದಲಾದ ಯಕ್ಷಗಾನದ ವಿವಿಧ ಛಂದಸ್ಸುಗಳಲ್ಲಿಯೂ, ಅಂತೆಯೇ ಸಾಂಪ್ರದಾಯಿಕ ಭಾಮಿನಿ ಹಾಗೂ ವಾರ್ಧಕಷಟ್ಪದಿಗಳಲ್ಲಿಯೂ, ಸಾಂಗತ್ಯದಲ್ಲಿಯೂ ಆಯಾಯ ಸನ್ನಿವೇಶಕ್ಕೆ ಹೊಂದುವ ರಾಗರಸಭಾವಕ್ಕೆ ಸೂಕ್ತರೀತಿಯಲ್ಲಿ ಇಡೀ ಕಾವ್ಯವನ್ನು ರಚಿಸಿ ಸಮೃದ್ಧಗೊಳಿಸಿದ್ದಾರೆ. ಇಂತು ರಚಿಸಿ ಛಂದಸ್ಸು ಗೋಜಲೊಣಕಗ್ಗವಲ್ಲ ವೆಂದೂ, ಅದು "ಕಾವ್ಯರಸೋತ್ಕರ್ಷೋದ್ಗಾರವನೆಲ್ಲಂ ಸೂಸುವ ಗಂಧಂ" ಎಂದು ಸಾಧಿಸಿದ್ದಾರೆ. 'ತಂಯಂ ತಯತಂ ಯಂಭಂ ಗಂಗ ಬರಲ್ಕಾಗಳ್ಕಲ್ಪಲತಾಯೆಂಬ ಬುಧರೆಲ್ಲಂ' ಎಂದು ನಾನು ಲಕ್ಷಣಕೊಟ್ಟು ಈ ಕೆಳಗೆ ಛಂದಸ್ಸಿನ ಮಹತ್ತನ್ನು ಕುರಿತು ಬರೆದಿರುವ "ಕಲ್ಪಲತಾ" ವೃತ್ತಕ್ಕೆ ಅನುಮೋದನೆ ನೀಡಿದ್ದಾರೆ.

ಛಂದಂ ಮಿಗೆಪಾಡಲ್ಚಂದಂ ನೆರೆಕೇಳಲ್ಚಂದಂ ಬರೆಯಲ್ಚಂದಂ ತವೆಯೋದ
ಲ್ಚಂದಂ ಸ್ಮರಿಸಲ್ಚಂದಂ ಪಾಡುಗರಂ ಮೇಣ್ಣಲ್ಗಬ್ಬಿಗರಂ ಹುಚ್ಚೆಬ್ಬಿಸುವೀ ಚ
ಕ್ಕಂದಂ ವಿಬುಧರ್ಗ್ಗೋ ಸ್ವರ್ಕಲ್ಪಲತಾಕಂದಂ ಕೇಳುವ ಸದ್ವಿದ್ವಾಂಸಗೆ ಕರ್ಣಾ
ನಂದಂ ರಸದುಕ್ಕಂದಂ ಕಾವ್ಯರಸೋತ್ಕರ್ಷೋದ್ಗಾರವನೆಲ್ಲಂಸೂಸುವ ಗಂಧಂ॥

ಈ ಮಹಾಕಾವ್ಯದಲ್ಲಿ ಮೂರು ಮತ್ತೇಭವಿಕ್ರೀಡಿತವೃತ್ತಗಳನ್ನು ಮತ್ತು ಒಂದು ಚಂಪಕಮಾಲೆಯನ್ನೂ ಇವರು ಪ್ರಯೋಗಿಸಿದ್ದಾರೆ. ಲಯಬದ್ಧವಾದ ಛಂದಸ್ಸು ಹಾಡಲು ಇಂಪಾಗಿದ್ದು, ಓದುಗನ ಮನಸ್ಸನ್ನು ಸೆಳೆಯುತ್ತದೆ. ಬಾಯಿಪಾಠಮಾಡಲು ಸಹ ಅನುಕೂಲವಾಗಿರುತ್ತದೆ. ಅದು ಆಕರ್ಷಿಸುವಷ್ಟು ಮುಕ್ತಛಂದಸ್ಸು ಮನಸ್ಸನ್ನು ಹಿಡಿದು ನಿಲ್ಲಿಸಲಾರದೆಂದು ನನ್ನ ಅನಿಸಿಕೆ. ಅದು ಸತ್ಯಸ್ಯ ಸತ್ಯವೆಂದು ನನ್ನೊಡನೆ ಕೈಜೋಡಿಸಿ ಕೆಳಕಂಡ ನನ್ನ "ಭರತನಾಟ್ಯ" ವೃತ್ತವನ್ನು [ಭಂಜಭ ಭನಂ ಭಭಂ ನರಲಂ ಕ್ರಮದಿ ಬರೆ ಶೋಭಿಪುದೇ ನುತ ಭರತನಾಟ್ಯಮೈಸೆ] ಮೆಚ್ಚುತ್ತಾರೆ.

ರಾತ್ರಿಯ ವಿಹಾರಸಂಘದ ಬೆತ್ತಲೆ ಕುಣಿತವೆತ್ತ ರಸೋಜ್ವಲಭರತನಾಟ್ಯಮೆತ್ತ
ಜಾತ್ರೆಜನ ಗೈವ ತಂಬಟೆಸದ್ದಿನ ಹೊಡೆತಮೆತ್ತ ಮೃದಂಗದ ಮಧುರನಾದಮೆತ್ತ
ಸೂತ್ರಕೊಳಗಾದ ಚರ್ಮದ ಗೊಂಬೆಯ ನಟನೆಯೆತ್ತ ವಿದಗ್ಧಳಭಿನಯಭಂಗಿಯೆತ್ತ
ಮಾತ್ರೆಗಣಲೆಕ್ಕವಿಲ್ಲದ ಶುಷ್ಕಕವನಗಳೆತ್ತ ಸುವೃತ್ತಕೆ ಬರೆದ ಕಾವ್ಯಮೆತ್ತ ||

ಇಡೀ ಕಾವ್ಯ ಯಕ್ಷಗಾನಛಂದೋಮಯವಾಗಿರುವುದರಿಂದ ಯಕ್ಷಗಾನ ಪ್ರಿಯರಿಗೆ ಇದು ಆಪ್ಯಾಯಮಾನ ವಾಗಬಹುದು. ಅಲ್ಲದೆ ಚಂಪೂಕಾವ್ಯದಲ್ಲಿ ಕಂದಪದ್ಯಕ್ಕೆ ತನ್ನದೇ ಆದ ಪ್ರಾಶಸ್ತ್ಯವುಂಟು. ಅದರ ಸಂಕ್ಷಿಪ್ತತೆ ಅದಕ್ಕೆ ತನ್ನದೇ ಆದ ಸೊಗಡನ್ನು ತರುತ್ತದೆ. ಕರಿಯನ್ನು ಕನ್ನಡಿಯಲ್ಲಿ ಅಡಗಿಸಿದಂತೆ ಕವಿಯ ವಿಸ್ತೃತಭಾವವನ್ನು ಸಹ ಅದರಲ್ಲಿ ಅಡಗಿಸಬಹುದು. ನಿಜ ಹೇಳುವುದಾದರೆ ಕವಿ ತನ್ನ ಕವಿತಾಸಾಮರ್ಥ್ಯವನ್ನು ಕಂದಪದ್ಯದಲ್ಲಿ ತೋರಿಸಬಲ್ಲ. ಅಂತೆಯೇ ಸಂಮಾನ್ಯ ಕಬ್ಬಿನಾಲೆಯವರು ತಮ್ಮ ಕಾವ್ಯದ ಅಯೋಧ್ಯಾದಿ ನಾಲ್ಕೂ ಸಂಪುಟಗಳ ಹದಿನಾಲ್ಕು ಪ್ರಸಂಗಗಳ ಪ್ರತಿಸಂಚಿಕೆಯ ಕೊನೆಯಲ್ಲಿ ಒಂದು ಕಂದಪದ್ಯವನ್ನೂ, ಕಾವ್ಯದ ಮಧ್ಯದಲ್ಲಿ ನಾಲ್ಕೈದು ಕಂದಪದ್ಯಗಳನ್ನೂ ತುಂಬಾ ಬಂಧುರವಾಗಿಯೂ ಅರ್ಥಪೂರ್ಣವಾಗಿಯೂ ರಚಿಸಿದ್ದಾರೆ. ಕಂದದ ಸೊಬಗನ್ನು ಛೇಕಾನುಪ್ರಾಸವಿಟ್ಟು '**ಮಂಸಂತಂಜಯತಂ ನಂಭಂಗವನಾಂತಮಿತಾರ್ಥಂ ನೀಡುತ್ತಿರೆ ಕವಿಕೋಕಿಲವೈ**' ಎಂಬ ಲಕ್ಷಣದೊಡನೆ ರಚಿತವಾಗಿರುವ ಕೆಳಕಂಡ ನನ್ನ "ಕವಿಕೋಕಿಲ"ವೃತ್ತದಲ್ಲಿ ಆಸ್ವಾದಿಸಬಹುದು.

ಕಂದಂ ಕನ್ನಡಛಂದೋಮಾತೆಯ ಮುದ್ದಿನ ಕಂದಂ ನಲ್ಗನ್ನಡಕವಿಕೋಕಿಲಮಾ
ಕಂದಂ ಕನ್ನಡಛಂದೋದ್ಯಾನದ ಮೇರುಲತಾಕಂದಂ ಕಬ್ಬಿಗರೊಲಿದಾಡುವ ಚ
ಕ್ಕಂದಂ ಕನ್ನಡಛಂದೋಗೋವಿನ ನೆಚ್ಚಿನ ಕಂದಂ ಛಂದೋವಿಬುಧರಿಗಂ ರಸದು
ಕ್ಕಂದಂ ಕನ್ನಡಛಂದೋಗೌರಿಯ ಮೆಚ್ಚಿನ ಸ್ಕಂದಂ ಮೇಣಾಭರಣಶಿಖಾಮಣಿಯೈ ||

ಇದು ಬರಿ ಕಥೆಯಲ್ತು, ಇದು "ಶ್ರೀರಾಮಲೀಲಾದರ್ಶನಂ". ಪೂಜ್ಯ ಕುವೆಂಪು ಅವರ ಶ್ರೀರಾಮಾಯಣ ದರ್ಶನವನ್ನು ಯಕ್ಷಗಾನಧಾಟಿಯಲ್ಲಿ ಹೊರಹೊಮ್ಮಿಸಿದ ದರ್ಶನಕಾವ್ಯ. ಪಾಪಕ್ಕೆ ತಕ್ಕಂತಹ ಶಿಕ್ಷೆಯನ್ನು ಯಾರಾದರೂ ಅನುಭವಿಸಲೇಬೇಕು. ಆದರೆ ಪರಮಾತ್ಮ ಅಷ್ಟು ನಿಷ್ಕರುಣಿಯಲ್ಲ. ಅವನು ದಯಾಸಾಗರ ಕರುಣಾಮಯಿ. ಆದುದರಿಂದ ಸಂಮಾನ್ಯ ಕುವೆಂಪು ಅವರು "ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್ವ್ಯೂಹರಚನೆಯೊಳ್" ಎಂಬ ಸತ್ಯಸ್ಯ ಸತ್ಯ ದರ್ಶನವನ್ನು ಸಾರುತ್ತಾರೆ. ಯಾರೇ ಪಾಪ ಮಾಡಿರಲಿ ಪಶ್ಚಾತ್ತಾಪದ ದಳ್ಳುರಿಯಲ್ಲಿ ಬೆಂದು ಪಾವನವಾದಾಗ ತನ್ನೆಲ್ಲ ದುರಿತವನ್ನು ಕಳೆದುಕೊಂಡು ಪುಟಕ್ಕಿಟ್ಟ ಚಿನ್ನದಂತೆ ಪರಿಶುದ್ಧವಾಗಿ ಪರಂಧಾಮವನ್ನೈದುತ್ತಾನೆಂಬುದು ಕುವೆಂಪು ಅವರ ಸಮ್ಯಗ್ದರ್ಶನ. ಇಡೀ ರಾಮಾಯಣದ ತಿರುವಿಗೆ ಮೂಲಕಾರಣಳಾದವಳು 'ಮಮತೆಯ ಸುಳಿ ಮಂಥರೆ'. ತನ್ನ ಅತ್ಯಂತ ಪ್ರೀತಿಯ

ಕೈಕೆಯ ಮಗನ ಮೇಲಣ ವ್ಯಾಮೋಹವು ಮರ್ಯಾದಾಪುರುಷೋತ್ತಮನಾದ ಶ್ರೀರಾಮಚಂದ್ರನನ್ನು ಕಾಡಿಗಟ್ಟಿತು. ಅನಂತರ ಭರತನ ಆಕ್ರೋಶಕ್ಕೆ ಸಿಕ್ಕಿ ಜರ್ಝರಿತಳಾಗಿ, ಶತ್ರುಘ್ನನಿಂದ ಬಿಡಿಸಿಕೊಂಡು ಕಂಗಾಲಾಗಿ ತಾನೇ ರಾಮನನ್ನು ಕರೆತರಲು ಕಾಡಿಗೆ ಹೋಗುತ್ತಾಳೆ. "ಓ ನನ್ನ ಭರತನಣ್ಣಯ್ಯ ಓ! ರಾಮಯ್ಯ! ಹೇಳೆಲ್ಲಿರುವೆಯಯ್ಯ! ದಮ್ಮಯ್ಯ" ಎಂದು ರೋದಿಸುತ್ತಾ ದಾವಾಗ್ನಿಯೊಳಗೆ ನುಗ್ಗಿ ಅದರಲ್ಲಿ ಐಕ್ಯಳಾಗುತ್ತಾಳೆ. ಇದೇ ದರ್ಶನವನ್ನು ಸಂಮಾನ್ಯ ಕಬ್ಬಿನಾಲೆಯವರು ತಮ್ಮ ಈ ಯಕ್ಷಗಾನಕಾವ್ಯದಲ್ಲಿ ಹೀಗೆ ಮೂಡಿಸಿದ್ದಾರೆ.

"ಓ ನನ್ನ ಮಗು ಭರತನಣ್ಣಯ್ಯ ರಾಮಯ್ಯ
ನೀನೆಲ್ಲಿರುವೆಯಯ್ಯ ಪೇಳು ದಮ್ಮಯ್ಯ
ಆನಂದಸಿರಿಯಕ್ಕೆ ಭರತನಿಗೆ ಶುಭಮಕ್ಕೆ
ನೀನೀಗ ಮರಳಿ ಮನೆಸೇರಬೇಕಯ್ಯ " (5-30)

ಕುವೆಂಪು ಅವರ ಮಹಾಕಾವ್ಯದ ಅನೇಕ ಸನ್ನಿವೇಶಗಳನ್ನು ಕವಿ ಕಬ್ಬಿನಾಲೆಯವರು ಪದ್ಯಬಂಧಗಳಲ್ಲಿ ಅಡಕವಾಗಿ ಹೇಳಿರುವುದು ಗಮನಾರ್ಹ. ಉದಾಹರಣೆಗೆ:

"ಜಗವ ನೆಯ್ದಾಳುವ ವಿರಾಣ್ಮನ ।
ಬಿಗಿದು ಕಟ್ಟಿದೆ ಸೂಕ್ಷ್ಮತಂತ್ರದಿ ।
ಮಗುಳೆ ಜೀವಿಗಳಿಂಗೆ ನೀಡಿಹುದಿಚ್ಛೆಸ್ವಾತಂತ್ರ್ಯ ॥
ಮುಗುದೆ ಮಂಥರೆ ಸೀತೆ ರಾವಣ ।
ರಘುವರಾದಿಗಳೆಲ್ಲ ಸೂತ್ರದ ।
ತೊಗಲುಗೊಂಬೆಗಳಲ್ತೆ ಕಾಣದ ವಿಧಿಯ ಹಸ್ತದೊಳು ॥ (3-12)

ಶ್ರೀರಾಮಾಯಣದರ್ಶನದ ದರ್ಶನದೀಪ್ತಿಯನ್ನು ಸಾರುವ ಈ ಪದ್ಯ ಭಾಮಿನಿಯಲ್ಲಿ ಅಳವಟ್ಟಿರುವ ರೀತಿ ಬಲುಸೊಗಸು. ಅಂತೆಯೇ ಪಂಚವಟಿಯಲ್ಲಿ ಲಕ್ಷ್ಮಣನನ್ನು ಸೀತಾಮಾತೆ ಬೈದುಭಂಗಿಸುವ ಮಾತುಗಳು ಕಾವ್ಯದ ಕಮನೀಯತೆಯನ್ನು ಧರಿಸಿವೆ.

ಎಳೆಯ ಮುಳ್ಮೊನೆ ಚುಚ್ಚೆ ಮೆಚ್ಚುಗೆ ।
ಬೆಳೆದರದು ನೋವಲ್ತೆ ತನುವಿಗೆ ।
ಎಳೆಗರುವು ಬೆಳೆದದರ ತಾಯನೆ ಬೆದೆಗೆ ಬಯಸುವುದು ॥
ಕೊಲಿಸಿದೆನೆ ಮನದನ್ನ ನಿನ್ನನು ।
ಕಳುಹಿ ಕಾಂಚನಮೃಗದ ವಾಂಛೆಗೆ ।
ಸಲೆ ಸುಮಂಗಲಿತನದ ತಾಳಿಯ ಬಿಸುಡುವಂತಾಯ್ತೆ ॥ (7-80)

ಅಶೋಕವನದಲ್ಲಿ ಸೀತೆ ತ್ರಿಜಟೆಯೊಂದಿಗೆ ಮಾತಾಡುತ್ತಾ 'ಆವುದಾಗಲಿ ತಪಂ ಫಲದಾಯಕಂ ತಪಂ' ಎಂದು ಹೇಳುತ್ತಾಳೆ. ಮಂಥರೆಯ ಮೂಲದ ಈ ಬೃಹದ್ ದುರ್ಘಟನೆ ಎಷ್ಟೋ ಜೀವರಿಗೆ ತಮ್ಮ ತಮ್ಮ ಕರ್ಮಕ್ಷಯಕ್ಕೂ ಮತ್ತು ಧರ್ಮಾಭ್ಯುದಯಕ್ಕೂ ನಿಮಿತ್ತವಾಯಿತು ಎನ್ನುತ್ತಾಳೆ. ಆ ಸನ್ನಿವೇಶವು ಯಕ್ಷಗಾನದಲ್ಲಿ ಅರ್ಥವತ್ತಾಗಿ ಮೂಡಿದೆ.

ಮೊದಲು ಮಂಥರೆಯಿಂದ ತೊಡಗಿದ ।
ಹದನ ಸತ್ಯದೊಳೆನಗೆ ರಾಮಂ ।
ಗದುವೆ ರಾಕ್ಷಸದೊರೆಗೆ ಲೋಕದೊಳೆನಿತೊ ಜೀವರಿಗೆ ॥
ಮುದದಿ ಜನ್ಮೋದ್ದೇಶಸಾಧನೆ ।
ಗೊದಗುತಾತ್ಮವಿಕಾಸಸಿದ್ಧಿಗೆ ।
ವಿದಿತ ಕರ್ಮಕ್ಷಯಕೆ ಧರ್ಮಾಭ್ಯುದಯ ಕಾರಣವು ॥ (13-17)

ಯಕ್ಷಗಾನದ ಸುಂದರ ಪದ್ಯಬಂಧಗಳಲ್ಲಿ ಕಬ್ಬಿನಾಲೆಯವರ ಕಾವ್ಯಪ್ರತಿಭೆ ಗೋಚರಿಸುತ್ತದೆ. ಮೂಲದ ಮಹಾಛಂದಸ್ಸಿನ ಭಾವಾರ್ಥಗಳನ್ನು ತಾಳಬಂಧಗಳಲ್ಲಿ ಕಟ್ಟುವುದು ಸಾಮಾನ್ಯವಾದ ಸಾಧನೆಯಲ್ಲ. ಅಂತಹ ರಸೋತ್ಕರ್ಷಪದ್ಯಗಳಿಗೆ ಕೆಲವು ಉದಾಹರಣೆಗಳು ಇಲ್ಲಿವೆ.

॥ **ತುಜಾವಂತು-ಝುಂಪೆ** ॥

ಕಲ್ಯಾಣಚೇತಸಿಯೆ ಜೀವಿತೇಶ್ವರಿಯೆ ।
ಪಲ್ಲವಾಧರೆಯೆ ಮುನಿಸೇಕೆ ನಾನರಿಯೆ ॥
ಮಲ್ಲಿಕಾಸ್ಮಿತೆ ನಿನಗೆ ಮೆಲ್ಲನಡಸಿತೆ ರುಜೆಯು ।
ಪೊಲ್ಲಮೆಯ ಕಳೆಯೆ ನೆಲದಲ್ಲಿ ಪೊರಳುವೆಯೆ ॥ (3-30)।

ದಶರಥನು ಕೈಕೇಯಿಯನ್ನು ಸಂತೈಸುವ ಈ ಪದ್ಯದಲ್ಲಿ ಕಾವ್ಯಗುಣ ಮೇಳೈಸಿದೆ. ರಾವಣನು ಸಂನ್ಯಾಸಿಯಾಗಿ ಬಂದು ಸೀತೆಯನ್ನು ಮಾತಾಡಿಸುವ ಸಂದರ್ಭವೂ ಅಷ್ಟೇ ಮನೋಹರ.

॥ **ಮಧ್ಯಮಾವತಿ – ಏಕ** ॥

ಬೆದರಿದೋಲಿದೆ ಭದ್ರೆ ನಿನ್ನಂಗಮುದ್ರೆ ।
ಮುದವ ತಾಳುವುದೀಗ ಕರುಣಾಸಮುದ್ರೆ ॥
ಮಧುರಮೋಹನ ನಿತಂಬಿನಿಯಿಂತು ನೀನು ।
ಒದವಿ ಕಾಡೊಳಗಿರ್ಪ ಹದನವಿದೇನು ॥ (7-85)

ಶ್ರೀರಾಮನನ್ನು ಯುದ್ಧದಲ್ಲಿ ಎದುರಿಸಲು ಬಂದ ರಾವಣನ ಅಂತರಂಗ ನಿವೇದನೆಯೂ ಸಶಕ್ತ ಪದಪುಂಜಗಳಿಂದ ಕೂಡಿ ಅರ್ಥವತ್ತಾಗಿದೆ.

॥ ಶಹನ – ಆಟ ॥

ಕದನಗೈಯಲು ನಿಂತಿರುವನೆ । ಸೀತಾ ।
ಹೃದಯಮಂದಿರದಲ್ಲಿ ಪೂಜೆಗೊಂಬವನೆ ॥
ಹದಿಬದೆತನದಿಂದೆ । ಸದೆದು ಎನ್ನಹಂಕಾರ ।
ಮುದದಿ ಪ್ರೀತಿಸಿದಂಥ । ಸದಮಲನಿವನೆ ॥

ಶಿವನ ಬಿಲ್ಲನು ಎತ್ತಿದವನೆ । ಎನ್ನಾ ।
ಹವದಿ ಮೆಚ್ಚಿಸಲು ಈ ಮಗಳನೀಯುವೆನೆ ॥
ಕವಿಯ ಕಲ್ಪನೆಯಿಂದ । ಬುವಿಗೆ ದೇವತೆಯಾದ ।
ರವಿಕುಲದವನ ಪಂ । ಥವನು ನೋಡುವೆನೆ ॥ (13: 69–70)

ಅಯೋಧ್ಯೆಗೆ ಮರಳಿದ ಶ್ರೀರಾಮನನ್ನು ಸ್ವಾಗತಿಸಲು ಹೊರಟಾಗ ಊರ್ಮಿಳೆ ಮತ್ತು ಮಾಂಡವಿಯರ ನಡುವೆ ನಡೆಯುವ ಸಂವಾದಭಾಗ ಶ್ರೀರಾಮಾಯಣದರ್ಶನಂ ಮಹಾಕಾವ್ಯದಲ್ಲಿ ಹೀಗೆ ಮೂಡಿನಿಂತಿದೆ:

'ಬೇಗಮೇಳ್, ಪೋಗವೇಳ್ಕುಮಾ
ಸ್ವಾಮಿ ತಪಮಿರ್ಪ ನಂದಿಗ್ರಾಮದಾಶ್ರಮಕೆ!'
'ಮೀಯದುಡದೆಯೆ ತೊಡದೆ ಪೋಪುದೇನವರೆಡೆಗೆ,
ತಂಗೆ? ಮಂಗಳಮಲ್ತು!'
'ನೋಡಬಾರದೆ ಅವರ್
ನಿನ್ನ ನಿಡು ಕಡುನೋಂಪಿಯಂ?'
'ಚಿಃ ಕಡಲ್ಗದಿರ್
ಪನಿಗೇಂ ಪ್ರದರ್ಶನಂ? ದೇವರ ತಪಕ್ಕಿದಿರ್
ನಮ್ಮದೊರ್ ತೃಣಮಲ್ತೆ! ಸಂತೋಷಸಮಯದೊಳ್
ತೋರ್ಪುದನುಚಿತವೆಮ್ಮ ಕಷ್ಟಮಂ! ತನ್ನ ತಾನ್
ಇಲ್ಲಗೈವುದೆ ಎಲ್ಲ ಸಾಧನೆಗೆ ಕೊನೆಯ ಗುರಿ,
ಮೇಣ್ ತಪಕೆ ಕೇಳ್, ತಂಗೆ, ಪರಮಪ್ರಯೋಜನಂ'
(ಶ್ರೀ: 280–289)

ಈ ದಾರ್ಶನಿಕವಿಚಾರಗಳು ಯಕ್ಷಗಾನ ಮಹಾಕಾವ್ಯದಲ್ಲಿ 'ಸುರುಟಿ–ಏಕತಾಳ'ದ ಬಂಧದಲ್ಲಿ ಅನನ್ಯವಾಗಿ ಮೂಡಿನಿಂತು ಸಹೃದಯನ ಅಂತರಂಗದಲ್ಲಿ ನರ್ತಿಸುತ್ತವೆ.

॥ ಸುರುಟಿ – ಏಕ ॥

ರಾಮ ಬಂದನಂತೆ । ಲಕ್ಷ್ಮಣ ।
ಪ್ರೇಮ ಬಂದನಂತೆ ॥
ಸೀಮೆಯ ಸರ್ವರ । ಕಾಮಿತ ಫಲಿಸಿದೆ ।
ನೇಮದಿ ನಂದಿ । ಗ್ರಾಮಕೆ ನಡೆನಡೆ ॥

ಮೀಯದುಡದೆ ತೊಡದೆ । ಪೋಪುದು ।
ನ್ಯಾಯವೆ ಪೇಳ್ ಮುಗುದೆ ॥
ಕಾಯದ ಸಂಕಟ । ದಾಯವ ತೋರಿಸಿ ।
ನೋಯಿಸಬಾರದು । ತೋಯಜಮುಖಿಯೆ ॥

ಅಕ್ಕ ಕೇಳೆ ನಿನ್ನ । ನೋಂಪಿಯ ।
ದುಃಖಗಳನು ಮುನ್ನ ॥
ಲಕ್ಷ್ಮಣ ನೋಡುತ । ಅಕ್ಕಟವೆನುವನು ।
ಮಿಕ್ಕುವರಿದು ಮನ । ದಕ್ಕರೆಯೀವನು ॥

ಶರಧಿ ಮುಂದೆ ಹನಿಗೆ । ತೋರಿಕೆ ।
ಸರಿಯದಲ್ಲ ಕೊನೆಗೆ ॥
ಪರಮದೈವ ಗೈ । ದಿರುವ ತಪಸ್ಸಿನ ।
ಸರಿಸದಿ ನಮ್ಮದು । ಗರಿಕೆಯ ಕಾರ್ಯವೆ ॥ (14: 46– 49)

ಇಡೀ ಕಾವ್ಯದಲ್ಲಿ ಅಲ್ಲಲ್ಲಿ ಬರುವ ಸಂವಾದಭಾಗಗಳಿಗೆ ಅವುಗಳದೇ ಆದ ಚೆಲುವಿದೆ. ರಾಮ –ಭರತ, ರಾಮ – ಚಂದ್ರನಖಿ, ರಾಮ– ವಾಲಿ, ರಾವಣ – ಮಾರೀಚ, ರಾವಣ – ಮಂಡೋದರಿ, ತಪೋದೇವಿ–ಸ್ವಪ್ನದೇವಿ ಮುಂತಾದ ಪಾತ್ರಗಳ ಸಂವಾದಗಳು ಮನಸೂರೆಗೊಳ್ಳುತ್ತವೆ. ಪಾತ್ರಾಭಿವ್ಯಕ್ತಿಗೆ ಪೂರಕವಾದ ರಾಗತಾಳಗಳು ರಸಪ್ರತೀತಿಗೆ ಇಂಬುನೀಡುವುದು ಇಲ್ಲಿಯ ಕಾವ್ಯಶಕ್ತಿ. 'ದಶಾನನ ಸ್ವಪ್ನಸಿದ್ಧಿ'ಯ ಸನ್ನಿವೇಶದಲ್ಲಿ ರಾವಣ ಮತ್ತು ಪರಶಿವೆಯರ ಸಂವಾದವು ಮೂಲಕಾವ್ಯದಲ್ಲಿ ತುಂಡುತುಂಡಾದ ಮಾತುಗಳಲ್ಲಿದ್ದು ಇಲ್ಲಿ ಪ್ರತ್ಯೇಕ ಪದ್ಯಖಂಡಗಳಾಗಿರುವುದು ಕವಿಯ ಅಸಾಮಾನ್ಯ ಪ್ರತಿಭೆಗೆ ನಿದರ್ಶನವಾಗಿದೆ.

"ದಶರಥಸುತಂ
ರಣದಿ ಸೋಲ್ವಂತೆನಗೆ ಮಾಡು ಕೃಪೆಯನ್!
"ತಥಾಸ್ತು"
"ಸೀತೆ ವಶವಪ್ಪಂತೆ"
"ತಥಾಸ್ತು"
"ನೀಂ ತಾಯ್ ದಿಟಂ!
ನೀಂ ಕೃಪಾಬ್ಧಿಯೆ ದಿಟಂ!" ರಾಮಜಯಕಿಂ ಮಿಗಿಲ್
ಸೀತೆ ಸೋಲ್ವುದೆ ಸೋಜಿಗಂ"
"ಸೋಜಿಗಮದೇಕೆ?
ಒಲಿದ ಕಂದಗೆ ತಾಯಿ ಸೋಲ್ವುದೇನಚ್ಚರಿಯೆ?
ಸಹಜಂ"
"ಅದೇನ್ ಮತ್ತೆ ವಕ್ರೋಕ್ತಿ!"
"ವಕ್ರಮೇನ್!
ನಿನ್ನೆರ್ದೆಯ ಗೂಢವೃತ್ತಿಗೆ ನನ್ನದುಕ್ತಿಯಯ್"
"ಸೀತೆ ಸೋಲ್ವಳೆ? ರಾಮನಂ ಗೆಲ್ವನಿದು ದಿಟಮೆ?"
"ಸೀತೆ ಯಾಲಿಂಗಿಪಳ್, ಚುಂಬಿಸೆರ್ದೆಗೊತ್ತುವಳ್,
ರಣದಿ ರಾಮನ ಸೋಲಿಪಯ್, ಮನರ್ ಜನಮ್ದೊಳ್!
ಕಾಣ್ ತೋರ್ಪುದಂ"
(ಶ್ರೀ. 7: 164-173)

ಈ ನಾಟಕೀಯ ಸನ್ನಿವೇಶವು ಯಕ್ಷಗಾನಕಾವ್ಯದಲ್ಲಿ ಮೂಡಿನಿಂತ ರೀತಿ ಅನನ್ಯ.

॥ ಕೇದಾರಗೌಳ – ಆಟ ॥

ಪರಮೇಶ್ವರಿಯೆ ನಿನ್ನನರಿಯಲಾರೆನೆ ನಾನು ।
ಬರಿದೆ ಮೂದಲಿಸಬೇಡ ॥
ಕರದ ಸೂತ್ರಗಳಿಂದ ತಿರೆಯ ನಾಟಕಗೈಯು ।
ತಿರುವೆಯೆಂಬುದ ಬಲ್ಲೆನು ॥

ಪರಮತತ್ತ್ವವ ನೀನು ಪರಿಪೂರ್ಣ ತಿಳಿಯುವ ।
ವರೆಗೆ ಕರ್ಮವು ತಪ್ಪದು ॥
ಶರಣ ನಿನ್ನಯ ಮನದಿರವ ನೀಡುವೆನೀಗ ।
ನೆರೆ ಭಕ್ತಿಯಿಂದ ಬೇಡು ॥

ರಣದಿ ರಾಘವನನ್ನು ಸೆರೆಪಿಡಿಯುವ ಶಕ್ತಿ ।
ಎನಗೆ ನೀ ಕರುಣಿಸುದು ॥
ಜನಕನಂದನೆ ಸೀತೆ ಮನದಿ ಸೋಲುವ ಹಾಗೆ ।
ಜನನಿಯೆ ವರವೀವುದು ॥ ।

ಕಂದನೆನ್ನುತ ತಾಯಿ ಬಂದಲ್ಲಿ ಸೋಲುವು ।
ದೊಂದು ಸೋಜಿಗವೆ ಪೇಳು ॥
ಇಂದು ನಿನ್ನಯ ಭಾವದಂದವನರಿತು ನಾ
ನೆಂದ ಮಾತಿದುವೆ ಕೇಳು ॥

॥ ಸೌರಾಷ್ಟ್ರ – ತ್ರಿವುಡೆ ॥
ಏನಿದೀ ವಕ್ರೋಕ್ತಿ ನಿನ್ನದು ।
ಜಾನಕಿಯು ಸೋಲುವಳೆ ರಾಮನ ।
ನಾನು ಜಯಿಸುವೆನೆಂಬುದಿದು ದಿಟ ।
ವೇನು ತಾಯೆ ॥

ಗೆಲುವೆ ರಾಮನ ನೀನು ರಣದೊಳು ।
ಚೆಲುವೆ ನಿನ್ನನು ಚುಂಬಿಸುತ್ತಲಿ ।
ಸೆಳೆವಳೆದೆಗಿದು ಸತ್ಯ ಮರುಭವ ।
ದೊಳಗೆ ಕೇಳು ॥ (13: 47–52)

ಈ ಮಹಾಕಾವ್ಯದಲ್ಲಿ ಪ್ರಾಸ, ವಡಿ, ಅಲಂಕಾರಗಳು ನಿಜವಾಗಿಯೂ ಸಹಜ ಅಲಂಕರಣಗಳಾಗಿವೆ. "ಮಾತೆ ಲಾಲಿಪುದೆನ್ನ ಮಾತೊಂದ", "ಬನ್ನಿಗಂಬವ ಪೂಡಿ ಬಿದಿರ ತೊಲೆಮಾಡಿ", "ಮನ್ನಿಸೆನ್ನಯ ಮಾತ ಮರುಗಬಾರದು ಮಾತೆ" ಮುಂತಾದ ಸಾಲುಗಳಲ್ಲಿ ವರ್ಣವಳಿಗಳ ಸೊಬಗಿದೆ. "ಭಾಸುರಾಂಗದ ನಿನ್ನ ಮೈಸಿರಿ ಬೇಸಗೆಯ ಹೊಳೆಯಾಯ್ತು", "ಕೊಂಬು ಚಂದನವೊಂದು ಮುರುಟಿರ್ದರೇನಾಯ್ತೆ ಕೊಂಬರೆಲ್ಲರು ಗಂಧಸವಿಗೆ", "ಬಿಂದುಜಲ ನಾವೆಯನು ಮುಳುಗಿಸುವಂದದೊಳು ಬಿಕ್ಕಳಿಸಿ ದಶರಥ ನೊಂದು ಸೇರಿದನಂದು ಮೂರ್ಛಾನದಿ ತಳಾತಳಕೆ" ಮುಂತಾದ ಸಹಜಾಲಂಕಾರಗಳು ಕಾವ್ಯಗೌರವಕ್ಕೆ ಕಾರಣವಾಗಿವೆ. ಪದ್ಯಬಂಧಗಳಲ್ಲಿ ಅಗತ್ಯವಾದ ದ್ವಿತೀಯಾಕ್ಷರಪ್ರಾಸವಾಗಲೀ, ಪಾದಾಂತ್ಯಪ್ರಾಸವಾಗಲೀ ಸ್ವಾಭಾವಿಕವಾಗಿ ಮೂಡಿರುವುದು ಗಮನಾರ್ಹ. ಕೆಲವು ಉದಾಹರಣೆಗಳು:

ಪುಡಿಯಾಯ್ತು ನಮ್ಮ ಹೊಂಗನಸು ॥ ಬಿತ್ತು
ಗುಡಿಯಗೋಪುರಚಿನ್ನ ಕಳಸದ ಗೊಣಸು ॥
ಒಡೆದುಹೋಯಿತು ಹಾಲುಮನಸು ॥ ಮುದ್ದು
ಮಡದಿಮಗನ ಮೇಲೆ ಇಂತಾಯ್ತೆ ಮುನಿಸು ॥ (3–13)

ಸಾತಿಶಯದ ಕಾರ್ಯ । ತಂದೆಯ ।
ಮಾತು ಶಿರೋಧಾರ್ಯ ॥
ಏತಕಿಂತು ವಿಪ । ರೀತದ ವ್ಯಾಕುಲ ।
ಮಾತೆಯೆ ಕರುಣಿಮು । ೧ೀ ತರಳಗೆ ಶುಭ ॥ (3–46)

ಕಂದಮೂಲಗಳುಣಿಸು ಸೀತಾ ।
ಸುಂದರಿಯ ಸವಿಗನಸು ಪಗಲಿರು ।
ಕೊಂದೆ ಧ್ಯಾನದ ತಪಸು ಯೋಗಾ ।
ನಂದ ಮನಸು ॥ (10–80)

ಸುಳಿದನಿಚ್ಛಾರೂಪಿಯಾಗಿ ಲಂಕಾಪುರದಿ ।
ಪೊಳೆವ ಪೊಂಗಳಸ ಸೌಧಾಗ್ರದಿಂ ಸೌಧಕ್ಕೆ ।
ನೆಳಲಂತೆ ಶಶಿಯಂತೆ ನಿಶೆಯ ನಿಟ್ಟುಸಿರಂತೆ ನಿಃಶಬ್ದಸಂಚಲನದಿ ॥
ನಿಳಯ ನಿಳಯಂಗಳಲಿ ಲಂಕಾಲತಾಂಗಿಯರ ।
ಲಲಿತದೇಹದ್ಯುತಿಗೆ ಸ್ಥಿತಿಗೆ ವಸನಚ್ಯುತಿಗೆ ।
ಕಳವಳಿಸಿ ಧೂಪರೂಪಂದಳೆದು ತಾನಿಂದ್ರಜಿತುಮಂದಿರವ ಸೇರ್ದನು ॥
(10–1)

ಒಂದು ಕಾವ್ಯವನ್ನು ಆಧರಿಸಿ ಮತ್ತೊಂದು ಕಾವ್ಯವನ್ನು ರಚಿಸುವಾಗ ಮೂಲಕೃತಿಯನ್ನು ಮೀರಿದ ಸೊಬಗು ಮೈತಳೆದರೆ ಅದು ಪ್ರತಿಭಾಕಾರ್ಯವೆಂದೇ ಹೇಳಬೇಕು. ಡಾ.ಕಬ್ಬಿನಾಲೆಯವರ ರಚನೆಗಳಲ್ಲಿ ಅಂತಹ ಸ್ವೋಪಜ್ಞತೆಯಿರುವುದು ಪ್ರಶಂಸಾರ್ಹ. ಮಂಥರೆಯ ಚಿತ್ರವನ್ನು ಕಟ್ಟಿಕೊಡುವ ಬಗೆ ಇಂತಹುದು.

ಗೂಡುಗಣ್ಣಿನ ಗೂನುಬೆನ್ನಿನ ।
ಜಾಡಿ ಮೈಮನ ಮಂಥರೆ ॥
ಕೇಡುಮೋರೆಯ ಮುರುಟಿ ಮುದುಕಿಯ ।
ನೋಡಲಾಗದು ನಿಂತರೆ ॥
ಬಂದಳಲ್ಲಿ । ನಿಂತು । ಕೊಂಡಳಲ್ಲಿ ॥ (1–57)

ಈ ಶಬ್ದಚಿತ್ರದಲ್ಲಿ ಮಂಥರೆಯನ್ನು 'ಚಾಡಿ ಮೈಮನ'ದವಳೆಂದು ಕಲ್ಪಿಸಿರುವುದು ಇತೋಪ್ಯತಿಶಯವಾಗಿದೆ. ರಾಮನಿಗೆ ಕನ್ನಡಿ ತೋರಿಸಿದಾಗ ಅದನ್ನು 'ಬೆಡಗುಕಾವ್ಯಕೆ ಮುನ್ನುಡಿ' ಎಂದಿರುವುದೂ ಸ್ವೋಪಜ್ಞತೆಯೇ. ಚಾಡಿಮಾತಿನಿಂದ ಕೈಕೇಯಿಗೆ ದುರ್ಬೋಧನೆ ಮಾಡುವಾಗ "ಭಾಷೆಯ ಕೇಳಕೊಳ್ಳು" ಎನ್ನುವ ಮಾತಂತೂ ಧ್ವನಿಪೂರ್ಣ. ಕೇಳುವುದಕ್ಕಿಂತಲೂ ಕೊಳ್ಳುವುದು ಮುಖ್ಯವೆಂಬ ಧ್ವನಿ ಅಲ್ಲಿದೆ! ಆ 'ಕೊಳ್ಳುವಿಕೆ' ಅಯೋಧ್ಯೆಯ ಸಿಂಹಾಸನಕ್ಕೆ ಸೀಮಿತವಾಗದೇ ದಶರಥನ ಪ್ರಾಣಾಪಹಾರದಲ್ಲಿ ಪರ್ಯವಸನಗೊಳ್ಳುವುದು ಅದರ ಕ್ರೂರವ್ಯಂಗ್ಯ!

ಅಣ್ಣನಾಚಾತುರ್ಯ ಮನ್ನಿಸುವುದು ನೀನು ।
ಭಿನ್ನಮಾರ್ಗದ ರಾಜಕೀಯ ॥
ನಿನ್ನೊಳಗಪರಾಧವನ್ನು ಸಾಧಿಸಿದುದು ।
ಬಿನ್ನಹವನು ಲಾಲಿಸವ್ವ ॥ (9–11)

ರಾವಣನಿಗೋಸ್ಕರ ಸೀತೆಯನ್ನು ಒಡಂಬಡಿಸುವ ಚಂದ್ರನಖಿಯ ಪ್ರಯತ್ನವಿದು. 'ಅಣ್ಣನಾಚಾತುರ್ಯ' ಎಂಬಲ್ಲಿ ರಾವಣನ ಚಾತುರ್ಯ ಮತ್ತು ಅಚಾತುರ್ಯಗಳೆರಡೂ ಧ್ವನಿತವಾಗುತ್ತವೆ! ವಿಭೀಷಣನು ಶ್ರೀರಾಮನನ್ನು ಅಯೋಧ್ಯೆಗೆ ಕಳುಹಿಸಲು ವಿಮಾನವನ್ನು ನೀಡುವ ಸಂದರ್ಭದಲ್ಲೂ 'ಚರಣಸೇವೆಗೆ ನಮ್ಮ ಕಿರಿದು ಪುಷ್ಪವಿದು' ಎಂದು ಹೇಳುವಲ್ಲಿ ಪುಷ್ಪಕವಿಮಾನದ ಚೆಲುವು ವೇದ್ಯವಾಗುತ್ತದೆ.

ಮತ್ತೆ ಭೂಮಿಗೆ ಬೈಗು । ಕತ್ತಲೆಯನುಡಿಸಿತ್ತು ।
ಇತ್ತಂಡ ತೂರ್ಯಗಳು । ಬಿತ್ತಿರೆ ವಿರಾಮ ॥ (12–44)

ಭೂಮಿಗೆ ಬೈಗು 'ಕತ್ತಲನ್ನು ಉಡಿಸುವುದು' ಹಾಗೂ ವಾದ್ಯಗಳು 'ವಿರಾಮವನ್ನು ಬಿತ್ತುವುದು' ಕವಿಯ ಸ್ವತಂತ್ರ ಕಲ್ಪನೆಗಳು. ಯಕ್ಷಗಾನದ ಹಾಡುಗಳಿಗೆ ಭಾವಗೀತೆಯ ಬನಿಯೂ ಇದೆ ಎಂಬುದಕ್ಕೆ ಈ ಕೆಳಗಿನದು ಉತ್ತಮ ಉದಾಹರಣೆಯಾಗಬಲ್ಲುದು.

ಟುವ್ವಿ ಬಾನಿಗೆ ಟುವ್ವಿ ಕಾನಿಗೆ ।
ಟುವ್ವಿ ಮಾಗಿಗೆ ಟುವ್ವಿಯು ॥
ಸುವ್ವಿ ಬಾಳಿಗೆ ಸುವ್ವಿ ಗಾಳಿಗೆ ।
ಸುವ್ವಿ ಸುಗ್ಗಿಗೆ ಸುವ್ವಿಯು ॥

ಚುಕ್ಕಿಹೂವಿಗೆ ಹಕ್ಕಿಹಾಡಿಗೆ ।
ಚಿಕ್ಕಕೋಗಿಲೆ ಟುವ್ವಿಯು ॥
ಮಕ್ಕ ಕುಣಿಸುವ ಸಿಳ್ಳೆಸಿಪಿಲೆಗೆ ।
ಉಕ್ಕಿದಾ ಸುಖ ಸುವ್ವಿಯು ॥

ಚಿಗುರಿ ಚೈತ್ರ ವಸಂತಸಂಭ್ರಮ ।
ಗಗನ ನೀಲ ಮಹೋಪಮ ॥
ಮುಗಿಲು ನೀರ್ವೊರೆಗಳೆದು ಮೆಲ್ಲಗೆ ।
ಜಗುಲಿಗಿಳಿಯೆ ಮನೋರಮ ॥ (7; 51–53)

ಇದಕ್ಕಿಂತಲೂ ಮಿಗಿಲಾಗಿ ಸಂಗೀತಗುಣದ ಪದ್ಯರತ್ನವೊಂದು ಗಮನಾರ್ಹ.

ಶ್ರೀಕರ ಸುಮಧುರ ಓಂಕಾರ ।
ಏಕಮೇವ ಸ್ವರ ಝೇಂಕಾರ ॥ ಪ ॥
ಲೋಕಕೃಪಾಕರ ನಾದಬಿಂದುಧರ ।
ವ್ಯಾಕುಲಸಂಹರ ನಿಜ ಸುಮನೋಹರ ॥ ಅ. ಪ ॥

ಮಾದನಿ ಸಸಸಾಸ ನೀಸರಿ ನಿಸನೀದ ।
ಮಾಗಮ ರಿಗಸಾಸ ರೀಸನಿ ದಮಪಾದ ॥
ಪ್ರಾಣಪ್ರಣವ ವೈಶ್ವಾನರ ಪರತರ ।
ವೀಣಾತೈಜಸ ಪ್ರಾಜ್ಞಪ್ರಭಾಕರ ॥ (10–18)

ಆಂಜನೇಯನು ವಿಭೀಷಣನ ಮನೆಗೆ ಬರುವಾಗ ಅವನ ಮಗಳು ಅನಲೆ ವೀಣಾವಾದನವನ್ನು ಮಾಡುತ್ತಿರುತ್ತಾಳೆ. ಆ ಸಂದರ್ಭದ ಈ ಪದ್ಯವು 'ಕಮಾಚುರಾಗ – ಆದಿತಾಳ'ದಲ್ಲಿ ನಿಬದ್ಧವಾಗಿದೆ. ಹರಿಕಾಂಭೋದಿ ಜನ್ಯವಾದ ಕಮಾಚು (ಕಮಾಸ್) ರಾಗದ ಸ್ವರಸಂಚಾರಗಳನ್ನು ಇಲ್ಲಿ ಸಾಹಿತ್ಯಾಂಶವಾಗಿ ಹೆಣೆದಿರುವುದು ಕವಿಯ ಸಂಗೀತಪ್ರೀತಿಗೆ ನಿದರ್ಶನ. ನಾದಬಿಂದುಕಲಾಸ್ವರೂಪದ ಓಂಕಾರವನ್ನು ಪ್ರಾಣ–ಪ್ರಣವ–ವೈಶ್ವಾನರ–ತೈಜಸ ಮುಂತಾದ ಅನುಭಾವದ ಪರಿಭಾಷೆಯಲ್ಲಿ ಹೇಳಿರುವುದು ಕವಿಯ ಪಾಂಡಿತ್ಯದ್ಯೋತಕವಾಗಿದೆ.

"ರಣದ ಸಾಹಸಕಥೆಯ ಬಣ್ಣನೆಗೆ ಬಡತನವೆ ಪೇಳ್, ಹೇರಳಂ! ದಿನದಿನದ ಸಾಧಾರಣದ ಶಾಂತ ಸರಳ ಜೀವಿತದ ವರ್ಣನೆಯೆ ವಿರಳಂ. ನಾನದನೆ ಕೈಕೊಂಡೆಸಗಲೆಳಸುವೆಂ" ಎಂಬುದು ಕುವೆಂಪು ಅವರ ಸಾಮಾನ್ಯತಾಪ್ರೀತಿಗೆ

ನಿದರ್ಶನ. ಪ್ರಪಂಚದ ಮಹಾಯುದ್ಧಗಳನ್ನು ನೋಡಿದ ಮಹಾಕವಿಗೆ ವಿಶ್ವಶಾಂತಿಯ ತುಡಿತ ಸಹಜವಾದುದೆ. ಈ ಕಾರಣದಿಂದಾಗಿ ರಾಮಾಯಣದ ಅನೇಕ ಯುದ್ಧಭಾಗಗಳು ಶ್ರೀರಾಮಾಯಣದರ್ಶನದಲ್ಲಿ ಸೂಕ್ಷ್ಮವಾಗಿಯೇ ಚಿತ್ರಿತವಾಗಿವೆ. ಆದರೆ ಯಕ್ಷಗಾನದಲ್ಲಿ ಯುದ್ಧವಿಲ್ಲವೆಂದರೆ ರಂಗಕ್ರಿಯೆ ಸಪ್ಪೆಯೆನಿಸುತ್ತದೆ. ಈ ಕಾರಣದಿಂದ ಕಬ್ಬಿನಾಲೆಯವರು ಅಲ್ಲಲ್ಲಿ ಸಂಕ್ಷೇಪದ ಯುದ್ಧದೃಶ್ಯಗಳನ್ನು ತಂದಿದ್ದಾರೆ. ಈ ಹಿನ್ನೆಲೆಯಲ್ಲಿ ವೀರರಸಪ್ರಧಾನವಾದ ಯಕ್ಷಗಾನಕಲೆಗೆ ಈ ಪ್ರಸಂಗದ ಪ್ರದರ್ಶನ ನಿಜವಾಗಿಯೂ ಒಂದು ಸವಾಲು ಎನಿಸುತ್ತದೆ.

ಮಾನವನಿಗೆ ಅಹಂಕಾರ ಹಾಗೂ ಮಮಕಾರಗಳೇ ಆತನ ಉದ್ಧಾರಕ್ಕೆ ನಿಂತಿರುವ ಅಡ್ಡಗೋಡೆಗಳು. ಅವುಗಳನ್ನು ಕಳೆದುಕೊಂಡರೆ ಪ್ರತಿಪಾಪಿಯೂ ಉದ್ಧಾರವಾಗುತ್ತಾನೆ ಎಂಬುದು ಕುವೆಂಪುರವರ ದಾರ್ಶನಿಕ ನಿಲುವು. ಅಂತೆಯೇ ಲಂಕೇಶ್ವರ ರಾವಣನು ತನ್ನ ಭುಜಬಲಪರಾಕ್ರಮಕ್ಕೆ, ಅತುಲೈಶ್ವರ್ಯಸಂಪನ್ನತೆಗೆ, ಅತಿಶಯವಾದ ರೂಪಲಾವಣ್ಯಕ್ಕೆ, ಕುಂದದ ಕೀರ್ತಿವೈಶಾಲ್ಯಕ್ಕೆ, ಬುದ್ಧಿಚಾತುರ್ಯಕ್ಕೆ, ಶೌರ್ಯಸ್ಥೈರ್ಯಕ್ಕೆ, ರಾಜ್ಯಭಾರವೈಭವಕ್ಕೆ, ಕಾಮಕಲಾನೈಪುಣ್ಯಕ್ಕೆ ಸೋಲದ ಹೆಣ್ಣೇ ಜಗತ್ತಿನಲ್ಲಿಲ್ಲ ಎಂದು ಅಹಂಕಾರದಿಂದ ಮೆರೆಯುತ್ತಿದ್ದ. ಮತ್ತೆ ಜಗತ್ತಿನ ಎಲ್ಲಾ ಹೆಣ್ಣುಗಳೂ ತನ್ನವರೇ ಆಗಬೇಕೆಂಬ ಮಮಕಾರದಿಂದಲೂ ತುಂಬಿ ತುಳುಕುತ್ತಿದ್ದ. ಆ ಎರಡೂ ಗುಣಗಳು ನಿರಸನವಾದಾಗ ತಂಗೆ ಚಂದ್ರನಖಿಗೆ ದಶಶಿರನು ಇಂತು ಹೇಳುತ್ತಾ ವಿನಯವನ್ನು ಮೆರೆಯುತ್ತಾನೆ.

ಮೂರುಲೋಕದೊಳೆನಗೆ ಸೋಲದವರಿಲ್ಲೆಂದು
ನಾರಿಯರ ಪಾತಿವ್ರತ್ಯದ ಮಹಿಮೆ ಸುಳ್ಳೆಂದು
ಮಾರೀಚನೊಡನೆ ಪಂಥವಗೈದು ಹುಡುಕಿದೆನು ದೇಶದೇಶಂಗಳಲ್ಲಿ ।
ಪಾರಮಾರ್ಥವ ಪರೀಕ್ಷಿಸಲೆಂದು ತಂದಿರ್ಪೆ
ನಾ ರಾಮಸತಿಯನ್ನು ಸರ್ವಗರ್ವವ ಮುರಿದ
ಕಾರಣದೊಳವಳ ಪತಿಯನೆ ಧುರದಿ ಸೆರೆಪಿಡಿದು ಕಪ್ಪಮಂ ಕೊಡುವೆನೆಂದ॥
(13–8)

ಮತ್ತೆ ರಾವಣ ಸತಿಸಾಧ್ವಿ ಮಂಡೋದರಿಗೆ ತನ್ನ ಮನದಿರವನ್ನು ಅರುಹುತ್ತಾನೆ:

ಎನ್ನ ಛಲವ ಗೆದ್ದ ಜಾನಕಿಗಾ ರಾಮ ।
ನನ್ನು ಗೆಲ್ಲುತ ಕಪ್ಪವ ॥
ಮುನ್ನ ಸಮರ್ಪಣೆ ಮಾಡಿ ಕ್ಷಮೆಯ ಬೇಡಿ
ಪುಣ್ಯಫಲವ ಪಡೆವೆ ॥ (13–62)

ಇಲ್ಲಿಯೂ ಆತನ ಉದ್ಧಾರದ ಹಾದಿ ಗೋಚರಿಸುತ್ತದೆ. ಅಲ್ಲದೆ ರಾಮನು ತನ್ನ ದಿವ್ಯಾನುಭವವನ್ನು ಹನುಮಂತನಿಗೆ ಹೇಳುವ ಸಂದರ್ಭ:

ನಾನವನ ಮೂಲಬಲವಲ್ಲದಿರೆ ರಾವಣನು ।
ಮಾನಿನಿಯ ಮೋಹಿಸುತ ಕರೆದೊಯ್ಯಲಪ್ಪುದೇಂ ।
ನೀನಿದಂ ತಿಳಿದು ತಿಳಿಯದ ತೆರದಿ ನೋಡುತಿರು ಮುಂದೆ ರಣರಂಗದೊಳಗೆ ।
ದಾನವನ ಚಿತ್ತಪಶ್ಶಕ್ತಿಯಂ ಗೆಲ್ಲುವರೆ ।
ನಾನಲ್ಲದಿನ್ನಾರ್ಗೆ ಸಾಧ್ಯಮೀ ಲೀಲೆಯಂ ।
ಧ್ಯಾನದಿಂದರಿತುಕೊಳುಯೆನುತ ಸರ್ವತ್ವಮಂ ಸಾರ್ದನಾ
ಪುರುಷೋತ್ತಮಂ ॥ (13–32)

ಈ ರೀತಿಯ ಹತ್ತಾರು ಲೀಲಾದರ್ಶನಗಳನ್ನು ಈ ಕಾವ್ಯದಲ್ಲಿ ಕಬ್ಬಿನಾಲೆಯವರು ಹೃದಯಂಗಮವಾಗಿ ಮಾಡಿಸುತ್ತಾರೆ. ಅಂತೆಯೇ ಪಾಪಿಗಳಾದ ಕೈಕೇಯಿ, ಮಾರೀಚ, ಕುಂಭಕರ್ಣ ಮುಂತಾದವರಿಗೆ ಅವರವರ ರೀತಿಯಲ್ಲಿಯೇ ಉದ್ಧಾರ ಸಾಧ್ಯವಾಗುತ್ತದೆ. ಇದನ್ನು ಯಕ್ಷಗಾನದ ಕಲಾವಿದರು ಹೇಗೆ ಅಭಿವ್ಯಕ್ತಗೊಳಿಸುತ್ತಾರೆ ಎಂಬುದರ ಕುರಿತು ನನಗೆ ಕುತೂಹಲವಿದೆ. ಮಂಥರೆ, ಅನಲೆ, ಊರ್ಮಿಳೆ ಮುಂತಾದ ಪಾತ್ರಗಳು ಯಕ್ಷಗಾನರಂಗದಲ್ಲಿ ಮೂಡಿಬಂದು ಪ್ರೇಕ್ಷಕರಿಗೆ ಹೊಸ ಅನುಭೂತಿಯನ್ನು ಉಂಟುಮಾಡುವುದು ಬಹುಕಾತರದ ಸಂಗತಿಯೇ ಹೌದು. ಶ್ರೀರಾಮಾಯಣದರ್ಶನವು ಪ್ರಕಟವಾದ ಈ ದೀರ್ಘಕಾಲದ ಅಂತರದ ಬಳಿಕ ಅದು ಕಲಾಮಾಧ್ಯಮವೊಂದನ್ನು ಆಯ್ದುಕೊಂಡು ರಂಗಭೂಮಿಯಲ್ಲಿ ದೃಶ್ಯರೂಪದಲ್ಲಿ ಕನ್ನಡ ಜನರ ಅಂತರಂಗವನ್ನು ತಲುಪುವಂತಾಗುತ್ತಿರುವುದು ಸಂತೋಷದ ವಿಚಾರ. ಡಾ.ಕಬ್ಬಿನಾಲೆಯವರ ಈ ದರ್ಶನಕಾವ್ಯವನ್ನು ಓದಿ ಆಸ್ವಾದಿಸಿದರೂ ಸರಿ, ಯಕ್ಷಗಾನವನ್ನು ನೋಡಿ ಅಥವಾ ತಾಳಮದ್ದಳೆಯ ಅರ್ಥಧಾರಿಗಳಿಂದ ಕೇಳಿ ಆನಂದಿಸಿದರೂ ಸರಿ; ಅದು ಜನಮನಕ್ಕೆ ದರ್ಶನಸುಖವನ್ನು ನೀಡುವಂತಾಗುವುದು ಮುಖ್ಯ. ಈ ಉದ್ದೇಶಸಾಧನೆಯಲ್ಲಿ ಡಾ.ಕಬ್ಬಿನಾಲೆಯವರ ಈ ಯಕ್ಷಗಾನ ಮಹಾಕಾವ್ಯ ಯಶಸ್ಸು ಕಾಣಲೆಂದು ಹಾರೈಸುತ್ತೇನೆ.

ರಾಮಾಯಣಕಾವ್ಯವು ಕೇವಲ ಕಥೆಯಾಗಿರದೆ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯಕೋಶಗಳಲ್ಲಿ ವಿಹರಿಸುವ ದರ್ಶನಸಿದ್ಧಿಯೇ ಹೌದು. ಅಯೋಧ್ಯೆಯಿಂದ ಹೊರಟ ಶ್ರೀರಾಮಚಂದ್ರನ ಯಾತ್ರೆ ಕಿಷ್ಕಿಂಧೆ – ಲಂಕೆಗಳನ್ನು ಸಂದರ್ಶಿಸಿ, ದೈತ್ಯ ವಾನರತೆಗಳನ್ನು ಮೀರಿ ಮಾನುಷಸಿದ್ಧಿಯನ್ನು ಪಡೆಯುವುದೇ ಕಾವ್ಯರಸಾಸ್ವಾದನಸುಖ.

ಅದುವೇ 'ರಾಮಾಯಣಾನಂದ'ವೆಂದು ಸಾರುವ ಡಾ.ಕಬ್ಬಿನಾಲೆಯವರ ವೃತ್ತಪದ್ಯವನ್ನು ಹಾಡಿ ವಿರಮಿಸುತ್ತೇನೆ.

> ಬೆರಗಿಂದೇರಿ ಮನೋಮಯುಕ್ಷಿತಿಜಮಂ ಪ್ರಾಣಾನ್ನಕೋಶಂಗಳಂ ।
> ತೊರೆವಂತಾದುದಯೋಧ್ಯೆಯಿಂದ ಪೊರಟೀ ಕಿಷ್ಕಿಂಧೆಯಂ ಲಂಕೆಯಂ ।
> ನೆರೆ ಸಂದರ್ಶಿಸಿ ದೈತ್ಯ ವಾನರತೆಯಿಂ ಮಾನುಷ್ಯತಾಸಿದ್ಧಿ ತಾಂ ।
> ದೊರೆಕೊಂಡಂತಿದೆ ಕಾವ್ಯಪೂರ್ಣರಸಮಂ ರಾಮಾಯಣಾನಂದಮೇ ॥

ಕೊಳ್ಳೇಗಾಲ
23.11.2014

ಕುಮಾರನಿಜಗುಣ
ಶ್ರೀಶಂಭುಲಿಂಗಕ್ಷೇತ್ರ

ಯಕ್ಷಗಾನ ಮಹಾಕವಿಗೆ ಅಭಿನಂದನೆ

ರಾಮಾಯಣ ಮಹಾಕಾವ್ಯ ವಾಲ್ಮೀಕಿಯಿಂದ ರಚಿತವಾದ ಕಥೆಯಾದರೂ, ಕುವೆಂಪು ಅವರ ಶ್ರೀರಾಮಾಯಣ ದರ್ಶನಂ 'ಕನ್ನಡದಿ ಬೇರೆ ಕಥೆಯೆಂಬಂತೆ, ಬೇರೆ ಮೈಯಾಂತಂತೆ, ಮರುವುಟ್ಟುವಡೆದಂತೆ' ಮೂಡಿದೆ. ಕಥಾಸಂವಿಧಾನದಲ್ಲಿ, ಪಾತ್ರರಚನೆಯಲ್ಲಿ, ದರ್ಶನಾಭಿವ್ಯಕ್ತಿಯಲ್ಲಿ ದರ್ಶನಂಕಾವ್ಯ ವಾಲ್ಮೀಕಿಕಾವ್ಯಕ್ಕಿಂತ ತೀರ ಭಿನ್ನವಾಗಿದೆ. ಕುವೆಂಪುಕಾವ್ಯದ ಒಡಲಲ್ಲಿ ಕಥೆ, ಕವನ, ನಾಟಕ, ನೃತ್ಯಗೀತೆಗಳು, ತಾತ್ತ್ವಿಕದೀಪಿಕೆಗಳು ಹುದುಗಿವೆಯೆಂದು ಹೇಳಲಾಗಿದೆ. ಈಗಾಗಲೇ ಅನಲೆ, ಲಂಕೇಶ್ವರಿ ಮೊದಲಾದ ನಾಟಕಗಳು ಮೂಡಿವೆ. ಡಾ.ಕಬ್ಬಿನಾಲೆ ವಸಂತಭಾರದ್ವಾಜರವರು ಇದೀಗ ಅದರ ಒಡಲಿಂದ ಯಕ್ಷಗಾನ ಮಹಾಕಾವ್ಯವನ್ನು ರೂಪಿಸುವ ಜಾದೂಗಾರಿಕೆಯನ್ನು ಮೆರೆದಿದ್ದಾರೆ.

ಡಾ.ಭಾರದ್ವಾಜರು ಬಹುಶ್ರುತ ವಿದ್ವಾಂಸರೆಂದು, ಶ್ರೇಷ್ಠ ಚಿಂತಕರೆಂದು, ಮಹಾನ್ವೇಷಣಕಾರರೆಂದು, ಯಕ್ಷಗಾನಪ್ರವೀಣರೆಂದು, ಅಪರೂಪದ ಅಷ್ಟಾವಧಾನಿ ಗಳೆಂದು, ಶ್ರೇಷ್ಠಬರಹಗಾರರೆಂದು, ಮಹಾವಾಗ್ಮಿಗಳೆಂದು ಕನ್ನಡನಾಡಿನಲ್ಲಿ ಪ್ರಸಿದ್ಧರಾಗಿದ್ದಾರೆ. ಈಗಾಗಲೇ ಅವರು 'ಕುವೆಂಪು ಮತ್ತು ಅಧ್ಯಾತ್ಮ' ಎಂಬ ಉದ್ಧ ಗ್ರಂಥವನ್ನು ರಚಿಸಿದ್ದು ಗಭೀರವಾದ ವಿದ್ವತ್ತೆಯನ್ನು ಮೆರೆದಿದ್ದಾರೆ. ಅವರು ಬಹುಮುಖೀಪ್ರತಿಭಾವಂತರೆಂಬುದಕ್ಕೆ ಅವರ ಯಕ್ಷಗಾನ ಮಹಾಕಾವ್ಯ 'ಶ್ರೀರಾಮಲೀಲಾದರ್ಶನಂ' ಜ್ವಲಂತ ನಿದರ್ಶನವಾಗಿದೆ. ದರ್ಶನವನ್ನು ಆಮೂಲಾಗ್ರವಾಗಿ ಅರ್ಥಮಾಡಿಕೊಂಡಿರುವವರಲ್ಲಿ ಇವರೊಬ್ಬರು ಮಾತ್ರವಲ್ಲ, ಅಗ್ರಗಣ್ಯರು. ಶ್ರೀರಾಮಾಯಣದರ್ಶನದ ಭಾಷೆ, ಭಾವಾರ್ಥ, ಛಂದಸ್ಸು, ದರ್ಶನಾಲಂಕಾರಗಳನ್ನು ಬಳಸಿಕೊಂಡು ಯಕ್ಷಗಾನಕ್ಕೆ ಯೋಗ್ಯವಾದ ಛಂದೋವೈಭವವನ್ನು ಮೆರೆದಿದ್ದಾರೆ. ಮೂಲಕ್ಕೆ ಭಂಗಬರದಂತೆ, ಅದರ ಕೀರ್ತಿಲತೆಯನ್ನು ವಿಸ್ತಾರವಾಗಿ ಹಬ್ಬಿಸುವ ರೀತಿಯಲ್ಲಿ 'ಯಕ್ಷಗಾನ ಮಹಾಕಾವ್ಯ' ವನ್ನು ರಚಿಸಿ, ಕನ್ನಡಕಾವ್ಯಪ್ರಪಂಚಕ್ಕೆ ಹೊಸದೊಂದು ಮಾದರಿಯನ್ನು ಕಟ್ಟಿಕೊಟ್ಟಿದ್ದಾರೆ. ಇಲ್ಲಿಯ ಛಂದೋವೈವಿಧ್ಯವೈಭವವನ್ನು ನೋಡಿದಾಗ ಸೋಜಿಗ, ಆನಂದ, ಹೆಮ್ಮೆಗಳಾಗುತ್ತವೆ. ಯಕ್ಷಗಾನ ಮಹಾಕಾವ್ಯವನ್ನು ರಚಿಸಿ, ಕನ್ನಡಸಾಹಿತ್ಯಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ತೆರೆದಿದ್ದಕ್ಕಾಗಿ 'ಯಕ್ಷಗಾನ ಮಹಾಕವಿ' ಡಾ. ವಸಂತ ಭಾರದ್ವಾಜರನ್ನು ನಾನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

'ಕರ್ನಾಟಕರತ್ನ' ಡಾ. ದೇ.ಜವರೇಗೌಡ

ಶಬ್ದಾರ್ಥಸೂಚಿ

(ಆವರಣದಲ್ಲಿ ಪ್ರಸಂಗಸಂಚಿಕೆ ಮತ್ತು ಪದ್ಯಸಂಖ್ಯೆ ಕೊಟ್ಟಿದೆ)

ಅಗ್ಗಳ (೨–೪) – ಅತಿಶಯ
ಅಂಗುಳೀಯಕ (೬–೧೦೪) – ಉಂಗುರ
ಅಣುವ (೬–೧೧೧) – ಕಿರಿಯ
ಅವರಜ (೭–೧೦೫) – ತಮ್ಮ
ಆಶುಗನಂದನ (೧೦–೧೦೪) – ವಾಯುಕುಮಾರ
ಇರ್ಕೆದಾಣ (೯–೩೯) – ವಾಸಸ್ಥಳ
ಉಜ್ಜುಗ (೧೧–೨೦) – ಉದ್ಯೋಗ
ಉಪ್ಪವಡಿಸು (೧೨–೧೨) – ಮೇಲೇಳು
ಉರಿವರಿಲ್ (೧೦–೨೨) – ಉಲ್ಕೆ
ಎಲರ್ (೧೦–೧೩) – ಗಾಳಿ
ಒಲವರ (೮–೭೩) – ಪ್ರೀತಿ
ಕಜ್ಜ (೧–೪೦) – ಕಾರ್ಯ
ಕಣ್ಬೊಲ (೪–೪೩) – ನೋಟ
ಕಬ್ಬ (೧–೭) – ಕಾವ್ಯ
ಕರಣ (೧೪–೪೧) – ಸಾಮಗ್ರಿ
ಕಲ್ದವಸಿ (೫–೫೪) – ಶಿಲಾತಪಸ್ವಿ
ಕ್ರತುಮೂರ್ತಿ (೧–೪೦) – ಯಜ್ಞಪುರುಷ
ಕಾರ್ಮೊದಲು (೫–೧೩) – ಮುಂಗಾರು
ಕಿತ್ತಡಿ (೬–೩೪) – ಮುನಿ
ಕುಣಪ (೧೨–೪) – ಹೆಣ
ಕುದ್ದಾಲ (೪–೪೦) – ಗುದ್ದಲಿ
ಕುಂಬಿಡು (೮–೭೬) – ನಮಸ್ಕರಿಸು
ಕೂರ್ಮೆ (೩–೧೯) – ಪ್ರೀತಿ

ಕ್ರೌಂಚ (೧–೧೩) – ಕೊಂಚೆಹಕ್ಕಿ
ಕ್ಷಿತಿಜ (೧೨–೧) – ಅಂಚು
ಗೊರವ (೨–೭೮) – ಸಂನ್ಯಾಸಿ
ಘರಟ್ಟ (೯–೧೦೪) – ಬೀಸುವಕಲ್ಲು
ಚೀರವಲ್ಕಲ (೫–೫೯) – ನಾರುಡೆ
ಜಗುಳು (೧೨–೭೭) – ಜಾರು
ಜನ್ನ (೨–೩) – ಯಜ್ಞ
ಜೊನ್ನ (೨–೩೮) – ತಿಂಗಳ ಬೆಳಕು
ತಂಗದಿರ (೨–೫೧) – ಚಂದ್ರ
ತಿಂಗಳು (೧–೫೦) – ಚಂದ್ರ
ದಯಿತೆ (೪–೩೫) – ಹೆಂಡತಿ
ದೀವಿ (೯–೧೨೬) – ದ್ವೀಪ
ನಿರೂಪ (೧೧–೯೨) – ರಾಜಾಜ್ಞೆ
ನಿಷಾದ (೧–೧೫) – ಬೇಡ
ನೀರಬೀಳ (೫–೪೮) – ಜಲಪಾತ
ನೀಲಕಂಠ (೧೦–೭) – ನವಿಲು
ನೊರಜು (೧೧–೨೨) – ನೊಣ
ನೋಂಪಿ (೨–೩೮) – ವ್ರತ
ಪಡಿಗೆಯ್ಮೆ (೭–೧) – ಪ್ರತೀಕಾರ
ಪದುಳ (೩–೪) – ಕ್ಷೇಮ
ಪಂತಿದೇರ (೬–೨೦) – ದಶರಥ
ಪಾಥೇಯ (೭–೨೩) – ಬುತ್ತಿ
ಪುನ್ನಾಗ (೪–೧೦) – ಸರ್ಪ
ಪುರುಷಕಾರ (೪–೧೭) – ಪುರುಷಪ್ರಯತ್ನ
ಪುಳ್ಳೆ (೫–೫೨) – ಸೌದೆ
ಪೂಣ್ಕೆ (೫–೭೩) – ಪ್ರತಿಜ್ಞೆ
ಪೂಸವಿ (೩–೧೫) – ಮಕರಂದ

ಪೊನಲು (೭–೩೮) – ಹೊಳೆ

ಪೊಲ್ಲಮೆ (೩–೩೦) – ಕೆಡುಕು

ಪ್ರತ್ಯಭಿಜ್ಞಾನ (೬–೩೭) – ಮರುನೆನಪು

ಪ್ರಥಿತ (೧೧–೭೧) – ಪರಿಚಿತ

ಬಣವೆ (೧೧–೩೨) – ರಾಶಿ

ಬದ್ಧಭ್ರಕುಟಿ (೧೧–೮೮) – ಗಂಟುಹುಬ್ಬು

ಬನ್ನ (೨–೩) – ಕಷ್ಟ

ಬಾನಿನ ಬಂಡಿ (೭–೫೦) – ವಿಮಾನ

ಬಿಕ್ಕೆ (೭–೪೩) – ಭಿಕ್ಷೆ

ಬಿಜ್ಜಣಿಗೆ (೩–೪೧) – ಬೀಸಣಿಗೆ

ಬಿತ್ತರ (೨–೧೫) – ವಿಸ್ತಾರ

ಬಿದಿ (೩–೪) – ವಿಧಿ

ಬಿನದ (೧೦–೩೭) – ವಿನೋದ

ಬೆಬ್ಬಳ (೫–೧) – ಭಯ

ಬೆಳ್ಜಸ (೬–೫೦) – ಧವಳಕೀರ್ತಿ

ಬೇಳ್ವೆ (೬–೪೧) – ಯಜ್ಞಕುಂಡ

ಭೇಷಜ (೧೦–೩೧) – ಔಷಧ

ಮನ್ನೆಯ (೮–೫೪) – ಮಾನ್ಯ

ಮರಗೋಡು (೨–೩೪) – ಮರದ ಕೊಂಬೆ

ಮಿಸುನಿ (೭–೩೮) – ಬಂಗಾರ

ಮೀಹ (೮–೧೭) – ಸ್ನಾನ

ಮುಂಬಟ್ಟೆ (೩–೨೩) – ಮುಂದಿನ ದಾರಿ

ರಕ್ಕಸವಳಿ (೭–೨೭) – ರಾಕ್ಷಸವಂಶ

ರಹಿ (೭–೧೦೭) – ರೀತಿ

ಲಕ್ಕಣ (೭–೧೧) – ಲಕ್ಷಣ

ವಾರ್ಧಿ (೧–೩೩) – ಸಮುದ್ರ

ವಿಭೂತಿ (೧–೧೧) – ವಿಶೇಷಶಕ್ತಿ
ವಿಹಂಗಮ (೧–೨೪) – ಪಕ್ಷಿ
ಶಕುನಿ (೨–೧೭) – ಪಕ್ಷಿ
ಶರದಾಕಾಶ (೯–೧) – ಶುಭ್ರವಾದ ಆಗಸ
ಶಿಬಿಕೆ (೧೪–೧೩) – ಪಲ್ಲಕ್ಕಿ
ಸುರಭೂಜ (೧೦–೨೭) – ಕಲ್ಪವೃಕ್ಷ
ಸೊದೆಯ ಸೋನೆ (೫–೭೭) – ಅಮೃತಸಿಂಚನ
ಸೋವು (೯–೧೪೫) – ಹುಡುಕಾಟ
ಹದಿಬದೆ (೯–೨೭) – ಪತಿವ್ರತೆ
ಹವಣು (೧೧–೧೨೭) – ರೀತಿ
ಹಳುವ (೭–೭೩) – ಅರಣ್ಯ
ಹುತವಹನ (೧೪–೨೨) – ಅಗ್ನಿ
ಹುಯ್ಯಲು (೫–೧೦) – ದೂರು
ಹೇವ (೧೦–೨೯) – ದುಃಖ

***

ಪ್ರಸಾರಾಂಗದ ಪ್ರಕಟಣೆಗಳು
ಪುಸ್ತಕಗಳು:

- **ಸಂಗೀತಸಾಮ್ರಾಟ್ : ಪಂ.ಬಸವರಾಜ ರಾಜಗುರು**
  ಲೇಖಕರು: ನಿಜಗುಣ ರಾಜಗುರು, ಬೆಲೆ: ರೂ.100/–

- **ಗಾಯನಗಂಗೆ ಡಾ.ಗಂಗೂಬಾಯಿ ಹಾನಗಲ್**
  ಲೇಖಕರು: ರೇಖಾ ಹೆಗಡೆ ಅರವಿಂದ್, ಬೆಲೆ: ರೂ.50/–

- **ರಂಗಸಂಗೀತ :**
  ಸಂಪಾದಕರು: ಡಾ.ರಾಮಕೃಷ್ಣ ಮರಾಠೆ, ಬೆಲೆ: ರೂ 150/–

- **ಯಕ್ಷಗಾನ ಸಂಗೀತ ಪದ್ಧತಿ :**
  ಸಂಪಾದಕರು: ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಬೆಲೆ: ರೂ.90/–

- **ಯಕ್ಷಗಾನ ಮಹಾಕಾವ್ಯ: 'ಶ್ರೀರಾಮಲೀಲಾದರ್ಶನಂ'**
  ಲೇಖಕರು: ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಬೆಲೆ: ರೂ. 200/–
  ಸಾಕ್ಷ್ಯಚಿತ್ರದ ಅಡಕಮುದ್ರಿಕೆ:

- **ರಾಷ್ಟ್ರಕವಿ ಕುವೆಂಪು ಅವರ 'ರಾಮಾಯಣದರ್ಶನಂ'**
  ಗಮಕವಾಚನ ಮತ್ತು ವ್ಯಾಖ್ಯಾನ: ಬೆಲೆ: ರೂ.120/–

ಸಂಪರ್ಕವಿಳಾಸ:

ಪ್ರಸಾರಾಂಗ

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ
ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಅಶೋಕವೃತ್ತ, ಜೆ.ಎಲ್.ಬಿ.ರಸ್ತೆ,
ಲಕ್ಷ್ಮೀಪುರಂ, ಮೈಸೂರು –570004
ದೂರವಾಣಿ: 0821– 2402141, 2402114

ಇ.ಮೇಲ್:
musicuniversitymys@gmail.com
ವೆಬ್‌ಸೈಟ್:
www.musicuniversity.ac.in

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಸಂಗೀತಾದಿ ಪ್ರದರ್ಶಕ ಕಲೆಗಳು ನಮ್ಮ ಭಾರತೀಯ ಸಾಂಸ್ಕೃತಿಕ ಪರಂಪರೆಯ ಪ್ರಮುಖ ರಾಯಭಾರಿಗಳು. ಇವು ಮನುಕುಲದಷ್ಟೇ ಆರ್ಷೇಯ ಸ್ಥಾನ ಪಡೆದಿದ್ದು, ಆನಂದ ಮತ್ತು ಸೌಹಾರ್ದತೆಗಳನ್ನು ಜೀವಾಳವಾಗಿ ಉಳ್ಳವು. ಇವುಗಳ ಸಾಹಚರ್ಯದಿಂದ ಮನುಕುಲವು ಸಮೃದ್ಧಿಯತ್ತ ಸಾಗಿ ಮುನ್ನಡೆದಿರುವುದು ಕಂಡುಬರುತ್ತದೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಇವುಗಳ ಅಗತ್ಯತೆಯೂ ಹೆಚ್ಚಾಗಿದ್ದು, ಪ್ರಸ್ತುತವೂ ಆಗಿದೆ. ಇದನ್ನು ಮನಗಂಡು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕರ್ನಾಟಕ ಸರ್ಕಾರದಿಂದ 2008 ರಲ್ಲಿ ಸಂಗೀತ ವಿಶ್ವವಿದ್ಯಾಲಯ ಸ್ಥಾಪನೆಗೊಂಡು ಅನಂತರ 2009 ರಲ್ಲಿ 'ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ' ಎಂದು ಘೋಷಿತವಾಗಿದೆ. ಈ ವಿಶ್ವವಿದ್ಯಾಲಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಅಧ್ಯಯನ - ಅಧ್ಯಾಪನ - ಸಂಶೋಧನ - ಸಂಗೋಪನ ಮತ್ತು ಪ್ರಸಾರಣ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಮೇಲ್ಕಂಡ ಕಲೆಗಳ ಉನ್ನತಿಗೆ ತನ್ನನ್ನು ಮುಡುಪಾಗಿಸಿಕೊಂಡಿದೆ.

ವಿಶ್ವವಿದ್ಯಾಲಯವು ಪ್ರದರ್ಶಕ ಕಲೆಗಳ ಸಾಂಪ್ರದಾಯಿಕ ಪದ್ಧತಿಯನ್ನು ಸಂರಕ್ಷಿಸುವುದರೊಂದಿಗೆ ಆಧುನಿಕ ತಂತ್ರಜ್ಞಾನವನ್ನು, ವೈಜ್ಞಾನಿಕ ನೆಲೆಗಟ್ಟುಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಸಂಗೀತ ಮತ್ತು ಪ್ರದರ್ಶಕ ಕಲೆಗಳ ಒಂದು ಪೂರಕ ವಾತಾವರಣವನ್ನು ಸೃಜಿಸುವತ್ತ ಮುನ್ನಡೆದಿದೆ. ಅಲ್ಲದೆ, ಸರ್ಟಿಫಿಕೇಟ್, ಡಿಪ್ಲೊಮಾ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಂತಹ ಶೈಕ್ಷಣಿಕ ವಿದ್ಯಾಭ್ಯಾಸವನ್ನು ನೀಡುತ್ತಿದೆ.

ಮುಂದೆ, ವಿಶ್ವವಿದ್ಯಾಲಯವು ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಸಂಬಂಧಿಸಿದ ಧ್ವನಿದೃಶ್ಯ ಮುದ್ರಣ, ಹಸ್ತಪ್ರತಿ ಸಂಗ್ರಹ, ಸಂಗ್ರಹಾಲಯ, ಕಲಾ ದಿಗ್ಗಜರನ್ನು ಕುರಿತ ದಾಖಲೀಕರಣ, ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ. ಪ್ರಸಾರಾಂಗದ ಮೂಲಕ ಗ್ರಂಥಪ್ರಕಟಣೆಯಂಥ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೇ ಇನ್ನೂ ಹೆಚ್ಚು ಗ್ರಂಥಮಾಲೆಗಳನ್ನು ರೂಪಿಸಿ ಅವುಗಳನ್ನು ಲೋಕಾರ್ಪಣೆ ಮಾಡುವ ಮೂಲಕ ಕಲಾವಿದರು, ಕಲಾರಸಿಕರು, ಸಂಶೋಧಕರು ಹಾಗೂ ಸಹೃದಯರನ್ನು ತಲುಪುವ ಅಭಿಲಾಷೆಯನ್ನು ಹೊಂದಿದೆ. ವಿಶ್ವವಿದ್ಯಾಲಯದ ಈ ಎಲ್ಲಾ ಕಾರ್ಯಗಳಿಗೆ ತಮ್ಮ ಸಲಹೆ ಮತ್ತು ಸಹಕಾರಗಳನ್ನು ಯಾಚಿಸುತ್ತೇನೆ.

- ಡಾ. ಸರ್ವಮಂಗಳಾ ಶಂಕರ್

ಕುಲಪತಿಗಳು